UNIVERSAL
LIBRARY
OU_198038
UNIVERSAL
LIBRARY

# ಭೂಮಿಗಿಳಿದ ತಾರೆ

( ಕಥಾಸಂಕಲನ )

●

ವೀ. ಚ. ಹಿತ್ತಲಮನಿ

೧೯೪೮

ಮನೋರಂಜನ ಪ್ರಕಾಶನ ಸಮಿತಿ
ಧಾರವಾಡ

ಪ್ರಕಾಶಕರು.

ಮಾರಾಟಗಾರರು:
**ಸಾಹಿತ್ಯ ಭಾಂಡಾರ, ಹುಬ್ಬಳ್ಳಿ**

( ಎಲ್ಲ ಹಕ್ಕುಗಳು ಲೇಖಕರವು )

**ಬೆಲೆ: ೧-೮-೦**

ಪ್ರಕಾಶಕರು
ಶ್ರೀ. ಬೆಳಗಾವಿ ರಾಮಚಂದ್ರರಾಯರು
ಮನೋರಂಜನ ಪ್ರಕಾಶನ ಸಮಿತಿ
ಧಾರವಾಡ

ಮುದ್ರಕರು
ಎಚ್. ಬಿ. ನವಲೂರ
ಹಿಂದಮಾತಾ ಮುದ್ರಣಾಲಯ
ಧಾರವಾಡ

ಎಳೆಯನಿರುವಾಗಲೇ ನಾನು ಬರೆಯಬೇಕೆಂದು ಒತ್ತಾಯಪಡಿಸಿ,

ಪ್ರೇಮಾದರಗಳಿಂದ ಕಾಣುತ್ತಿರುವ

ಆತ್ಮೀಯ ಗುರು,

**ಶ್ರೀ. ನಾಡಿಗೇರ ಲಕ್ಷ್ಮಣರಾಯರು**

ಮತ್ತು

**ಅಕ್ಕ ವತ್ಸಲಾವತಿ**

ಅವರ

ಅಡಿದಾವರೆಗಳಲ್ಲಿ

# ಮುನ್ನುಡಿ

ಎನಿಸಿದುದನ್ನು ಆಡಬೇಕೆಂಬ ಹಂಬಲವೊಂದು ಹುಟ್ಟುಗುಣ. ಇದರ ಒಂದು ಪ್ರಕಾರವೇ ಲೇಖನ. ಆಡುವುದು, ಮಾಡುವುದು ಮೂಲತಃ ಸ್ವಂತದ ಸಮಾಧಾನ, ಸಂತೃಪ್ತಿಗಾಗಿಯಾದರೂ ಅದು ಇನ್ನುಳಿದವರ ಆನಂದಕ್ಕೂ ಕಾರಣವಾಗುತ್ತಿದೆಂದು ತಿಳಿದರೆ ಆ ಸಂತಸಕ್ಕೆ ಕೃತಾರ್ಥತೆಯ ಸ್ವರೂಪವು ಬರುವುದು. ತನ್ನ ಕಂಡಿತವನ್ನು ವ್ಯಕ್ತಪಡಿಸದೆ ಇದ್ದರೆ ಆಗುವ ಅಸಮಾಧಾನವನ್ನು ಕಳೆದುಕೊಳ್ಳಲು ಆಡುವ ಮಾತು, ಬರೆವ ಲೇಖನ ( ಕಥೆ, ಕವಿತೆ, ಕಾದಂಬರಿ ರೇಖಾಚಿತ್ರ ಮುಂ. ) ಅದು ಎಂತಹದಿದ್ದರೂ ತನ್ನ ಪ್ರಾಮಾಣಿಕತೆಯ ಮೂಲಕ ಮಿಗಿಲಾದುದು; ಬೆಲೆಯುಳ್ಳದು; ಲೋಕಕ್ಕೆ ಉಪಕಾರಕವೂ ಅಹುದು. ಆದರೆ ಒಳಗಣ ಒತ್ತಾಯವಿಲ್ಲದೆ ಕೇವಲ ಲೋಕರಂಜನೆಗೆಂದು, ಪರೋಪಕಾರಕ್ಕೆಂದು ಆಡುವ, ಬರೆಯುವ ಸಂಗತಿ ಎಷ್ಟೇ ಆಕರ್ಷಕವಿದ್ದರೂ ನಾಟಕ, ಸಿನೇಮಾದಲ್ಲಿ ಸಾವಿತ್ರೀಸೋಗು ಅಭಿನಯಿಸಿ ಮಂದಿಯನ್ನು ರಂಜಿಸುವ ತಾರೆಯಂತೆ ಅದು ಕೃತ್ರಿಮ; ಅಷ್ಟೇ ಪವಿತ್ರ.

ಎನಿಸಿದ್ದನ್ನು ಆಡಿತೋರಿಸುವ ಒಂದು ಹದವಿದೆ; ಹಿಡಿತವಿದೆ. ಈ ವಿಧಾನವನ್ನು ಅರಿತಷ್ಟೂ ಆ ವ್ಯಕ್ತಿಯು ಲೋಕದ ಎದುರು ತನ್ನನ್ನು ಸರಿಯಾಗಿ ವ್ಯಕ್ತಪಡಿಸಿಕೊಳ್ಳಬಲ್ಲ. ಇದರಂತೆ ತನ್ನ ಎನಿಸಿದ್ದನ್ನು, ಕಂಡಿತವನ್ನು ಬರೆದು ನೋಡಬೇಕು. ಅವರವರ ಶಿಕ್ಷಣ, ಸಂಸ್ಕಾರ, ಪರಿಸ್ಥಿತಿಗಳಂತೆ ಪ್ರಬಂಧ, ಕವಿತೆ, ಕತೆ, ಚಿತ್ರ, ಮೂರ್ತಿ ಮೊದಲಾದ ಒಂದಿಲ್ಲೊಂದು ರೂಪತಾಳಿ ಅದು ಹೊರಹೊಮ್ಮುವುದು. ಇದು ಮೊದಮೊದಲು ತೀರ ಪ್ರಾಕೃತ, ಪ್ರಾಥಮಿಕ ಸ್ವರೂಪದಲ್ಲಿರಬಹುದು. ಅಭ್ಯಾಸ ಪ್ರಯತ್ನಗಳಿಂದ ಬರಬರುತ್ತ ಅದೊಂದು ಒಳ್ಳೆಯ ಕಲಾಕೃತಿಯೆನಿಸಿಕೊಳ್ಳುವಷ್ಟು ಪರಿಣತ ಸ್ಥಿತಿಗೂ ಬರಬಲ್ಲದು. ಅದು ಪೂರ್ಣ ಸಿದ್ಧಿಸಲಿ, ಸಾಧಿಸದಿರಲಿ, ವ್ಯಕ್ತಿಯೆಂಬ ಹೆಸರು ಸಾರ್ಥವಾಗಬೇಕಾದರೆ ತನ್ನಲ್ಲಿ ಅವ್ಯಕ್ತವಾಗಿರುವ ಈ ಸುಪ್ತಶಕ್ತಿಯನ್ನು ಜಾಗೃತಗೊಳಿಸಿ ಅದರ ವಿಕಾಸಕ್ಕಾಗಿ ಅನುದಿನವೂ ಅದರ

ಅನುಸಂಧಾನದಲ್ಲಿರುವುದು ಅರಿವು ತಲೆದೋರಿದ ಪ್ರತಿಯೊಬ್ಬನ ಕರ್ತವ್ಯ ವಾಗಿದೆ. ಏಕೆಂದರೆ ಈ ಬಗೆಯ ಸಾಧನದಿಂದ ದೂರವಿದ್ದಷ್ಟು ಅವರು ಅಸಂಸ್ಕೃತರಾಗುವರು. ಅವರಿಗೆ ತಮ್ಮ ನೆಲೆ ತಮಗೇ ತಿಳಿಯಲಾರದು. ಲೋಕದ ಆಳ ತಿಳಿಯುವುದಂತೂ ದೂರೇ ಉಳಿಯಿತು.

ಮೆಯ್ಯ ಚೆಲುವನ್ನು ಮಾರಿ ಬದುಕುವ ಜನವಿದೆ. ಅದರಂತೆ ಮಾತಿನ ಮೋಡಿಕಾರಿಕೆಯಿಂದ ಹೊಟ್ಟೆಹೊರಕೊಳ್ಳುವವರೂ ಇದ್ದಾರೆ. ಇಬ್ಬರವೂ ನೆಮ್ಮದಿಯ ಬಾಳ್ವೆಗೆ ಒಯ್ಯುವ ಹಾದಿಗಳಲ್ಲ. ಇವರದು ಪ್ರಾಮಾಣಿಕವಾದ ಎನಿಸಿಕೆಯ ಬಾಳಲ್ಲ. ಇವರ 'ಬದುಕು' ಇರುವು ಅಲ್ಲ. ಬದುಕಿಗಾಗಿ ಎಂದರೆ ಬದುಕನ್ನು ಸಂಪಾದಿಸಲು ಬದುಕಿದ್ದವರು ಇವರು. ಬಾಳೇ ಬದುಕು ಆಗಿ ರುವ ಜನವೇ ಪ್ರಾಮಾಣಿಕರು; ನೆಮ್ಮದಿವಂತರು; ನಿಜವಾದ ಬೆಲೆಯುಳ್ಳ ವರು. ಬಾಳುವೆಯಿಂದ ಬದುಕು ಬೇರೆಯಾಗಿದೆಯೆಂಬ ನೆಚ್ಚಿಕೆಯಿಂದ್ಮ ನಡೆದವರೆಲ್ಲ ಅಸನ್ಮಾರ್ಗಿಗಳು. ಆ ಹೊರಗಿನ ಬದುಕನ್ನು ಪಡೆಯಲು ತಮ ಬಾಳುವೆಗೆ, ತಮ್ಮ ಇರವಿಗೆ, ತಮ್ಮ ನಡೆವಳಿಗೆ ಗಮನ ಕೊಡದೆ ಕಾಂಚನ-ಮೃಗದ ಬೆಂಬತ್ತಿ ಓಡುವವರು ಈ ಜನ.

ಇಂತಹರ 'ಕೃತಿ' ಆಕರ್ಷಕವೆನಿಸಿದರೂ ಆರೋಗ್ಯಕರವಲ್ಲ. ಮುಖ್ಯ ವಾಗಿ ಸಾಹಿತ್ಯದ ಉಗಮವು ಆತ್ಮನಿಷ್ಠವಾಗಿರಬೇಕು. 'ಆತ್ಮಕ್ರೀಡಃ, ಆತ್ಮರತಿಃ' ಆಗಿರುವವನ 'ಕೃತಿ'ಯೆ ಲೇಸು. ಇದಕ್ಕೆ ಹೊರತಾದವನ ಆಟ ಮಾಟಗಳೆಲ್ಲವೂ ಹೊಲ್ಲ.

* * * *

ವಸಂತ ಗೌರಿಯ ಹೂ-ವೀಳ್ಯದ ಸಮಾರಂಭದಲ್ಲಿ ಮನೆಯವರು ತಾವು ಮಾಡಿದ ಕಲಾ-ಕುಸುರಿಯ ಕೆಲಸಗಳನ್ನು ದೇವಿಯ ಎದುರಿಗೆ ಇರಿಸಿ, ದೇವಿಗೆ ಸಲ್ಲಿಸಿ, ಆನಂದಿಸುವುದು ವಾಡಿಕೆ. ಆ ವಸಂತೋತ್ಸವದಲ್ಲಿ ಹೂ-ವೀಳ್ಯ ಕ್ಕಾಗಿ ಬಂದ ಸಹೃದಯದ ಸುಹೃದರು— ಆ ಕೃತಿಯು ಕೆಲವೊಂದು ಕುಂದು ಕೊರತೆಗಳಿಂದ ಕೂಡಿದೆಯೆಂಬುದನ್ನು ಅರಿತರೂ— ಆ ಮನೆಯವರ ಕಲಾ ವಿಲಾಸಕ್ಕೆ ಮನಸಾ ಹಿಗ್ಗಿ, ಮನೆಯವರನ್ನೂ ಹಿಗ್ಗಿಸಿ ಹಿಂದೆರಳುತ್ತಾರೆ.

ಜರ್ಮನ್ ಅಥವಾ ಜಪಾನಿ ಕಲಾಕೃತಿಗಳನ್ನು ಕೊಂಡು, ಇಲ್ಲವೆ ಪರಕೀಯ ಕೃತಿಗಳೊಳಗಿನ ಬಹುಭಾಗವನ್ನು ಕದ್ದು ಆತ್ಮಸಾತ್ತಾಗಿ ಮಾಡಿಕೊಂಡಂತೆ ಪ್ರದರ್ಶನ ಮಾಡಿ ಇಟ್ಟರೂ ಆ ವಸಂತೋತ್ಸವಕ್ಕೆ ಬಂದ ರಸಿಕವೃಂದವು ಕಟುಸತ್ಯವನ್ನಾಡಿ ಅಂತಹ ಪ್ರಸಂಗದಲ್ಲಿ ರಸಭಂಗಮಾಡುವುದು ಉಚಿತವಲ್ಲ ವೆಂದು ನಕ್ಕು, ನಗಿಸಿ ಹಿಂದಿರುಗಿದರೂ ಮೊದಲನೆಯ ಬಗೆಯ ಕೃತಿಯ ಪಾವಿತ್ರ್ಯ, ಎರಡನೆಯ ಬಗೆಯ ಕೃತಿಯ ಬೆಲೆಗಿಂತ ಯಾವಾಗಲೂ ಮಿಗಿ ಲಾದುದೆಂದು ಎಲ್ಲರೂ ಒಳಗೊಳಗೆ ಚೆನ್ನಾಗಿಯೇ ಅರಿತಿರುತ್ತಾರೆ.

* * * *

ಕಂನಾಡದೇವಿಯ ವಸಂತೋತ್ಸವವು ಆರಂಭವಾಗಿದೆ. ಮನೆಮನೆ ಯವರೂ ತಮ್ಮ ತಮ್ಮ ಕಲಾಕೃತಿಗಳನ್ನು ತಂದು ದೇವಿಗೆ ಕಾಣಿಕೆಯಾಗಿ ಸಲ್ಲಿಸುತ್ತಿದ್ದಾರೆ. ಅವರಲ್ಲಿ ನನ್ನ ತರುಣ ಮಿತ್ರರಾದ ಶ್ರೀ. ಹಿತ್ತಲಮನೆ ಯವರೂ ತಮ್ಮ ಕಿರಿಯ ಕಾಣಿಕೆಯನ್ನು ತಂದು ದೇವಿಯ ಅಡಿಯಲ್ಲಿ ಮುಡಿಸಿದ್ದಾರೆ

ಒಕ್ಕಲತನದ ವ್ಯಾಸಂಗಮಾಡಿ ಅದರಲ್ಲಿ ಬಲ್ಲಿದರಿಂದ ಮೆಚ್ಚು ಪಡೆದು ಮುಂದುವರಿಯುತ್ತಿದ್ದಾರೆ. ಕಾಲೇಜಿನಲ್ಲಿ ಇದ್ದಾಗಿನಿಂದಲೂ ವಿವಿಧ ವಿಷಯ ಗಳಲ್ಲಿ ಬರೆಯುವ, ತಮ್ಮ ಅನುಭವ, ಜ್ಞಾನಗಳ ಕ್ಷೇತ್ರಗಳನ್ನು ವಿಸ್ತರಿಸಿ ಕೊಳ್ಳುವ ತೀವ್ರ ಆಕಾಂಕ್ಷೆಯವರು. ಇವರ ಗೆಳೆತನ ಲಭಿಸಿದ್ದುದು ನನ್ನ ಸುದೈವ. ಶುದ್ಧವಾದ ಉಚ್ಚ ಆಕಾಂಕ್ಷೆಯ ಇಂತಹ ತರುಣರ ಸ್ನೇಹ ಲಾಭ ಕ್ಕಿಂತಲೂ ಮೌಲಿಕವಾದ ಆನಂದವು ನನಗೆ ಬೇರೊಂದಿಲ್ಲ.

ಇಂದಿನದು ಸಮ್ಮಿಶ್ರಕಾಲ. ಊಟದಲ್ಲಿ, ಉಡಿಗೆಯಲ್ಲಿ, ಮಾತಿನಲ್ಲಿ ಹಲವು ದೇಶಗಳ, ಬೇರೆ ಬೇರೆ ಹಲವು ಕಾಲಮಾನದ, ಜನದ ಸಮ್ಮಿಶ್ರಣವು ತಾನೆ ತಾನಾಗಿ ಎದ್ದು ಕಾಣುತ್ತಿದೆ. ಇದರಲ್ಲಿ ಹಿತವಾದ ಮಿತವಾದ ಒಂದು ತನವು, ಸಾಮರಸ್ಯವು ಆಗಲು ಹಲಕೆಲವು ಪ್ರಯೋಗಗಳು ನಡೆಯಲೇ ಬೇಕು.

ಪ್ರಸ್ತುತ ಕಥಾಸಂಗ್ರಹದಲ್ಲಿಯ ಭಾಷಾಶೈಲಿ, ವ್ಯಕ್ತಿಗಳ ಹೆಸರುಗಳು ಕಥನಪದ್ಧತಿ ಮುಂತಾದ ಸಂಗತಿಗಳಲ್ಲಿ ಕೆಲವೊಂದು ಕೊರತೆಗಳು ಉಳಿದು

ಕೊಂಡಿವೆ. ಮೊದಲ ಪ್ರಯತ್ನಗಳಲ್ಲಿ ಇದೆಲ್ಲವೂ ಆಗತಕ್ಕುದೇ. ಆದರೂ ಹೊಸಹುಟ್ಟು, ಪ್ರವಾಹಪತಿತೆ, ಭೂಮಿಗಿಳಿದತಾರೆಯಂತಹ ಒಳ್ಳೆಯ ಕೆಲವು ಕತೆಗಳಿವೆ. ತಾರುಣ್ಯ ಸಹಜವಾದ ಶೃಂಗಾರವು ಎಲ್ಲ ಕತೆಗಳಲ್ಲೂ ಹಣೆಯಿಕ್ಕುವುದಾದರೂ ಇನ್ನೂ ಹಲವು ಬಗೆಯ ಜೀವನ ಕ್ಷೇತ್ರಗಳನ್ನೂ ಕಥಾವಸ್ತುಗಳನ್ನಾಗಿ ಆರಿಸಿಕೊಳ್ಳುವ ಸಾಮರ್ಥ್ಯವು ಇವರಲ್ಲಿದೆ.

ಲೇಖನಗಳ ಮೂಲಕ ತಮ್ಮ ಜೀವನ ಸಂಸ್ಕಾರಗಳನ್ನು ಹೆಚ್ಚಿಸಿಕೊಳ್ಳಬೇಕೆಂಬುದೆ ಇವರ ಹಿರಿಯ ಹಂಬಲ. ಅದಕ್ಕಾಗಿ ಇವರನ್ನು ನಾನು ಅಭಿನಂದಿಸದೆ ಇರಲಾರೆ. ಹೀಗೆಯೆ ಉತ್ತರೋತ್ತರ ಅನುಭವದಿಂದ ಬರೆಹವೂ, ಬರೆಹದಿಂದ ಅನುಭವವೂ ವಿಸ್ತೃತವಾಗಿ ಇವರ ವ್ಯಕ್ತಿತ್ವವು ವಿಕಾಸಗೊಳ್ಳಲೆಂದು ಹಾರಯಿಕೆ.

ಯುಗಾದಿ<br>ಸಾಧನಕೆರೆ ಧಾರವಾಡ

**ಶಂ. ಬಾ. ಜೋಶಿ**

---

*

# ನನ್ನ ನುಡಿ

ಇದು ನನ್ನ ಮೊದಲನೆಯ ಕಥಾಸಂಕಲನ! ಇದರಲ್ಲಿಯ ಐದು ಕಥೆಗಳು ಈಗಾಗಲೇ ಪತ್ರಿಕೆಗಳಲ್ಲಿ ಪ್ರಕಟವಾಗಿವೆ; ಮಿಕ್ಕ ಮೂರು ಕತೆಗಳು ಮಾತ್ರ ಹೊಸತಾಗಿ ಈಗಲೇ ಬೆಳಕು ಪಡೆಯುತ್ತಿರುವದು;

ಈಡೀಯ ವರುಷ ಕಾಲೇಜಿನಲ್ಲಿ ಓದಿ ಪರೀಕ್ಷೆ ಮುಗಿಸಿಕೊಂಡು ರಜೆಗೆ ಊರಿಗೆ ಬಂದಾಗ ವೇಳೆ ಕಳೆಯುವದೊಂದು ಸಾಹಸದ ಮಾತೇ! ಅದರಲ್ಲಿಯೂ ನನ್ನೂರು ಒಂದು ಹಳ್ಳಿ! ಅಂಥ ಸಮಯದಲ್ಲಿ ಕತೆ ಬರೆಯುವದು ನನ್ನ ಪರಿಪಾಠ! ಹೆಚ್ಚಾಗಿ ನಾನು ಕತೆ ಬರೆದುದು ಎಪ್ರಿಲ ಮತ್ತು ಮೇ ತಿಂಗಳ ರಜೆಯಲ್ಲಿ! ಎಷ್ಟೊ ಸಲ ಕಾಲೇಜಿನಲ್ಲಿಯೇ ಆಗಾಗ–ಸಮಯಸಿಕ್ಕಾಗ, ಯಾರಾದರೂ ಗೆಳೆಯರು ಕತೆಗಳನ್ನು ಬರೆದಿದ್ದರೆ, ಅವುಗಳಿಂದ ಸ್ಫೂರ್ತಿಗೊಂಡು ನಾನೂ ಬರೆಯಬೇಕೆಂದು ಇಡೀಯ ಇರುಳು ಕುಳಿತು ಬರೆದುದರ ನೆನಹೂ ಮೂಡುತ್ತದೆ. ಬರೆಯಬೇಕೆಂದು ಮನಸ್ಸು ಮಾಡಿ ಹಾಳೆ ಲೆಕ್ಕಣಿಕೆಗಳನ್ನು ಸಜ್ಜುಮಾಡಿಕೊಂಡು ಕುಳಿತುಕೊಳ್ಳುವದೇನೋ ನಿಜವಾಗುತ್ತಿತ್ತು! ಆದರೆ ಹಾಗೆ ಕುಳಿತು ನಾನೆಂದೂ ಒಂದೂ ಕತೆ ಬರೆಯಲಿಲ್ಲ. ಒಮ್ಮೆ ಬರೆಯಲು ಮೊದಲು ಮಾಡಿದಮೇಲೆ ಒಂದೇ ಪಟ್ಟಿಗೆ ಒಂದು ಕತೆಯನ್ನು ಮುಗಿಸಿಯೇ ಏಳಬೇಕೆಂಬ ಮನಸ್ಸಿನ ದೃಢನಿಶ್ಚಯವನ್ನು ಪಾಲಿಸುವದರಲ್ಲಿ, ಕಾಲೇಜಿನ ಪಾಠ, ನಿತ್ಯದ ಊಟ, ನಿದ್ರೆಗಳನ್ನು ಮರೆತಿದ್ದೇನೆ. ಆದರೂ ಕೆಲವು ಕತೆಗಳು ಮುಗಿಯಬೇಕಾದರೆ ಅದೆಷ್ಟೋ ದಿನಗಳು ಹಿಡಿದಿವೆ.

ನನ್ನ ಮತ್ತು ನನ್ನ ಗೆಳೆಯರನೇಕರ ಬಾಳಿನಲ್ಲಿ ನಡೆದ ಘಟನೆಗಳನ್ನೇ ಹೆಚ್ಚಾಗಿ ನಾನು ಕತೆ ಬರೆಯಲಿಕ್ಕೆ ಆಯ್ದುಕೊಳ್ಳುವದು! ಎಷ್ಟೋ ಸಲ ಕೇಳಿ, ಓದಿದ ಸಂಗತಿಗಳನ್ನು ಕಥೆ ಕಟ್ಟಲಿಕ್ಕೆ ಉಪಯೋಗಿಸಿದ್ದೇನೆ; ಘಟನೆ ನಡೆದೊಡನೆಯೇ ಕತೆಯನ್ನೆಂದೂ ನಾನು ಬರೆದಿಲ್ಲ; ಆ ಘಟನೆ ಒಂದು ರೂಪುಗೊಳ್ಳುವ ತನಕ ತಲೆಯಲ್ಲಿಯೇ ಉಳಿದುಬಿಡುವದು; ನನ್ನ ಬರವಣಿಗೆಯಲ್ಲಿ ಸಹಾನುಭೂತಿಯನ್ನು ತೋರಿಸುವ ಕೆಲವು ಗೆಳೆಯರ ಎದುರಿನಲ್ಲಿ ನಾನು ಬರೆಯಬೇಕೆಂದಿರುವ ಕತೆಯ ಬಾಹ್ಯರೂಪವನ್ನು ನಾಲ್ಕು ಮಾತು

ಗಳಲ್ಲಿ ಹೇಳುವೆ; ಅವರೂ ಸಹ ವಿಮರ್ಶಾತ್ಮಕ ದೃಷ್ಟಿಯಿಂದ ನೋಡಿ ಯೋಗ್ಯ ಸಲಹೆಗಳನ್ನಿತ್ತು ಮಾರ್ಗ ತೋರಿದ ಮೇಲೆ ಕಾಗದದ ಮೇಲೆ ಕತೆ ಮೂಡುತ್ತದೆ ಸಲಹೆಗಳನ್ನು ಪಡೆಯುವದು ಮಾತ್ರ ಗೆಳೆಯರಿಂದ; ಎಷ್ಟೋ ಸಲ ನನ್ನ ವಿಚಾರಗಳಿಗೆ ಹೊಂದಿಬಾರದ ಸಲಹೆಗಳಂತೆ ನಾನು ನಡೆಯುವದೇ ಇಲ್ಲ; ಆಗ ನನ್ನದೇ ಒಂದು ಮಾರ್ಗದಲ್ಲಿ ನಾನು ಮುನ್ನಡೆಯುವೆ. ಅಂತೂ ಕತೆ ಒಂದು ರೂಪುಗೊಂಡು ಸಿದ್ಧವಾಗಬೇಕಾದರೆ ಅದಕ್ಕೆ ಕೆಲವು ದಿನಗಳಾದರೂ ಅಗತ್ಯ!

ಈ ಸಂಗ್ರಹದಲ್ಲಿ ಬರುವ ಕತೆಗಳಲ್ಲಿ ಮುಕ್ಕಾಲುಪಾಲು ಕತೆಗಳು ನಡೆದ ಸಂಗತಿಗಳ ಮೇಲೆಯೇ ನಿಂತಿರುವವುಗಳಾದರೂ ಮೊದಲಿನಿಂದ ಕೊನೆಯವರೆಗೆ ಸತ್ಯವಾಸ್ತವ ಕತೆಗಳಲ್ಲ! ಎಲ್ಲ ಕತೆಗಳಲ್ಲಿ ಮೊದಲಿನಿಂದ ತುದಿಯವರೆಗೆ ವಾಸ್ತವ ಸಂಗತಿಗಳೇ ಇರುವದು ಸಾಧ್ಯವಿಲ್ಲ; ಅಂಥವು ತೀರ ವಿರಳ! ವಾಸ್ತವತೆಯನ್ನು ಸಾಧಿಸುವದಕ್ಕೆಂದೇ ಹಟತೊಟ್ಟು ಹೊರಟರೆ ಎಷ್ಟೋ ಸಲ ಕತೆಯ ತಂತ್ರವೇ ಕಳಚಿಬಿದ್ದು ಕತೆ ಓದಲಿಕ್ಕೂ ಬಾರದಾಗುತ್ತದೆ ಕತೆಗಳು ಕಾಲ್ಪನಿಕವಿರಲು ಸಾಧ್ಯವಿದೆ; ಆದರೂ ನಾನೆಂದೂ ಬರೀಯ ಕಾಲ್ಪನಿಕ ಕತೆ ಬರೆಯುವದಿಲ್ಲ. ಅಂತೆಯೇ ನನ್ನ ಕತೆಗಳಲ್ಲಿ ವಾಸ್ತವತೆ ಮತ್ತು ಕಾಲ್ಪನಿಕ ಕತೆಗಳೆರಡನ್ನೂ ಕಾಣಬಹುದು; ಏನನ್ನಾದರೂ ಕಲ್ಪಿಸುವಾಗ ವಾಸ್ತವತೆಯ ಗಡಿದಾಟಿ ಹೋಗಲು ನಾನೆಂದೂ ಪ್ರಯತ್ನಿಸುವದಿಲ್ಲ;

ಕತೆ ಬರೆಯುವದು ನನಗೆ ತೀರ ಮೆಚ್ಚಿಗೆಯದು! ಕಾಲೇಜಿನ ಓದಿನಿಂದ ದಣಿದ ಮನಸ್ಸು ಎಷ್ಟೋ ಸಲ ಕತೆ ಬರೆಯುವದರಿಂದ ಹಗುರಾಗಿದೆ; ಕತೆ ಬರೆಯುವದು ನನಗೊಂದು 'ಚಟ'ವಾಗಿ ಅಂಟಿಕೊಂಡಿದೆ; ನಿಜವಾಗಿಯೂ ಅದೊಂದು ಮಹತ್ವರವಾದ ನನ್ನ ಅಂಕೆಮೀರಿದ ವಿಷಯವಾಗಿ ಬಿಟ್ಟಿದೆ. ಎಷ್ಟೋ ಸಲ ತಲೆಯಲ್ಲಿ ಪೂರ್ತಿಯಾಗಿ ರೂಪುಗೊಂಡ ಕತೆಯನ್ನು ಕಾಗದದಮೇಲೆ ಮೂಡಿಸುವ ವರೆಗೆ ತಲೆ ಬೇರೆ ಏನನ್ನೂ ಹಿಡಿಯಲು ಅಸಮರ್ಥವಾಗಿಬಿಡುತ್ತದೆ. ಅಂಥ ಸಮಯಗಳಲ್ಲಿ ಓದಿದ ವಿಷಯ, ವರ್ಗದಲ್ಲಿ ಕೇಳಿದ ಭಾಷಣಗಳು ಬರಿದೆ ಹೋಗಿಬಿಟ್ಟಿವೆ; ಒಂದೆರಡು ಸಲ ಇಂದು ನಾಳೆ ವಾರ್ಷಿಕ ಪರೀಕ್ಷೆಯಿರುವಾಗ ಈ ತೊಂದರೆಯನ್ನು ತಪ್ಪಿಸಿಕೊಳ್ಳುವದಕ್ಕಾಗಿ ಕತೆ ಬರೆದಿದ್ದೇನೆ. ನನ್ನ ಪಾಲಿಗೆ ಕತೆ ಬರೆಯುವದೊಂದು ಮನೋರಂಜನೆಯ ಸಾಧನೆ!

ಕತೆ ಬರೆಯುವವರಲ್ಲಿ ನಾನಿನ್ನೂ ನುರಿತಿಲ್ಲ; ಅದೆಷ್ಟೋ ಕತೆಗಳನ್ನು ಈಗಾಗಲೇ ಬರೆದಿದ್ದರೂ ನನಗೆ ಅವುಗಳಿಂದ ತೃಪ್ತಿಯಿಲ್ಲ; ನಾನಿನ್ನೂ ಈ ರಂಗದಲ್ಲಿ ಅಭ್ಯಾಸಿಯೆಂದೇ ಹೇಳಬೇಕಾಗುತ್ತದೆ; ಕತೆಗಳನ್ನು ಬರೆಯುವವರಲ್ಲಿ ನಾನು ಸಾಧಿಸಬೇಕಾದುದು ಅದೆಷ್ಟೋ ಇದೆ; ಈಗ ಬರೆದ ಕತೆಗಳಿಂದ ನಾನೊಬ್ಬ ಕತೆಗಾರನಾಗಿರುವೆನೆಂದು ತಿಳಿದಿಲ್ಲ; ಈಗಾಗಲೇ ಬರೆದ ಕತೆಗಳು 'ಕಥಾಲೇಖನ'ದ ಅಭ್ಯಾಸ ಪ್ರಾರಂಭಿಸುವದಕ್ಕೆ ನನಗೆ ಪ್ರವೇಶವನ್ನಿತ್ತುದಾದರೆ ನನಗದೇ ಸಂತಸದ ಮಾತು! ಅಂತೆಯೇ ಕತೆಯ ತಂತ್ರ ಮತ್ತು ನುಡಿಯ ಬೆಡಗು ಬಿಗುವುಗಳನ್ನು ಅಭ್ಯಾಸಿಸಬೇಕಾಗಿದೆ ಸಹಾನುಭೂತಿಯಿಂದ ನನ್ನ ಈ ಕತೆಗಳನ್ನು ಓದಿ ನಿಃಪಕ್ಷಪಾತವಾದ ಅಭಿಪ್ರಾಯ ಓದುಗರು ಕೊಡುವದಾದರೆ ನಾನು ಇನ್ನೂ ಬರೆಯಬೇಕಾಗಿರುವ ಕತೆಗಳಿಗೆ ಒಂದು ಮಾರ್ಗದರ್ಶನವಾದೀತು!

ಒಳ್ಳೆಯ ಕತೆಗಳು ಮೂಡಿಬರಬೇಕಾದರೆ ಆಳವಾದ ಅಭ್ಯಾಸ, ಅನುಭವಗಳು ಅವಶ್ಯವೆಂದು ನನಗೆ ಮನದಟ್ಟಾಗಿದೆ; ಹೃದಯದಿಂದ ಕತೆ ರೂಪುಗೊಳ್ಳುತ್ತಿದ್ದರೆ ಅದರ ರೀತಿಯೇ ಬೇರೆಯಾಗಿರುತ್ತದೆ; ಆ ದಿಶೆಯಲ್ಲಿ ಪ್ರಗತಿ ಪಡೆಯುವದೇ ನನ್ನ ಗುರಿ!

ಕಾಲ ಸರಿದಂತೆ, ಅಭ್ಯಾಸ, ಅನುಭವ, ವಿಚಾರಿಸುವ ಶಕ್ತಿಗಳು ಬೆಳೆಯುತ್ತ ನಡೆದಂತೆ ಬರವಣಿಗೆಯಲ್ಲಿಯೂ ಪ್ರಗತಿ ತೋರಿಬರುತ್ತದೆ; ಆ ದೃಷ್ಟಿ ನೋಡಿದಲ್ಲಿ ಕೆಲವು ಕತೆಗಳು ತೀರ ಕೆಳಮಟ್ಟಕ್ಕಿಳಿಯಬಹುದು; ಹಲವು ಸಲ ಅಂಥವುಗಳನ್ನು ಮರಳಿ ಮಾರ್ಪಡಿಸಿ ಮತ್ತೆ ಬರೆಯಬೇಕೆ? ಅನ್ನಿಸುತ್ತದೆ; ಆದರೆ ಅಂಥ ಗೋಜಿಗೆ ಹೋಗಿಲ್ಲ ಬೇರೆ ಬೇರೆ ಅವಧಿಯ ಮಟ್ಟ ನಿರ್ಣಯಿಸಲಿಕ್ಕೆ ಅವು ಸಹಕಾರಿಯಾದರೆ ಅಷ್ಟೇ ಸಾಕು!

ಇದರಲ್ಲಿಯ ಕೆಲವು ಕತೆಗಳಿಗೆ ಒಳ್ಳೆಯ ಕತೆಗಳೆಂದು ಮೆಚ್ಚುಗೆಗಳು ಬಂದಿವೆ; ಆಗಾಗ ಹಲವು ಪತ್ರಿಕೆಗಳಲ್ಲಿ ಕೆಲವು ಬೆಳಕನ್ನು ಪಡೆದಿವೆ; ಅವರಿ-ಗೆಲ್ಲ ನನ್ನ ಹೃತ್ಪೂರ್ವಕ ವಂದನೆಗಳು! ನನ್ನ ಆತ್ಮೀಯರಾದ ಅನೇಕ ಗೆಳೆಯರು ನಾನು ಬರೆಯುವ ಮೊದಲು, ಬರೆಯುವಾಗ್ಗೆ, ಬರೆದು ಮುಗಿಸಿದ ಮೇಲೆ, ಇಲ್ಲವೆ ಪ್ರಕಟವಾದಾಗ ನನ್ನ ಕತೆಗಳನ್ನು ತಾವು ಓದಿ ಆನಂದಪಟ್ಟುದಲ್ಲದೆ ಹುರುಪುಕೊಟ್ಟು ಹೆಚ್ಚೆಚ್ಚು ಕತೆಗಳನ್ನು ಮುಂದೆ ಬರೆಯಲಿಕ್ಕೆ ಅನುವು

ಮಾಡಿಕೊಟ್ಟಿದ್ದಾರೆ. ಅವರ ಹರಕೆ, ಪ್ರೋತ್ಸಾಹಗಳಿಂದ ಮುನ್ನಡೆಯುವ-ದೇನೂ ನನಗೆ ಆಯಾಸದ ಕೆಲಸವಲ್ಲ! ಅಂಥವರು ಒಬ್ಬರೇ; ಇಬ್ಬರೆ;........ ನೂರಾರು ಜನರು; ಅವರೆಲ್ಲರನ್ನು ಒಬ್ಬೊಬ್ಬರನ್ನಾಗಿ ಸ್ಮರಿಸುವದು ಸಾಧ್ಯ ವಿಲ್ಲ; ಒಟ್ಟಾಗಿಯೇ ಅವರೆಲ್ಲರಿಗಾಗಿ ನನ್ನ ಹೃದಯ ಕೃತಜ್ಞತೆಗಳಿಂದ ಭಾರ ವಾಗಿದೆ

ಹಿರಿಯರೂ, ನನ್ನನ್ನು ತೀರ ಪ್ರೇಮಾದರಗಳಿಂದ ಕಾಣುತ್ತಿರುವರೂ, ಆದ ಶ್ರೀ. ಶಂ. ಭಾ ಜೋಯಿಸ್ರ ಅವರು ಮುನ್ನುಡಿಯನ್ನು ಬರೆದಿದ್ದಾರೆ; ನನ್ನ ಮೊದಲಿನ ಮೂರೂ ( ಅನುವಾದ ) ಕೃತಿಗಳನ್ನು ಅವರೇ ಪ್ರಕಾಶನ ಗೊಳಿಸಿ ನನ್ನನ್ನು ಬೆಳಕಿಗೆ ತಂದಿದ್ದಾರೆ. ಅಂತೆಯೇ ಅವರಿಗೆ ಬರೀಯ ಮಾತುಗಳಲ್ಲಿಯೋ, ಶಬ್ದಗಳಲ್ಲಿಯೋ ಕೃತಜ್ಞತೆಗಳನ್ನು ಅರ್ಪಿಸಲು ಹೊರ ಟರೆ ನಾನು ಅವರಿಗೆ ನಿಜವಾದ ಮನ್ನಣೆ ಮಾಡಿದಂತಾಗಲಿಲ್ಲ. ಅವರನ್ನು ಎಷ್ಟು ಬಗೆಯಾಗಿ ಕೊಂಡಾಡಿದರೂ ಅದು ಕಡಿಮೆಯೇ ಸರಿ! ಅವರಿಗೆ ನನ್ನ ಅನಂತ ವಂದನೆಗಳು; ಗೆ. ಎಚ್. ಬಿ. ನವಲೂರ ಅವರು ಮುಂದೆ ಬಂದು ನನ್ನ ಮೊದಲ ಸಂಕಲನ ಪ್ರಕಟಿಸುವ ಹೊಣೆ ಹೊತ್ತಿದಾರೆ; ಅವರು ಮುಂದಾದರೆಂದೇ ಇಷ್ಟು ತೀವ್ರ ಇದು ಹೊರಬೀಳುತ್ತಿದೆ. ಇಲ್ಲವಾದರೆ ಬಹಳ ಮಾಡಿ ಹೊರಗೆ ಬರುತ್ತಿರಲೇ ಇಲ್ಲ; ಅವರಿಗೂ ನನ್ನ ಕೃತಜ್ಞೆಗಳು ಸಲ್ಲಬೇಕು!

ಪುಣೆಯ ತರುಣ ಗೆ. ಕುಲ್ಕರ್ಣಿ ಪಂಡಿತರಾವ, ಅವರು ಹೊದಿಕೆಯ ಮೂರು ಬಣ್ಣದ ಚಿತ್ರದ ಪಡಿಯಚ್ಚು ಕೊಟ್ಟು ಪುಸ್ತಕದ ಅಂದ ಹೆಚ್ಚಿಸಿ ದ್ದಾರೆ. ಅವರಿಗೆ ನನ್ನ ವಂದನೆಗಳು.

ಕೊನೆಯದಾಗಿ ಸಹೋದರ ದೇವೇಂದ್ರನ ಸಹಕಾರದ ಹಸ್ತವಿರದಿದ್ದರೆ ನನ್ನ ಈ ಪುಸ್ತಕ ತೀವ್ರ ಹೊರಗೆ ಬರುವದು ಸಾಧ್ಯವಿರಲಿಲ್ಲ. ನನ್ನ ಎಲ್ಲ ಕೆಲಸಗಳಲ್ಲಿ ನನಗೆ ನೆರವಿತ್ತು ಸಹಾಯಮಾಡಿದ ಸಹೋದರನಿಗಾಗಿ ಮನಸ್ಸು ಕೃತಜ್ಞತೆಯಿಂದ ಭಾರವಾಗಿದೆ.

ಮೋಟೇಬೆನ್ನೂರ
ಎಪ್ರಿಲ ೧೫, ೧೯೪೪

**ವೀ ಚ. ಹಿತ್ತಲಮನಿ**

# ಪರಿವಿಡಿ


| | | |
|---|---|---|
| | ಮುನ್ನುಡಿ .... .... .... | v |
| | ನನ್ನ ನುಡಿ .... .... .... | ix |
| ೧ | ಹೊಸ ಹುಟ್ಟು .... .... .... | ೧ |
| ೨ | ಪ್ರವಾಹ ಪತಿತೆ ! ... .... .... | ೨೨ |
| ೩ | ಸ್ನೇಹ–ಸಂಧಿ .... .... .... | ೩೪ |
| ೪ | ಎದೆಯೊಲವು .... .... ... | ೪೬ |
| ೫ | ಕೈದಿ .... .... .... | ೫೮ |
| ೬ | ಅಪರಾಧಿನಿಯ ಅಂತರಾಳ .... .... | ೬೮ |
| ೭ | ಇಪ್ಪತ್ತಾರು !! .... .... .... | ೮೧ |
| ೮ | ಭೂಮಿಗಿಳಿದ ತಾರೆ ! .... .... | ೧೦೪ |
| | ಕತೆಗಳ ಕತೆ .... .... .... | ೧೧೭ |

# ಕುಮಾರವ್ಯಾಸ ಮತ್ತು ವೇದವ್ಯಾಸರ

## ತುಲನಾತ್ಮಕ ಅಭ್ಯಾಸ

# ಆರಣ್ಯಕ ಪರ್ವ

ಮೂಲ ಭಾರತದೊಡನೆ ಕುಮಾರವ್ಯಾಸ ಭಾರತವನ್ನು ತೂಗಿ ಅಭ್ಯಾಸ ಮಾಡುವುದರಿಂದ ಅನೇಕ ಅಮೌಲಿಕವಾದ ಸಂಗತಿಗಳು ಬೆಳಕಿಗೆ ಬಂದಿವೆ. ಈ ವರೆಗೆ ಇಂತಹ ತೌಲನಿಕ ಗ್ರಂಥವು ನಮ್ಮಲ್ಲಿ ಒಂದೂ ಪ್ರಕಟವಾಗಿಲ್ಲ. ಇದರೊಳಗಿನ ವಿಚಾರ ಮತ್ತು ಅಭ್ಯಾಸದ ದೃಷ್ಟಿಯಿಂದ ಇದು ಅಪೂರ್ವವಾದ ಪ್ರಕಟನೆಯೆಂಬಲ್ಲಿ ಸಂದೇಹವಿಲ್ಲ. ಯಕ್ಷ-ಧರ್ಮರ ಪ್ರಶ್ನೋತ್ತರಗಳಂತೂ ಜನಸಾಮಾನ್ಯರಿಗೆಲ್ಲ ದಿನದ ಬಾಳಿನಲ್ಲಿ ಬೆಳಕನ್ನೀಯುವಂತಹವುಗಳಾಗಿವೆ. ಓದಿ ಅರಗಿಸಿಕೊಳ್ಳುವವನೇ ದುರ್ದೈವಿ.

ಸಂಪಾದಕರು:

**ವೆಂಕಣ್ಣ ಕುಲಕರ್ಣಿ :: ಚಿದಂಬರ ದೀಕ್ಷಿತ :: ಶಂಕರ ಜೋಶಿ**

ಪ್ರಕಾಶಕರು:

**ಮಾಧವ ಬಲ್ಲಾಳ ಬಂಧುಗಳು, ಧಾರವಾಡ**

# ಹೊಸ ಹುಟ್ಟು

ನಿರ್ಜನವಾದಂತಿದ್ದ ಬೀದಿ. ಅಲ್ಲೊಂದು ಇಲ್ಲೊಂದು ನಗರಸಭೆಯು ವರ ವಿದ್ಯುದ್ದೀಪಗಳು ಉರಿಯುತ್ತಿದ್ದರೂ, ಬೀದಿ ಕತ್ತಲೆಯಿಂದಲೇ ತುಂಬಿದಂತಿತ್ತು. ಆ ಬೀದಿಯಲ್ಲಿ ಕಾಲಿಟ್ಟೊಡನೆಯೆ ಸ್ವಾಮಿನಾಥನಿಗೆ ಮೊದಲು ಎದುರಾದವನು ಒಬ್ಬ ಹಿಂದೀ ಸೈನಿಕ! ತೂಗಾಡುತ್ತ ಬರುತ್ತಿದ್ದನು. ಕುಡಿದ ಹೆಂಡದ ಅಮಲು ನೆತ್ತಿಗೇರಿಬಿಟ್ಟಿತ್ತು! ಹೊಲಸು ನಾರುತ್ತಿದ್ದನು. ಹರಕು ಮುರುಕು ಹಿಂದಿಯಲ್ಲಿ ಅದಾವುದೋ ಪ್ರೇಮಗೀತ ಹಾಡುತ್ತ, ಬೀದಿಯ ಮೇಲೆಯೆ ಉಯ್ಯಾಲೆಯನ್ನೇರಿ ನಡೆದಿದ್ದವನು! ಸ್ವಾಮಿನಾಥ ಒಂದೆರಡು ಹೆಜ್ಜೆ ಮುಂದೆ ಇಟ್ಟಿರಲಿಲ್ಲ; ಪಕ್ಕದ ಮನೆಯ ಬಾಗಿಲನ್ನು ತೆರೆದ ಸದ್ದಾಯಿತು; ಇಬ್ಬರು—ಅಂಗಾಲಿನಿಂದ ನಡುನೆತ್ತಿಯ ವರೆಗೆ ಆಂಗ್ಲೇಯರ ಉಡುಪಿನಲ್ಲಿ—ಆ ಮನೆಯಿಂದ ಹೊರಬಿದ್ದರು. ನೋಡಲಿಕ್ಕೇನೋ ಸುಶಿಕ್ಷಿತರಂತೆ ಕಾಣುತ್ತಿದ್ದರು. ಗಹಗಹಿಸಿ ನಗುತ್ತಿದ್ದರು. ಹೆಣ್ಣುಮಗಳೊಬ್ಬಳು ಅವರನ್ನು ಬೀಳ್ಕೊಟ್ಟು "Good night" ಎಂದು ಹೇಳಿ ಒಂದು ಕೃತ್ರಿಮ ನಗೆ ನಕ್ಕಳು. ಆಕೆ 'Good night' ಶಬ್ದ ಉಚ್ಚರಿಸಿದುದರ ಮೇಲಿಂದ ಆಕೆಯ ಸಂಸ್ಕೃತಿಯನ್ನು ಅಳೆಯಬಹುದಾಗಿತ್ತು. "Good night darling!" ಎಂದು ಹೇಳಿ ಅವರು ಪಾವಟಿಗೆಗಳನ್ನು ಇಳಿದು ಬೀದಿಗೆ ಬಂದರು. ಆಕೆ ಅದಾವುದಕ್ಕೂ ಲಕ್ಷ್ಯಹಾಕದೆ ಆಗಲೇ ಒಳಗೆ ಹೋಗಿಬಿಟ್ಟಿದ್ದಳು. ಅಲ್ಲಿಯೆ ಪಕ್ಕದಲ್ಲಿ ಗಟಾರದ ಬದಿಯಲ್ಲಿ ಒಬ್ಬನು ಬಿದ್ದುಕೊಂಡು ಬಡಬಡಿಸುತ್ತಿದ್ದನು ಅವನ ಮಾತುಗಳ ಮೇಲಿಂದ ಅವನೊಬ್ಬ 'ರಿಕ್ಷಾ' ('Riksh) ಹೊಡೆಯುವವನೆಂದು ಹೇಳಬಹುದು. ಅವನೂ ನೆತ್ತಿಗೇರುವಷ್ಟು ಕುಡಿದಿದ್ದಾನೆ! ತಾನು ಆ ದಿವಸ ದುಡಿದ ದುಡ್ಡಿನ ಬಗೆಗೆ ಮಾತನಾಡಿ, ರಿಕ್ಷಾ ಹತ್ತಲಿಕ್ಕೆ ಜನರನ್ನು ಕರೆಯುತ್ತಿದ್ದಾನೆ. ಮತ್ತೆ ಮನೆಯಲ್ಲಿಯ ಹೆಂಡಿರು-ಮಕ್ಕಳನ್ನು ಬಾಯಿಗೆ ಬಂದಂತೆ ಬೆದರಿಸುತ್ತಿದ್ದಾನೆ! ಯಾವುದೋ ಹೆಣ್ಣನ್ನು

ತನಗೆ ತಿಳಿದ ಪ್ರೇಮದ ಕರೆಗಳಿಂದ ಕೂಗುತ್ತಿದ್ದಾನೆ. ಕೈಯಲ್ಲಿ ಎರಡು ರೂಪಾಯಿಯ ನೋಟು ಹಿಡಿದು, ಅದನ್ನು ಯಾರಿಗೋ ಕೊಡುವನೆಂಬಂತೆ ಆಗಾಗ ಚಾಚುತ್ತಾನೆ. ಇನ್ನೂ ಅವನು ತನ್ನ ಗುರಿಯ ಮಾರ್ಗದಲ್ಲಿರಬೇಕು. ಆಗಲೇ ಹಿಂದಿನಿಂದ ಬಂದ ಒಬ್ಬ ನಡುವಯಸ್ಸಿನವನು ಹಿಂದು ಮುಂದೆ ನೋಡಿ, ಪಕ್ಕಕ್ಕೆ ಹೊರಳಿ, ಬಾಗಿಲನ್ನು ತಳ್ಳಿ, ಒಂದು ಮನೆಯನ್ನು ಹೊಕ್ಕನು. ಬೀದಿಯ ಮಂದ ಬೆಳಕಿನಲ್ಲಿ ಅವನ ತಲೆಯ ಮೇಲಿನ ಜರದ ರುಮಾಲು ಮತ್ತು ಕೈಯೊಳಗಿನ ಉಂಗುರಗಳು ಥಳಥಳಿಸುತ್ತಿದ್ದವು! ಮರು-ಕ್ಷಣದಲ್ಲಿ ಮಗ್ಗಲು ಮನೆಯಲ್ಲಿ ಯಾರನ್ನೋ ಬಡಿದು ದೂಡುತ್ತಿರುವಂತೆ ಸಪ್ಪಳವಾಯಿತು! ಬಾಗಿಲು ತೆರೆದು ಒಬ್ಬ ಹೆಂಗುಸು ಗಂಡುಸೊಬ್ಬನನ್ನು ಚಂಡಿಗೆ ಕೈಹಾಕಿ, ಬೀದಿಗೆ ಬೆಕ್ಕಿನ ಮರಿಯನ್ನು ಚಲ್ಲಿಕೊಡುವಂತೆ ನೂಕಿ ಬಿಟ್ಟಳು. ಕುಡಿದು ಜೋಲಿಹಾಕುತ್ತಿದ್ದ ಅವನು ಅಲ್ಲಿಂದ ಎದ್ದು ಬಂದು, ಬಂದುಮಾಡಿದ ಬಾಗಿಲನ್ನು ಬಡೆಯುತ್ತ ಬಗೆಬಗೆಯಾಗಿ ಅಂಗಲಾಚಿದನು; ಆಕೆ ಒಳಗಿನಿಂದಲೇ ಏನೇನೋ ಉತ್ತರಿಸಿದಳು. ಪಾವಟಿಗೆಗಳ ಮೇಲೆ ಬಿದ್ದು ಯಾರನ್ನೋ ಶಪಿಸಹತ್ತಿದನವನು. ಆ ಸುಶಿಕ್ಷಿತ ತರುಣರಲ್ಲಿ ಒಬ್ಬನು ಅವನ ಕಡೆಗೆ ಬ್ಯಾಟರಿಯ ಬೆಳಕು ಹಿಡಿದು ' Oh you rascal ' ಎಂದ; ಮುಂದೆ ನಡೆದರು ಸ್ವಾಮಿನಾಥ ಅಲ್ಲಿಯೆ ಒಂದು ಕ್ಷಣ ತಡೆದಿದ್ದನು. ಬ್ಯಾಟ-ರಿಯ ಬೆಳಕು ಮರುಕ್ಷಣದಲ್ಲಿ ಸ್ವಾಮಿನಾಥನ ಮೋರೆಯ ಮೇಲೆ ಬಿತ್ತು! ಎರಡನೆಯವನು ಬಾಗಿ ' Young handsome chap ' ಎಂದನು. ಮೊದಲನೆಯನು ' Same new face! ' ಎಂದ; ಒಂದು ದೇಶಾವರಿ ನಗೆ ನಕ್ಕ. ಬಿರಬಿರನೆ ನಡೆದುಬಿಟ್ಟರು. ಮೂಲೆಯಲ್ಲಿಯ ಮನೆಯೊಂದರಿಂದ ಪೋಲೀಸಿನವನೊಬ್ಬನು ಹೊರಬಿದ್ದನು. ಸ್ವಾಮಿಗೆ ಅವನನ್ನು ಕಂಡು ಅಂಜಿಕೆಯುಂಟಾಯಿತು. ಆದರೆ ಪೋಲೀಸನೆ ಆಗ ಇನ್ನೊಬ್ಬರಿಗೆ ಅಂಜುವ ಸ್ಥಿತಿಯಲ್ಲಿದ್ದ. ಅವನೇ ಕಳ್ಳನಂತೆ ಸ್ವಾಮಿನಾಥನನ್ನು ಕಂಡು ಅಂಜಿ ಸರಿದು ಹೋದನು. ಇನ್ನೂ ಇಂತಹ ಎಷ್ಟೋ ಜನರನ್ನು ಅಲ್ಲಿ ಸ್ವಾಮಿನಾಥ ಕಂಡುದು!

ಬೀದಿಯ ಎರಡೂ ಬದಿಗಳಲ್ಲಿ ಎರಡೆರಡು, ಮೂರು ಮೂರು ಅಂತಸ್ತಿನ ಮನೆಗಳು ಪ್ರತಿಯೊಂದು ಮನೆಯ ಕಿಟಕಿಗಳು ತೆರೆದಿದ್ದುವು. ಒಂದೊಂದು

ಕಿಟಕಿಯಲ್ಲಿಯೂ ಒಬ್ಬೊಬ್ಬ ಹೆಂಗುಸು ಕುಳಿತಿದ್ದಳು. ಅವರೆಲ್ಲ ಬೆಡಗು-ಬಿನ್ನಾಣದ ನುಡಿಯಲ್ಲಿ ಕೆಳಗೆ ಹೋಗುವವರನ್ನು ಕರೆಯುತ್ತಿದ್ದರು. ಸ್ವಾಮಿನಾಥನನ್ನು ಹತ್ತಾರು ಹೆಣ್ಣುಗಳು ಒಮ್ಮೆಲೇ ಕೂಗಿದುವು. ಎಲ್ಲ ಭಾಷೆಗಳ ಕರೆಗಳೂ ಅವನ ಕಿವಿಗೆ ಬೀಳುತ್ತಿದ್ದುವು. ಯಾವ ಕಡೆಗೆ ಹೋಗಬೇಕೆಂಬುದು ತಿಳಿಯದೆ ಸ್ವಾಮಿ ದಿಗ್ಭ್ರಾಂತನಾದನು. ಒಂದೆರಡು ಹೆಜ್ಜೆ ಹಾಗೆಯೆ ಮುಂದೆ ನಡೆದನು. ಯಾವಳೋ ಮೇಲಿನಿಂದ ತಂಬಾಕು ಜಗಿಯುತ್ತಿದ್ದವಳು ಉಗುಳಿ ಬಿಟ್ಟಳು. ಸುದೈವದಿಂದ ಅದು ಅವನ ಪಕ್ಕದಲ್ಲಿ ಬಿತ್ತು. ಆಕೆಯ ಬಳಿಗೆ ಬರಲಿಲ್ಲವೆಂದಮೇಲೆ ಆಕೆಗೇನು ? ಕಿಟಕಿಗಳಲ್ಲಿ ಮಂದಪ್ರಕಾಶದಲ್ಲಿ ಅವರು ಕುಳಿತ ದೃಶ್ಯ, ನಿರ್ಲಜ್ಜೆಯಿಂದ ಮಾತನಾಡುವ ಪರಿ, ಬೀಭತ್ಸ ನಗೆ, ಅವರ ಆಕಾರ ಎಲ್ಲವನ್ನೂ ನೋಡಿ ಸ್ವಾಮಿಗೆ 'ಇಸ್ಸೀ' ಎನಿಸಿತು; ಇಲ್ಲಿಂದ ಒಂದು ಸಲ ಪಾರಾಗಿ ಹೋದರೆ ಅವನಿಗೆ ಸಾಕಾಗಿ ಹೋಗಬಹುದಾಗಿತ್ತು. ಹಿಂದಕ್ಕೆ ಹೊರಳಿ ನಡೆದ, ದಾರಿಯಿಂದ ಬಿರಬಿರನೆ ಹೋಗಿಬಿಡಬೇಕೆಂದು ತಿರುಗುವುದರಲ್ಲಿದ್ದನು. ಪಕ್ಕದ ಮನೆಯಲ್ಲಿ ಯಾರೋ ಪಾವಟಿಗೆಗಳನ್ನು ಇಳಿದು ಬರುವ ಸದ್ದಾಯಿತು; ಮುಂದೆ ವೇಗವಾಗಿ ನಡೆದುಬಿಟ್ಟನು. ಆಕೆ ಬಾಗಿಲನ್ನು ತೆರೆದು ಒಮ್ಮೆ ಕೂಗಿದಳು. ಸ್ವಾಮಿನಾಥ ಆ ಕಡೆಗೆ ಲಕ್ಷ್ಯಕೊಡ ಲಿಲ್ಲ; ಆಡಬಾರದ ಮಾತುಗಳನ್ನಾಡಿ ಆಕೆ ಮತ್ತೆ ಮೇಲೆ ಹೋಗಿಬಿಟ್ಟಳು. ಮತ್ತೆ ಕೆಲವರು, ಇವನ ಸಲುವಾಗಿಯೆ ತಮ್ಮತಮ್ಮಲ್ಲಿ ಬಡಿದಾಡುತ್ತಿದ್ದರು. ಅವರು ತನಗಾಗಿ ಉಪಯೋಗಿಸುತ್ತಿದ್ದ ಹೊಲಸು ನುಡಿಗಳನ್ನು ಕೇಳಿ ಸ್ವಾಮಿಗೆ ಕಿವಿ ಮುಚ್ಚಿಕೊಳ್ಳುವಂತಾಯಿತು. 'ಒಮ್ಮೆ ಈ ಬೀದಿಯನ್ನು ದಾಟಿ ಮುಂದೆ ಹೋದರೆ ಸಾಕು!' ಎನಿಸಿತು. ಇಂಥಲ್ಲಿ ತನ್ನ ಮನದಾಶೆ ಯನ್ನು ತೃಪ್ತಿ ಮಾಡಿಕೊಳ್ಳುವುದು ಅವನಿಗೆ ಖಂಡಿತವಾಗಿಯೂ ಬೇಕಾಗಿರ ಲಿಲ್ಲ ಹಾಗೆಯೆ ಮುಂದೆ ನಡೆದನು. ಅದು ಮೊಂಡಬೀದಿ ಎಂಬುದು ಅವನಿಗೇನು ಗೊತ್ತು ? ಮುಂದೆ ಹೋಗಲು ಮಾರ್ಗವೇ ಇರಲಿಲ್ಲ. ಎದುರಿ ನಲ್ಲಿ ಒಂದು ಮನೆಯಿತ್ತು. ಅಲ್ಲಿಯೇ ದೀಪದ ಕಂಬದ ಬಳಿಯಲ್ಲಿ ಒಂದು ಕ್ಷಣ ನಿಂತನು; ತುಂಬಾ ಸೋತವನಂತಿದ್ದನು ಅವನು. 'ಆದದ್ದಾಗಲಿ, ತಿರುಗಿ ಹೋಗುವುದೇ!' ಎಂದು ತಿರುಗಿ ನಡೆಯುವದರಲ್ಲಿದ್ದನು. ಆ ಮನೆ ಯಿಂದ ನಾಲ್ವತ್ತಕ್ಕೆ ಮಿಕ್ಕಿದ ಹೆಂಗುಸೊಬ್ಬಳು ಹೊರಗೆ ಬಂದು, ನಗುನಗುತ್ತ

ಕೈಹಿಡಿದು, ಬಲವಂತದಿಂದ ಒಳಗೆ ಕರೆದೊಯ್ದಳು. ಒಮ್ಮೆ ಪ್ರತಿಭಟಿಸ ಬೇಕೆಂದನು; ಆದರೆ ಹಾಗೆ ಮಾಡಲಿಲ್ಲ. ಆಕೆ ಮಗುವನ್ನು ಪ್ರೀತಿ-ವಾತ್ಸಲ್ಯ ಗಳಿಂದ ಕರೆದೊಯ್ಯುವಂತೆ ಕೊಂಡೊಯ್ದಳು! ಆ ಅಕರಾಳ ವಿಕರಾಳ ದೇಹ, ಕರಿಯ ಮುಖಕ್ಕೆ ಮೆತ್ತಿದ ಬಣ್ಣ, ಒರಟು ನುಡಿ ಇವುಗಳನ್ನೆಲ್ಲ ನೋಡಿ ಅವನಿಗೆ ತೀರ ಅಸಹ್ಯವೆನಿಸಿತು. ಯಾಂತ್ರಿಕವೆಂಬಂತೆ ಆಕೆಯೊಡನೆ ನಡೆ ದನು. ಒಳಗಿನ ದೃಶ್ಯ ಇನ್ನೂ ಭಯಂಕರವಾಗಿದ್ದಿತು! ಅದೊಂದು ವಸತಿ-ಗೃಹದಂತೆನಿಸಿತು ಅವನಿಗೆ. ಅಲ್ಲಲ್ಲಿ ಮಂಚಗಳಿದ್ದುವು; ಒಂದೊಂದು ಕಿರು-ಪರದೆಗಳು ಮಾತ್ರ ಎರಡು ಮಂಚಗಳ ನಡುವೆ!! ಒದರಾಟ, ಚೀರಾಟ, ಭೀಕರ ನಗು, ಹೇಸಿ ಮಾತು ಕೇಳಬರುತ್ತಿದ್ದುವು. ಎಷ್ಟೋ ಜನರು ಒಳಗಿನಿಂದ ಕಿಳಗೆ ಮುಖ ಹಾಕಿಕೊಂಡು ಹೊರಬಿದ್ದುದು ತೋರಿ ಬರುತ್ತಿತ್ತು. ಅದೆಂತಹ ದೃಶ್ಯಗಳು!! ಎಷ್ಟೋ ಯುವತಿಯರು ತಿರಬತ್ತಲೆಯರಾಗಿದ್ದರು. ಒಂದಿಬ್ಬರು ಮೈಮೇಲೆ ಪರಿವೆಯಿಲ್ಲದೆ ಗಂಡುಸರನ್ನು ತಕ್ಕೆಯಲ್ಲಿ ಹಾಕಿ-ಕೊಂಡೇ ಹಣಿಯಿಕ್ಕಿ ನೋಡುತ್ತಿದ್ದರು. ಕೆದರಿದ ಕೂದಲುಗಳ ಪರಿವೆಯಿಲ್ಲ; ಮೈಮೇಲಿನ ಸೀರೆ ಕಳಚಿ, ಕುಪ್ಪಸ ಓರೆಯಾದ ಪರಿವೆಯಿರಲಿಲ್ಲ ಅನೇಕ ಹೆಣ್ಣುಗಳು ಅವನ ಮಾರ್ಗದಲ್ಲಿ ನಿಂತು ಕಿಲಕಿಲನೆ ನಕ್ಕು ಮುಖ ತಿರುಗಿಸಿ ಮುರಕ ಮಾಡಿದರು. ಸ್ವಾಮಿಯೊಬ್ಬ ನ್ಯಾಯಸ್ಥಾನಕ್ಕೆ ಹೋಗುವ ಅಪರಾಧಿಯಂತಾಗಿದ್ದನು. ಆಕೆ ಒಂದು ಕೋಣೆಗೆ ಒಯ್ದು ಅಲ್ಲಿ ಒಂದು ಕಬ್ಬಿಣದ ಮಂಚದ ಮೇಲೆ ಕೂಡ್ರಿಸಿ, ಪಕ್ಕದಲ್ಲಿ ತಾನೂ ಕುಳಿತಳು. ಆಗ ಅವನಿಗೆ ತಡೆಯುವದಾಗಲಿಲ್ಲ; ತುಂಬಾ ಕೋಪ ಬಂದುಬಿಟ್ಟಿತ್ತು. ಸರಿದು ಮಂಚದ ತುದಿಗೆ ಕುಳಿತನು. ಇವನನ್ನು ನೋಡಿ ಆಕೆ ಗಹಗಹಿಸಿ ನಕ್ಕಳು. ಎದ್ದು ಮಂದವಾದ ದೀಪದ ಬತ್ತಿಯನ್ನು ಏರಿಸಿದಳು. ಬೆಳಕಿನಲ್ಲಿ ಸ್ವಾಮಿಯನ್ನು ಚೆನ್ನಾಗಿ ನೋಡಿದಳು. ಅವನ ರೂಪ, ಕಂಗಳಲ್ಲಿಯ ಕಾಂತಿ, ದೇಹದ ಕಟ್ಟು, ಮುಖದ ಮೇಲಿನ ಸುಸಂಸ್ಕೃತಿಯ ಗುರುತುಗಳನ್ನೆಲ್ಲ ಕಂಡು ಒಂದಿನಿತು ಬೆದರಿದಳು. ಅಂಥವರಾರೂ ಒಮ್ಮೆಯೂ ಅಲ್ಲಿಗೆ ಬಂದಿರಲಿಲ್ಲ ನಮ್ರತೆಯಿಂದ ಕೇಳಿದಳು:

"ಹಂಗಾರಿಕ ನೀವು ತಪ್ಪಿ ಬಂದಿರೇನು ಇಲ್ಲಿಗೆ?"

ಸ್ವಾಮಿನಾಥನಿಗೆ ಒಂದಿಷ್ಟು ಧೈರ್ಯ ಬಂದಿತು—ಆಕೆಯ ವಿನಯದ ನುಡಿಯಿಂದ.

"ಇಲ್ಲ! ಬಂದೆ ಕೇಳದೆ, ಬಂದಿದ್ದೇನೆ..."

"ಅಂದವಾಗಿಲ್ಲ ಇಷ್ಟ್ಯೇ....' ಅರ್ಥಕ್ಕೇ ಮಾತು ನಿಲ್ಲಿಸಿ ನಕ್ಕು ನಟನೆಗೆ ಮೊದಲು ಮಾಡಿದಳು. ಅಂಥ ವಯಸ್ಸಿನಲ್ಲಿಯೂ ಆಕೆ ತೋರುವ ಒಯ್ಯಾರ, ಮುಖಕ್ಕೆ ಬಳಿದುಕೊಂಡ ಪಾವಡರು, ತುಟಿಗೆ ಮೆತ್ತಿಕೊಂಡ ಚೆಂಬಣ್ಣ, ತಲೆಗೆ ಸುರುವಿಕೊಂಡ ಎಣ್ಣೆ, ಆ ಕೋಣೆಯಲ್ಲಿ ತೂಗ ಹಾಕಿದ ನಗ್ನ ಪ್ರಣಯ ಚಿತ್ರ ಇತ್ಯಾದಿಗಳನ್ನು ಕಂಡು ನಿಷ್ಠುರವಾಗಿ ನುಡಿದನು:

"ಬರಬೇಕೆಂದೇ ಬಂದೆ! ಆದರೆ...."

"ಆದರೆ?...." ಹುಬ್ಬು ಹಾರಿಸಿ, ಕೊರಳು ಕೊಂಕಿಸಿ ಕೈಯಲ್ಲಿನ ಹಣಿಗೆಯಿಂದ ತನ್ನ ಕೂದಲುಗಳನ್ನು ನೇವರಿಸುತ್ತ ಕೇಳಿದಳು:

"ಹೀಗೆಲ್ಲಾ ಇರುತ್ತದೆಂದು ನಾನು ಕಲ್ಪಿಸಿರಲೂ ಇಲ್ಲ ಕೂಡ!"

"ಹೀಂಗೆಲ್ಲಾ ಅಂದ್ರೇ...."

"ತಿಳಿಯುವದಿಲ್ಲವೆ? ನಿನಗೆ ವಯಸ್ಸಾದುದನ್ನು ಮುಖಕ್ಕೆ ಬಣ್ಣ ಬಳಿದುಕೊಂಡರೆ ಮುಚ್ಚಿ ಹೋಗುವುದೆಂದು ತಿಳಿದಿರುತ್ತೀಯಾ? ಆ ಬಣ್ಣ ನಿನ್ನ ಮುಖದ ಕಪ್ಪನ್ನು ಮರೆಯಿಸಬಹುದು; ಆದರಲ್ಲಿ ಮೂಡಿದ ಮುದಿತನದ ಗೆರೆಗಳನ್ನು ಮುಚ್ಚಲಾರದು....ನಿನಗೊಬ್ಬ ಮಗನಿದ್ದಿದ್ದರೆ ಅವನಿಗೂ ನನ್ನಷ್ಟೇ ವಯಸ್ಸಿರಬೇಕು....ಇಂಥ ನಿನ್ನೊಂದಿಗೆ ರಮಿಸಲು ನಾನು ಬಂದಿಲ್ಲ....ಮನಸ್ಸಿನ ಆಶೆಯನ್ನು ನೊ ಣಿಸಿಕೊಳ್ಳಲು ಬಂದಿದ್ದೆನೆ; ಆದರೆ ನಿನ್ನಂಥವಳಲ್ಲಿ ಅದು ತಣಿಯಲಾರದೆಂದು ನನಗೆ ಖಂಡಿತವಾಗಿದೆ....ಅದಿರಲಿ! ಇನ್ನೊಂದ ಕ್ಷಣವೂ ಇಲ್ಲಿ ನಿಲ್ಲಲಾರೆ. ನಿನಗೆಷ್ಟು ಕೊಡಬೇಕು ಹೇಳು...." ಎದ್ದು ನಿಂತನು.

ಆಕೆಗೂ ಕೋಪ ಬಂದಿತ್ತು. ಎದುರಿನಲ್ಲಿಯೇ ಮುಖಭಂಗವಾದರೆ ತಾಳಿಕೊಳ್ಳುವಷ್ಟು ತಾಳ್ಮೆ ಆಕೆಯಲ್ಲಿ ಇರಲಿಲ್ಲ.

"ಸಾಧ್ಯವಿರದಿದ್ದರೆ ಹೊರಟು ಹೋಗು! ನಾನೇನು ನಿನ್ನ ಕಟ್ಟಿಹಾಕಿಲ್ಲ. ಮ್ಯಾಲಾಗಿ ನಾನೇನು ನಿನ್ನ ಕೈಕಾಲು ಬಿದ್ದು ಕರೆತಂದಿಲ್ಲ. ಅಲ್ಲದೆ ನಿನ್ನೊಬ್ಬನ ಮ್ಯಾಲೆ ನಾ ಬದುಕಬೇಕಾಗಿಲ್ಲ. ನಿನ್ನಂಥವರು ಸಾವಿರಾರು ಮುಂದಿದಾರ...."

"ಆದಿರಲಿ ನಿನ್ನ ಪುರಾಣ;ಎಷ್ಟು, ಹೇಳು ಬೇಗ!" ಹೊರಟೇ ನಿಂತನು.

ಆಕೆ ಒಂದಿನಿತು ಸ್ವಾಮಿಯಕ್ಕೆ ಬಂದು, ಹತ್ತಿರ ಕರೆದು ಹೇಳಿದಳು:

" ಹೆಚ್ಚಿಗೆ ಕೊಡಬೇಕಾಗಕೈತಿ ಅಂದವನ್ಯಾಲ — "

" ಏನನ್ನು ಹೆಚ್ಚಿಗೆ ಕೊಡುವುದು ? ಯಾತಕ್ಕಾಗಿ ? "

" ಇನೊ ಬ್ಯಾಕೆಗೆ; ಆಕೀನ್ನ ಕಳಸತೇನಿ ಇಲ್ಲೀ—ಕುಳಿತಿರ್ರಿ. " ಆಕೆ ಹೊರಗೆ ಹೋಗುವವರಲ್ಲಿದ್ದಳು.

" ಯಾರೂ ಬರಬೇಕಾಗಿಲ್ಲ; ನಾನೇ ಹೋಗುತ್ತೇನೆ " ಸ್ವಾಮಿನಾಥ ಹೊರಟೇಬಿಟ್ಟನು; ಆಕೆ ಅವನ ಮಾತಿಗೆ ಕಿವಿಗೊಡದೆ, ಆಗಲೇ ಬಾಗಿಲನ್ನು ದಾಟಿ, ಕದಗಳನ್ನು ಮುಚ್ಚಿಕೊಂಡು, ಹೊರಗಿನಿಂದ ಚಿಲಕ ಹಾಕಿಕೊಂಡು ನಡೆದಿದ್ದಳು.

" ಬರುವವಳೂ ಇಂಥವಳೇ ಇರಬೇಕು; ಇವರ ಸಹವಾಸವೇ ಬೇಡ. ....ನಾನು ಇಲ್ಲಿಗೆ ಬರಲೆ ಬಾರದಾಗಿತ್ತು ! ಈ ಬಗೆಯಾಗಿ ಮನಸ್ಸಿನಲ್ಲಿ ನಿಶ್ಚಯಿಸದೆ ಈ ದಿನವೇ.... " ತನ್ನಷ್ಟಕ್ಕೆ ತಾನೇ ಗೊಣಗಿಕೊಂಡು, ಒಂದು ಸಿಗರೇಟು ಹಚ್ಚಿದನು. ಒಂದು ಉರಿಯಿತು; ಎರಡು ಮುಗಿಯಿತು; ಬಾಗಿಲನ್ನೂ ತೆರೆಯಲಿಲ್ಲ. ಯಾರೂ ಬರಲಿಲ್ಲ. ಇಡಿಯ ಕೋಣೆ ಸಿಗರೇಟಿನ ಹೊಗೆಯಿಂದ ಮುಸುಕಿಬಿಟ್ಟಿತು. ಒಂದು ಕ್ಷಣ ಅವನಿಗೆ ಆ ಸ್ಥಳ ಅಪಾಯಕರವಾಗಿ ತೋರಿತು; ಆದರೂ ಹೆದರಲಿಲ್ಲ. ತೋಯಿಸಿಕೊಂಡವನಿಗೆ ಮಳೆಯ ಅಂಜಿಕೆ ಎಲ್ಲಿಯದು ? ' ತಾನು ಬಯಸಿದುದೇನು ? ಒಂದೂ ತಿಳಿಯಲಿಲ್ಲ. ಬಗೆ-ಬಗೆಯಾಗಿ ಚಿಂತಿಸಿದನು. ಚಿಂತಿಸುವುದಾದರೂ ಏನು ? ಅದೇ ವಿಷಯ ! ಅದೇ ನಿರ್ಧಾರ !!

*     *     *     *

ಸ್ವಾಮಿ ಆ ವರುಷ ಖಂಡಿತವಾಗಿಯೂ ಬಿ ಎ ಪರೀಕ್ಷೆಯಲ್ಲಿ ಮೊದಲನೆಯ ವರ್ಗದಲ್ಲಿ ಪಾಸಾಗಬಹುದಿತ್ತು ! ಒಂದು ವೇಳೆ ಮೊದಲು ವರ್ಗ ದೊರೆಯದಿದ್ದರೂ ' ಆನರ್ಸ್ ' ಸಿಕ್ಕದೆ ಹೋಗುತ್ತಿರಲಿಲ್ಲ; ಇಂಗ್ಲೀಷ ' ಆನರ್ಸ್ ' ಎಂದರೆ ಕೇಳಬೇಕೆ ? ಎಂದಿನಿಂದಲೂ ಅವನ ಅಧ್ಯಾಪಕರು ಅವನ ಮೇಲೆ ತುಂಬಾ ಪ್ರೀತಿ, ತಮ್ಮ ಶಿಷ್ಯನೊಬ್ಬ ಉದ್ದಾಮ ವ್ಯಕ್ತಿಯಾಗುವನೆಂದು ಅವ

ಶಿಗೆ ಹೆಮ್ಮೆ! ಬಿ. ಎ. ಮುಗಿದೊಡನೆಗೆ ಹೆಚ್ಚಿನ ಅಭ್ಯಾಸಕ್ಕೆ ಸರಕಾರದಿಂದ ಶಿಷ್ಯವೃತ್ತಿ ದೊರಕಿಸಿಕೊಡುವ ಬಗ್ಗೆ ಮಾತನ್ನೂ ಕೊಟ್ಟಿದ್ದರು! ಸ್ವಾಮಿ ಬರಿಯ ಪುಸ್ತಕದ ಹುಳವಷ್ಟೇ ಆಗಿರಲಿಲ್ಲ ಕಾಲೇಜಿನ ವಿವಿಧ ಚಟುವಟಿಕೆಗಳಲ್ಲಿಯೂ ಭಾಗ ವಹಿಸುತ್ತಿದ್ದನು. ಭಾಷಣಸ್ಪರ್ಧೆಯಲ್ಲಿ ನಾಲ್ಕು ವರುಷ ಆವನನ್ನು ಸೋಲಿಸಿದವರೇ ಇರಲಿಲ್ಲ ಚರ್ಚಾಕೂಟದಲ್ಲಿ ಅವನಿಗೂ, ಮಿಕ್ಕಿದ ಮಾತುಗಾರರೆಂದು ಖ್ಯಾತಿಪಡೆದ ಚರಿತ್ರೆಯ ಅಧ್ಯಾಪಕರಿಗೂ ದ್ವಂದ್ವ ಪ್ರಾರಂಭವಾಗಿಬಿಡುತ್ತಿತ್ತು! ಕಾಲೇಜಿನ ಹನ್ನೊಂದು ಕ್ರಿಕೇಟ್ ಆಟಗಾರರಲ್ಲಿ ಒಬ್ಬನಾಗಿದ್ದನು; ಒಂಬ ವರುಷ ಕಾಲೇಜಿನ ಪಂದ್ಯಾಟಗಳಲ್ಲಿ ವಿಜಯ ಪಟ್ಟವೂ ದೊರೆತಿತ್ತು! ವಿಶ್ವವಿದ್ಯಾನಿಲಯದ ಪಂದ್ಯಾಟಗಳಲ್ಲಿಯೂ ವಿಜಯಿಯಾಗಿ, ವಿಶ್ವವಿದ್ಯಾನಿಲಯದ 'ಬ್ಲೂ' ದೊರಕಿಸಿದ್ದನು. ವಾರ್ಷಿಕೋತ್ಸವಗಳಲ್ಲಿ ಇಂಗ್ಲೀಷ್, ಕನ್ನಡ ನಾಟಕಗಳೆರಡನ್ನೂ ದಿಗ್ದರ್ಶಿಸಿ, ತಾನೂ ಪಾತ್ರ ವಹಿಸಿ, ಕಲಾಕೋವಿದನೆಂದು ಎಲ್ಲರ ಮೆಚ್ಚಿಗೆಗೂ ಪಾತ್ರನಾಗಿದ್ದನು. ಸ್ವಾಮಿ ಮೊದಲು ಬರೆಯಲಿಕ್ಕೆ ಮೊದಲು ಮಾಡಿದುದು ಇಂಗ್ಲೀಷಿನಲ್ಲಿಯೆ! ಈಗ ಆವನೊಬ್ಬ ಕನ್ನಡದಲ್ಲಿ ಅತ್ಯುತ್ತಮ ಬರೆಯುಗಾರನಾಗಿದ್ದಾನೆ! ಹಿಂದೊಮ್ಮೆ ಇಂಟರಿನಲ್ಲಿರುವಾಗ, ಇಂಗ್ಲೀಷಿನಲ್ಲಿ ಪ್ರಬಂಧವೊಂದನ್ನು ಬರೆದು, ಆಂಗ್ಲೋ ಇಂಡಿಯನರಾದ ತನ್ನ ಅಧ್ಯಾಪಕರಿಗೆ ತೋರಿಸಿದಾಗ, ಅವರು ಇಂಗ್ಲೀಷು ಭಾಷೆಯ ಮೇಲೆ ಇವನಿಗಿರುವ ಪ್ರಭುತ್ವಕ್ಕೆ ಮೆಚ್ಚಿ, ಇವನ ಪ್ರತಿಭೆಗೆ ಮಾರು ಹೋಗಿದ್ದರು. ಹಾಗೆಯೇ ಸ್ವಾಮಿಯನ್ನು ತಟ್ಟಿ ಕೇಳಿದರು:

"ಸ್ವಾಮಿನಾಥ! ನಿನ್ನ ನುಡಿಯಲ್ಲಿಯೂ ನೀನು ಬರೆಯತ್ತಿರಬಹುದಲ್ಲ?"

"ಇಲ್ಲ ಸರ್!"

"ಅಂ ...ಬರೆಯುವದಿಲ್ಲವೆ?" ಒಂದಿನಿತು ಸೋಜಿಗಗೊಂಡು ಕೇಳಿದರು.

"ಒಮ್ಮೆಯೂ ಬರೆದಿಲ್ಲ; ಅಷ್ಟು ಚೆನ್ನಾಗಿ ಬರೆಯಲಾರೆನೆಂದೆನಿಸುತ್ತದೆ...."

ಎಲ್ಲ ಇಂಗ್ಲೀಷ್ ಕಲಿತ ತರುಣರಿಗೆ ಅಂಟಿಕೊಂಡ ಬೇನೆ ಅವನಿಗೂ ಅಂಟಿಕೊಂಡಿತ್ತು.

"ಏನಪ್ಪಾ! ನನಗಂತೂ ನಿನ್ನ ಮಾತಿನಲ್ಲಿ ನಂಬಿಗೆ ಸಾಲುವುದಿಲ್ಲ. ಹುಟ್ಟಿದಂದು ಹಿಡಿದು ಸಮಾರು ಇಪ್ಪತ್ತಕ್ಕೆ ಕಡಿಮೆಯಿಲ್ಲದಷ್ಟು ವರುಷ ನೀನು ಕನ್ನಡದಲ್ಲಿ ಒಡನಾಡಿದ್ದಿ; ನಿನ್ನ ತಾಯಿ ನಿನ್ನನ್ನು ಕನ್ನಡದಲ್ಲಿ ನುಡಿಸಿ ದ್ದಾಳೆ; ತಂದೆ ಅಕ್ಕರೆಯ ಮಾತುಗಳನ್ನು ನಿನ್ನೊಂದಿಗೆ ಕನ್ನಡದಲ್ಲಿ ಆಡಿದ್ದಾನೆ; ನಿನ್ನ ಅಕ್ಕ ಕನ್ನಡದಲ್ಲಿ ನಿನಗೆ ಜೋಗುಳ ಹಾಡಿದ್ದಾಳೆ; ಅಣ್ಣ ರಮಿಸಿದುದು ಕನ್ನಡದಲ್ಲಿ; ತಂಗಿ- ತಮ್ಮಂದಿರು ನಿನ್ನಲ್ಲಿ ಆಗಾಗ ಕಾಡಿಬೇಡಿದುದು ಕನ್ನಡ ದಲ್ಲಿ—ನೆರೆಹೊರೆಯವರು ಬೆಳಗಿನಿಂದ ಬೈಗಿನ ವರೆಗೆ ಕನ್ನಡ ಮಾತನಾಡು- ತ್ತಾರೆ. ಕೇವಲ ಕೆಲವು ವರುಷಗಳ ಪ್ರತಿಫಲ ಇಂಗ್ಲೀಷು ಭಾಷೆ. ಮೇಲಾಗಿ ಪರಕೀಯರ ನುಡಿ. ಅದರಲ್ಲಿಯೇ ಇಷ್ಟೆಲ್ಲ ಪಾಂಡಿತ್ಯ ಪಡೆದಿದ್ದೀಯೆಂದ ಮೇಲೆ ಕನ್ನಡದಲ್ಲಿ ಬರೆಯಲು ಬಾರದೆಂಬ ಮಾತಿನಲ್ಲಿ ಹುರುಳಿಲ್ಲ; ಬರೆಯುವ ಕಲೆಯೇ ಗೊತ್ತಿರದಿದ್ದಲ್ಲಿ ಆ ಮಾತು ಬೇರೆ. ಇದೊಂದು ಈಗಿನ ಕಲಿತ ತರುಣರಿಗೆ ಅಂಟಿಕೊಂಡ ಬೇನೆ. ನೀನು ಪ್ರಯತ್ನಿಸು; ಬರೆಯಬಲ್ಲೆ! ಇಂಗ್ಲೀಷ್ ಸಾಹಿತ್ಯ ಈಗಾಗಲೇ ಅಪಾರವಾಗಿದೆ. ಸಾಕಷ್ಟು ಮಂದಿ ಬರೆಯುತ್ತಿ ದ್ದಾರೆ. ನಿನ್ನ ಸಾಹಿತ್ಯ ಇನ್ನೂ ಬೆಳೆಯಬೇಕಾಗಿದೆ. ಅದಕ್ಕೆ ನಿನ್ನಂತಹ ಪ್ರತಿಭಾವಂತ ತರುಣರ ನೆರವು ಹೆಗಲುಕೊಟ್ಟು ಅವಶ್ಯಬೇಕು; ಪ್ರಯತ್ನಿಸು! ನೀನೊಬ್ಬ ಉತ್ತಮ ಬರೆಹಗಾರನಾಗುವುದರಲ್ಲಿ ಸಂದೇಹವೇ ಇಲ್ಲ" ಒಂದು ಭಾಷಣವನ್ನೇ ಕೊಟ್ಟರು. ಅದರೊಂದಿಗೆ ಆಶೀರ್ವಾದದ ಹರಕೆಯನ್ನೂ ದಯಪಾಲಿಸಿದ್ದರು. ಗುರುಗಳ ಉಪದೇಶ ಕೇಳಿ, ಸ್ವಾಮಿ ತನ್ನಲ್ಲಿ ತಾನೇ ಇಳಿದುಹೋದನು. ತನ್ನ ನುಡಿಗಾಗಿ ಇಷ್ಟು ದಿವಸ ಮೂಡದ ಮುಂಜಿನ ಮುಸುಕನ್ನು ಕಿತ್ತೊಗೆಯ ಬಯಸಿದನು. ಆಗಲೇ ಅವರಿಗೆ ಅದರಂತೆ ಪ್ರಯತ್ನಿಸುವುದಾಗಿ ಮಾತುಕೊಟ್ಟನು! ಒಂದೇ ಒಂದು ವರುಷದಲ್ಲಿ, ಯತ್ನವುದರಲ್ಲಿ ತಾನು ವಿಜಯವ ಪಡೆಯುವುದಿಲ್ಲವೆಂದು ತಿಳಿದಿದ್ದನೋ ಅದರ ಸಾಮ್ರಾಟನಾದನು! ಕತೆ ಮತ್ತು ಕವನ ರಚಿಸುವುದರಲ್ಲಿ ಅಸಾಧಾರಣ ಪಾಂಡಿತ್ಯ ಪಡೆದನು. ಈ ತರುಣ ಸಾಹಿತ ನಾಡಿನಲ್ಲೆಲ್ಲ ಹೆಸರನ್ನು ಪಡೆದನು.

ಸ್ವಾಮಿನಾಥನನ್ನು ಎಷ್ಟೋ ಜನರು ಹೊಗಳಿ ಹಾಡುತ್ತಿದ್ದರೂ, ಅವರಲ್ಲಿ ಒಬ್ಬರಾದರೂ ಅವನ ಹತ್ತಿರದವರಾಗಿರಲಿಲ್ಲ; ಅಂಥ ದೊಡ್ಡ ಕಾಲೇಜಿನಲ್ಲಿ ಒಬ್ಬನೂ ಅವನಿಗೆ ಜೀವದ ಗೆಳೆಯನಿರಲಿಲ್ಲ: ಅದೊಂದು ಅವನಲ್ಲಿದ

ದುರ್ಗುಣವಾಗಿದ್ದರೂ ಆಗಿರಬೇಕು. ಅವನಿಗೆ ತನ್ನವರೆಂಬವರು ಕೇವಲ ಮೂರೇ ಮಂದಿ–ತಂದೆ, ತಾಯಿ, ಮತ್ತು ತಂಗಿ. ತಂದೆಯೊಬ್ಬ ಪ್ರಾಥಮಿಕ ಶಾಲೆಯ ನುರಿತ ಖ್ಯಾತಿವಂತ ಶಿಕ್ಷಕರು! ಇನ್ನೆರಡು ವರುಷಕ್ಕೆ ಅವರಿಗೆ ಪೆನ್‌ಶೆನ್ ದೊರೆಯುತ್ತಿತ್ತು. 'ತಂದೆ ಕೆಲಸ ಬಿಡುವಷ್ಟರಲ್ಲಿ ಮಗನು ಕೆಲಸಕ್ಕೆ ಹತ್ತಿಕೊಳ್ಳುವನು' ಎಂದು ಎಲ್ಲರೂ ಹೇಳಿದರು.

ಎಲ್ಲರೊಡನೆಯೂ ನಡೆದುಕೊಳ್ಳುವಂತೆ ಸ್ವಾಮಿನಾಥ ತನ್ನ ಸಹಪಾಠಿ ಆಶಾಳೊಂದಿಗೂ ನಡೆದುಕೊಳ್ಳುತ್ತಿದ್ದನು. ಆಕೆಗೆ ಅದಷ್ಟೇ ಸಂಬಂಧ ಸಾಕಾಗರಲಿಲ್ಲ. ಸ್ವಾಮಿಗೆ ಆಕೆಯ ಮೇಲೆ ಯಾವ ಬಗೆಯ ಸೆಳೆತವಿರದಿದ್ದರೂ ಮತ್ಸರವಿರಲಿಲ್ಲ. ಆಶಾ, ಸ್ವಾಮಿನಾಥನ ಯೌವನ, ತೇಜಸ್ಸು, ಪಾಂಡಿತ್ಯ, ಪ್ರತಿಭೆ, ಹೆಚ್ಚುಳಗಳಿಗೆ ಮಾರುಹೋಗಿ, ಯಾವದೋ ಒಂದು ಬಗೆಯಲ್ಲಿ ಅವನನ್ನು ಹಿಡಿಯಲು ಹೆಣಗಾಡುತ್ತಿದ್ದಳು. ಸ್ವಾಮಿನಾಥನು ಆಕೆಯ ಯೌವನ, ರೂಪಗಳಿಗೆ ಹಲವು ಸಲ ಮರುಳಾಗಿದ್ದರೂ, ಮನಸ್ಸನ್ನು ಬಿಗಿ ಹಿಡಿದು ಆಕೆ ನೆಯ್ದ ಜಾಲದಲ್ಲಿ ಬಿದ್ದಿರಲಿಲ್ಲ. ಕಾಲೇಜಿನಲ್ಲಿ ಆಗದವರು ಬಗೆ ಬಗೆಯಾಗಿ ಮಾತನಾಡಿದರು. ಆಶಾ ಪರ್ಯಾಯದಿಂದ ಸ್ವಾಮಿಗೆ ಅದನ್ನೆಲ್ಲ ತಿಳಿಸಿದರೂ, ಸ್ವಾಮಿಯಲ್ಲಿ ಯಾವ ಮಾರ್ಪಾಡೂ ಆಗಲಿಲ್ಲ. ಪರೀಕ್ಷೆಯು ಮುಗಿದು ಒಂದು ನೆಲೆಗೆ ನಿಲ್ಲುವವರೆಗೆ ಅಂಥ ಯಾವ ಸಾಹಸದ ಕಾರ್ಯವೂ ಬೇಡವೆಂದು ನಿರ್ಧರಿಸಿದ್ದನು. ಆಶಾದೇವಿ ಸ್ವಾಮಿನಾಥನನ್ನು ಮೆಚ್ಚಿದ್ದು ಪ್ರೇಮಕ್ಕಿಂತ ಹೆಚ್ಚಾಗಿ ಕಾಮದ ಸೆಳೆತಕ್ಕೆ ಸಿಕ್ಕು! ಒಮ್ಮೊಮ್ಮೆ ಬಯಸಿದುದು ಸಿಕ್ಕುವುದು ಬಹಳ ದಿನಗಳೆಂದಾಗ, ಬೇಸರದಿಂದ ನಿಟ್ಟುಸಿರನ್ನು ಹಾಕುತ್ತಲೂ ಇದ್ದಳು. ಆದರೂ ತೋರಿಕೆಗೆ ಯಾವುದನ್ನೂ ವ್ಯಕ್ತಪಡಿಸುತ್ತಿರಲಿಲ್ಲ.

ಬಿ. ಎ. ಪರೀಕ್ಷೆ ನಡೆಯಿತು! ಇಬ್ಬರಿಗೂ ಯಾವ ವಿಷಯಗಳಲ್ಲಿಯೂ ಎದೆಗುದಿಯಿರಲಿಲ್ಲ; ಇನ್ನು ಉಳಿದುದು ಒಂದೇ ಒಂದುವಿಷಯ. ಸ್ವಾಮಿನಾಥ ಮೊದಲುವರ್ಗ ಖಂಡಿತವೆಂದ; ಆಶಾ ಪಾಸಾಗಬಹುದೆಂದಳು. ಕೊನೆಯ ವಿಷಯವೂ ಪ್ರಾರಂಭವಾಯಿತು; ಪ್ರಶ್ನೆಯ ಕಾಗದ ನೋಡಿ ಆಶಾಳ ಎದೆ ಬಿರಿಯಿತು. ಪಾಸಾಗುವ ಯಾವ ಆಶೆಗಳೂ ಉಳಿಯಲಿಲ್ಲ; ಸ್ಪಷ್ಟವಾಗಿ ಆಕೆಯ ಪರಿಣಾಮ ಕಣ್ಣುಮುಂದೆ ಕಟ್ಟಿತು. ಮುಖ ಬತ್ತಿ

ಹೋಯಿತು. ಬಂದಷ್ಟು ಬರೆದು ಮುಗಿಸಿದಳು. ಪರೀಕ್ಷಕನು ಎಷ್ಟು ಉದಾರ ಹಸ್ತದಿಂದ ಗುಣಗಳನ್ನು ದಯಪಾಲಿಸಿದರೂ ಪಾಸಾಗುವಂತಿರಲಿಲ್ಲ. ಆದಾವುದೋ ಆಶೆಯಿಂದ ಸ್ವಾಮಿನಾಥನ ಕಡೆಗೆ ನೋಡುತ್ತಿದ್ದಳು. ಅವನು ಬರೆಯುವುದರಲ್ಲಿಯೇ ಮಗ್ನನಾಗಿದ್ದನು; ವೇಳೆ ಮುಗಿಯುತ್ತ ಬಂತು. ಬರಿಯ ಒಂದು ವಿಷಯದಲ್ಲಿ, ಸ್ವಲ್ಪ ಗುಣ ಕಡಿಮೆ ಬಿದ್ದು ನಪಾಸಾಗಬೇಕು; ಅದಕ್ಕಾಗಿ ಮತ್ತೆ ಆರುತಿಂಗಳಾದರೂ ಡೀಕುವುದೇ ? ಸರಿವರಯದವರಲ್ಲಿ ನಾಚಿಕೆಗೇಡು ! ಆಕೆಯ ರಕ್ತದ ಒತ್ತಡ ಅತಿಯಾಯಿತು ! ಮನಸ್ಸಿನಲ್ಲಿ ತಿಕ್ಕಾಟ ಪ್ರಾರಂಭವಾಯಿತು. ಮೈಯೆಲ್ಲ ಬೆವರಿಟ್ಟಿತು. ಇನ್ನು ಹದಿನೈದೇ ನಿಮಿಷ ಉಳಿದಿತ್ತು ! ಸ್ವಾಮಿನಾಥ ಬರೆಯುವುದನ್ನೆಲ್ಲ ಮುಗಿಸಿ ಪೇಪರು ಕಟ್ಟುತ್ತಿದ್ದನು ! ಗಟ್ಟಿಮನಸ್ಸು ಮಾಡಿ ಆಶಾ ಕೇಳಿಬಿಟ್ಟಳು; ಸ್ವಾಮಿನಾಥನೊದಲು ಮನಸ್ಸು ಮಾಡಲಿಲ್ಲ; ವಿಚಾರಿಸಲು ಸಮಯವೂ ಇರಲಿಲ್ಲ. ಆಕೆಯ ಮುಖದ ಕಡೆಗೆ ಒಮ್ಮೆ ನೋಡಿದಾಗ ಅವನ ನಿರ್ಧಾರ ಸಡಿಲಾಯಿತು. ಹೆಣ್ಣಿನ ಆರ್ತ ಬೇಡಿಕೆಯೊಂದನ್ನು ತಳ್ಳಿಗಳೆಯುವುದು ಅವನಿಂದಾಗಲಿಲ್ಲ. ಸುತ್ತಲೂ ನೋಡಿದನು; ಸಮೀಪದಲ್ಲಿ ಮೇಲ್ವಿಚಾರಕರಾರೂ ಇರಲಿಲ್ಲ. ಹತ್ತಿರದಲ್ಲಿಯೇ ಆಶಾ ಇದ್ದಳು; ಅನಾಯಾಸವಾಗಿ ಏನನ್ನಾದರೂ ಕೊಡಬಹುದಾಗಿತ್ತು. ಉತ್ತರ ಪುಸ್ತಕದ ಒಂದು ಭಾಗವನ್ನು ಆಕೆಯ ಕಡೆಗೆ ಚೆಲ್ಲಿದನು; ಆಕೆ ಅದನ್ನು ತಕ್ಕೊಂಡು ಬರೆಯಲನುವಾದಳು. ಹಿರಿಯ ಮೇಲ್ವಿಚಾರಕನು ( Conductor ) ಇದನ್ನೆಲ್ಲ ಹೊರಗೇ ನಿಂತು ಕಿಟಕಿಯಿಂದ ನೋಡಿದನು; ‘ Copy ’ ಕೊಟ್ಟ, ಮತ್ತು ಇಸಿದುಕೊಂಡ ಅಪರಾಧಕ್ಕೆ ಅವರು ಇಬ್ಬರೂ ಗುರಿಯಾದರು.

ಮರುದಿವಸ ಇಂಗ್ಲೀಷ್ ಅಧ್ಯಾಪಕರು ಕರೆದು ‘ ಛೀ ’ ಹಾಕಿದರು. ಸ್ವಾಮಿಯ ತಂದೆ-ತಾಯಿಗಳು ಕುಂದಿ ಕುಗ್ಗಿದರು; ಅವನಿಗಾಗಿ ಮರುಗಿದವರು ಕೆಲವರು; ಕೆಲವರು ಗೇಲಿಮಾಡಿ ‘ ಹೆಣ್ಣಿಗೆ Copy ಕೊಟ್ಟ ಪ್ರೇಮವೀರ ! ’ ಎಂದು ನಕ್ಕರು. ಎಲ್ಲೆಲ್ಲಿಯೂ ಅವರ ಮಾತೇ ಮಾತು ! ಸ್ವಾಮಿಯು ಕಟ್ಟಿದ ಕಲ್ಪನಾಮಂದಿರವು ಕುಸಿದು ಬಿತ್ತು. ಗಾಳಿಯಲ್ಲಿಯ ಗೋಪುರವು ಬಿರುಗಾಳಿಯ ಹೊಡೆತಕ್ಕೆ ಹಾರಿಹೋಯಿತು. ಮನೆಯಲ್ಲಿ ಒಂದು ಕೋಣೆಯನ್ನು ಹಿಡಿದವನು ಹೊರಗೇ ಬರಲಿಲ್ಲ. ಯಾರಿಗೂ ಮುಖ ತೋರಿಸುವ

ಮನಸ್ಸಾಗಲಿಲ್ಲ. ಸ್ವಾಮಿಯ ಮನೆಯವರು, ಯಾರನ್ನೂ ಈ ಅಪರಾಧಕ್ಕೆ ಗುರಿಮಾಡಿ ದ್ವೇಷಮಾಡಲಿಲ್ಲ; ಆದರೆ ಆಶಾಳ ಮನೆಯವರು ಸುಮ್ಮನೆ ಕೂಡ್ರಲಿಲ್ಲ. ನಿಜಸ್ಥಿತಿಯ ಅರಿವು ಚೆನ್ನಾಗಿದ್ದರೂ 'ತಮ್ಮ ಹುಡುಗಿ ಕೇಳ ದಿದ್ದರೂ ನಿಮ್ಮ ಸ್ವಾಮಿ ದೊಡ್ಡಸ್ತನಕ್ಕೆ ಬಿದ್ದು 'ನಕಲು' ಕೊಟ್ಟು ನಮ್ಮ ಹುಡುಗಿಯನ್ನು ವ್ಯರ್ಥ ಹಾಳುಮಾಡಿದನಲ್ಲದೆ, ಆಕೆಯ ಶೀಲಕ್ಕೂ ಭಂಗ ತಂದಿದ್ದಾನೆಂದು, ಸ್ವಾಮಿಯ ತಂದೆಯನ್ನು ಕರೆಯಿಸಿ ಬೈದರು. ಆಶಾಳ ತಂದೆಯೊಬ್ಬ ಗಣ್ಯ ಸರಕಾರೀ ಅಧಿಕಾರಿಗಳು ಬಾಯಿಯಿಂದ ಬಂದದ್ದೇ ಬ್ರಹ್ಮವಾಕ್ಯ!! ಆಶಾಳಿಗೆ ಈ ಮಾತುಗಳಿಂದ ಕೆಡುಕೆನಿಸಿತು, ಆದರೂ ಯಾವ ಪ್ರತಿಭಟನೆಯನ್ನೂ ಮಾಡಲಿಲ್ಲ. ಈ ನುಡಿಗಳನ್ನು ಕೇಳಿದ ಸ್ವಾಮಿ ಭೂಮಿಗೇ ಇಳಿದನು. ತನ್ನ ಬಾಳು ಬಂಜೆಯಾದುದು ಅಷ್ಟು ಎನಿಸಲಿಲ್ಲ; ವ್ಯರ್ಥವಾದ ಮಿಥ್ಯಾಪವಾದಕ್ಕಾಗಿ ಕರಗಿಹೋದನು. 'ಆಶಾಳ ಶೀಲಕ್ಕೆ ಭಂಗ ತಂದೆನೇ?' ಎಂದು ಎಷ್ಟೋ ಸಲ ತನ್ನಲ್ಲಿಯೇ ತಾನು ಕೇಳಿ ಕೊಂಡು, ಕೊನೆಗೆ ತಾನೆಯೆ ಒಂದುಸಲ ರಾತ್ರಿಯಲ್ಲಿ, ಯಾರಿಗೂ ಕಾಣ ದಂತೆ ಆಶಾಳ ಮನೆಗೆ ಹೋಗಿ, ಅವರ ತಂದೆಯ ಎದುರಿನಲ್ಲಿ ತನ್ನಿಂದ ಆಶಾ ದೇವಿಯ ಶೀಲಭಂಗವಾಗಿದ್ದರೆ ಪ್ರಾಯಶ್ಚಿತ್ತ ತಕ್ಕೊಳ್ಳಲು ಸಿದ್ಧನಿರುವುದಾಗಿ ಹೇಳಿ, ಅವರೆಲ್ಲ ಇಷ್ಟಪಟ್ಟರೆ ತಾನು ಆಕೆಯನ್ನು ಮದುವೆಯಾಗುವುದಾಗಿ ತಿಳಿಸಿದನು. ಆಶಾಳ ತಂದೆ ಕೋಪದಿಂದ ಕುದಿದು ಆಡಬಾರದ ಮಾತು ಗಳನ್ನು ಆಡಿ, ಸ್ವಾಮಿಯನ್ನು ಮನೆಯಿಂದ ಹೊರದೂಡಿ 'ನಿನ್ನಂತಹ ಹಾದಿಹೋಕನಿಗೆ ನನ್ನ ಮಗಳನ್ನು ಕೊಡಲೇ?' ಎಂದು ಸವಾಲಿಟ್ಟನು. ಸ್ವಾಮಿನಾಥನ ತಲೆಯಮೇಲೆ ಆಕಾಶವೇ ಕಳಚಿ ಬಿದ್ದಂತಾಯಿತು! ಅದೆಷ್ಟು ಅಪಮಾನ–ಅಪವಾದಗಳು! ಒಮ್ಮೆ ಆಶಾಳನ್ನೇ ಕಂಡು ಮಾತನಾಡ ಬೇಕೆಂದು ಸಮಯಕಾಯ್ದನು! ಆಕೆ ಇವನನ್ನು ಕಾಣಲು ಒಮ್ಮೆಯೂ ಬರಲಿಲ್ಲ. ಇವನೇ ಅವಳ ಮನೆಗೆ ಹೋದಾಗ ಒಂದು ಸಲ ನೋಡಿ, ಕುಳಿ ತಲ್ಲಿಂದ ಎದ್ದು ಒಳಗೆ ನಡೆದುಬಿಟ್ಟಳು. ನಾಚಿಕೆಯಿಂದ ಹಾಗೆ ಮಾಡಿರ ಬೇಕೆಂಬ ಅರ್ಥ ಹಚ್ಚಿಕೊಂಡಿದ್ದನು ಸ್ವಾಮಿ. ಆದರೆ ಕಾರಣವೇ ಬೇರೆ. ಆಕೆ—ದೂರದರ್ಶಿನಿ(?)— ಸ್ವಾಮಿಯನ್ನು ಮೆಚ್ಚಿದ್ದು ಪ್ರೇಮದಿಂದಲ್ಲ; ಅವನ ಉಜ್ವಲಭವಿತವ್ಯ ಹಾಳಾದ ಮೇಲೆ, ಆಕೆಗೆ ಅವನ ಮೇಲಿದ್ದ

ಮೋಹವು ಕಡಿಮೆಯಾಗುತ್ತ ನಡೆಯಿತು. ತಾನೇ ಆವನ ಭವಿತವ್ಯದ ಬಾಗಿಲನ್ನು ಮುಚ್ಚಿದವಳೆಂದು ಪೂರ್ತಿಯಾಗಿ ಅರಿತಿದ್ದರೂ, ಅವನೊಂದಿಗೆ ಬರಿಯದಾದ ಮಂದಿರದಲ್ಲಿ ಕೂಡಲು ಮನಸ್ಸು ಮಾಡಲಿಲ್ಲ. ಪ್ರತಿಯಾಗಿ ತಂದೆಯ ಮಾತಿಗೆ ಸೈಕೊಟ್ಟಳು! ಎಷ್ಟೋ ಕಡೆಯಲ್ಲಿ ತಂದೆ ಆಡಿದ ಮಾತುಗಳನ್ನೇ ತಾನೂ ಗಿಳಿಯು ಹೇಳುವ ರೀತಿ ಪ್ರತಿಯಾಗಿ ಹೇಳಿದಳು. ಪರೀಕ್ಷೆಯ ಪರಿಣಾಮವೂ ಬಂದಿತು! ಇಬ್ಬರ ಪರಿಣಾಮಗಳು ಕಾಯ್ದಿಡಲ್ಪಟ್ಟಿದ್ದುವು! ಆಗಂತೂ ಖಂಡಿತವಾಯಿತು ಎಲ್ಲರಿಗೂ. ಸ್ವಾಮಿನಾಥನಿಗೆ ಆಶಾಳ ಲಗ್ನದ ಸಿದ್ಧತೆ ನಡೆದಿದೆಯೆಂದು ತಿಳಿದು ಬಂತು. ಆಕೆಯ ಮನಸ್ಸಿನ ವಿರುದ್ಧವಾಗಿಯೆ ನಡೆದಿದೆಯೆಂದು ಆವನ ಕಲ್ಪನೆ! ಇನ್ನು ಎಂಟು ದಿನಗಳಲ್ಲಿಯೇ ಆಕೆಯ ಲಗ್ನವೆಂದು ತಿಳಿದಾಗ, ಒಮ್ಮೆ ಆಕೆಯನ್ನು ಹೇಗಾದರೂ ಮಾಡಿ ಕಾಣುವುದೆಂದು ಮನಸ್ಸುಮಾಡಿ ಆಕೆಯ ಮನೆಗೆ ಹೋದಾಗ, ಆಕೆ ಬಾಗಿಲಲ್ಲಿಯೇ ನಿಂತಿದ್ದಳು! ಇವನನ್ನು ಕಾಣುತ್ತಲೇ ಒಳಗೆ ಹೋಗಿಬಿಟ್ಟಳು. ಸ್ವಾಮಿಗೆ ಗೊತ್ತಿತ್ತು; ಆಗ ಅವಳ ತಂದೆ ಮನೆಯಲ್ಲಿಲ್ಲವೆಂದು; ಒಳಗೆ ಹೋದನು. ಆಕೆ ಮನೆಗೆ ಬಂದವನನ್ನು ಮಾತನಾಡಿಸಲೂ ಇಲ್ಲ; ಅಪರಿಚಿತಳಂತೆ ಒಳಗಿನ ಬಾಗಿಲಲ್ಲಿ ಹೋಗಿ ನಿಂತಳು. ಸ್ವಾಮಿ ಒಳಗೆ ಹೋಗಿ ಒಂದು ಕುರ್ಚಿಯಲ್ಲಿ ಕುಳಿತು ಆವಳನ್ನು ಕೂಗಿದನು. ಆಕೆ ಅಲ್ಲಿಂದಲೇ ಉತ್ತರವಿತ್ತಳು.

“ನಿನ್ನೊಡನೆ ಎರಡು ಮಾತನಾಡಬೇಕಿತ್ತು. ಒಂದಿಷ್ಟು ಹೊರಗೆ ಬರುತ್ತೀಯಾ?”

ಆಗಲೇ ಸ್ವಾಮಿನಾಥನನ್ನು ನಿರಾಶೆಯು ಪರವೆ ಆವರಿಸಿತ್ತು.

“ಏನು ಕೇಳುವುದಿದೆ? ಇಲ್ಲಿಂದಲೇ— ಸಾಧ್ಯವಿದ್ದರೆ—-ಉತ್ತರಿಸುವೆ.”

ಸ್ವಾಮಿಯ ಎದೆಗೆ ಗಂಡಿಕ್ಕಿದಂತಾಯಿತು, ಆದರೂ ಒಮ್ಮೆ ಮುಗಿಸಿಕೊಂಡು ಬಿಡುವುದೆಂದು ಮುಂದುವರಿಸಿದನು :

“ಆಶಾ! ನಿನ್ನ ಲಗ್ನದ ಮಾತು ನಿಜವೇ?”

“ಹೌಂ!”

" ಒಂದು ಮಾತು; ನೀನು ಅದಕ್ಕೆ ಒಪ್ಪಿರುವೆಯಾ ? ಇಲ್ಲವೆ ಬಲವಂತದಿಂದ....... " ಮಾತು ಮುಗಿಯುವ ಮೊದಲೇ ಹೇಳಿಬಿಟ್ಟಳು ಆಶಾ :

" ಬಲವಂತವೇತರದು ? ನಾನೇ ಒಪ್ಪಿದ್ದೇನೆ........" ಮುಖದಮೇಲೆ ಹೊಡೆಯುವಂತೆ ಹೇಳಿಬಿಟ್ಟಳು. ಸ್ವಾಮಿನಾಥನಿಗೆ ಅಲ್ಲಿ ನಿಲ್ಲುವದಾಗಲಿಲ್ಲ: ಕಣ್ಣು ಮಂಜುಗೂಡಿದ್ದವು. ಮನೆಗೆ ಬಂದಾಗ ತಂದೆಯವರು ಗ್ಯಾಜೆಟ್ ಕೈಯಲ್ಲಿ ಕೊಟ್ಟರು ' ಮೂರು ವರುಷ ಯಾವ ವಿಶ್ವವಿದ್ಯಾನಿಲಯದ ಪರೀಕ್ಷೆಗೆ ಕೂಡ್ರುವಂತಿಲ್ಲ ' ಎಂದು ವಿಶ್ವವಿದ್ಯಾನಿಲಯದ ಅಪ್ಪಣೆ. ಇಬ್ಬರಿಗೂ ಮೂರು ವರುಷ ' ಡಿಬಾರು ' ಆಗಿತ್ತು !

ಸ್ವಾಮಿನಾಥನಿಗೆ ಯಾರೂ ಧೈರ್ಯ ಹೇಳಲಿಲ್ಲ; ತಂದೆಯೂ ಸುಮ್ಮಗಿದ್ದುಬಿಟ್ಟರು. ಇಡಿಯ ದಿನವೆಲ್ಲ ನಿರ್ಧರಿಸಿ ಏನೋ ಒಂದು ನಿರ್ಣಯಕ್ಕೆ ಬಂದನಾತ. ತಂದೆ ತಾಯಿಗಳ ಗತಿ ! ದೇವರಿಲ್ಲವೇ ? ತನ್ನಂತಹ ಮಗನಿಂದ ಅವರಿಗೆ ದುಷ್ಕೀರ್ತಿ ! ಅಸುಖ !! ಅವರ ಸಂತಸಕ್ಕಾದರೂ ಮರೆಯಾಗಬೇಕೆಂಬ ಹುಚ್ಚುವಿಚಾರ ಬೇರೆ ಬಂದು ಸೇರಿತು ಅವನ ತಲೆಯಲ್ಲಿ. ಹೊಟ್ಟೆಯ ಮಗನ ಅಗಲುವಿಕೆಯಿಂದ ಯಾವ ತಂದೆ-ತಾಯಿಗಳಿಗೆ ಸುಖ ಸಿಕ್ಕಬಹುದು ! ಭವಿತವ್ಯಕ್ಕೆ ಬೆಂಕಿ ! ಪ್ರೇಮಭಂಗ !!........ ಆತ್ಮಹತ್ಯೆಯೊಂದೇ ಅವನಿಗುಳಿದ ಉಪಾಯ; ಯಾವ ರೀತಿಯಲ್ಲಿ ಅಸುವ ತೊರೆಯುವುದು ?........ ಗಾಡಿಯ ಬುಡದಲ್ಲಿ ಸಿಕ್ಕು ಚಪ್ಪಟೆಯಾಗಿ ಬಿಡುವುದು !! ಯಾರಿಗೂ ಹೇಳದೆ ಊರಿಂದ ಒಂದು ಮೈಲು ನಡೆದು, ರೇಲ್ವೆ ಹಳಿಗೆ ಬಂದನು. ದಾರಿಯುದ್ದಕ್ಕೂ ಆಶಾಳ ದ್ರೋಹದ ಬಗೆಗೇ ಚಿಂತಿಸುದುದು; ಆಕೆಯನ್ನು ಸಾಯುವ ಪೂರ್ವದಲ್ಲಿ ಒಂದು ಕ್ಷಣವಾದರೂ ಮರೆಯಬೇಕೆಂದರೆ ಸಾಧ್ಯವಾಗಲಿಲ್ಲ. ಆಕೆಯೊಡನೆ ಹಿಂದೆ ಕಾಲೇಜಿನಲ್ಲಿ ಎರಡು ವರುಷ ನಕ್ಕು ನಲಿದು ಸರಸವಾಡಿದ ಎಲ್ಲ ಸಂದರ್ಭಗಳೂ ಮುಂದೆ ಹಾಯ್ದು ಹೋದವು ! ಓದುವ ವಯಸ್ಸಿನಲ್ಲಿ ವಿಷಯಲಾಲಸೆ ಬೇಡವೆಂದು ಅಂದು ಬಿಗಿಹಿಡಿದಿದ್ದು, ಅಲ್ಲಿಗೇ ಕೊನೆಯಾಯಿತು ! ಸಾಯುವ ಕೊನೆಯ ಗಳಿಗೆಯಲ್ಲಿ ಆ ಅರ್ಥಕ್ಕೆ ನಿಂತ ವಿಷಯಲಾಲಸೆಯ ನೆನಪಾಯಿತು. ಇನ್ನೊಂದು ಕ್ಷಣದಲ್ಲಿ ಸಾಯುವವನಿಗೆ ಯಾವ ನೆನಹುಗಳಿಂದೇನು ? ಅವು ಕೊನೆಗೊಂಡ ಇಲ್ಲವೆ ಅರ್ಧಕ್ಕೆ ನಿಂತುದರ ಗೊಡವೆಯಿಂದೇನು ? ಅವುಗಳನ್ನೆಲ್ಲ ದೂರ ತಳ್ಳಿಬಿಡಲು ಯತ್ನಿ

ಸಿದರೂ ಅವನಿಗೆ ಅದರಲ್ಲಿ ಜಯ ಸಿಕ್ಕಲಿಲ್ಲ! 'ಡಿಬಾರ್' ಆದುದು ಮರೆತು ಹೋಯಿತು. ಭಗ್ನಹೃದಯದ ಹಾರಿಕೆಗಳು 'ಪ್ರೇಮಭಂಗ'ವೆಂದು ಸದ್ದು ಮಾಡುತ್ತಿದ್ದುವು. ಸಾಯುವ ಪೂರ್ವದಲ್ಲಿ ಒಮ್ಮೆಯಾದರೂ ಆ ಸುಖ ಪಡೆಯಲಿಲ್ಲ! ಎದುರಿನಲ್ಲಿಯೇ ಅವನು ಯಾವುದರ ಕೆಳಗೆ ಬೀಳಬೇಕೆಂದಿದ್ದನೋ ಆ ಗಾಡಿ ಸಾಗಿಹೋಯಿತು. ಅವನು ಅಂದು ಸಾಯಲಿಲ್ಲ. 'ತಾನಿನ್ನೂ ಸಾಯಬೇಕಿಲ್ಲ; ಒಮ್ಮೆಯಾದರೂ 'ಆ ಸುಖ' ಪಡೆಯಲೇ ಬೇಕು! ಆನಂತರ ಸಾಯುವುದು!' ಎಂದು ಆತ್ಮಹತ್ಯವನ್ನು ಮರುದಿನಕ್ಕೆ ಮುಂದೆ ಹಾಕಿ, ಅಂದಿನ ದಿನವೇ ತನ್ನ ಇಚ್ಛೆಯನ್ನು ಪೂರಯಿಸಿಕೊಳ್ಳುವುದಕ್ಕೆಂದು ನಿಶ್ಚಯಿಸಿದನು—ಅಂತೆಯೇ ಅಂದು ರಾತ್ರಿ ಬೆಲೆವೆಣ್ಣುಗಳಲ್ಲಿ, ಆತ್ಮಹತ್ಯೆಗೆ ಅಡ್ಡನಿಂತ ಆಶೆಯನ್ನು ತೃಪ್ತಿಪಡಿಸುವುದಕ್ಕಾಗಿ— ಸೂಳೆಗೇರಿಗೆ ನಡೆದಿದ್ದನು.

* * * *

ಬಾಗಿಲು ತೆರೆಯಿತು! ಮೊದಲಿನಂತವಳಲ್ಲ; ಹದಿನೆಂಟು ವರುಷದ ಸುಂದರಿಯೊಬ್ಬಳು ಒಳಗೆ ಬಂದಳು! ಯಾವ ಹೆಣ್ಣೂ ತನಗೆ ಬೇಡ; ಹಾಗೆಯೇ ಹೊರಟು ಬಿಡುವುದೆಂದು ನಿಶ್ಚಯಿಸಿದ ಅವನಿಗೆ ಆಕೆಯನ್ನು ನೋಡುತ್ತಲೇ ಮತ್ತೆ ಆಶೆ ಅಂಕುರಿಸಿತು. ಆಕೆಯಲ್ಲಿ ಆಶಾಳನ್ನೇ ಕಂಡಂತೆ ಅವನಿಗೆ ಎನಿಸಿತು; 'ದ್ರೋಹಿ'ಯಾದ ಆಶಾಳಲ್ಲ; 'ಒಡನಾಡಿ ಆಶಾ!' 'ಆಶಾ' ಎಂದು ಕೂಗಿ ಬಿಡುವವನು; ಆಕೆ ಬಾಗಿಲನ್ನು ಹಾಕಿಕೊಂಡು ಸನಿಯಕ್ಕೆ ಬಂದಳು; ಆಕೆಯ ಕಣ್ಣಿನಲ್ಲಿ ನೀರು ನಿಂತಿತ್ತು. ಸ್ವಾಮಿನಾಥನ ಕೂಗು ಗಂಟಲನ್ನು ದಾಟಿ ಹೊರಗೆ ಬರಲಿಲ್ಲ. ಆಕೆ ಹಾಸಿಗೆಯ ಸನಿಯಕ್ಕೆ ಹೋಗಿ "ಹೂಂ....ಬನ್ನಿ" ಎಂದು ಮಾತ್ರ ನಿರುತ್ಸಾಹದ ಧ್ವನಿಯಲ್ಲಿ ನುಡಿದಳು. ಮೊದಲಿನ ಅರೆಮುದುಕಿಯಲ್ಲಿಯ ವೈಯಾರ–ಮುರುಕುಗಳೇ ಈಕೆಯಲ್ಲಿರಲಿಲ್ಲ. ಆಶಾಳಷ್ಟೇ ವಯಸ್ಸು! ಆಕೆಯಷ್ಟೇ ಎತ್ತರ; ಆಕೆಯದೇ ಮೈಕಟ್ಟು; ಆಕೆಯದೇ ಬಣ್ಣ; ಆದರೆ ಆಕೆಯಷ್ಟು ವಿದ್ಯಾವತಿ ಈಕೆಯಾಗಿರಲಿಲ್ಲ. ಬೆಲೆವೆಣ್ಣುಗಳ ಮುಖದ ಮೇಲಿರಬಹುದಾದ ಯಾವ ಪುಡಿಯೂ ಆಕೆಯ ಮುಖದ ಮೇಲಿರಲಿಲ್ಲ, ತುಟಿಗಳಿಗೆ ಬಣ್ಣವಿಲ್ಲ; ತಲೆಗೆ ಎಣ್ಣೆಯಿಲ್ಲ; ಕೆದರಿದ ಕೂದಲನ್ನು ಕಟ್ಟಿರಲಿಲ್ಲ; ನಿಸರ್ಗದತ್ತ ಸೌಂದರ್ಯವೇ ಮಿಕ್ಕಿರು

ವಾಗ ಕೃತ್ರಿಮದಿಂದೇನು? ಆಕೆಯಲ್ಲಿಯೇ ದೃಷ್ಟಿ ನಿಲ್ಲಿಸಿ ಸ್ವಾಮಿನಾಥ ಕುಳಿತಲ್ಲಿಯೇ ಕುಳಿತಿದ್ದನು.

"ಯಾಕ್ರಿ, ಬರೋದಿಲ್ವ ಹೊತ್ತಾಗತ್ತೈತಿ....ಲಗುನ ಬರ್ರಿ" ಕಣ್ಣೀರನ್ನು ಸುರಿಸುತ್ತಲೇ ಇದ್ದಳು. ಅದಾವುದೋ ಯಾತನೆಯನ್ನು ಆಕೆ ಮಾತುಗಳಲ್ಲಿ ಮರಸುತ್ತಿದ್ದಂತಿತ್ತು. ಸ್ವಾಮಿ ಆಕೆಯ ಅಂಗಾಂಗಗಳನ್ನೆಲ್ಲ ದಿಟ್ಟಿಸಿದನು; ಎಲ್ಲಿಯೂ ಆಕೆಯ ಚರಿತ್ರೆ ಬರೆದಿರಲಿಲ್ಲ; ಆಕೆಯ ಕಣ್ಣೀರುಗಳೂ ಆಕೆಯ ವೃತ್ತಾಂತ ಹೇಳಲಿಲ್ಲ; ಆದುದರಿಂದಲೇ ಸಮೀಪಕ್ಕೆ ಹೋಗಿ ಕೇಳಿದನು.

"ನೀನೇಕೆ ಅಳುವುದು?"

"........ ..."

"ನಿನ್ನ ಹೆಸರೇನು?"

"..........."

"ನೀನು ಹೇಳದಿದ್ದರೆ ನಿನ್ನನ್ನು ಮುಟ್ಟುವದೂ ಇಲ್ಲ...." ದೂರ ಸರಿದು ಮತ್ತೆ ಮೊದಲಿನ ಸ್ಥಳದಲ್ಲಿ ಕುಳಿತನು.

"ನನ್ನ ಹೆಸ್ರು ಸಾಳ್ವಿ........"

"ನಿನ್ನ ಕಣ್ಣಲ್ಲೇಕೆ ನೀರು?"

"ಅದನೆಲ್ಲಾ ಹೇಳಿದ್ರ ತಾವು ಅಸಂಯ್ಯ ಪಟಕೊಂತೀರಿ!...."

"ಅಸಹ್ಯ! ಅಸಹ್ಯವೆಂದು ತಿಳಿದೇ ಇಲ್ಲಿಗೆ ಬಂದಿದ್ದೇನೆ."

"ಹಿಂದ ಎಂದೂ ಬಂದಿಲ್ಲ ಹಂಗಾರ ನೀವು?"

"ಇಲ್ಲ!"

"ಇದs ಮೊದಲ ಬಾರೀನs?"

"ಹೌದು!"

ಸಾಳ್ವಿ ಕೈಬಿಟ್ಟು ಕೆಟ್ಟು ಹೋಗುವ ಮಗುವಿಗಾಗಿ ಕನಿಕರಿಸುವಂತೆ ಕನಿಕರಿಸಿದಳು.

“ ಹುಂಗಾರ್ಡ........ ಇಲ್ಲಿಗೆ ನೀವು ಬರಬಾರದಾಗಿತ್ತು ! ”

“ ನನಗೆಲ್ಲ ಅದು ಗೊತ್ತಿದೆ—ಬರುವುದು, ಬಿಡುವುದು ನನಗೆ ಸೇರಿದ್ದು. ಅದಿರಲಿ, ಅಸಹ್ಯಪಟ್ಟುಕೊಳ್ಳೋದಿಲ್ಲ ಹೇಳು; ನಿನೇಕೆ ಅಳುತ್ತಿ ? ”

ಆಕೆ ಮೊದಲಿನ ಸರಣಿಯಲ್ಲಿ ಸಾಗಿಸಿದ್ದಳು :

“ ನೀವು ಇಲ್ಲಿಗೆ ಬರೂದರಿಂದ ಹಾಳಾಗತೀರಿ........ ”

“ ನನಗೆ ಗೊತ್ತಿದೆ ! ”

“ ಗೊತ್ತಿದ್ದೂ ಬಂದಿರಾ ? ”

“ ಸಾಕು ನಿನ್ನ ಪಂಟು; ಹೇಳುವಿಯೋ ಇಲ್ಲವೋ ? ”

“ ಅದರಿಂದ ನಿಮಗ ಉಪಯೋಗ ಏನೂ ಇಲ್ಲ; ಸುಮಾಕ ನಿಮ್ಮ ಯಾಳೇದಾಗ ಹರಣ........ ”

“ ಉಪಯೋಗ ಬೀಳಲಿ, ಬಿಡಲಿ; ಅದು ನನ್ನ ಸ್ವಂತಕ್ಕೆ ಸೇರಿದ್ದು. ಹೊತ್ತುಹೋದರೆ ನನ್ನದು ಹೋಗುವದು........ ”

ಆಕೆ ಬಿಕ್ಕಿ ಬಿಕ್ಕ ಅಳುತ್ತ ಸ್ವಾಮಿಯನ್ನು ತಕ್ಕೆಯಲ್ಲಿ ಹಿಡಿಯಲು ಬಂದಳು. ಅದೆಲ್ಲ ಸೋಗೆಂದು ಸ್ವಾಮಿ ಆಕೆಯನ್ನು ದೂರ ತಳ್ಳಿ ತಿರಸ್ಕಾರ ದಿಂದ ನುಡಿದನು:

“ ಹೇಳಲಾರದುದು ಅಂಥದೇನದೇ ? ಅದೆಷ್ಟು ಮುರಕಾ ಮಾಡುತ್ತೀ; ಹೇಳಬಾರದೇ ? ”

“ ಎಷ್ಟು ಜನರನ್ನ ಸಂತೈಸಲಿ ಹೀಂಗ ? ” ಕಳಕಳಿಯ ದನಿಯಲ್ಲಿ ಹೇಳಿದಳು.

“ ಹಾಗಾದರೆ ನನ್ನ ಹತ್ತಿರಕ್ಕೇಕೆ ಬಂದೆ ?........ ”

“ ಇಕೇಽ ಕಳಿಸಿದ್ಲು........ ”

“ ಆಕೆ ಯಾರು ? ”

“ ಆಕೀ ಯಾರರ‌ಜ ಆಗ್ಲಿ; ಮುಟ್ಟದಿದ್ದವ್ರು ಇಲ್ಲಿಗ್ಯಾಕ ಬಂದ್ರಿಜ ಹಂಗಾರ? ” ಬಿಕ್ಕುತ್ತ ಕೇಳಿದಳು.

“ ನಾನು ಇಲ್ಲಿಗೆ ಬಂದುದು ನೀನು ಹೇಗೆ ಅಳುತ್ತಿರುವಿ ಎಂಬುದನ್ನು ನೋಡುವುದಕ್ಕಲ್ಲ........ ” ಸ್ವಾಮಿನಾಥ ಸ್ವಲ್ಪ ಬಿರುಸಾಗಿಯೇ ಉತ್ತರ ವಿತ್ತನು.

“ ನನಗೂ ತಿಳೀತೈತಿ; ಅಳೂದರಿಂದ ಬಂದವ್ರು ನೊಂದುಕೋತಾರಂತ !........ ”

“ ಆದರೂ ಏಕೆ ಅಳುತ್ತೀ ಮತ್ತೆ ? ”

“ ಅಳದೆ ಏನಮಾಡ್ಲಿ ?........ದುಖ್ಖಾ ಆಗತ್ತೈತಿ....ಹಲವು ಸಲ ತಡೀಲಾರದ........ ”

“ ಅಂದರ‌ಜ........ ”

“ ಏನೂ ಇಲ್ಲಾ ! ಹೀಂಗ ಇವಕೂವೊವ್ನ ನನ್ನ ‘ ಯಾಕ ನೀ ಅಳ್ತೀಜ ’ ಅಂತ ಯಾರೂ ಕೇಳಲಿಲ್ಲ; ಹಾಂಗ‌ಜ ಗಾಯ್ದವ್ಯಾಲ ಬರೀ ಹಾಕಿದ್ರು; ನೀಂವ ಒಬ್ಬರ‌ಜ ಮೊದ್ಲಿಗೆ ಹೀಂಗ ಕೇಳ್ದವ್ರು; ಏನೋ ವಿಚಿತ್ರ ಮನಶಾರಾಗಿರಬೇಕು....ಅದು ಹೇಳೂ ಮಾತಲ್ಲ; ಅದಿರ್ಲಿ. ಸುಮ್ಮನ‌ಜ ಹೊತ್ತ ಹೋಗತೈತಿ. ಆಕಿ ಈಗ ಬರ್ತಾಳ....ಬ್ಯಾಗ ಏಳ್ರಿ........ ”

“ ಯಾರು ಬರುತ್ತಾಳೆ ? ಆಕೆಯೆಂದರೆ ಯಾರು ಹೇಳಲೆಯಿಲ್ಲವಲ್ಲ ?.... ಅದೇನೋ ಹೇಳುವಂತಿಲ್ಲವೆಂದೆಯಲ್ಲ ? ಹೇಳಿದ ವಿನಾ ನಿನ್ನನ್ನು ಮುಟ್ಟಲಾರೆಂದು ಎಂದೋ ಹೇಳಿಬಿಟ್ಟಿದ್ದೇನೆ........ ”

“ ನೀವು ತಪ್ಪ ಮಾಡೀರಿಜ........ ”

“ ಅದಾವ ತಪ್ಪು ? ”

“ ನೀವು ಇಲ್ಲಿಗೆ ಬರೋ ಮುಂದಗಡೆ ಕುಡಿದ್ಯಾಕ ಬರಲಿಲ್ಲ? ಅಂದ್ರ ಹಿಂಗೆಲ್ಲ ಕೇಳತಿರಲಿಲ್ಲ; ಆಗ ನಾನೂ ಒಬ್ಬಾಕಿ ‘ ಮನಶ್ಯಾಳು ’ ಎಂಬ ಕಲ್ಪನಾ ಕೂಡಾ ಬರತಿರಲಿಲ್ಲ........ ”

“ ಆದಿರಲಿ ನಿನ್ನ ವೇದಾಂತ; ಏಕೆ ಅಳುತ್ತಿರುವೆಯೆಂಬುದನ್ನು ಹೇಳು ವೆಯೋ –ಇಲ್ಲವೆ, ಹೀಂಗ.... ತಗೋ ಇದನ್ನ....ನಾನು ಹೊರಡುವೆ।”

ಐದು ರೂಪಾಯಿಯ ನೋಟನ್ನು ಆಕೆಯ ಕಡೆಗೆ ಬೀಸಿ ಅಲ್ಲಿಂದ ಎದ್ದನು. ಆಕೆ ಎದ್ದು ಬಂದು ಅವನ ಕೈ ಹಿಡಿದಳು. ಹೇಳುವ ಮೊದಲು ಮುಟ್ಟುವುದಿಲ್ಲವೆಂದವನು ಆಕೆ ಮುಟ್ಟಿದರೂ ಬಿಡಿಸಿಕೊಳ್ಳಲಿಲ್ಲ. ಮತ್ತೆ ಕೇಳಿದನು:

“ ಹೇಳು ಹಾಂಗಾದರೆ; ಆಕೆ ಯಾರು ? ನೀನು ಅಳುವುದೇಕೆ ? ”

“ ಆಕೀನೂ ನನ್ನಂತವಳs ಒಬ್ಬಳು! ಆಕೀನs ಈ ಮನಿ ಯಜ ಮಾನಿ! ನನ್ನಂತಾ ಹತ್ತಾರು ಹೆಂಗಸ್ರು ಆಕಿ ಕೈಯಾಗ ಅದಾರ. ದುಡ್ಡ ಸಿಗತೈತಿ; ಆಕೆ ಹತ್ತರ ದುಡಿತೇವಿ ನಾವು.... ” ಸಾಳ್ವಿ ತಡೆದಳು.

“ ಹೂಂ....... ”

“ ಯಾಕ ಅಳತೀ, ಯಾಕ ಅಳತೀ ಅಂತ ಕೇಳಿದ್ರs ಏನು ಹೇಳೋದು........ಎಷ್ಟಂತ ತಡ್ಯೋದು:s....... ಈಗಾಗಲೇ ಮೂರು ಜನರು ... ನೀವು ನಾಲ್ಕನೆಯವರು........ನಾನೂ ಹೆಣ್ಣಲ್ಲs ?........ ”

ಸ್ವಾಮಿನಾಥ ಸುಮ್ಮನೆ ಇದ್ದನು. ಅವನಿಗೊಬ್ಬನಿಗೇ ಏಕೆ, ಇಡಿಯ ಮಾನವ ಸಮಾಜಕ್ಕೇನೆ ಈ ಪ್ರಶ್ನೆಯನ್ನು ಕೇಳಿದ್ದರೆ ಯಾರೊಬ್ಬರೂ ಉತ್ತರಿಸುತ್ತಿರಲಿಲ್ಲ. ಆಕೆ ಮುಂದುವರಿಸಿದಳು:

“ ಮ್ಯಾಲ ನೋಡಾಕ ನಾ ಚೆಂದs ಕಾಣತೇನಿ; ನನಗೇನೂ ಹಾಂಗ ಅನಸೂದಿಲ್ಲ....ಆದ್ರ ಬಾಳ ಜನಾ ಬಂದವ್ರು, ನನ್ನ ‘ ಮನಮೋಹಿನಿ ಯಾಗಿರುವೆ ’ ಎಂದು ಹೇಳತಾರ. ಅವರು ಅಣಕಸತಿರಬಹುದು. ( ಸ್ವಾಮಿಗೆ ಆಕೆ ಮೋಹಿನಿ ಎಂಬುದರಲ್ಲಿ ಯಾವ ಸಂಶಯವೂ ಉಳಿದಿರ ಲಿಲ್ಲ ) ಆದ್ರs........ ”

ಮತ್ತೆ ತಡೆದಳು....ಹಿಂದುಮುಂದೆ ನೋಡಿದಳು; ಸ್ವಾಮಿ ಮೌನ ವಾಗಿ ಕುಳಿತಿದ್ದನು; ಆಕೆ ಹೇಳಿದಳು:

“ ನಾನೇನು ಚೆಂದದ ಮನಿಯಲ್ಲ.... ಪಾಪದ ಕೂಪ.... ರೋಗದ ಮುದ್ದಿ....ಯಾವಾಗ್ಲೂ ಆ ಬ್ಯಾನಿ, ಈ ಬ್ಯಾನಿ ಅಂತ ನರಳತಿರತೇನಿ.... ”

ಆಕೆಯ ಮುಖ ಕೆಳಕ್ಕೆ ಬಾಗಿತು; ಆಕೆಯ ಸ್ಥಿತಿ ಆಕೆಗೇ ಅಸಹ್ಯ ವನ್ನುಂಟುಮಾಡಿತು.

ಸ್ವಾಮಿನಾಥನಿಗೆ ಇದೇನೂ ಹೊಸತಾಗಿ ಕೇಳಿದಂತಾಗಲಿಲ್ಲ. ಸೂಳೆ ಯರು ರೋಗದ ಆಗರವೆಂದು ಅವನು ಕೇಳಿಯೂ ಇದ್ದನು; ಓದಿಯೂ ತಿಳಿ ದಿದ್ದನು. ನಾಳೆ ಜೀವನ ಕೊನೆಗೊಳ್ಳುವವನಿಗೆ ಯಾವ ರೋಗದ ಅಂಜಿಕೆ?

" ಅದಿರಲಿ; ದುಡಿಯುತ್ತೇನೆ ಅಂದೆಯಲ್ಲ....ದಿನಕ್ಕೆ ಎಷ್ಟು ? "

" ಐದು ರೂಪಾಯಿ !........"

" ಐದೇ ರೂಪಾಯಿ ! ಅಷ್ಟಕ್ಕೇ ಇಷ್ಟು....ಹೊರಗೆಲ್ಲಿಯಾದರೂ ಕೂಲಿಪಾಲಿ ಮಾಡಿದರೆ ನಿನಗೆ ಸಿಕ್ಕುವುದಿಲ್ಲವೇ ? "

" ಸಿಗತೈತಿ ! ನನ್ನಂತಾ ಹೆಣ್ಣಿಗೆ ಯಾರು ಕೊಟ್ಟಾರು ಐದು ರೂಪಾಯಿ ? ಬಲಬರಾ ಕೊಟ್ಟರ ಒಂದು ರೂಪಾಯಿ ಕೊಟ್ಟಾರು ! "

" ಅಷ್ಟು, ಸಾಕು ನಿನ್ನ ಉಪಜೀವನಕ್ಕೆ ! ನಿನ್ನ ಶೀಲವಾದರೂ ಉಳಿಯುತ್ತಿತ್ತು ! "

" ಶೀಲ ಉಳಿತಿತ್ತs ? ಹೇಳಂಗಿಲ್ಲ; ನನ್ನಂತಾ ಹರೇದ ಹುಡ್ಗೀ ಶೀಲಾ ಉಳಿಸುವಷ್ಟು ದೊಡ್ಡ ಮನಿಸೇರು ಯಾರೂ ಕೆಲಸ ಕೊಡೋದಿಲ್ಲ... .... "

" ಈ ನರಕ ಯಾತನೆಯಿಂದಲೇ ನಿನಗೆ ಸುಖವೇ, ಅಂದಮೇಲೆ ?"

" ಎಲ್ಲೀs ಸುಖಾ !........

" ಹಂಗಾದ್ರೆ ಇಂಥ ನರಕಯಾತನೆ ಅನುಭವಿಸುವುದಕ್ಕಿಂತ ನೀನೇಕೆ ಸಾಯಬಾರದು ? "

" ನಾನೂ ಬಾಳ ಸಲ ನೋಡಿದೆ; ಆದ್ರ ಸಾಧಸಲಿಲ್ಲ........ "

" ಯಾಕೆ ? "

" ಹೇಳಿದೆನಲ್ಲಾs ದಿನ ಒಂದಕ್ಕ ಒಂದು ರೂಪಾಯಿ ಸಾಲೂದಿಲ್ಲ ಅಂತ....ನನಗ ಒಬ್ಬ ಕಾಕಾ ಅದಾನು........ಅವನಿಗೆ ಕುಡ್ಯಾಕ್‌s ದಿನಾ ಒಂದು ರೂಪಾಯಿ ಬೇಕು....ಮನ್ಯಾಗ ಒಂದು ಕುರುಡ ಮುದುಕಿ ಐತಿ; ಅವರಿಬ್ಬರನ್ನೂ ಜೋಪಾನ ಮಾಡಬೇಕಾಗೈತಿ ನಾನು........"

“ ಕುಡಿಯುವುದಕ್ಕೆ ನೀನು ಸಹಾಯ ಮಾಡುವಿಯೆಂದಂತಾಯಿತು....”

“ ಅಲ್ಲ....ಆದರೂ ಏನ ಮಾಡೋದು....ಅಂವಾ ಅದನ್ನ ಬಿಡೋ ಹಾಂಗಿಲ್ಲ....ಎಡ್ಡ ನೇದಾರೀನೂ ಇಲ್ಲ....ನಾ ಕೂಸಿರತಾನೂ ನಮ್ಮವ್ವ, ಅಪ್ಪ ಸತ್ತ್ರೊದ್ರಂತ; ಹೆಂಗೆಂಗೋ ಮಾಡಿ ಕಾಕಾನೂ ಸಾಕಿದಾ....ದೊಡ್ಡಾಕಿ ಆಗು ತಲೆ ಯಾರಾರದೋ ಮಾತ ಕೇಳಿ ಈ ಕೆಲಸಕ್ಕ ತಂದು ಹಚ್ಚಿದ. ಮೊದ ಮೊದ್ಲ ನಾನೂ ಗರತೇರಗಿಂತಾ ಬಲಾ ಈ ಕೆಲಸಕ್ಕ ಎದುರುಬಿದ್ದೆ; ಜುಲು ಮಿಂದ ನನ್ನ ಕೆಡಸಿದರು ಅವತ್ತು........”

ಆಕೆ ಕಣ್ಣೀರು ಸುರಿಸುತ್ತಲೇ ಇದ್ದಳು.

“ ನನಗೊಮ್ಮೆ ಅವರೆಲ್ಲ ನನ್ನ ಬದ್ಧ ವೈರಿ ಅನಿಸ್ತು; ಸೇಡು ತೀರಿ ಸಿಗೋಬೇಕಂತ ಸಾಯಬೇಕಂದೆ; ಕಾಕಾ ಆಗ ದುಡ್ಯೋದು ಬಿಟ್ಟಿದ್ದ; ಮುದುಕಿ ಹೆಂಗು ಕುರ್ಡಿ; ನಾನು ದುಡ್ಯೋದು ಬಿಟ್ಟುಬಿಟ್ಟರ ಅವರು ಉಪ ವಾಸ ಬಿದ್ದು........”

“ ಹಾಗೇಕೆ ಮಾಡಲಿಲ್ಲ ? ” ನಡುವೆ ಬಾಯಿಹಾಕಿ ಸ್ವಾಮಿ ಕೇಳಿ ದನು.

“ ಯಾಕೇನೋ ಸರಿಯಾಗಿ ಹೇಳಲಾರೆ; ಹಂಗ ಮಾಡೋದು ನನ್ನ ಮನಸಿಗೇನೂ ಚೆಂದ ಕಾಣಲಿಲ್ಲ....ಅವರು ಎಷ್ಟಂದರೂ ನನ್ನ ಹಿರೇರು; ಅವರು ಕಣ್ಣುಕಟ್ಟಿಕೊಂಡು ಬಾವೀ ಬಿದ್ದಾಗಂತ ನಾವು ಬೀಳೋದು ನೆಟ್ಟ ಗಲ್ಲ; ಈಟ ಇದ್ದಾಗಿಂದ ನೆತ್ತೀ ಹೊಟ್ಟೀ ಕಟ್ಟಿ ದೊಡ್ಡಾಕೀನ ಮಾಡ್ಯಾರ; ಅವರೆಂತವರ ಆದ್ರೂ ಅವರು ಸಾಯೂತನಕಾ ಕೂಳು ಹಾಕೋದು ನನ್ನ ಕರತವ್ಯ; ಅದಕ್ಕೂ ಹೆಂಗೂ ಒಮ್ಮೆ ಕೆಡೋದು ಕೆಟ್ಟಬಿಟ್ಟೇನಿ; ಎಂಥಾ ಸಂಕಟಾನಾದರೂ ತಾಳಿಕೊಂಡು ಅವರ ಜೋಪಾನ ಮಾಡಬೇಕಾಗತೈತಿ.... ಆದಿರ್ಲಿ, ಏಳ್ರಿ ಬ್ಯಾಳ ಹೊತ್ತಾತು....”

ಹೊರಗಿನಿಂದ ಆ ಮುದಿಹೆಂಗುಸು ಕೂಗಿದಳು:

“ ಸರಿ; ಯಾಳೀ ಬ್ಯಾಳ ಆತು; ಮತ್ತ ನಾಳೆ ಬರ್ರಿ ಮತ್ತೊಮ್ಮೆ....”

ಎದ್ದು ನಡೆದು ಆಕೆ ಬಾಗಿಲ ಕಡೆಗೆ ಹೊರಟಳು; ನೆಲದಮೇಲಿನ ೫ ರೂಪಾಯಿಗಳ ನೋಟನ್ನು ಎತ್ತಿ ಆಕೆಯ ಕೈಗಿತ್ತನು. ಬಾಗಿಲು ತೆರೆ

ಯಿತು; ಒಬ್ಬ ಗಂಡಸು ಆ ಹೆಂಗುಸಿನೊಂದಿಗೆ ನಿಂತಿದ್ದನು. ಆ ಮುದಿ ಹೆಂಗುಸು ಸಾಳ್ವಿಯ ಕೈಯಲ್ಲಿಯ ನೋಟನ್ನು ಗಬಕ್ಕನೆ ಕಿತ್ತುಕೊಂಡು, ಸಂಗಡ ತಂದವನನ್ನು ಒಳಗೆ ಕೂಡಿಸಿ ಬಾಗಿಲು ಮುಂದಕ್ಕೆ ಎಳೆದುಕೊಂಡು, ಸ್ವಾಮಿನಾಥನ ಹಿಂದಿಂದಲೇ ಬೀದಿಯ ಬಾಗಿಲತನಕ ಬಂದು ಹೇಳಿದಳು.

" ಆಗಾಗ ಬರ್‍ತಾ ಇರ್‍ರಿ....ಮರೀಬ್ಯಾಡ್ರಿ; ನಮಸ್ಕಾರ ! "

ಸ್ವಾಮಿನಾಥನಿಗೆ ಆಕೆಯ ಮಾತಿನಕಡೆಗೆ ಲಕ್ಷ್ಯವೇ ಇರಲಿಲ್ಲ.

ಇಡಿಯ ರಾತ್ರಿ ಸ್ವಾಮಿಗೆ ಕಣ್ಣಿಗೆಕಣ್ಣು ಹತ್ತಲಿಲ್ಲ; ಅವನ ಹೃದಯ ದಿಂದ ಆಶಾ ವಂಚನೆ ಮಾಡಿ ದೂರವಾಗಿ ಹೋಗಿದ್ದಳು: ಆ ಸ್ಥಾನದಲ್ಲಿ ಸಾಳ್ವಿ ( ಬೆಲೆವೆಣ್ಣು ) ನೆಲೆ ನಿಂತಂತೆನಿಸಿತು. ಮರುದಿನದ ಆತ್ಮಹತ್ಯೆಯ ನಿರ್ಧಾರ ಹಾರಿಹೋಯ್ತು ! ಸಾಳ್ವಿಯ ಕೆಲವು ನುಡಿದಳು ಅವನ ತಲೆಯಲ್ಲಿ ಅಚ್ಚೊತ್ತಿದಂತೆ ನಿಂತುಬಿಟ್ಟಿದ್ದುವು. ಅಂತೆಯೇ ಆಕೆಯ ಮಾತಿನಿಂದ ಅವನು ಒಂದು ನಿರ್ಣಯಕ್ಕೆ ಬಂದುದು: " ಸಾಯುವುದು ಸಾಯುವವನೊಬ್ಬನಿಗೆ ಸಂಬಂಧಿಸಿದ ವಿಷಯವಲ್ಲ ! ಎಷ್ಟೋ ಬಾಳಿನ ಹೊಣೆ ಒಂದು ಜೀವಿಯ ಮೇಲಿರುವಾಗ, ಒಲುಮೆಯಿಂದ ಅದರ ನಾಶಕ್ಕೆ ಹೆಣಗುವಂತಹ ಹೇಡಿತನ ಕ್ಕಿಂತ ಹೆಚ್ಚಿನ ಕೃತ್ಯವಿಲ್ಲ; " ಇಂಥ ಮಾತು ಅದೆಷ್ಟೋ ಪತಿತರಿಗೆ ತಿಳಿಯು ತ್ತದೆ. ಮನೆಯಲ್ಲಿ ಮುಪ್ಪಿನ ತಂದೆ-ತಾಯಿಗಳಿದ್ದಾರೆ. ಲಗ್ನದ ವಯಸ್ಸಿಗೆ ಬಂದ ತಂಗಿ ಇದ್ದಾಳೆ....ಅವರನ್ನು ಗೋಳಿಗೆ ಹಾಕಿ ಆತ್ಮವಂಚನೆಮಾಡಿ ಕೊಳ್ಳುವುದೇ ?

ಮರುದಿವಸ ನವಕರಿಗೆ ಬೆನ್ನುಹತ್ತಿ, ಬೆಳಗಿನಲ್ಲಿ ಮನೆಯಿಂದ ನಡೆದ ಸ್ವಾಮಿನಾಥ, ಊಟದ ಹೊತ್ತಿನ ಒಳಗಾಗಿ ಮ್ಯುನಸೀಪಾಲಟಿಯ ಹೈಸ್ಕೂಲಿ ನಲ್ಲಿ ಶಿಕ್ಷಕರೊಬ್ಬರ ಸ್ಥಳಕ್ಕೆ ಹೊಂದಿಕೊಂಡೇ ಮನೆಗೆ ಬಂದನು.

---

*

# ಪ್ರವಾಹ ಪತಿತೆ!

ಧಾರವಾಡ,

ಪ್ರೀತಿಯ ಪುಟ್ಟು ! ಮೇ ೨೭, ೧೯೪೨.

ಪದ್ಮಾ ಆಕೆಯೊಬ್ಬ ದುರ್ದೈವಿ! ಮೊದಲು ನೋಟದಲ್ಲಿಯೇ ನಿನ್ನನ್ನವಳು ಇಷ್ಟು ಸೆಳೆದುಬಿಟ್ಟಳೆ? ಅಂಥದೊಂದು ಅಪೂರ್ವ ಶಕ್ತಿ ಆಕೆಯಲ್ಲಿದೆ. ಅವಳು ಅದೊಂದು ಒಡೆಯಲಾರದ ಒಗಟು! ಅವಳ ಬಾಳು ಪೂರ್ತಿಮಾಡಲಾರದ ಸಮಸ್ಯೆ !!

ಮದುವೆಯೂ ಮುಗಿದುಹೋಗುತ್ತದೆ. ಸತಿಪತಿಯರು ಒಂದೆಡೆಯಲ್ಲಿಯೆ ಹಲಕಾಲ ಕೂಡಿರುತ್ತಾರೆ. ಕಾಲಾಂತರದಲ್ಲಿ ಮಕ್ಕಳೂ ಆಗುತ್ತವೆ. ಆದರೂ ಅವರೆಲ್ಲರಲ್ಲಿ ಪ್ರೀತಿ ಇದ್ದೇ ಇರುವದೆಂದು ಹೇಳಬೇಕೆ? ಮದುವೆಗೆ ಸಿದ್ಧರಾದ ಮಾತ್ರಕ್ಕೆ ಎಲ್ಲವೂ ಪೂರೈಸಿದಂತಾಯಿತು. ಲಗ್ನವಾದಾಗ ಗಂಡನೆಂದರೇನೆಂಬ ವಿಶೇಷ ತಿಳುವಿದ್ದ ಲಲನೆಯರೆಷ್ಟು ನಮ್ಮಲ್ಲಿ? ಹೆಣ್ಣಿನ ಬಗೆಗೆ ಹೆಚ್ಚಾಗಿ ಅರಿತುಕೊಂಡವರೆಷ್ಟು ಗಂಡುಮಕ್ಕಳು? ತಿಳುವಿನ ಮೊಳಕೆ ಮೂಡಿರದಿದ್ದರೂ, ಅದರ ಸಾಧನೆಗಾಗಿ ಹೆಣಗುವರೆಷ್ಟು ಜನ? ಅದನ್ನು ಕಂಡುಕೊಳ್ಳುವ ಕುತೂಹಲಿಗಳೆಷ್ಟು! ಗಂಡಸರೆಲ್ಲರಿಗೂ ತಾವು ಆದರ್ಶ ಪತಿಗಳಾಗಿ ಬದುಕಬೇಕೆಂಬ ಬಯಕೆಯಿರಬಹುದು; ಅದರಂತೆ ಹೆಣ್ಣುಮಕ್ಕಳೆಲ್ಲರಿಗೂ ಆದರ್ಶ ಸತಿಯರಾಗಿ ಬಾಳಬೇಕೆಂಬ ಹೃದಯದ ಹಂಬಲವು ಇರಬಹುದು; ಆದರೆ ಅವರಲ್ಲಿ ಆದರ್ಶರಾಗಿ ಬಾಳುವವರೆಷ್ಟು ಜನರು? ಇಂದು ಬಹಳ ಪಾಲು ಎಲ್ಲರಲ್ಲಿಯೂ ನಾವು ಕಾಣುವದು ಬರೀಯ ಅಸಂತೋಷ! ಕೇವಲ ಅತೃಪ್ತಿ !!

ಪದ್ಮಾ ಈಗ ಕೆಲವು ದಿನಗಳ ಕೆಳಗೆ ನನಗೆ ಒತ್ತಾಯದ ಔತಣವನ್ನಿತ್ತಿದ್ದಳು. ಆಕೆಯಲ್ಲಿಗೆ ಹೋಗಿ ಒಂದೆರಡು ತಿಂಗಳು ನಿಲ್ಲುವ ಸಮಯವೂ ಬಂದಿತ್ತು. ಆಗಲೇ ಆಕೆಯ ಬಾಳಿನ ಸ್ಪಷ್ಟಚಿತ್ರ ನನಗೆ ತೋರಿಬಂದುದು. ಅಷ್ಟುದಿನವೂ ನಾನೂ ಸಹಿತ ಆಕೆಯೊಬ್ಬ ಸಂತಸದ ಮಡುವಿನಲ್ಲಿ ಮುಳುಗಿ

ಚಿನ್ನಾಟವಾಡುತ್ತ ನಲಿದು ತೃಪ್ತಳಾಗಿರುವ ಸತಿಯೆಂದು ತಿಳಿದಿದ್ದೆ. ನನ್ನ ತಿಳುವಳಿಕೆ ತಪ್ಪಾಯ್ತು! ಅಂದಿನ ಬಾಲ್ಯದ ನೆನಹು ಮೂಡಿದರೆ ಪದುಮಳಂತಹ ಹುಡುಗಿ ವಿಶ್ವದಲ್ಲಿ ಇನ್ನೊಬ್ಬಳು ಸಿಕ್ಕುವಳೇ ಎಂದು ಕೇಳಬೇಕಾಗುತ್ತದೆ. ಇದ್ದರೆ ಆಕೆಯಂತಹ ಗೆಳತಿಯಿರಬೇಕು; ಪುಟ್ಟು, ನೀನು ಕೋಪಿಸಿಕೊಳ್ಳಬೇಡ. ನೀನು ಈಗ ಮೂರು ದಿನಗಳ ಗೆಳತಿಯಾದರೆ, ಆಕೆ ಬಾಲ್ಯದ ಗೆಳತಿ. ನಾವೀರ್ವರೂ ಪರಕಾರದ ಗೆಳತಿಯರು. ಅದೆಷ್ಟು ಸ್ವರ್ಗೀಯ ಸದ್ಗುಣ ಸೌಂದರ್ಯಗಳ ಸಂಗಮಳಾಕೆ! ನಯವಿನಯಗಳ ಮೂರುತಿ!! ದಯದಾಕ್ಷಿಣ್ಯಗಳ ಬೀಡು!!! ಹೊಟ್ಟೆಯುರಿ ಅದಂತಿರಲಿ; ಅದರ ಜ್ವಾಲೆಯ ಸುಳಿವನ್ನೂ ಸಹಿತ ಅವಳಲ್ಲಿ ನಾನು ಒಮ್ಮೆಯೂ ಕಾಣಲಿಲ್ಲ ಇನ್ನೊಬ್ಬರ ಮೇಲೆ ಕೋಪಿಸಿಕೊಳ್ಳುವದನ್ನು ಆಕೆಯರಿಯಳು. ಮನೆಯಲ್ಲಿ ಓರಿಗೆಯುವರೇ ಆದ ನಾಲ್ಕೈದು ಮಕ್ಕಳು ಮರಿಗಳು. ಆದರೂ ಆಕೆ ಕೊರತೆಯೆಂಬುದೇನನ್ನೂ ಕಂಡವಳಲ್ಲ. ಎಲ್ಲ ಬಗೆಯ ಜ್ಞಾನದಲ್ಲಿಯೂ ಆಕೆಗೆ ಆಸಕ್ತಿ. ಹೆಣ್ಣುಮಕ್ಕಳಿಗೇಕೆ ಶರೀರ ಶಿಕ್ಷಣವೆಂದು ಎಷ್ಟು ಜನ ತೆಗಳಿ ತಿರಸ್ಕರಿಸಿಲ್ಲ! ಅದರಿಂದ ನಾನೇನೂ ಹೊರಕ್ಕಿಲ್ಲ. ಅವರ ಪರಿಣಾಮವನ್ನೇ ಈಗ ನಿತ್ಯ ಅನುಭವಿಸುತ್ತಿರುವದು. ಬಾಳಿನಲ್ಲಿ ನೆಮ್ಮದಿಯಿಂದ ನಲಿದಾಡಿದ ದಿನವನ್ನೇ ನಾನರಿಯೆ ನಿತ್ಯ ದೇಹಕ್ಕೆ ಏನಾದರೊಂದು ಆಲಸಿಕೆ ಇರಬೇಕು. ನೀನೇ ನೋಡಿರುವೆಯಲ್ಲ! ಆಕೆ ಅದೆಷ್ಟು ಸದೃಢಳಾಗಿ, ಆರೋಗ್ಯಶೀಲಳಾಗಿ ಶೋಭಿಸುತ್ತಾಳೆ! ಆಕೆಯಲ್ಲಿ ಇಂಥದು ಇಲ್ಲವೆಂದು ಹೇಳುವಂತಿರಲಿಲ್ಲ. ಪರೀಕ್ಷೆಗಳಲ್ಲಿ, ಸಾಹಿತ್ಯ ಸಂಗೀತ ಸ್ಪರ್ಧೆಗಳಲ್ಲಿ, ಶರೀರಶಿಕ್ಷಣ ಪಂದ್ಯಾಟಗಳಲ್ಲಿ ಆಕೆಗೆ ಮೊದಲು ಸ್ಥಾನ. ಮನೆಯಲ್ಲಿ ದೊರೆತ ಶಿಕ್ಷಣವಾದರೂ ಎಷ್ಟು ಉಚ್ಚ! ಆಕೆಯಲ್ಲಿ ಆಶ್ರಯ ಪಡೆದುಕೊಂಡಿದ್ದ ವಿಚಾರ ಭಾವನೆಗಳದೆಷ್ಟು ಉದಾತ್ತ! ಆಕೆಯ ಮುಂದಿರಿಸಿದ ಆದರ್ಶಗಳಾದರೂ ಎಷ್ಟು!! ಅಯ್ಯೊ! ನನಗೆ ಆಗ ಅರ್ಥವಾಗುತ್ತಿರಲಿಲ್ಲ. ಅವಳ ಮನೆಯವರಾಗ ತಪ್ಪಿದರು. ಉದಾತ್ತ ವಿಚಾರ, ಆದರ್ಶ ಗೃಹಿಣಿ ಮೊದಲಾದವುಗಳ ಸ್ವಪ್ನ ಸುಂದರ ಚಿತ್ರಗಳನ್ನೇ ಅವಳ ಮುಂದಿಡುತ್ತಿದ್ದರೇ ಹೊರತು, ಅವುಗಳನ್ನು ಸಾಧಿಸುವ ಬಗೆ, ರೀತಿ, ನೀತಿಗಳನ್ನು ಒಮ್ಮೆಯಾದರೂ ಆಕೆಯೆದುರು ಬಣ್ಣಿಸಿರಲಿಲ್ಲ.

ಅದು ಬಹಳ ಹಳಮಾತು!

ಆಕೆಯ ಲಗ್ನವಾಯಿತು. ' ಆಕೆಯ ಅದೃಷ್ಟ ಚನ್ನಾಗಿತ್ತು. ಪರಮಾತ್ಮನೂ ಕೃಪೆಮಾಡಿದನು. ಮನೆತನದ ಪೂರ್ವ ಪುಣ್ಯವೂ ಸೇರಿರಬೇಕು. ಇನ್ನೇನು ಆಕೆಗೆ ಯಾವುದಕ್ಕೆ ಕೊರತೆ ! ' ಎಂದು ಜನರು ಮಾತನಾಡಿದರು. ಅದೇನೂ ಹುಸಿಯಲ್ಲ. ಆಕೆಗೆ ಒಳ್ಳೆಯ ಸ್ವಾಮಿಯೇ ಸಿಕ್ಕನೆಂದು ಹೇಳಬೇಕು. ತುಂಬಾ ನಿಷ್ಠಾವಂತ ! ಪ್ರಾಮಾಣಿಕ !! ಆದರೂ ಅವನು ಸಾಮಾನ್ಯ ಗಂಡಂದಿರಿಂದೇನೂ ಹೊರತಾಗಿರಲಿಲ್ಲ. ಎಲ್ಲರೂ ಅವರನ್ನು ಆಗ್ಗೆ ಆದರ್ಶ ದಂಪತಿಗಳೆಂದು ಕರೆದರು. ಸಕಾಲದಲ್ಲಿ ಆಕೆ ಪುಟ್ಟಮಗು ಮಹೇಂದ್ರನ ಮಾತೆಯೂ ಆದಳು. ಮನೆಯಲ್ಲಿ ಆದ ಆನಂದಕ್ಕೆ ಒಡ್ಡು ಕೋಡೆಗಳು ಅಡ್ಡವಾಗಲಿಲ್ಲ ! ಸ್ವಾಮಿಗಂತೂ ಇನ್ನಿಲ್ಲದ ಸಂತಸ !! ಪದುಮಳಿಗಾದರೂ ಮಗುವಿನ ಮುಖ ಕಂಡಾಗ ಹೃದಯ ತುಂಬಿ ಬರದೇ ಇರುತ್ತಿತ್ತೇ ? ಆದರೂ ಆಕೆಯದು ಅದೊಂದು ಬಗೆಯ ಸಂತಸವು ಮಾತ್ರ !

ಮಹಾಸಾಗರವು ಬಿರುಗಾಳಿ ಬೀಸಿದ ಕಾಲದಲ್ಲಿ ಅದೆಷ್ಟು ಗಂಭೀರವಾಗಿ ಪ್ರಶಾಂತವಾಗಿ ತೋರುತ್ತಿರುವದಿಲ್ಲ ! ಆದರೆ ಆಗಲೂ ಅದರ ಒಡಲಿನಲ್ಲಿ ಜ್ವಾಲಾಮುಖಿಗಳಂತಹ ಉರಿ ಪ್ರವಾಹದ ಕೋಲಾಹಲವು ಇಲ್ಲದೆ ಇರುವದಿಲ್ಲ !!

ಪದ್ಮಾ ಮತ್ತು ರಾಜೇಂದ್ರ—ಆಕೆಯ ಗಂಡನ ಹೆಸರು — ಈರ್ವರೂ ಕೂಡಿ ಇದ್ದದೂ ಗಂಡಹೆಂಡರಾಗಿ; ಆದರೆ ನಲ್ಲನಲ್ಲೆಯರಾಗಿ ಅಲ್ಲ. ರಾಜೇಂದ್ರ ಸದಾಕಾಲ ತಾನು ಗಂಡನಾಗಿರಬೇಕೆಂಬ ಹೆಬ್ಬಯಕೆಯನ್ನು ಮೆಲಕು ಹಾಕುತ್ತಿದ್ದನೇ ಹೊರತು ನಲ್ಲನಾಗಿ ಬಾಳಬೇಕೆಂಬ ಹೃದಯದ ಹಂಬಲವನ್ನು ಕನಸಿನ ಕಲ್ಪನಾಸಾಮ್ರಾಜ್ಯದಲ್ಲಿಯೂ ಕಾಣಲಿಲ್ಲ. ಸ್ವತಃ ಅವನು ನಯವಿನಯಗಳ ಮೂರ್ತಿಯಾಗಿದ್ದಾಗ್ಯೂ ನಯ, ವಿನಯ, ಅನುನಯಗಳಿಂದ ನಲ್ಲೆಯನ್ನು ಒಲಿಯಿಸಿ ಒಗೆತನ ಮಾಡಿಕೊಂಬುವ ಅರಿವು ಅವನಲ್ಲಿ ಅಂಕುರಿಸಲೇ ಇಲ್ಲ. ನನಗೆ ಗೊತ್ತು. ಅದರಲ್ಲಿ ಅವನದೇನೂ ತಪ್ಪಿರಲಾರದು. ಅವನಲ್ಲಿದ್ದ ಪ್ರೇಮದ ಆಳವೇ ಅಷ್ಟು ! ನಿಜವ ನುಡಿಯುವದೆಂದರೆ, ಪ್ರೇಮವೆಂಬುದೇ ಅವನಿಗೆ ಅಪರಿಚಿತ ವಸ್ತುವಾಗಿತ್ತು. ಪ್ರೇಮದ ವಿಷಯವಾಗಿ ತಾನು ತಿಳಿಗೇಡಿಯಾಗಿರುವೆನೆಂದು ಅವನಿಗೆ ಹೇಗೆ

ತಿಳಿಯಬೇಕು ? ಪದ್ಮಳನ್ನೇನೋ ಮನಮುಟ್ಟಿ ಪ್ರೀತಿಸಲು ಹೆಣಗುತ್ತಾನೆ. ಆದರೆ ಅವನಿಗಿದ್ದ ಕಿರು ತಿಳುವೇ ಅದಕ್ಕೆ ಮಟ್ಟ. ಪದ್ಮಳಾದರೊ ಅದೊಂದು ರೀತಿ. ತನ್ನಮಟ್ಟಿಗೆ ತಾನು ರಾಜೇಂದ್ರನನ್ನು ಪ್ರೀತಿಸುತ್ತಾಳೆ. ಮಾತಿಗಿಂತಲೂ ಮಿಗಿಲಾಗಿ ಮಮತೆ ತೋರಿಸುತ್ತಾಳೆ.

ಆದರೆ ಅವಳಿಗೆ ಅವನ ಸಹವಾಸದಲ್ಲಿ ಸಿಕ್ಕ ಸುಖವೆಷ್ಟು ? ಒಮ್ಮೆಯಾದರೂ ಆಕೆಯನ್ನು ಸಂಪೂರ್ಣ ಭಾವನಾಪರವಶಳನ್ನಾಗಿ ಮಾಡಲು ಅವನು ಅಸಮರ್ಥನಾದನು. ಆತನಿಂದ ಸಂಪೂರ್ಣ ತೃಪ್ತಿಯನ್ನು ಒಮ್ಮೆಯೂ ಆಕೆ ಹೊಂದಿಲ್ಲ. ತಪ್ಪಿಯಾದರೂ ಆಕೆಯ ಪ್ರೇಮಬುಗ್ಗೆ 'ಝಿಲ್ಲನೆ' ಜಿಗಿದಿಲ್ಲ. ತನ್ನ ಅತೃಪ್ತಿಯನ್ನು ಮಾತಿನಲ್ಲಿ ಮೂಡಿಸುವ ಧೈರ್ಯ ಪದ್ಮಳಿಗಿಲ್ಲ. ಇಂಥ ಬಿಕ್ಕಟ್ಟಿನಲ್ಲಿ ಆಕೆ ಎರೆದೆರಮ ಬಿಚ್ಚುಮನಸ್ಸಿನಿಂದ ಅವನನ್ನು ಧಾರಣ ಮಾಡುವದಾದರೂ ಹೇಗೆ ?

ಯಾರ ಪರಿತಾಪ ಯಾರಿಗೊ !

ಪವಿತ್ರವಾದ, ಪರಿಶುದ್ಧವಾದ ಹಿಂದೂಧರ್ಮದ ಸ್ತ್ರೀಯಲ್ಲವೇ ಆಕೆ ? ಹೇಗಿದ್ದರೂ ಹೆಂಡತಿಯಾದವಳು ಧರ್ಮಪತ್ನಿಯಾಗಿ ಬಾಳಿ, ಬದುಕಬೇಕು ! ಅಂದರೇನೇ ಆಕೆಗೊಂದು ಪಾತಿವ್ರತ್ಯದ ಪತಾಕೆಯ ಅಡಿಯಲ್ಲಿ ಸ್ಥಾನ ! ಪತಿಯೇ ದೇವರು ! ಪತಿಯೇ ಧರ್ಮ !! ದೇವರು ಧರ್ಮಗಳಲ್ಲಿ ತಪ್ಪನ್ನೆಣಿಸುವದು, ಅರಸುವದು ನ್ಯಾಯವೇ ? ದೇವರು ಧರ್ಮಗಳು ಎಂದಾದರೂ ಅನ್ಯಾಯವಾಗಿ ವರ್ತಿಸುವದುಂಟೇ ? ಸತಿಯಳ ಬಾಳು ಬೀಳಾದರೂ ಸರಿ; ಹೋಳಾದರೂ ಸರಿ. ಆಕೆಯ ಪ್ರೇಮ ಮೊಳಕೆಗೆ ಕುದಿಯುವ ನೀರು ಬೀಳುತ್ತಿದ್ದರೂ ಚಿಂತೆಯಿಲ್ಲ. ಅದೇ ನೀರಿನಿಂದ ಇನ್ನೊಬ್ಬರ ಸುಖಸ್ನಾನವಾಗುತ್ತಿದ್ದರೆ ಅದೇ ಸತಿಯಳಿಗೆ ಪರಮಾನಂದ !!

ನಡೆದುದಿಷ್ಟು; ಓಲೆ ಉದ್ದವಾಯಿತೇನೋ; ಇಲ್ಲಿಗೆ ಮುಗಿಸುವೆ. ನೀನೇ ಪದ್ಮಳ ವಿಷಯಕವಾಗಿ ಆಸ್ಥೆಯಿಂದ ಕೇಳಿದ್ದಕ್ಕಾಗಿ ಮನಬಿಚ್ಚಿ ಅವಳ ವಿಷಯವಾಗಿ ಇರುವ ನಿಜಸಂಗತಿ ಬರೆದಿರುವೆ. ಇನ್ನೊಂದು ಸಲ ಮತ್ತೆ ಬರೆಯುವೆ. ಪದ್ಮಳಿಗೊಂದು ಓಲೆ ಬರೆಯಲು ಮರೆಯಬೇಡ. ಆತ್ಮೀಯ

ಗೆಳತಿಯರ ಒಲುಮೆಯ ಓಲೆಗಳಿಂದ ಆಕೆ ಅತೃಪ್ತಿಯಲ್ಲಿಯೂ ಅಲ್ಪ ತೃಪ್ತಿಯನ್ನು ಕಂಡುಕೊಳ್ಳುವಳು. ವಂದನೆಗಳು.

ನಿನ್ನ ಒಲವಿನ,
**ವತ್ಸಲಾವತಿ.**

೨

**ಕೋಕಿಲಾಪುರ,**
ಅಗಸ್ಟ ೨೩, ೧೯೪೨.

ವತ್ಸಲದ ವಾಸ್ತವ ಮೂರುತಿ ವತ್ಸಲಾ!

ಮತ್ತೆ ಸಂಕಟ! ಗಾಯದ ಮೇಲೆ ಬರೆ!!

ಇಷ್ಟರಲ್ಲಿಯೇ ನೀನು ವರ್ತಮಾನ ಪತ್ರದಲ್ಲಿ ಓದಿರಬಹುದು. ಮಹಾತ್ಮರನ್ನು ಮುಂಬಯಿಯಲ್ಲಿ ಸೆರೆ ಹಿಡಿದುದರ ಪರಿಣಾಮವಾಗಿ ಈಗ ಹದಿನೈದು ದಿನಗಳ ಕೆಳಗೆ ಅವರನ್ನೂ ಹಿಡಿದುಕೊಂಡು ಹೋದರು. ಮನೆಯಲ್ಲಿ ಈಗ ನಾನು ಮತ್ತು ಮಗು ಇಬ್ಬರೇ! ಅವರು ಅಖಿಲಭಾರತದ ಕಾಂಗ್ರೇಸ ಕಮಿಟಿಯ ಸದಸ್ಯರು! 'ದೇಶಸೇವೆ, ಈಶಸೇವೆ! ಎರಡಿಪ್ಪತ್ತು ಕೋಟಿ ದೀನರಾದ, ದರಿದ್ರರಾದ ಭಾರತೀಯರ ಉದ್ಧಾರ!! ಎಲ್ಲವೂ ಸರಿ; ನಾನೇನೂ ದೇಶದ್ರೋಹಿಯಲ್ಲ. ವೀರರಾದ, ಶೂರರಾದ ಪತಿಗಳನ್ನು ಒಲುಮೆ ಚಲುಮೆಗಳಿಂದ ದೇಶೋದ್ಧಾರ ಕಾರ್ಯಕ್ಕೆ ಬೀಳ್ಕೊಟ್ಟ ಧೀರ ಭಾರತ ಮಹಿಳೆಯರ, ಅದರಲ್ಲಿಯೂ ಕೆಚ್ಚೆದೆಯ ಕನ್ನಡಿತಿಯರ ರಕ್ತವು ನನ್ನ ನರನರಗಳಲ್ಲಿ ಹರಿದಾಡುತ್ತಿದೆ!!

ಆದರೂ........

ಮೊದಮೊದಲಂತೂ ಬಾಳಿನಲ್ಲಿ ಅತೀವ ಬೇಸರ ಬಂತು. ಮಗುವು ಮುಂದಿರುವಾಗಷ್ಟು ಮನಸ್ಸಿಗೆ ಒಂದಿಷ್ಟು ಸೊಗಸು! ಸಂತಸ!! ಸಮಾಧಾನ!!! ಅವರು ಇಲ್ಲದುದು ನನಗೂ ಮಗುವಿಗೂ ಕೂಡಿಯೇ ಮಂಕು ಹಿಡಿಸಿಬಿಟ್ಟಿದೆ. ವಿರಹವೆಷ್ಟು ಭೀಕರವೆಂಬುದರ ಅರಿವು ಈಗ ತೋರಬರುತ್ತಿದೆ. ದಿನದ ಇಪ್ಪತ್ತುನಾಲ್ಕು ತಾಸುಗಳೂ ಮನೆಯಲ್ಲಿಯೇ ಇದ್ದು ಅನು

ಭವಿಸುವ ಏಕಾಂತವಾಸ ಬೇಸರ ತಂದಿತ್ತು. ಕತೆ–ಕಾದಂಬರಿಗಳನ್ನು ಓದು ವದರಲ್ಲಿಯೂ ಮನಸ್ಸಾಗುತ್ತಿರಲಿಲ್ಲ. ಚಲಚ್ಚಿತ್ರ ನೋಡಿಯಾದರೂ ಮನಸ್ಸನ್ನು ತಣಿಸಿ, ಬೇಸರ ದೂರವಾಡಬೇಕೆಂದರೂ ಮನಸ್ಸೇ ಆಗುತ್ತಿರಲಿಲ್ಲ. ಅದೂ ಒಂದು ರೀತಿಯಿಂದ ಒಳ್ಳೆಯದೇ ಎಂದು ಹೇಳಬೇಕು. ಇಲ್ಲವಾದರೆ ಜನರಾಡಿಕೊಳ್ಳದೆ ಬಿಟ್ಟಾರೆಯೇ! ' ಸೆರೆಮನೆಯಲ್ಲಿ ಗಂಡ ಕೊಳೆಯುತ್ತಿರುವಾಗ ಈಕೆಗಿಷ್ಟು ಸಡಗರವೇ! ' ಎಂದು.

ಈಗ ಕೆಲವು ದಿನಗಳಿಂದ ಮನಸ್ಸಿಗೆ ನೆಮ್ಮದಿಯೆನಿಸಿದೆ. ನನ್ನ ಪತಿಯ ಗೆಳೆಯರಲ್ಲಿ ಕೆಲವರು ಆಗಾಗ ಬಂದು ನನ್ನ ಕ್ಷೇಮಸಮಾಚಾರ ವಿಚಾರಿಸುತ್ತಿದ್ದಾರೆ. ಅವರಲ್ಲಿ ಶೇಖರರಾಯರೂ ಒಬ್ಬರು. ಆಹಾ! ಅವರೆಷ್ಟು ಒಳ್ಳೆಯ ಜನರು! ಹಿಂದೆ ಅವರು ಶೇಖರರಾಯರ ಗುಣಗಳನ್ನು ನನ್ನೆದುರಿನಲ್ಲಿ ಎಷ್ಟುಸಲ ಬಣ್ಣಿಸಿಲ್ಲ! ಆದರೆ ಆಗ ನನಗೆ ಅದರ ಅನುಭವ ಬಂದಿರಲಿಲ್ಲ. ಆಗಾಗ ಮನೆಯ ಕಡೆಗೆ ಬರುತ್ತಾರೆ. ಬೇಸರ ಕಳೆಯಲು ನೆರವಾಗುತ್ತಾರೆ. ಅಲ್ಲಿ ಇಲ್ಲಿಯ ಸುದ್ದಿಗಳನ್ನು ಕೂಡಿಸಿ ತಂದು ಮನಬಿಚ್ಚಿ ಹರಟೆ ಹೊಡೆಯುತ್ತಾರೆ. ಹೆಣ್ಣುಮಕ್ಕಳಾದ ನಾವು ಚಿನ್ನಕ್ಕೆ ಹಾತೊರೆದು ಮುಗಿದು ಬೀಳುವಂತೆ ಮಗುವಿಗಾಗಿ ಅವರು ಹಾತೊರೆದು ಮುಗಿದು ಬೀಳುತ್ತಾರೆ. ಮೊನ್ನೆ ತಾನೇ ನನ್ನ ಮನಸ್ಸಿರದಿದ್ದರೂ ಒತ್ತಾಯಮಾಡಿ ಚಲನಚಿತ್ರ ಒಂದಕ್ಕೆ ಕರೆದೊಯ್ದಿದ್ದರು. ಊರಲ್ಲಿ ಸಾರ್ವಜನಿಕ ಭಾಷಣ, ಸಭೆಗಳಾದರೆ ತಪ್ಪದೆ ಕರೆದೊಯ್ಯುತ್ತಾರೆ. ಮೊನ್ನೆ ತಮ್ಮ ಮನೆಗೂ ಕರೆದೊಯ್ದು ತಮ್ಮ ಹೆಂಡತಿಯ ಪರಿಚಯ ಮಾಡಿಸಿಕೊಟ್ಟರು. ಆಕೆಗೂ ನನ್ನಷ್ಟೇ ವಯಸ್ಸಿರಬಹುದು. ಇನ್ನೂ ಮಕ್ಕಳಿಲ್ಲ. ಗಂಡಹೆಂಡಿರು ಇಬ್ಬರೂ ಅದೆಷ್ಟು ಒಲುಮೆ, ನಲುಮೆಗಳಿಂದ ಸೇರಿ ಸರಸವಾಡುತ್ತಿರುವರೆನ್ನುವಿ? ಅವರೀರ್ವರು ಎರಡು ಪ್ರೇಮವಾತ್ಸಲ್ಯದ ಪುತ್ಥಳಿಗಳಂತಿದ್ದಾರೆ! ಅಂಥ ಭಾಗ್ಯ ಸತಿಪತಿಗಳಾದ ಎಲ್ಲರೂ ಪಡೆದು ಬಂದಿರುವದಿಲ್ಲವಲ್ಲ!!

ಗೆಳೆಯರು ಎಷ್ಟು ಜನರಿರುವದಿಲ್ಲ! ಎಲ್ಲರೂ ಸೌಖ್ಯದ ಸಮಯದಲ್ಲಿಯೇ ಸನಿಹದಲ್ಲಿ ಸುಳಿದಾಡುವವರು! ಕಷ್ಟ ಕಾಲದಲ್ಲಿ ಕೈಕೊಡುವವರೆಷ್ಟು ಜನ!! ಮಿತ್ರನೊಬ್ಬನಿಗಾಗಿ ಶೇಖರರಾಯರು ನಿತ್ಯ ಇಷ್ಟೆಲ್ಲ ಆಯಾಸ ತಕ್ಕೊಳ್ಳುತ್ತಿದ್ದಾರೆ. ನಮ್ಮವರು ಹೇಳುತ್ತಿದ್ದ ಮಾತು ಅಕ್ಷರಶಹ ನಿಜ,

“ ಶೇಖರನಂತಹ ಗೆಳೆಯರು ಮತ್ತಾರಿಗೂ ಇರಲಿಕ್ಕಿಲ್ಲ; ಸಮಯ ಬಂದರೆ ಜೀವಕೊಡುವದಕ್ಕೂ ಹಿಂದುಮುಂದೆ ನೋಡುವವನಲ್ಲ ! ”

ದೇವರ ರಾಜ್ಯದಲ್ಲಿ ಸುಖಿಗಳೂ ಸಂತುಷ್ಟಿಗಳೂ ಇಲ್ಲದೆ ಇಲ್ಲ ! ದುಃಖಿಗಳಿಗೂ ಅತೃಪ್ತರಿಗೂ ಕೊರತೆಯಿಲ್ಲ !

ಏಕೆ ವತ್ಸಲಾ ! ಇಷ್ಟು ದಿನಗಳಿದರೂ ಒಂದಾದರೂ ಓಲೆ ಬರೆಯಬೇಡವೆ ? ನಾನು ಬರೆಯಲಿಲ್ಲವೆಂದು ನಿನಗೆ ಕೋಪವೇ ? ಅಂದು ಬರೆದ ಓಲೆಯಲ್ಲಿ, ಬಾಳಿನ ಬೇಗೆಯ ಬರೆಗಾಗಿ ಏನೇನೊ ಬಡಬಡಿಸಿದ್ದೆನೆಂದು ತಿರಸ್ಕಾರ ತಳೆದಿರುವಿಯೋ ? ನಿನ್ನ ಮೌನವೆ ನನಗರ್ಥವಾಗದು ಅಯ್ಯೋ ! ಸುಖದುಃಖಗಳನ್ನು ನಿನ್ನನ್ನುಳಿದು ಇನ್ನಾರಲ್ಲಿ ತೋಡಿಕೊಳ್ಳಲಿ ! ನಿನ್ನಷ್ಟು ಸಹಾನುಭೂತಿಯಿಂದ ಅವುಗಳನ್ನಾರು ಪರೀಶೀಲಿಸುವರು ! ನೀನು ನನಗೊಬ್ಬ ಮಮತೆಯ ಮಾತೆ ! ಅಕ್ಕರೆಯ ಅಕ್ಕ !! ಸಲಿಗೆಯ ಸಂಗಾತಿ !!! ನಿನಗೂ ಹಲವಾರು ಕೆಲಸ. ಆದರೂ ಅದರಲ್ಲಿಯೇ ಒಂದಿಷ್ಟು ಬಿಡುವನ್ನು ಮಾಡಿಕೊಂಡು ಒಂದೆರಡು ಸಾಲು ಗೀಚಿದರೆ ನನಗಷ್ಟೇ ಸಾಕು; ನೊಂದು, ಬೆಂದು, ಬೇಗುದಿಗೊಂಡ ಹೃದಯಕ್ಕೆ ಆದರದ ಸಹಾನುಭೂತಿಯ ಮಾತು ಬೇಕಾಗುವದಾದರೂ ಎಷ್ಟು ? ಮನಸ್ಸಿದ್ದರೆ, ಮಮತೆ ಮಡಲಿನಲ್ಲಿ ಮಡಗಿದ್ದರೆ ಏನು ತಾನೇ ಅಸಾಧ್ಯ !

ಗೆಳತಿಯ ಮರುಓಲೆಯ ಮಾರ್ಗ ನಿರೀಕ್ಷಣೆಯಲ್ಲಿಯೇ ನೋಟ ನಿಲ್ಲಿಸಿರುವ,

ನಿನ್ನ ಪ್ರೇಮಪಾತ್ರಳಾದ,

**ಪ ಡು ಪೂ.**

೩

ಕುಕಿಲಾಪುರ,

“ **ತಾವರೇಸರ** ”

ಏಪ್ರೀಲ್ ೧೫, ೧೯೪೩.

—ಶೇಖರರಾಯರಿಗೆ ಕೃತಜ್ಞತೆಯ ವಂದನೆಗಳು,

ನಿಮ್ಮ ಹೆಸರಿನ ಹಿಂದೆ ಏನನ್ನು ಸೇರಿಸಿ ಸಂಬೋಧಿಸಬೇಕೆಂಬ ಮನಸ್ಸಿನ ತಿಕ್ಕಾಟದಲ್ಲಿಯೇ ಅದೆಷ್ಟೋ ಕಾಲಹರಣವಾಯಿತು. ಆದರೂ ಯಾವ

ನಿರ್ಣಯಕ್ಕೂ ಬರುವದಾಗಲಿಲ್ಲ. ಆದುದರಿಂದ ಆದಕ್ಕಾಗಿ ಅಷ್ಟು ತಾಣ ವನ್ನುಳಿದು ಬರೆದಿರುವೆ. ಈಗ ಅದು ಅಷ್ಟು ಮಹತ್ವದ್ದೂ ಅಲ್ಲ. ಆದ ರಿಂದಾಗಿ ನೀವು ನನ್ನನ್ನು ಎಷ್ಟು ಉದ್ಧಟಳೆಂದು ಕರೆದರೂ ನನ್ನ ಆಕ್ಷೇ ಪಣೆಯಿಲ್ಲ.

ನಿಮಗೆ ಬರೆಯುವ ಪತ್ರ ಇದೇ ಮೊದಲನೆಯದಾದರೂ ಇದೇ ಕಡೆ ಯದು !

ನನ್ನ ಮನಸ್ಸು, ಮೈಗಳೆರಡು ನಿಮಗಾಗಿ ಕೃತಜ್ಞತೆಯಿಂದ ಭಾರ ವಾಗಿ ಹೋಗಿವೆ. ನನ್ನ ಜೀವನಕ್ಕೆ ಅದೊಂದು ಗ್ರಹಣಕಾಲ ! ನನ್ನ ಬಾಳಿ ನಲ್ಲಿ ಕಾರ್ಗತ್ತಲು ಕವಿದಾಗ ನನ್ನ ಪಾಲಿಗಾಗಿ ಬಂದ ನೇಸರು ನೀವು ! ಏತಕ್ಕೊ ಹಲುಬಿ ಹಂಬಲಿಸಿ ಪಕಪಕ ಬಾಯಿಬಿಡುತ್ತಿದ್ದ ನನ್ನ ಹೃದಯ ವನ್ನು ತಣಿಸಿ, ಮಣಿಸಿ ನನ್ನ ಬಾಳಿಗೆ ಪುನರ್ಜನ್ಮವಿತ್ತ ಪರಬ್ರಹ್ಮರು ನೀವು !! ಹೆಚ್ಚೆಚ್ಚು ಹೇಳುವವರಲ್ಲಿ ಅರ್ಥವೇನಿದೆ ? ಒಳಗೇ ಅದುಮಿ, ಹಿಚುಕಿ ಹಿಡಿಯಲ್ಪಟ್ಟ ನನ್ನ ವ್ಯಕ್ತಿತ್ವವನ್ನು ಬಂಧಮುಕ್ತಗೊಳಿಸಿ, ಪೂರ್ತಿ ಅರಳಿಸಿದ ಅಮರರು ನೀವು !!! ನನ್ನ ನಡತೆಗಾಗಿ ನನಗೆ ಮೊದಲು ಸೋಜಿಗ ! ಕೌತುಕ !! ಆದರೆ ಅವರಲ್ಲಿ ಈಗ ಅದಾವ ಅಂಥ ಸೋಜಿಗವೂ, ಕೌತು ಕವೂ ಕಂಡುಬರುವದಿಲ್ಲ. ನಿಮ್ಮಿಂದಲೇ ಜಾಗೃತಹೊಂದಿ, ಚೇತನ ಪಡೆದು ನೆಗೆದೆದ್ದ ಕೋಮಲ ಭಾವಗಳೇ ನನ್ನನ್ನು ಈಗ ಒಬ್ಬ ಮನುಷ್ಯಳನ್ನಾಗಿ ಮಾಡಿದುದು !

ಆದುದೆಲ್ಲವೂ ಆಗಿಹೋಯಿತು ! ಮಿಂಚಿಹೋಗಿದೆ; ಚಿಂತಿಸಿದರೂ ಫಲ ವಿಲ್ಲ !!

ಕಾಲವೇ ಅಂಥದಿತ್ತು ! ನೀವೇ ಆಗಲಿ; ನಾನೇ ಆಗಲಿ ತಪ್ಪುಗಾರ ರೆಂದು ಹೇಳುವದು ಅತಿ ಆಯಾಸದ ಕೆಲಸ. ನೀವಂತೂ ತಪ್ಪುಗಾರರೇ ಅಲ್ಲ. ನಾನು ಸಾರಿಸಾರಿ ಹೇಳುತ್ತೇನೆ.

ನಿಮ್ಮಲ್ಲಿ ನನ್ನದೊಂದು ಕೊನೆಯ ಪ್ರಾರ್ಥನೆ ಅದನ್ನು ನಡೆಯಿಸಿ ಕೊಡಲೇಬೇಕು. ಸುಮ್ಮನೆ ಮನಸ್ಸಿನಲ್ಲಿ ಇಲ್ಲದ ವಿಚಾರಗಳಿಗೆ ಎಡೆಗೊಟ್ಟು ಕೊರಗಿ ಸೊರಗಬೇಡಿರಿ; ಅವರು ನಿಮ್ಮ ಮೇಲೆ ಎನಿತು ಸಂಶಯಪಟ್ಟರೂ

ತೆಗೆದುಕೊಳ್ಳಲಾರರು. ಏನೇನೊ ತಲೆಯಲ್ಲಿ ತುಂಬಿಕೊಂಡು ಆತ್ಮವಂಚನೆಯ ಸಾಧನ ಅರಸಬೇಡಿರಿ. ಧೈರ್ಯವನ್ನು ತಂದುಕೊಂಡು ಸ್ವಸ್ಥವಾಗಿ ಇರ್ರಿ. ನೀವು ತಿಳಿದುಕೊಂಡಂತೆ, ನಿಮ್ಮ ಜೀವದ ಗೆಳೆಯರಿಗೆ ವಂಚನೆ ಮಾಡಿಲ್ಲ. ಆದರ ವಿರುದ್ಧವಾಗಿ ಅವರಿಂದಲೂ ಸಾಧ್ಯವಾಗದ ಇನ್ನೂ ಹೆಚ್ಚಿನ ಕಾರ್ಯ ಸಾಧಿಸಿದ್ದೀರಿ. ನಿಮ್ಮೀರ್ವರಲ್ಲಿಯ ಮಮತೆ ಮಿತ್ರತ್ವಗಳು ಕುಗ್ಗಿ ಕರಗುವ ಬದಲು ಹಿಗ್ಗಿ ಹಿರಿಯದಾಗುವ ಕಾರ್ಯ ಕೈಕೊಳ್ಳಿರಿ.

ಮೊದಲು ಕೆಳೆಬಳ್ಳಿಯೇ ಇನ್ನು ಮುಂದೆಯೂ ನಿಮ್ಮೀರ್ವರನ್ನೂ ಮೊದಲಿಗಿಂತ ಬಲವಾಗಿ ಸುತ್ತುವದೆಂದು ನಂಬಿರುವ,

**ಪತಿತೆ—ಪದ್ಮಾ.**

*   *   *   *

೪

ಕುಕಿಲಾಪುರ,
**"ತಾವರೆಸರ"**
ಎಪ್ರಿಲ್ ೧೫, ೧೯೪೩,
ಸಂಜೆ ೫ ಘಂಟೆ.

**ಪತಿದೇವಾ !**

ಈ ರೀತಿಯಾಗಿ ನಿಮ್ಮನ್ನು ಕರೆಯಲೂ ನಾನು ಅರ್ಹಳಲ್ಲ! ಆದರೂ ಕರೆಯಬೇಕಾಗಿದೆ! ಕರೆಯುವದಾದರೂ ಇಂದೊಂದೇ ಸಲ !! ಕ್ಷಮೆಯಿರಲಿ!

ಇಂದು ಮಧ್ಯಾಹ್ನ ನಿಮ್ಮ ಪತ್ರ ಕೈಸೇರಿತು ನಾಳೆ ಸರಿಯಾಗಿ ಇದೇ ಸಮಯಕ್ಕೆ ನೀವು ಇಲ್ಲಿರುವಿರಿ. ನಿಮ್ಮ ಬರವನ್ನೇ ನಿರೀಕ್ಷಿಸುತ್ತ ಮಳೆಗಾಲ ಚಳಿಗಾಲಗಳೆರಡನ್ನೂ ನಿಮ್ಮನ್ನಗಲಿದ್ದ, ವಿರಹವ್ಯಥೆಯಿಂದ ಕೊರಗಿ ಕರಗಿದ ನಿಮ್ಮ ಸತಿಯು ಬಿಡುಗಣ್ಣವಳಾಗಿ ಬೀದಿಯ ಬಾಗಿಲಲ್ಲಿ ನಿಂತಿರಬಹುದಾಗಿತ್ತು! ಆ ಭಾಗ್ಯ ನನಗಿಲ್ಲ. ನನ್ನ ವರ್ತನ ಸರಿಯಾದುದೋ ಕೆಟ್ಟುದೋ ನನಗೆ ತಿಳಿಯದು. ಇನ್ನೊಬ್ಬರನ್ನು ಮಧ್ಯಸ್ಥಿಕೆಗಿಟ್ಟು ಅದನ್ನು ಓರೆಗೆ ಹಚ್ಚಿ ಏನನ್ನಾದರೂ ಮಾಡಿ ಅಪರಾಧದಿಂದ ನುಣಿಚಿಕೊಳ್ಳುವ

ಅತ್ಯಲ್ಪ ಆಶೆಯೂ ನನಗಿಲ್ಲ. ನನ್ನದು ಅಪರಾಧವೇ ಸರಿ. ಸಾನದಕ್ಕೆ ತಲೆವಾಗಲೇಬೇಕು. ಸಮಾಜದೃಷ್ಟಿಯಿಂದಲೂ ನನ್ನ ವರ್ತನ ಮಹಾಪ ರಾಧ! ನಿಮ್ಮ ಕೀರ್ತಿ ಧವಳಕ್ಕೆ ಕಪ್ಪು ಕಲಂಕ. ನಿಮ್ಮ ಮನೆತನಕ್ಕೆ ಅಲ್ಲದ ಸಲ್ಲದ, ಸರಿಹೋಗದ ಅಪಮಾನದ ಸಂಗತಿ! ಆದಕ್ಕಾಗಿ ನಿಮ್ಮಲ್ಲಿ ಕ್ಷಮೆ ಯಾಚಿಸದಷ್ಟು ನಾನು ಅಪರಾಧಿ. ಏಕೆಂದರೆ ನನ್ನಪರಾಧ ಅಕ್ಷಮ್ಯ! ಅಂತೆಯೇ ಯೋಚಿಸಿ, ಯೋಚಿಸಿ, ಕೊನೆಯ ಕಾರ್ಯಕ್ಕೆ ಕೈಕೊಟ್ಟಿದ್ದೇನೆ. ನನ್ನ ಅಪರಾಧ ಯಾರೂ ಅರಿಯರು. ನಾನು ಅಪರಾಧಿಯೆಂದರೂ ಇನ್ನೊ ಬ್ಬರು ನಂಬುವಂತಿಲ್ಲ. ಆದರೂ ನಾನು ನಿಜವಾದ ಅಪರಾಧಿಯೆಂದು ಅತಿ ವಿಷಾದದಿಂದ ಒಪ್ಪಿಕೊಳ್ಳಬೇಕಾಗಿದೆ. ಒಬ್ಬರನ್ನು ಹೊಂಚುಹಾಕಿ ವಂಚಿಸಿ, ಕಣ್ಣಲ್ಲಿ ಮಣ್ಣೆರಚುವ ಸಾಹಸವೂ ನನ್ನದಲ್ಲ; ಮನಸ್ಸೂ ನನಗಿಲ್ಲ. ಹೆಚ್ಚಿಗೆ ಬರೆಯಲಾರೆ. ನಿಮ್ಮ ಸತಿಯಾಗಿ ಹಿಂದೂ ಮಹಿಳೆಯಾಗಿ, ಉಗ್ರ ಪತಿ ವ್ರತೆಯಾಗಿ ಬಾಳುವ ಭಾಗ್ಯ ನನ್ನದಿಲ್ಲ. ಮಗು ನಿಮ್ಮದು! ಆದರೂ ನನ್ನ ಕರುಳಿನ ಕುಡಿ!! ಯಾರೂ ಅಲ್ಲಗಳೆಯದ ವಿಷಯವಿದು! ಸರಿಯಾಗಿ ಲಾಲನೆಪಾಲನೆ ಮಾಡಿರೆಂದು ಹೇಳಲು ನಾನೆಷ್ಟರವಳು! ಕೊನೆಯ ನಮ ಸ್ಕಾರಗಳು.

ಮತ್ತೆ ಬರೆಯಲು ಮನಸ್ಸಾಗುತ್ತಿದೆ!

ನಾನು ಗೈದ ಅಪರಾಧವ ಸುಳಿವನ್ನು ನಾನೇ ನಿಮ್ಮಿಂದ ಬಚ್ಚಿಟ್ಟರೆ, ಅದು ನಿಮಗೆ ತಿಳಿಯುವ ಬಗೆಯೆಂತು? ಏಕೆಂದರೆ ಅದನ್ನು ಇನ್ನೊಬ್ಬರು ನಿಮಗೆ ಚಾಡಿಚುಚ್ಚಲೂ ಅರಿಯರು. ಮನಸ್ಸಿನಲ್ಲಿಯೇ ಮುಚ್ಚಿಟ್ಟುಕೊಂಡು, ಇನ್ನೊಬ್ಬರಿಗೆ ವಂಚಿಸಿ, ಸಾಧುವೆಂದು ತೋರಿಸಿಕೊಳ್ಳುವದರಲ್ಲಿ ಯಾವ ಪ್ರಯೋಜನ!

ನನ್ನ ಅಪರಾಧ, ನೂರರಲ್ಲಿ ನೂರುಪಾಲು ನನ್ನದೆ; ಇನ್ನಾರೂ ಅದಕ್ಕೆ ಭಾಗಿಗಳಲ್ಲ. ಅದು ಎಷ್ಟಿದ್ದರೂ ನನ್ನೊಬ್ಬಳ ಮೇಲೆಯೇ ಇರಲಿ. ಸಾಮಾನ್ಯ ಸ್ನೇಹವು ಕೊಳೆಯುಲ್ಲಿ ಈ ರೀತಿಯಲ್ಲಿ ಕೊನೆಗೊಳ್ಳುವದೆಂದು ಯಾರು ತಿಳಿ ದಿದ್ದರು? ನಿಮ್ಮಿಂದ –ನಿಮ್ಮ ತಪ್ಪದರಲ್ಲಿದೆ; ನೀವು ತಪ್ಪುಗಾರರೆಂದು ನಾನು ಹೇಳುವುದಿಲ್ಲ—ಜಾಗ್ರತಗೊಳಿಸದೆ ಇದ್ದ ಸ್ನೇಹದ ಅತಿ ಸೂಕ್ಷ್ಮಭಾವನೆ ಗಳಾಗ ಹೆಡೆಯೆತ್ತಿ ಫೂತ್ಕರಿಸಿದವು. ಅವುಗಳ ಪ್ರಾಬಲ್ಯವೇ ಅತೃಪ್ತಿಗೆ ಅನ್ನ

ವಾಯಿತು; ಎಡೆಯಾಯಿತು; ಬೀಡಾಯಿತು. ಅದಾವುದರ ಅರಿವೇ ನನ ಗಾಗ ಇರಲಿಲ್ಲ. ನಿಕಟ ಸ್ನೇಹ ಸಂಬಂಧವು ಅವಶ್ಯವೆನಿಸಹತ್ತಿತು. ನಿಮ್ಮ ನ್ನುಳಿದು ಅನ್ಯರ ಪ್ರೇಮ ಜಾಲದಲ್ಲಿ, ಪ್ರೀತಿಯ ಬಲೆಯಲ್ಲಿ ಸಿಕ್ಕುಬಿದ್ದಿರುವೆ ನೆಂಬ ಅರಿವು ಎಷ್ಟೋ ದಿವಸ ನನಗೆ ಇರಲಿಲ್ಲ. ಅದರ ಸ್ಪಷ್ಟಚಿತ್ರ ಕಣ್ಮುಂದೆ ಕಟ್ಟಿದಾಗ ಮನಸ್ಸು ಖಿಶಿಗೊಂಡಿತು. ಆಶ್ಚರ್ಯ ಅದ್ಭುತಗಳೆ ರಡೂ ಏಕಕಾಲದಲ್ಲಿ ಎದ್ದು ನಿಂತವು. ಆಗ ನಿಮ್ಮಲ್ಲಿದ್ದ ನಿಷ್ಠೆ ಒಂದುಸಲ ಜಾಗೃತವಾಗಿ ನಿಮ್ಮ ಮೂರ್ತಿ ಕಣ್ಮುಂದೆ ಬಂದು ನಿಂತಿತು. ಆಗೆಲ್ಲಿ ನಮ್ಮೀ ರ್ವರ ಹೊಸ ಕೆಳೆತನ ಕೊನೆಗಾಣುವದೋ ಎಂಬ ಇನ್ನೊಂದು ಬಗೆಯ ಉಮ್ಮಳಿಕೆಯಿಂದ ಮನ ತಲ್ಲಣಿಸಿ ತತ್ತರಿಸಿತು. ಆಗ ನಾನಿದ್ದುದು ಅಧೋ ಗತಿಯ ಮಾರ್ಗದಲ್ಲಿ; ಮೇಲ್ಮಟ್ಟಕ್ಕೆ ಬರುವದು ನನಗೆ ಸಾಧ್ಯವಾಗಲಿಲ್ಲ. ಪ್ರತಿಯಾಗಿ ಆ ಕೊಳಚೆಯಲ್ಲಿಯೇ ಇನ್ನಿಷ್ಟು ಸಿಕ್ಕುಬಿದ್ದೆ. ಇದ್ದುದನ್ನು ಇದ್ದಂತೆ ಹೇಳಲು ನಾಚಿಕೆಯಾದರೂ ಯಾಕೆ ಬರಬೇಕು?—ಮೊದಮೊದಲು ಹೆಡೆಯನ್ನು ತುಳಿಸಿಕೊಂಡ ನಾಗರಹಾವಿನಂತೆ ಪ್ರತಿಭಟಿಸಿದೆನಾದರೂ ಕೊನೆ ಯಲ್ಲಿ ಹಲ್ಲು ಕೀಳಿಸಿಕೊಂಡು, ಪುಂಗಿಯ ಸ್ವರಕ್ಕೆ ಮೋಹವಾಗಿ ಹೆಡೆಹಾಕುವ ಹಾವಾಡಿಗನ ಹಾವಿನಂತಾದೆನು. ಆ ಸಮಯದಲ್ಲಿ ಮರ್ಯಾದೆಯ ಭಾವನೆ ಯಾಗಲೀ, ಮನೆತನದ ಮಮತೆಯಾಗಲೀ, ನೈತಿಕ ಕರ್ತವ್ಯದ ಅರಿವಾಗಲೀ, ಸಮಾಜದ ಭೀಕರ ಕಟ್ಟಳೆಯಾಗಲೀ, ಧರ್ಮದ ದರ್ಪನಾಗಲೀ ಅಡ್ಡ ಬಂದು ನನ್ನನ್ನು ಆ ಕಾರ್ಯದಿಂದ ತಡೆದು ಹಿಡಿಯಲಿಲ್ಲ. ಇಷ್ಟೆಲ್ಲ ನಡೆ ದುದು ಕೇವಲ ನನ್ನಲ್ಲಿಯ ಹಳೆಯ ಪ್ರೇಮದಲ್ಲುಂಟಾದ ಬದಲಾವಣೆ ಯಿಂದಲ್ಲ; ಅದೊಂದು ಹೊಸ ಬಗೆಯ ಪ್ರೇಮ ಮೊಳೆತು ಮರವಾಗಿ ನೆರ ವೇರಿತ್ತು. ಆದರೆ ಇಂದು ಅದು ಫಲಬಿಡಲು ಅವಕಾಶ ಕಲ್ಪಿಸಿಕೊಡಲು ಸುಸಂಧಿ ಸಿಕ್ಕುವದು ದುರ್ಲಭ.

ಕೊನೆಯಮಾತು: ಅವರು ಯಾರೆಂಬುದನ್ನು ಮಾತ್ರ ದಯವಿಟ್ಟು ಅರಸುವ ಗೋಜಿಗೆ ಹೋಗಬೇಡಿರಿ. ಅವೇನೂ ಅಂಥ ದೊಡ್ಡ ಕಾರ್ಯವೂ ಅಲ್ಲ. ನಿಮ್ಮ ದೊಡ್ಡಸ್ತಿಕೆ, ಹಿರಿತನಗಳಿಗೆ ಒಪ್ಪತಕ್ಕ ಮಾತೂ ಅಲ್ಲ. ಮೇಲಾಗಿ ನೀವೇ ಇನ್ನಷ್ಟು ಅತೃಪ್ತಿ ಆ ಸುಖಕ್ಕೆ ತುತ್ತಾಗುವಿರಿ. ನೀವು ಮಹಾತ್ಮಾಜಿಯವರ ಹದಿನಾರಾಣೆ ಭಕ್ತರು! ಅಪಕಾರಕ್ಕೆ ಅಪಕಾರ,

ಸೇಡಿಗೆ ಸೇಡು, ಕೇಡಿಗೆ ಕೇಡು ಯಾವನೂ ಮಾಡುವದುಂಟು! ಆದರೆ ಅಪಕಾರಕ್ಕೆ ಉಪಕಾರ, ಸೇಡಿಗೆ ನೆರವು, ಕೇಡಿಗೆ ಒಳಿತು ಬಗೆಯುವ ಜನರು ಕೇವಲ ಸ್ವಲ್ಪ ಜನರು ಮಾತ್ರ!! 'ಯಾರಾದರೂ ಒಂದು ಕೆನ್ನೆಗೆ ಹೊಡೆದರೆ ಪ್ರತಿಯಾಗಿ ಇನ್ನೊಂದು ಕೆನ್ನೆ ಮುಂದೆ ಮಾಡು' ಎಂದು ಎಷ್ಟು ಸಲ ನೀವೇ ಹೇಳಿಲ್ಲ. ನಿಮ್ಮ ತತ್ವ. ಆಚಾರ, ವಿಚಾರಗಳನ್ನು ಎತ್ತಿ ನಾನು ಇಲ್ಲಿ ಒರೆಗೆ ಹಚ್ಚುತ್ತಿರುವದಿಲ್ಲ.

ಈ ವಿಷಯವನ್ನು ಹತ್ತೂ ದಿಕ್ಕಿನಿಂದ ಕಂಡು, ಕಂಡುದನ್ನೇ ಪುನಃ ಪ್ರಮಾಣಿಸಿ ನೋಡಿ ಮನಸ್ಸಿಗೆ ಬಂದಂತೆ ಮಾಡಲು ನೀವು ಸರ್ವಾಧಿಕಾರಿಗಳು! ಆದರೆ ಅಪರಾಧಿ ನ್ಯಾಯಗದ್ದುಗೆಯ ಎದುರಿನಿಂದ ಜಾರಿದ್ದಾಳೆ: 'ತನಗೆ ಕಠಿಣ ಶಿಕ್ಷೆ ಒದಗಿಸುವರು; ಅದನ್ನು ಹೇಗೆ ಅನುಭವಿಸಲಿ ಎಂಬ ಹೇಡಿ ಮನಸಿನಿಂದಲ್ಲ, ಒಂದು ಸಮಯ ಅಪರಾಧಕ್ಕೆ ಕ್ಷಮೆ. —ಅದು ಸಾಧ್ಯವೇ ಇಲ್ಲ—ದೊರೆತರೆ ಆ ಹುಳುಮೊಗ ಮೆರೆಸುತ್ತ ಪುನಃ ಈ ಲೋಕದಲ್ಲಿ ಹೇಗೆ ಬಾಳಲೆಂ'ದು.

ಇನ್ನೊಮ್ಮೆಯಾದರೂ ನಿಮ್ಮನ್ನು ಕಾಣಬೇಕೆಂಬ ಉತ್ಕಟೇಚ್ಛೆಯಿದ್ದರೂ, ತಮ್ಮ ದರ್ಶನ ಪಡೆಯಲು ಅನರ್ಹಳಾಗಿರುವ,

ನಿರ್ಭಾಗ್ಯೆ,
ಪದ್ಮಾ.

# ಸ್ನೇಹ-ಸಂಧಿ

ಮನೆಗೆ ಬರುವಾಗಲೇ ಷಣ್ಮುಖನು ನಿಶ್ಚಯಿಸಿಬಿಟ್ಟಿದ್ದನು. ಮನೆ ಸೇರುತ್ತಲೇ ಅವನ ನಿಶ್ಚಯ ದೃಢವಾಗಿ ಬಿಟ್ಟಿತ್ತು! ಸಾವಿತ್ರಿಗೂ ಅವನು ಹೇಳಿದುದು ಸತ್ಯವಾಗಿ ತೋರಿತು. 'ಶಾರದೆಯು ಹೀಗಾಗಿ ಬಿಟ್ಟಳೇ' ಎಂದು ಒಂದು ಕ್ಷಣ ನಡುಗಿದಳು. ಶಾರದೆ ನಾದಿನಿ; ಮೇಲಾಗಿ ಜೀವದ ಗೆಳತಿ; ಸಾವಿತ್ರಿ ಆಕೆಯನ್ನು ಎಳೆತನದಿಂದಲೂ ಬಲ್ಲಳು; ಷಣ್ಮುಖನನ್ನು ಶಾರದೆಯ ಮನೆಗೆ ಕಳುಹಿಸುವವರಲ್ಲಿ ಸಾವಿತ್ರಿಯದೇ ರಾಯಭಾರವಾಗಿತ್ತು. ಒಂದು ವರುಷದಿಂದ ಬಿಟ್ಟುಬಿಡದೇ ಬಿನ್ನವಿಸಿಕೊಂಡು ಆಕೆ ನಿರಾಶೆಯಳಾಗಿದ್ದಳು. ಒಂದು ತಿಂಗಳ ಮೊದಲು ಶಾರದೆ ತವರೂರಿಗೆ ಬಂದಿದ್ದಳು. ಏನನ್ನಾದರೂ ಮಾಡಿ ಅಣ್ಣನನ್ನು ಅವಳ ಮನೆಗೆ ಕಳುಹಿಸಿಕೊಟ್ಟರೆ ಸಾಯುವ ತನಕ ಸಾವಿತ್ರಿಯ ಋಣದಲ್ಲಿ ಹೊರಳಾಡಿ ಸಾಯುವೆನೆಂದು ಶಾರದೆಯು ಅತ್ತು ಕರೆದು ಹೇಳಿಕೊಂಡಿದ್ದಳು. ಸಾವಿತ್ರಿಯಾದರೂ ತನ್ನ ಕೆಲಸ ಮಾಡಿದಳು. ಷಣ್ಮುಖನೂ ಯಾಂತ್ರಿಕವೆಂಬಂತೆ ಶಾರದೆಯ ಮನೆತನಕ ನಡೆದನು. ಶಾರದೆಯ ಮನೆ ಮುಟ್ಟಿದಾಗ ಶಾರದೆಯ ಸ್ವಾಮಿ ಮನೆಯಲ್ಲಿ ಇರಲಿಲ್ಲ. ಎತ್ತಲೋ ಹೋಗಿದ್ದನು. ಶಾರದೆ ಮಾಳಿಗೆಯಮೇಲೆ ಮಲಗಿದ್ದಳು. ಷಣ್ಮುಖನು ನಡುಮನೆಯಲ್ಲಿ ಅದೆಷ್ಟೋ ಹೊತ್ತು ಕಾಯ್ದನು. ಅದೆಷ್ಟು ಹೊತ್ತು ಕುಳಿತನೋ ಅವನಿಗೇ ಗೊತ್ತು! ಮೇಲೆ ಮುಖಮಾಡಿ ಮನೆಗೆ ಹೊಂದಿಸಿದ ಜಂತೆಗಳನ್ನು ಎಣಿಸಿದನು; ಸುತ್ತಲೂ ಕಣ್ಣರಳಿಸಿ ಮನೆಯನ್ನೆಲ್ಲ ಒಂದುಸಲ ದಿಟ್ಟಿಸಿದನು. ಪ್ರತಿಯೊಂದು ವಸ್ತುವನ್ನು ಈಕ್ಷಿಸಿದನು. ಗೋಡೆಗೆ ತಗಲುಹಾಕಿದ ಚಿತ್ರಗಳನ್ನೆಲ್ಲ ಕಣ್ಣಲ್ಲಿ ಕಣ್ಣಿಟ್ಟು ನೋಡಿದನು. ಕೆಳಗೆ ಮುಖಹಾಕಿ ಕುಳಿತ ಜಮಖಾನೆಯ ಕರೆಗಳನ್ನೆಲ್ಲ ಸರಿಮಾಡಿದನು. ಷಣ್ಮುಖನಿಗೆ ನೋಡುವದು, ಮಾಡುವದು ಎಲ್ಲ ಮುಗಿದಂತಾಯಿತು; ಶಾರದೆಯು ಕೆಳಗಿಳಿದು ಬರಲಿಲ್ಲ; ಬರುವ ಲಕ್ಷಣಗಳೂ ತೋರಲಿಲ್ಲ. ಆಕೆ

ಮಲಗಿ ನಿದ್ರೆಹೋದಳು. ಆಕೆಯ ಪತಿಯು ಕಚೇರಿಗೆ ಹೋಗಿದ್ದನು ಷಣ್ಮುಖನು ಕೂಗಿ ತಂಗಿಯನ್ನು ಕರೆದು ತಾನು ಬಂದುದನ್ನು ತಿಳುಹಿಸಲಿಲ್ಲ. ಎಷ್ಟೋ ಸಮಯದ ನಂತರ ಎದ್ದನು. ಮುಖವೆಲ್ಲ ರಣಗುಡುತ್ತಿತ್ತು! 'ಮನೆಗೆ ಬಂದವರನ್ನು ಮಾತನಾಡಿಸುವದಕ್ಕೂ ದಿಕ್ಕಿಲ್ಲವೇ' ಎಂದು ಮಿಡುಕಿದನು. ಅದೂ ಬರೀಯ ಬಂದು ಹೋಗುವದಕ್ಕಾಗಿ ಬಂದವನಲ್ಲ ಹತ್ತಾರು ವರುಷದಿಂದ ಸಿಡಿದು ಬೇರ್ಪಟ್ಟ ತಂಗಿಯೊಡನೆ ಇಂದು ಸ್ನೇಹದ ಸಂಧಾನಕ್ಕೆ ಬಂದಿದ್ದಾನೆ. ಸಂಧಾನಕ್ಕೆ ಬಂದ ರಾಯಭಾರಿಗೆ ಸ್ವಾಗತಿಸುವವರೇ ದಿಕ್ಕಿಲ್ಲದಾಗ ಅವನಿಗೆ ಹೇಗಾಗಬೇಡ! ತಂಗಿ ಮನೆಗೆ ಕರೆ ಕಳುಹಿಸಿಕೊಂಡೇ ತನಗೆ ಅಪಮಾನ ಮಾಡಿದಳೆಂದು ಊಹಿಸಿದನು. ತಾನು ಬಂದರೂ ಬರಮಾಡಿಕೊಳ್ಳಲಿಲ್ಲವೆಂದು ಅವನು ಹದಿನಾರಾಣೆ ನಂಬಿಬಿಟ್ಟನು. ಸ್ನೇಹದ ಸಂಧಿಗೆ ಸಾಗಿ ಬಂದವನು ಕಂಗಾಲನಾಗಿ ಕೋಪದ ಕಿಡಿಗಳನ್ನು ಹೊತ್ತಿಸಿಕೊಳ್ಳುತ್ತ ಮತ್ತಿನಿತು ಶಾರದೆಯಲ್ಲಿ ಹಗೆತನವನ್ನೇ ತುಂಬಿಕೊಂಡು ಮನೆಗೆ ಹೊರಟನು. ಪೇಟೆಯ ಕೂಟದಲ್ಲಿ ಶಾರದೆಯ ಗಂಡನು ದೂರದಿಂದಲೇ ಷಣ್ಮುಖನನ್ನು ಕಂಡನು ಅವನಿಗೂ ಗೊತ್ತು ಅಣ್ಣ ತಂಗಿಯರ ಸಂಬಂಧ; ಆಶ್ಚರ್ಯವಾಯಿತವನಿಗೆ! ಮದುವೆಯಾಗಿ ಆರೇಳು ವರುಷ ಸಂದಿದವು. ಒಂದಿನವೂ ಷಣ್ಮುಖ ಅವರ ಊರಿಗೆ ಹೋದವನಲ್ಲ. ಮದುವೆಯ ಸಮಯದಲ್ಲಿ ಮಾತ್ರ ಹೋಗಿದ್ದನು; ಯಾರ ಮುರವತ್ತು, ಒಲುಮೆ, ಬಲುಮೆಗಳಿಗೆ ಒಳಗಾಗಿ ಹೋಗಿದ್ದನೋ ತಿಳಿಯದು; ತಂಗಿಯ ಲಗ್ನದಲ್ಲಿ ಭಾವನಾದವನು ಪರಕೀಯರೊಬ್ಬರಂತೆ ಉಳಿದಿದ್ದನು. ಇದೆಲ್ಲವನ್ನೂ ಸೂಕ್ಷ್ಮವಾಗಿ ಗ್ರಹಿಸಿದ ಶಾರದೆಯ ಪತಿ, ಶಾರದೆ ತನ್ನ ಮನೆಗೆ ಬಂದಮೊದಲು ಒಂದಿನ ಈ ವಿಷಯವಾಗಿ ಕೇಳಿದ್ದನು. ಇಷ್ಟು ವರುಷದ ನಂತರ ಅಳಿಯನನ್ನು ತಮ್ಮೂರ ಪೇಟೆಯ ಕೂಟದಲ್ಲಿ ಕಂಡಾಗ ಹರುಷ ಉಕ್ಕಿತು; ಮಾತನಾಡಿಸಿ ಮನೆಗೆ ಕರೆದೊಯ್ಯಬೇಕೆಂದು ಅವನ ಬಳಿಗೆ ಭರದಿಂದ ಬಂದನು. ದೂರದಿಂದಲೇ ಮಾವನನ್ನು ಷಣ್ಮುಖನೂ ನೋಡಿದ್ದನು. ಹೇಗಾದರೂ ಮಾಡಿ ಅವನಿಗೆ ಕಾಣದಂತೆ ಪೇಟೆಯ ಜನ ಜಂಗುಳಿಯಲ್ಲಿ ನುಗ್ಗಿ ಪಾರಾಗಬೇಕೆಂದು ಯತ್ನಿಸಿದನು; ಮಾವನಿಗೂ ತಿಳಿಯಿತು; ಷಣ್ಮುಖನಿಗೆ ಯಶಸ್ಸು ದೊರೆಯಲಿಲ್ಲ. ಮಾವನ ಎದುರಿನಲ್ಲಿ ಬಂದು ನಿಂತನು. ಮನೆಗೆ ಬಂದು ಹೋಗಲು

ಕೇಳಿಕೊಂಡಾಗ ಷಣ್ಮುಖನು ತಾನು ಇದೇ ಈಗ ಮನೆಯಿಂದ ಬಂದಿರುವ ದಾಗಿಯೂ ಊರಿಗೆ ಹೋಗಲಿಕ್ಕೆಂದು ರೇಲ್ವೆ ನಿಲ್ಮನೆಗೆ ಹೊರಟಿರುವೆನೆಂದೂ ಹೇಳಿದನು. ಅಣ್ಣ-ತಂಗಿಯರಲ್ಲಿ ಒಮ್ಮೆ ಸ್ನೇಹದ ಸಂಧಿಯು ನಡೆದು ಹೋಯಿತೆಂದು ಆನಂದಿತನಾಗಿ ಅಳಿಯನನ್ನು ಆದರದಿಂದ ಬೀಳ್ಕೊಟ್ಟು ಮನೆಗೆ ನಡೆದನು. ಶಾರದೆಯು ಬಾಗಿಲಲ್ಲಿಯೇ ಅಂದು ಪತಿದೇವರ ಮಾರ್ಗ ನಿರೀಕ್ಷಿಸುತ್ತ ನಸುನಗುತ್ತ ಬಿಡುಗಣ್ಣವಳಾಗಿ ನಿಂತಿದ್ದಳು. ದೂರದಿಂದಲೇ ಹರುಷೋತ್ಸಾಹಗಳಿಂದ ಮುಗುಳು ನಗುತ್ತ ನಿಂತ ತನ್ನ ಲಕ್ಷ್ಮಿಯನ್ನು ಕಂಡು ಆತನು ಹಿಗ್ಗಿ ಹೀರೆಕಾಯಾದನು. ಮನದಲ್ಲಿ ಅಣ್ಣ ತಂಗಿಯರಲ್ಲಿ ಮೂಡಿಸಿದ ಸ್ನೇಹಸಂಬಂಧಕ್ಕೆ ಆಗ ಎರಡೂ ಪಕ್ಷದವರಿಂದ ರುಜು ಹಾಕಿಸಿ ಕೊಂಡಂತಾಯಿತು.

ಮನೆಗೆ ಸೇರುತ್ತಲೇ ಎಲ್ಲವೂ ಬುಡಮೇಲಾದಂತಾಯಿತು. ಶಾರ ದೆಯು ಅಣ್ಣ ಮನೆಗೆ ಬಂದಿಲ್ಲವೆಂದೇ ಸಾಧಿಸಿದಳು. ಆಕೆಯ ಅಣ್ಣನೇ ಸ್ವತಃ ತನ್ನೆದುರಿನಲ್ಲಿ ಹೇಳಿರುವನೆಂದು ಆಕೆಯ ಪತಿಯೇ ಹೇಳಿದಾಗಲೂ ಅಣ್ಣ ಸುಳ್ಳು ಹೇಳಿದನೆಂದೇ ಭಾವಿಸಿದಳು. ಮತ್ತೆ ತವರೂರಿನ ನೆನಹು ಉಕ್ಕಿತ್ತು; ಹಿಂದಿನ ದಿನಗಳು ಮುಂದೆ—ಮನದೆದುರಿನಲ್ಲಿ ಮೂಡಿದವು. ಸಾವಿತ್ರಿಯೂ ಸಾಗಿಹೋದಳು. 'ತನ್ನ ಹಣೆಬರಹದಲ್ಲಿ ಅಣ್ಣನೊಡನೆ ಅಕ್ಕರೆಯಿಂದ ಇರುವದೇ ಬರೆದಿಲ್ಲ. ಅವರಾದರೂ ಸುಖದಿಂದಿರಲಿ; ತಾವಾ ಯಿತು; ತಮ್ಮ ಹೆಂಡಿರು ಮಕ್ಕಳಾಯಿತು. ಅಕ್ಕತಂಗಿಯರೇನು ಗಂಡಂದಿರ ಮನೆಗೆ ಹೋದಮೇಲೆ ಸಂಬಂಧ?' ಎಂದು ಪರಿಪರಿಯಾಗಿ ಸಮಾಧಾನ ಹಚ್ಚಿಕೊಂಡಳು. ಪ್ರತಿ ಮಾತಿನಲ್ಲಿಯೂ ಆಕೆಯು ಹೆಮ್ಮೆ ಹೆಮ್ಮರವಾಗಿ ಕಂಗೊಳಿಸುತ್ತಿತ್ತು. 'ಯಾರು ತನ್ನೊಡನೆ ಸಲುಗೆಯಿಂದಿರದಿದ್ದರೂ ಸರಿ; ತನ್ನ ಪತಿದೇವ ತನ್ನನ್ನು ಪ್ರೀತಿಸುತ್ತಾನಲ್ಲವೇ? ಅಷ್ಟೇ ಸಾಕು' ಎಂದು ತಿಳಿದುಕೊಂಡಂತಿತ್ತು.

ಊಟವೇನೋ ಮುಗಿಯಿತು; ಕೆಲಸದ ಹುಡುಗನು ಹೊರಗೆ ಹೋದ ವನು ಅದೇ ಈಗ ಕಳ್ಳನಂತೆ ಹೆಜ್ಜೆಹಾಕುತ್ತ ಒಳಗೆ ಬಂದನು. ಶಾರದೆಯು ಅಣ್ಣನ ಮೇಲಿನ ಕೋಪವನ್ನು ಆ ಬಡಪಾಯಿಯ ಮೇಲೆ ತೀರಿಸಿಕೊಳ್ಳಲು ಸಿದ್ಧಳಾದಳು; ಅವನಲ್ಲಿ ಏನೇನೋ ತಪ್ಪುಗಳನ್ನು ಅರಸಿದಳು; ತಪ್ಪುಗಳಿ

ಗೇನೂ ಕೊರತೆಯಿರಲಿಲ್ಲ; ಕೆಲಸಕ್ಕೆ ನಿಂತು ಆ ಹುಡುಗನು ಸುಮಾರು ಆರೇಳು ವರುಷಗಳಾದರೂ ಆಗಿವೆ. ಶಾರದೆಯು ಮದುವೆ ಮಾಡಿಕೊಂಡು ಈ ಮನೆಗೆ ಬರುವ ಮೊದಲೇ ಈ ಮನೆಯಲ್ಲಿ ಅವನು ಊಳಿಗದವನಾಗಿ ನಿಂತಿದ್ದನು. ಆಗಿನ್ನೂ ಅವನು ಆರೇಳು ವರುಷದ ಹಸುಗೂಸು. ಅಂದಿನಿಂದ ಶಾರದೆಯು ಒಡಹುಟ್ಟಿದ ತಮ್ಮನಂತೆ ಅಕ್ಕರೆಯಿಂದ ಸಲುಹಿದ್ದಾಳೆ. ಎಂದೂ ಅವನನ್ನು ಆಕೆ ಒಬ್ಬ ಆಳಿನಂತೆ ಕಾಣಲಿಲ್ಲ. ಆದರೂ ಆ ಹುಡುಗನು ಒಂದಿನವೂ ಮನೆಯವರಂತೆ ನಡೆದುಕೊಳ್ಳಲಿಲ್ಲ. ತನ್ನ ಪಾಲಿನ ಕೆಲಸಗಳನ್ನು ತೀರಿಸಿಕೊಂಡು ಉಂಡುಟ್ಟು, ಒಬ್ಬ ಆಳಿನಂತೆಯೇ ಇದ್ದುಬಿಟ್ಟನು. ಅವನೂ ಕಡಿಮೆಯವನಲ್ಲ. ತುಂಬಾ ಉಡಾಳ ಮೇಲಾಗಿ ಸೋಮಾರಿ; ತನಗೆ ಬೇಡವಾದಾಗ ಎಷ್ಟೋಸಲ ಕೆಲಸಕ್ಕೆ ಚಕ್ರ ಕೊಡುತ್ತಿದ್ದನು; ವರುಷಾರುತಿಂಗಳಿಗೊಮ್ಮೆ ಮನೆ ಬಿಟ್ಟು ನಾಲ್ಕೆಂಟು ದಿನ ಓಡಿಯೂ ಹೋಗುತ್ತಿದ್ದನು. ಆದರೂ ಶಾರದೆಯು ಅವನಿಗೆ ಎಂದೂ ಸಿಟ್ಟು ಮಾಡಿರಲಿಲ್ಲ. ಅವನು ಕೆಲಸಕ್ಕೆ ಚಕ್ರಕೊಟ್ಟಾಗ "ಪಾಪ! ಸಣ್ಣ ಹುಡುಗ; ಒಂದು ದಿನವಾದರೂ ಬಿಡುವು ಬೇಡವೇ ?" ಎಂದು ತಾನೇ ಎಲ್ಲ ಕೆಲಸ ಮಾಡಿಕೊಳ್ಳುತ್ತಿದ್ದಳು. ಅವನು ಮನೆ ಬಿಟ್ಟು ಓಡಿ ಹೋದಾಗ ಆಕೆಯೂ ಅನ್ನ ನೀರು ಬಿಟ್ಟು ಉದಾಶೀನಳಾಗಿಬಿಡುತ್ತಿದ್ದಳು. ಅವನನ್ನು ತಿರುಗಿ ಹುಡುಕಿಸಿ ತರುವತನಕ ಆಕೆಗೆ ಸಮಾಧಾನವೇ ಆಗುತ್ತಿರಲಿಲ್ಲ. ಆದರೆ ಇಂದು ಒಂದು ಸಣ್ಣ ತಪ್ಪಿಗಾಗಿ ಅವನಮೇಲೆ ಹರಿಹಾಯ್ದಳು ! ಸಂಜೆಯಮುಂದೆ ಎಲ್ಲಿಗೋ ತಿರುಗಾಡಲು ಹೋಗಿದ್ದನು. ಬರುವಾಗ 'ಸಿನೇಮಾ' ಮಂದಿರದ ಎದುರಿನಲ್ಲಿ ಹಾಯ್ದು ಬಂದನು ಆ ದಿವಸ ಒಂದು 'ಜಂಗೀ ಮಾರಾಮಾರಿ' ಚಿತ್ರಪಟ ಬಂದಿತ್ತು ! ಹೇಗಾದರೂ ಮಾಡಿ ಆ ದಿನ ಸಿನೇಮಾಕ್ಕೆ ಹೋಗಿಯೇ ತೀರಬೇಕೆಂದು ಮನೆಗೆ ಬಂದನು; ದಾರಿಯಲ್ಲಿಯೇ ಶೇಖಮಹಮ್ಮದನಾಗಿದ್ದನು; 'ಮನೆಗೆ ಹೋಗಿ ತೀವ್ರ ಕಸಗೂಡಿಸುವದು; ನಂತರ ಶಾರದೆಯ ಬಳಿಗೆ ಹೋಗಿ ಸಣ್ಣ ಮೋರೆ ಹಾಕಿಕೊಂಡು ನಿಲ್ಲುವದು; ಆಗ ಆಕೆ ರಮಿಸಿ ಏನಾಗಿದೆಯೆಂದು ಕೇಳುತ್ತಾಳೆ; ಆಗ ಮೆಲ್ಲನೆ ಸಿನೇಮಾಕ್ಕೆ ರೊಕ್ಕ ಕೇಳುವದು; ಒಂದುವೇಳೆ ಕೊಡದಿದ್ದರೆ ಕಾಡಿ, ಬೇಡುವದು;'

ಮನೆಗೆ ಬಂದಾಗ ಅವನಿಗೂ ಆಶ್ಚರ್ಯ !! ಷಣ್ಮುಖನನ್ನು ಕಂಡನು ಷಣ್ಮುಖನು ಒಮ್ಮೆಯೂ ಬಾರದಿದ್ದರೂ ಈಗಾಗಲೇ ಶಂಕರನು (ಆ ಹುಡುಗನ ಹೆಸರು) ಶಾರದೆಯೊಂದಿಗೆ ಆಕೆಯ ತವರೂರಿಗೆ ಹತ್ತಾರು ಸಲ ಹೋಗಿದ್ದನು. ಅಲ್ಲಿಯ ಜನರೆಲ್ಲ ಅವನಿಗೆ ಗೊತ್ತು ! ಸಿನೇಮಾಕ್ಕೆ ಹೋಗುವ ಉಬ್ಬಿನಲ್ಲಿ ಷಣ್ಮುಖನು ಇದೇ ಮೊದಲು ಮನೆಗೆ ಬಂದಿರುವನೆಂಬುದು ತಿಳಿಯದೇ ಹೋಯಿತು; ಷಣ್ಮುಖ ಬಂದುದುದು ಶಾರದೆಗೆ ತಿಳಿದಿದೆ; ಆಕೆ ಅವನಿಗಾಗಿ ತಿನ್ನಲು ಏನನ್ನಾದರೂ ತಯಾರಿಸುತ್ತಿರಬಹುದೆಂದು ತಿಳಿದನು. ತೀವ್ರವೇ ತನ್ನ ಕೆಲಸ ಮುಗಿಸಿಕೊಳ್ಳಬೇಕಾಗಿತ್ತು ! ಗಡಿಯಾರವು ಆರು ಘಂಟೆಗಳನ್ನು ಬಡೆಯಿತು. ಕೈಯಲ್ಲಿ ಕಸಬರಿಗೆ ಹಿಡಿದನು. ಆದರೆ ನಡುಮನೆಯಲ್ಲಿ ಕುಳಿತ ಷಣ್ಮುಖನನ್ನು ನೋಡುತ್ತಲೇ ಅವನನ್ನು ಎಬ್ಬಿಸಿ ಕಸ ಗೂಡಿಸುವದು ತರವಲ್ಲವೆಂದು ತಿಳಿದನು. ಬೇರೆ ಕೋಣೆಗಳನ್ನಾದರೂ ಗೂಡಿಸಬಹುದಾಗಿತ್ತು. ಆದರೆ ಆಗಲೇ ಸಿನೇಮಾ ಪ್ರಾರಂಭವಾಗುವದಕ್ಕೆ ಸಮಯವಾದ್ದರಿಂದ ಮನಸ್ಸೆಲ್ಲ ಚಿತ್ರಮಂದಿರದ ಎದುರಿನಲ್ಲಿಯ ಜನರ ಗುಂಪಿನಲ್ಲಿತ್ತು; ಅಂದು ಕಸಗೂಡಿಸುವದನ್ನು ಬಿಟ್ಟರಾಯಿತೆಂದು ಮನಸ್ಸಿನಲ್ಲಿ ನಿಶ್ಚಯಿಸಿದನು; ಹೇಗೋ ಇಂದು ಊರಿನಿಂದ ಬೀಗರು ಬಂದಿದ್ದಾರೆ; ಮನೆಯಲ್ಲಿ ಸಿಟ್ಟುಮಾಡಲಾರರು ಎಂದು ನಿರ್ಧರಿಸಿ, ರೊಕ್ಕಕ್ಕಾಗಿ ಒಮ್ಮೆ ಅಡಿಗೆ ಮನೆಗೆ ನಡೆದನು. ಅಲ್ಲಿ ಶಾರದೆಯಿರಲಿಲ್ಲ. ಅಟ್ಟದ ಮೇಲಿರಬಹುದೆಂದು ಅಲ್ಲಿಗೆ ಹೊರಟಿದ್ದನು; ಷಣ್ಮುಖನೇ ಕರೆದು ಮಾತನಾಡಿಸಿದನು. ಷಣ್ಮುಖನೇನೋ ಅವನನ್ನು ಮಾತನಾಡಿಸಿದನು. ಆದರೆ ಶಂಕರನು ಮಾತನಾಡಿದ್ದು ಚಿತ್ರದ ಬಗೆಯಾಗಿಯೇ ! ಅವನಿಂದಲೇ ನಾಲ್ಕಾಣೆ ಎಬ್ಬಿಸಿಕೊಂಡು ಶಾರದೆಗೆ ತಿಳುಹಿಸದೆಯೇ ಶಂಕರ ಸಿನೇಮಾಕ್ಕೆ ಜಿಗಿದಿದ್ದನು. ಮನೆಗೆ ಬಂದೊಡನೆಯೇ ಶಾರದೆಯು ಸಂಜೆಯ ಮುಂದೆ ಕಸವನ್ನೇಕೆ ಗೂಡಿಸಲಿಲ್ಲವೆಂದು ಕೇಳಿದಳು; ಶಂಕರನಲ್ಲಿ ಉತ್ತರವು ಸಿದ್ಧವೇ ಇತ್ತು !

“ಅಣ್ಣ ಬಂದಿದ್ದರು, ಅವರು ನಡುಮನೆಯಲ್ಲಿ ಕಳಿತಿರಲು ಹೇಗೆ ಅವರನ್ನೆಬ್ಬಿಸಿ ಗೂಡಿಸುವದೆಂದು ಬಿಟ್ಟೆ !”

ಶಾರದೆ ಮತ್ತೆ ಮತ್ತೆ ಕೆಲವು ಪ್ರಶ್ನೆಗಳನ್ನು ಕೇಳಿಕೊಂಡು ಅಣ್ಣನು ಬಂದಿದ್ದನ್ನು ನಿಶ್ಚಯಿಸಿಕೊಂಡಳು; ಎಲ್ಲಕ್ಕಿಂತಲೂ ಹಿರಿದಾದ ಸಾಕ್ಷಿ

ಇನ್ನೊಂದು ದೊರೆಯಿತು; ಷಣ್ಮುಖನು ತನ್ನ ಕೊಡೆಯನ್ನು ಮರೆತು ಹೋಗಿದ್ದನು. ಅದು ಸಂಜೆಗೆ ಶಾರದೆಯ ಕಣ್ಣಿಗೆ ಬಿದ್ದಿತು; ಶಾರದೆಯ ಜೀವಕ್ಕೆ ಚೇಳು ಕಚ್ಚಿದಂತಾಯಿತು; ಭರ್‍ರನೆ ಕುಗ್ಗಿದಳು. ಮಾಳಿಗೆಯ ಮೇಲೆ ಹೋಗಿ ಮಲಗಿದಳು. ಮುಂಜಾನೆ ಆಕೆ ಹಾಸಿಗೆಯಿಂದ ಏಳುವದರೊಳಗೆ ಒಂಭತ್ತು ಬಾರಿಸಿತ್ತು! ಮೈಯಲ್ಲಿ ನೆಟ್ಟಗಿದ್ದಂತೆನಿಸಲಿಲ್ಲ; ನಾಲ್ಕಾರು ಸಲ ಕನಸಿನಲ್ಲಿ ಕನವರಿಸಿದ್ದಳು. 'ಮನೆಗೆ ಅಣ್ಣ ಬಂದಿದ್ದರೂ ಮಾತನಾಡಿಸಲಿಲ್ಲ'ವೆಂದು ತನ್ನನ್ನೇ ತಾನು ಶಪಿಸಿಕೊಂಡಳು 'ಈ ಹಾಳು ನಿದ್ದೆಯಾದರೂ ಏತಕ್ಕೆ ಬಂದಿತ್ತೆ'ಂದು ಹಲವಾರು ಸಲ ಹಳಹಳಿಸಿದಳು. ಮರು ದಿವಸ ಪಟ್ಟು ಹಿಡಿದು ತವರೂರಿಗೆ ಹೊರಟೇ ಬಿಟ್ಟಳು.

ಒಂದೆರಡು ದಿನಗಳೆದವು. ಶಾರದೆ ತಿರುಗಿ ಬಂದಳು. ಸಾವಿತ್ರಿಯೂ ಸಂಗಡ ಬಂದು ನಾಲ್ಕೆಂಟು ದಿವಸ ಇದ್ದು ಹೋದಳು. ಶಾರದೆಯು ತವರಿನಿಂದಬಂದವಳು ಏಳಿಗೆ ಹೊಂದಲಿಲ್ಲ. ತವರಿನಲ್ಲಿ 'ತನ್ನ ಮನೆಗೆ ಅಣ್ಣ ಈಗಾಗಲೇ ಬಂದಿದ್ದಾನೆ, ಸ್ನೇಹ-ಸಂಧಿಯಾದಂತಾಗಿದೆ' ಎಂದು ಹೆಮ್ಮೆಯಿಂದ ಅವನನ್ನು ಸೂಚಿಸಹೋದರೆ ಅವನು ಆಕೆಗೆ ಆಡಬಾರದ ಮಾತುಗಳನ್ನಾಡಿದನು

"ಮನೆಗೆ ಬಂದು ಐದಾರು ತಾಸು ಕಾಯ್ದರೂ ಮಾತನಾಡಿಸದಷ್ಟು ಸೊಕ್ಕು ಬಂದಿದೆ!........" ಇನ್ನೂ ಬಗೆಬಗೆಯಾಗಿ ಆಪಾದನೆ ಹೊರಿಸಿದನು. ಶಾರದೆಗೆ ಇದೆಲ್ಲವನ್ನೂ ಸಹಿಸುವದಾಗಲಿಲ್ಲ; ತಾನೂ ನಾಲ್ಕಾರು ಎದುರು ಮಾತನಾಡಿದಳು; ಹಗೆತನ ಹಿರಿದಾಯಿತು; ಷಣ್ಮುಖನ ಸಿಟ್ಟು ಸ್ಥಿಮಿತಕ್ಕೆ ಬರಲಿಲ್ಲ, ಶಾರದೆ ಕ್ಷಣಾರ್ಧದಲ್ಲಿ ತೆಪ್ಪಗಾದಳು. ಸಾವಿತ್ರಿ ಸಮಾಧಾನ ಪಡಿಸಿದಳು; ಶಾರದೆ ಶಾಂತಳಾಗಿ ವಿಚಾರಿಸಿ ನೋಡಿದಳು. ತನ್ನದೇ ತಪ್ಪಾಗಿ ಕಂಡುಬಂತು; ಅವಳೇನೂ ಬೇಕಾಗಿಯೇ ಮನೆಗೆ ಬಂದ ಅಣ್ಣನನ್ನು ಮಾತನಾಡಿಸದೆ ಬಿಟ್ಟವಳಲ್ಲ. ಆದರೆ ಅದು ಹೇಗೆ ಅವನಿಗೆ ತಿಳಿಯಬೇಕು? ಸರಿ ನಿರ್ಧರಿಸಿದಳು. ಅಣ್ಣನಲ್ಲಿ ಕ್ಷಮೆ ಬೇಡಿದಳು. ಸಾವಿತ್ರಿ ಸಂಧಾನಕ್ಕೆ ಮತ್ತೆ ಟೊಂಕ ಕಟ್ಟಿದಳು; ಆದರೆ ಸಂಧಾನ ಸಫಲವಾಗಲಿಲ್ಲ; ಒಂದು ಪಕ್ಷದವರು ಅನಿರ್ಬಂಧವಾಗಿ ಶರಣು ಬರಲು ಸಿದ್ಧರಾದರೂ ಎದುರು ಪಕ್ಷದವರು ಸಂಧಾನಕ್ಕೆ ಸಿದ್ಧರಿರಲಿಲ್ಲ.

* * * *

೨

ಡಾಕ್ಟರರೂ ನಿರಾಶಯರಾಗಿಬಿಟ್ಟರು. ಎಲ್ಲ ಮದ್ದುಗಳೂ ಮುಗಿದವು; ಮನಕ್ಕೆ ಬಲವಾದ ಆಘಾತವಾಗಿದೆಯೆಂದು ಅಭಿಪ್ರಾಯಪಟ್ಟರು. ಆಕೆ ಬದುಕುವ ಆಶೆಯೇ ಉಳಿಯಲಿಲ್ಲ; ಬೇಡಿದುದೆಲ್ಲವನ್ನೂ ಕೊಟ್ಟುಬಿಡಲು ಅಣತಿ ವಿಧಿಸಿದರು. ಇನ್ನೆರಡು ಮೂರು ದಿನಗಳಲ್ಲಿ ಆಕೆಯದು ಎಲ್ಲವೂ ಮುಗಿದುಬಿಡುವದೆಂದೇ ಎಲ್ಲರಿಗೆ ನಿಶ್ಚಯವಾಗಿ ಹೋಯಿತು. ಯಾವಾಗಲೂ ಆಕೆಗೆ ಮೈಮೇಲೆ ಎಚ್ಚರವೇ ಇರುತ್ತಿರಲಿಲ್ಲ; ಆರು ತಿಂಗಳಿಂದ ಸರಿಯಾಗಿ ಒಂದಿನವೂ ಒಂದು ತುತ್ತು ಅನ್ನ ತಿನ್ನಲಿಲ್ಲ; ಒಂದು ಗುಟುಕು ನೀರು ಕುಡಿಯಲಿಲ್ಲ. ಮೈ ತಿಳಿದಾಗ ಆಕೆ 'ಅಣ್ಣ ಬಂದನೇ?' ಎಂದು ಕೇಳಿಸುತ್ತಲೂ ಕಣ್ಣರಳಿಸಿ ನೋಡಿ ನಿರಾಶಯುಳಾಗಿ ಮತ್ತೆ ಎಚ್ಚರದಪ್ಪಿ ಬಿದ್ದುಬಿಡುತ್ತಿದ್ದಳು. ಏಳೆಂಟು ದಿನಗಳಿಂದ ನಾಗಮ್ಮ (ಶಾರದೆಯ ತಾಯಿ) ಮತ್ತು ಸಾವಿತ್ರಿ ಇಬ್ಬರೂ ಆಕೆಯ ಹಾಸಿಗೆಯ ಪಕ್ಕ ಬಿಟ್ಟು ಸರಿಯಲಿಲ್ಲ; ಶಾರದೆಯ ಸ್ವಾಮಿಗೆ ಮಂಕುಹಿಡಿದು ಬಿಟ್ಟಿತ್ತು. ಸುಮ್ಮನೆ ಒಂದು ಮೂಲೆ ಹಿಡಿದು ಕುಳಿತುಬಿಡುವನು ದಿನಕ್ಕೆ ಸಾವಿರ ಸಲ 'ಅಣ್ಣಾ! ಅಣ್ಣಾ!!' ಎಂದು ಶಾರದೆ ಬಡಬಡಿಸುವದನ್ನು ಕೇಳಿ ಅವನಿಗೆ ಸಾಕಾಗಿ ತಲೆ ತಿರುಗಿ ಹೋಗಿತ್ತು! ಹಿಂದೆ "ನಿನಗಾಗಿ ಶಾರದೆ ಹಗಲಿರುಳು ಬಡಬಡಿಸುತ್ತಾಳೆ. ಆ ದಿನದ ವಿಷಯವನ್ನೇ ವಿಪರೀತ ಮಾಡಿಕೊಂಡು ಹಾಸಿಗೆ ಹಿಡಿದಿದ್ದಾಳೆ, ಆಕೆಯ ಸ್ಥಿತಿ ಚಿಂತಾಜನಕವಾಗಿದೆ. ಈ ಸಮಯದಲ್ಲಿ ನಿನ್ನ ಹಟ ಬೇಡ; ನಿರ್ದಯನಾಗಬೇಡ!" ಎಂದು ಹಲವಾರು ಸಲ ಸ್ವತಃ ಹೋಗಿ ಬಂದಿದ್ದನು. ಆದರೂ ಷಣ್ಮುಖನು ಬದಲಾಗಲಿಲ್ಲ. ಎಂದಿನಂತೆ ಇದ್ದುಬಿಟ್ಟದ್ದನು. ಅದರಿಂದಾಗಿ ಶಾರದೆಯ ಗಂಡನ ತಲೆ ತಿರುಗಿಹೋಗಿತ್ತು. ಅದಕ್ಕಾಗಿ ಎಷ್ಟೋ ಸಲ ಒದರಾಡಿದ್ದನು. ಹಲವಾರು ಸಲ ಕಠೋರ ನುಡಿಗಳನ್ನೂ ಆಡಿದ್ದನು.

"ಹಗಲೂ ಇರುಳೂ ಅವನನ್ನು ಕೂಗಿ, ಕೂಗಿ ನೀನು ಸತ್ತು ಹೋಗು! ಯಾರು ಆವನು ನಿನಗೆ? ಅಣ್ಣನಾಗಿದ್ದರೆ ಇಷ್ಟರಲ್ಲಿಯೇ ಬರುತ್ತಿರಲಿಲ್ಲವೇ? ತಂಗಿಯೊಬ್ಬಳ ಹರಣ ಹಾರಿಹೋಗುವಾಗಲಾದರೂ ಅಣ್ಣ ಬರದೆ ಇರುತ್ತಿದ್ದನೇ? ನೀವೆಲ್ಲ ಸೇರಿ ನನಗೊಂದು ಗೋಳು!"

ಶಾರದೆ ಸಾವಿತ್ರಿಯನ್ನು ತಬ್ಬಿಕೊಂಡು ಅಂಥ ಸಮಯಗಳಲ್ಲಿ ಅಳುತ್ತಿದ್ದಳು. ಧ್ವನಿಯುಂತೂ ಹೊರಡುತ್ತಿರಲೇ ಇಲ್ಲ; ಕಣ್ಣುಗಳಿಂದ ನೀರು ಮಾತ್ರ ಧಾರಾಳವಾಗಿ ಸುರಿಯುತ್ತಿದ್ದವು ಸ್ವತಃ ಸಾವಿತ್ರಿ ನಾಗಮ್ಮರೇ ನಿಂತು ಷಣ್ಮುಖನನ್ನು ಮರೆತುಬಿಡು ಎಂದು ಕಳಕಳಿಯಿಂದ ಹೇಳಿ ನೋಡಿದರು; ಅಂಥ ಸಮಯಗಳಲ್ಲಿ ಶಾರದೆ ಮಾತನಾಡುತ್ತಿರಲಿಲ್ಲ; ಎಲ್ಲಕ್ಕೂ ಆಕೆಯ ಕಣ್ಣೀರುಗಳೇ ಉತ್ತರ ಹೇಳುತ್ತಿದ್ದವು.

೩

ಒಂದು ಅತಿ ಸಣ್ಣ ವಿಷಯವು ಇಷ್ಟು ದೊಡ್ಡದಾಗುತ್ತದೆಂದು ಯಾರು ತಿಳಿದಿದ್ದರು? ಒಮ್ಮೆ ಹೈಸ್ಕೂಲಿನಲ್ಲಿ ಓದುವಾಗ್ಗೆ ಷಣ್ಮುಖನನ್ನು ಶಾರದೆಯು ಒಂದು ಬೀಜಗಣಿತದ ಲೆಕ್ಕವನ್ನು ಬಿಡಿಸಿಕೊಡಲು ಕೇಳಿದ್ದಳು. ಅವನು ಏನೋ ನೆವ ಮುಂದೆಮಾಡಿ ಆಕೆಗೆ ಅದನ್ನು ಬಿಡಿಸಿಕೊಟ್ಟಿರಲಿಲ್ಲ ಆದರೆ ಕೆಲ ದಿನಗಳ ನಂತರ ಸಾವಿತ್ರಿಯು ಬಂದು ಅದೇ ಲೆಕ್ಕ ಕೇಳಿದಾಗ ಮರುದಿವಸ ತನ್ನ ಪರೀಕ್ಷೆಯಿದ್ದರೂ ಅವನ್ನು ಲೆಕ್ಕಿಸದೆ ಒಂದೆರಡು ಘಂಟೆ ಅದರ ಸಲುವಾಗಿ ವೆಚ್ಚಮಾಡಿ ಆಕೆಗೆ ಅದನ್ನು ಬಿಡಿಸಿಕೊಟ್ಟಿದ್ದನು. ಶಾರದೆ ಸಾವಿತ್ರಿಯರು ಬಾಲ್ಯದಿಂದಲೂ ಗೆಳತಿಯರು; ಕೂಡಿ ಆಡಿದವರು; ನಲಿದವರು; ಕಲಿತವರು; ಸಾವಿತ್ರಿ ಆಗಾಗ ಶಾರದೆಯ ಬಳಿಗೆ ಬರುವದು ರೂಢಿ; ಆಕೆಗೆ ಷಣ್ಮುಖನು ಮುಗ್ಧನಾಗಿದ್ದನು ಮನಸೋತಿದ್ದನು. ಅಂಥವಳು ತಾನೇ ಸ್ವತಃ ಅವನ ತನಕ ಬಂದು ಏನನ್ನಾದರೂ ನೆರವು ಬೇಡಿದರೆ ಇಲ್ಲವೆಂದು ಕೈ ಝಾಡಿಸಲಾದೀತೇ? ತನಗೆ ಸಾಧ್ಯವಿರದಿದ್ದರೂ ಇತರರಲ್ಲಿ ಬೇಡಿ ನೆರವು ನೀಡುವದು ಪರಿಪಾಠ! ಶಾರದೆ ಆಗಿಂದಾಗಲೇ ಅಣ್ಣನ ತನಕ ಹೋಗಿ ಮುಖದಮೇಲೆ ಬಡೆದಂತೆ ಮೊದಲಿಸಿದ್ದಳು.

"ಸಾವಿತ್ರಿಯಾದರೋ ನಿನಗೆ ಬೇಕಾದವಳು; ನಾನು ಬೇಡವಾದೆ!"

ಇಷ್ಟು ಸಣ್ಣ ಮಾತಿಗಾಗಿ ಅಣ್ಣ ತಂಗಿಯರಲ್ಲಿ ವೈಮನಸ್ಸು ಹುಟ್ಟಿತು. ಮೊದಮೊದಲು ಹುಡುಗರಂತೆ ಜಾಳಿಬಿಟ್ಟರು; ಅದೇ ಅವರಿಬ್ಬರನ್ನು ದೂರವಿರಿಸಲು ಹವಣಿಸಿತ; ಶಾರದೆಯು ದೂರವಾದಂತೆಲ್ಲ ಸಾವಿತ್ರಿಯು ಷಣ್ಮು

ಖನ ಸನಿಯಕ್ಕೆ ಬರಲಿಕ್ಕೆ ಹತ್ತಿದಳು; ಹೀಗೆಂದ ಮಾತ್ರಕ್ಕೆ ಶಾರದೆ ಸಾವಿತ್ರಿಯುರಲ್ಲಿ ವೈಮನಸ್ಸು ಇಣಿಕಿ ಹಾಕಿತೆಂದಲ್ಲ. ಅಣ್ಣ ತಂಗಿಯರನ್ನು ಒಂದುಗೂಡಿಸಲು ಪದೇ ಪದೆ ಸಾವಿತ್ರಿ ಮಧ್ಯಸ್ಥಿಕೆ ವಹಿಸುತ್ತಿದ್ದಳು. ಹೀಗಾಗಿ ಸಾವಿತ್ರಿ ಷಣ್ಮುಖರಲ್ಲಿ ಪರಿಚಯವು ಮೊದಲಾಗಿ ಗೆಳೆತನ ಪ್ರಾರಂಭವಾಯಿತು. ಶಾರದೆಗೂ ಸಾವಿತ್ರಿ ಅಣ್ಣನಲ್ಲಿ ಅನುರಕ್ತಳಾಗುತ್ತಿದ್ದುದನ್ನು ನೋಡಿ ಸಂತಸಬಡುತ್ತಿದ್ದಳು. ಆದರೆ ಅದನ್ನು ತೋರಗೊಡುತ್ತಿರಲಿಲ್ಲ; ಗೆಳೆತನ ಪ್ರಣಯದಲ್ಲಿ ಪರಿಣಮಿಸುವ ಸಮಯ ಬಂದಾಗ ಷಣ್ಮುಖನಿಗೂ ಸಾವಿತ್ರಿಗೂ ಮದುವೆ ನಡೆದುಹೋಯ್ತು ! ಶಾರದೆಯು ಸ್ವತಃ ತಾನೇ ನಿಂತು ಅಣ್ಣ ಮತ್ತು ಗೆಳತಿಯರ ( ಒಬ್ಬ ಹಗೆ ಇನ್ನೊಬ್ಬಳು ಜೀವದ ಗೆಳತಿ ) ಮದುವೆ ಮಾಡಿದಳು. ಆದರೆ ಅಣ್ಣನೊಂದಿಗೆ ಒಂದು ನುಡಿಯನ್ನೂ ಆಡ ಲಲ್ಲ. ಸಾವಿತ್ರಿ ಹೃದಯಮಂದಿರದ ದೇವಿಯಾದರೂ ಆರಾಧಕನನ್ನು ಒಲಿಸದೆ ಹೋದಳು. ಷಣ್ಮುಖನೂ ಅಷ್ಟಿಷ್ಟರವನಲ್ಲ. ತುಂಬಾ ಹಟಮಾರಿ ! ಉಡದ ಹಿಡಿತ ಅವನದು; ಅದಕ್ಕೆ ' ಮಂಗ ಮುಷ್ಟಿ ' ಎಂದು ಹೇಳಿದರೇ ಸಲ್ಲೀತು. ಮನೆಯಲ್ಲಿ ಯಾರು ಹೇಳಿದರೂ ಕೇಳಲಿಲ್ಲ. ನಾಗಮ್ಮನವರು ಮಕ್ಕಳ ಈ ಮೂರ್ಖತನದ ವರ್ತನಕ್ಕಾಗಿ ಕಣ್ಣೀರು ಹಾಕಿದರು. ನಿತ್ಯ ಕಣ್ಣೀರು ಕೂಳು ತಿಂದರು; ಮಕ್ಕಳು ಚಿಕ್ಕವರಿರುವಾಗರೇ ಪತಿಯನ್ನು ಕಳೆದುಕೊಂಡವರು ಮಕ್ಕಳಿಂದಾದರೂ ಸುಖ ದೊರೆಯಬಹುದೆಂದು ಆಶಿಸಿದರೆ ಮಕ್ಕಳು ಹೀಗಾಗಿಬಿಟ್ಟಿದ್ದರು ಏನೋ ದೂರದ ಆಶೆಯೊಂದು ಅವರಿಗಿತ್ತು !

" ಲಗ್ನವಾದ ಮೇಲೆ ಹೇಗೂ ಶಾರದೆ ಕೊಟ್ಟವರ ಮನೆಗೆಹೋಗುವಳು; ಈ ಗಂಡು ಮಾತನಾಡಿಸಿದರೂ ಸರಿ; ಮಾತನಾಡಿಸದಿದ್ದರೂ ಸರಿ; ತನ್ನ ಗಂಡನೊಂದಿಗೆ ತಾನು ಸುಖವಾಗಿರುವಳು. "

ಮನೆಗೆ ಬಂದು ಹೋಗುವವರು ಮಧ್ಯಸ್ಥಿಕೆ ಮಾಡಿದ್ದೂ ಆಯಿತು; ಒಂದು ದಿನ ಷಣ್ಮುಖನ ಆತ್ಮೀಯ ಗೆಳೆಯರೊಬ್ಬರು ಬಂದಿದ್ದರು. ಅವರೀರ್ವರೂ ' ಖಜಾಂಚಿ ' ಚಲನಚಿತ್ರ ನೋಡಿ ಬಂದರು. ಆಗ ಗೆಳೆಯನು ಷಣ್ಮುಖನ ಮತ್ತು ಶಾರದೆಯರಲ್ಲಿ ಸ್ನೇಹಸಂಧಿ ಸಾಧಿಸಬೇಕೆಂದು ಮೊದಲು

ಶಾರದೆಯಲ್ಲಿ ಪ್ರಸ್ತಾಪವೆತ್ತಿ ಆಕೆಯನ್ನು ಮೊದಲು ಕ್ಷಮೆ ಬೇಡಲು ತರಬೇತು ಮಾಡಿದನು; ಷಣ್ಮುಖನನ್ನು ನಾನಾ ಬಗೆಯಾಗಿ ಒಡಂಬಡಿಸಿದರೂ ಅವನು ಒಪ್ಪಲಿಲ್ಲ. 'ಇನ್ನೂ ಇದೇ ಚಿತ್ರ ನೋಡಿ ಬಂದೆಯಪ್ಪಾ; ಏತಕ್ಕೆ ನೀನು ಚಿತ್ರ ನೋಡುವದು? ಅದರಲ್ಲಿಯ ಅಣ್ಣ-ತಂಗಿಯರನ್ನಾದರೂ ನೋಡ ಬಾರದೆ?' ಎಂದ ಹೇಳಿದುದು ಅವನ ಮರ್ಯಾದೆಗೆ ಸಾಲಲಿಲ್ಲ. ತನ್ನ ಮಾನ ಹೋಯಿತೆಂದು ಗೆಳೆಯನ ಮೇಲೆಯೇ ಹರಿಹಾಯ್ದನು. ಹೀಗಾಗಿ ಆ ವಿಷಯವು ಹಾಗೆಯೇ ಉಳಿದು ಬಿಟ್ಟಿತ್ತು; ಶಾರದೆಯು ಕೊರಗನ್ನು ಕಂಡು ಷಣ್ಮುಖನನ್ನು ಸಾವಿತ್ರಿಯು ಹೇಗೋ ಏನೋ ಒಮ್ಮೆ ಒಪ್ಪಿಸಿದ್ದಳು. ಅವನೂ ಒಪ್ಪಿ ಆಕೆಯ ಮನೆತನಕ ನಡೆದಿದ್ದನು. ಆದರೆ ಆಗ ಇನ್ನೊಂದು ತೆರನಾಯಿತು, ಎಲ್ಲರೂ ಬಗೆದುದೊಂದು! ದೈವ ಮಾಡಿದ್ದು ಬೇರೊಂದು!!

೬

ಷಣ್ಮುಖನು, ಇದೊಂದು ಸಲ ಹೊರಡದಿದ್ದರೆ ಎದುರಿನಲ್ಲಿಯೇ ಇರುವ ಭಾವಿಯಲ್ಲಿ ಹಾರಿ ಪ್ರಾಣ ಬಿಡುವೆನೆಂದು ನಾಗಮ್ಮ ನುಡಿದರೂ ಜಪ್ಪೆನ್ನಲಿಲ್ಲ; ಅವರು ನುಡಿದಂತೆ ಮಾಡಲು ಭಾವಿಯ ದಂಡೆಗೆ ಸಮೀಪಿಸಿ ದಾಗ ಷಣ್ಮುಖನು ಸಿದ್ಧನಾದನು;

"ನಿನ್ನ ತಂಗಿಗಾಗಿ ಬೇಡ; ಅದಾವಳೋ ಒಬ್ಬ ಹೆಣ್ಣುಮಗಳ ಪ್ರಾಣ ರಕ್ಷಣೆಗಾದರೂ ಹೊರಡು" ಎಂದು ಹೇಳಿದ್ದರೂ ಅವನ ಕಲ್ಲೆದೆ ಕರಗಿರ ಲಿಲ್ಲ.

ಆದರೆ ಸ್ವತಃ ಹೆತ್ತ ತಾಯಿಯೇ ಸತ್ತುಹೋಗುವೆನೆಂದಾಗ ಬೆದರಿ ದನು. ಕರುಳು ಕಡಿದಂತಾಯಿತು; ಎಷ್ಟಾದರೂ ಅವನು ಆಕೆಯ ಕರುಳಿನ ಕುಡಿಯಲ್ಲವೇ? ಒಂದು ಕರುಳಿನ ಈ ರೀತಿ ಎರಡು ತೆರನಾಗಿದ್ದವು! ಷಣ್ಮು ಖನು ಶಾರದೆಯ ಮನೆಯನ್ನು ತಲುಪಿದಾಗ ದೃಶ್ಯ ಹೃದಯದ್ರಾವಕ ವಾಗಿತ್ತು;

ಮಧ್ಯಾಹ್ನದ ಏರು ಬಿಸಿಲು ಸುಡುತ್ತಿತ್ತು ! ಕೆಳಗಿನ ಭೂಮಿ ಕಾಯ್ದು ಕೆಂಡವಾಗುತ್ತೇನೆಂದು ಅನ್ನುತ್ತಿತ್ತು !! ಮನೆಯ ಮುಂದೆ ಜನರು ನೆರೆದಿದ್ದರು. ಹಲವರು ಸಿದಿಗೆ ತಯಾರಿಸುವದರಲ್ಲಿ ಮಗ್ನರಾಗಿದ್ದರು. ನಾಗಮ್ಮ ಈ ನೋಟ ಕಂಡವಳೇ ಬಲವಾಗಿ ಚೀರಿ ಬಿದ್ದುಬಿಟ್ಟಳು ! ಕೆಳಗೆ ಕಲ್ಲಿಗೆ ಬಿದ್ದು ಆಕೆಯ ತಲೆಗೆ ದೊಡ್ಡ ಗಾಯವಾಗಿ ಎಚ್ಚರದಪ್ಪಿತು; ಆಕೆಯನ್ನು ಒಳಗೆ ಸಾಗಿಸಿದರು; ಒಳಗೆ ಕಾಲಿಟ್ಟಾಗ ಅವನಿಗೂ ಅರಿಯದೆ ದುಃಖ ಒತ್ತರಿಸಿ ಬಂದಿತು. ಸಾವಿತ್ರಿಯೂ ಎಚ್ಚರದಪ್ಪಿ ಬಿದ್ದಿದ್ದಳು ! ಒಂದು ಕಡೆಗೆ ಆಕೆಯ ಆರೈಕೆ ನಡೆದಿತ್ತು; ಎಲ್ಲರೂ ಆಕೆಯ ಆರೈಕೆಯಲ್ಲಿಯೇ ಮಗ್ನರಾಗಿದ್ದರು. ಇನ್ನೊಂದು ಕಡೆಗೆ ಶಾರದೆಯ ಪತಿ, ಶಾರದೆಯ ತಲೆಯನ್ನು ತನ್ನ ತೊಡೆಯ ಮೇಲೆ ಇಟ್ಟುಕೊಂಡು ಮುಖವನ್ನೇ ದಿಟ್ಟಿಸುತ್ತ ಕಳಿತಿದ್ದನು. ಷಣ್ಮುಖನು ಹೋಗಿ ಶಾರದೆಯ ಕಾಲಬಳಿಯಲ್ಲಿ ಕುಳಿತನು. ಶಾರದೆಯ ಪತಿ ಕಣ್ಣೆತ್ತಿ ನೋಡಿದನು, ಶಾರದೆಗೆ ಹೇಳಿದನು; ಆಕೆಗೆ ಕೇಳಿಸಿದರೆ ತಾನೇ ?

“ ಶಾರೀ, ನೋಡು ! ಕಣ್ಣೆಟ್ಟಿ ನೋಡು; ನಿನ್ನ ಅಣ್ಣ ಬಂದಿದ್ದಾನೆ. ಅಂತು ಒಮ್ಮೆ ಬಂದ ! ” ದಳದಳನೆ ನೀರು ಮೋಡದಿಂದ ಭೂಮಿಗಿಳಿಯುವಂತೆ ಆಕೆಯ ಮುಖದ ಮೇಲೆ ಬಿದ್ದವು. ತನ್ನ ಧೋತರ ಚುಂಗಿನಿಂದ ಒರೆಯಿಸಿದನು; ಷಣ್ಮುಖನೂ ಗಳಗಳನೇ ಮಗುವಿನಂತೆ ಅತ್ತುಬಿಟ್ಟನು; ಏನನ್ನೋ ಮಾತನಾಡಲು ಹವಣಿಸಿದನು; ಶಾರದೆಯ ಪತಿಗೆ ಎಲ್ಲಿಂದಲೋ ಕೋಪ ಬಂದುಬಿಟ್ಟಿತು; ಶಂಕರನನ್ನು ಕೂಗಿ ಕರೆದನು; ಅವನು ಬಾಗಿಲ ಬಳಿಯಲ್ಲಿ ಅಳುತ್ತ ಬಂದುನಿಂತನು.

“ ಎಲೆ ಶಂಕರಾ ! ಇವನನ್ನು ಚಂಡಿಗೆ ಕೈಕೊಟ್ಟು, ಒದ್ದು ಹೊರಗೆ ಹಾಕು; ಈಗ ಬಂದಿದ್ದಾನೆ.................. ” ಅವನು ಇಷ್ಟು ಮಾತನಾಡುವದರಲ್ಲಿಯೇ ಸಾಕುಬೇಕಾಗಿಹೋಯಿತು. ಕೊನೆಯ ಮಾತುಗಳೇ ಹೊರಡಲಿಲ್ಲ. ಮಗುವಿನಂತೆ, ಮುಖಕ್ಕೆ ವಸ್ತ್ರ ಮುಚ್ಚಿ ಅತ್ತನು. ಷಣ್ಮುಖನು ಎದ್ದನು; ನೀರು ಕಣ್ಣುಗಳಿಂದ ಇಳಿಯುತ್ತಲೇ ಇತ್ತು. ಮಗ್ಗುಲಲ್ಲಿ ನಿಶ್ಚೇಷ್ಟಿತಳಾಗಿ ಬಿದ್ದಿದ್ದ ತನ್ನ ಹೆಂಡತಿ ಸಾವಿತ್ರಿಯನ್ನೂ ನೋಡಲಿಲ್ಲ. ಬಾಗಲು ದಾಟಿ ಹೋಗುವಾಗ ಬಾಗಿಲ ಚೌಕಟ್ಟಿಗೆ ಜೋಲಿತಪ್ಪಿ ಬಿದ್ದು ತಾನೂ ಹಣೆ ಯೊಡೆದುಕೊಂಡು ಮುಂದೆ ನಡೆದನು; ನಡುಮನೆಯಲ್ಲಿ ತಾಯಿಗೆ ಉಪಚಾರ

ನಡೆದಿತ್ತು. ಆ ಕಡೆಗೂ ಇಣಿಕಿ ಹಾಕಲಿಲ್ಲ; ಮನೆಯಿಂದ ಅಂಥ ಬಿಸಿಲಿನಲ್ಲಿಯೇ ಬರಿಗಾಲಿನಿಂದ ನಡೆದುಬಿಟ್ಟನು.

೫

ಬೆಳ್ಳಗೆ ಬೆಳತಿಂಗಳು ಬಿದ್ದಿತ್ತು! ನಡುರಾತ್ರಿಯಾಗಿತ್ತು!! ಊರಲ್ಲಿ ಆಗಾಗ ಕೂಗುವ ಒಂದೆರಡು ನಾಯಿಗಳ ಸದ್ದು ಬಿಟ್ಟರೆ ಬೇರೆ ಗದ್ದಲವೇ ಇರಲಿಲ್ಲ; ಮಸಣಗಟ್ಟೆಯಲ್ಲಿ ಯಾರೋ ತಿರುಗಾಡುತ್ತಿದ್ದರು; ಅವನನ್ನು ಕಾಣುತ್ತಲೇ ಅಲ್ಲಿಯೇ ಸುಳಿದಾಡುತ್ತಿದ್ದ ಒಂದೆರಡು ನರಿಗಳು ಅಡಗಿ ಕುಳಿತವು, ಓಡಿಹೋದವು! ಸುತ್ತಲೂ ಅರಸಿ ಒಂದು ಗಿಡದ ಕೆಳಗೆ ಅವನು ಬಂದು ಕುಳಿತನು. ಗಿಡದ ಸಂದುಗಳೊಳಗಿಂದ ಹರಿದು ಬಂದ ತುಂಡು ತುಂಡಾದ ತಿಂಗಳಿನ ಬೆಳಕು ಎರಡು—ಒಂದರ ಪಕ್ಕದಲ್ಲಿ ಒಂದಿರುವ—ಹೊಸ ಸಮಾಧಿಗಳ ಮೇಲೆ ಬಿದ್ದಿತ್ತು! ಒಮ್ಮೆಲೇ ದೀನ ಧ್ವನಿಯೊಂದು ಹೊರಟು ಮಸಣಗಟ್ಟೆಯಲ್ಲಿ ಪ್ರತಿಧ್ವನಿಸಿತು!

"ಶಾರೀ! ನಾನೇ ಬಂದಿದ್ದೇನೆ; ನಾನು ಅಪರಾಧಿ! ನೀನೇ ಗೆದ್ದೆ!! ನಾನು ಸೋತೆ!! ಏಕೆ ಮಾತನಾಡುವದಿಲ್ಲವೇ?............ಅವ್ವಾ! ನೀನಾದರೂ ಶಾರಿಗೆ ಮಾತನಾಡಲು ಹೇಳವ್ವಾ! .. ...."

# ಎದೆಯೊಲವು

## ೧

" ಹೌದು ಸಂಶಯವೇ ಇಲ್ಲ, ಲಲಿತ ! ಆಕೆ ಲಲಿತಳೇ !! " ಚಿತ್ರ ಮುಗಿಯುತ್ತಲೂ ಖಚಿತವಾಗಿಬಿಟ್ಟಿತು ರಾಜನಿಗೆ.

ರಾಜೇಂದ್ರ ಈಗ ಮೂರು ವರುಷಗಳಿಂದ ಚಲನ ಚಿತ್ರಗಳಿಗೇ ಹೋಗಿರಲಿಲ್ಲ. ಆಸಕ್ತಿಯೇ ಅಳಿದುಬಿಟ್ಟಿತು ದಿನ ಪತ್ರಿಕೆಯಲ್ಲಿ ಅಂದು 'ಎದೆಯೊಲವು' ಚಿತ್ರದ ಪ್ರಕಟನೆ ಬಂದಿತ್ತು. ಅದರ ಬಗ್ಗೆ ಯಾರೋ ಮಹನೀಯರು ಲೇಖನವನ್ನು ಬರೆದಿದ್ದರು.

" ತ್ರಿಭುವನ ಚಿತ್ರಮಂದಿರದವರು 'ಎದೆಯೊಲವು' ಶ್ರೇಷ್ಠ ಕಲಾಕೃತಿಯನ್ನು ಕನ್ನಡ ಸಹೋದರರಿಗೆ ಇತ್ತಿದ್ದಾರೆ. ಅಭಿನಯಿಸಿದ ಚಿತ್ರ ಮೊದಲನೆಯದಾದರೂ ತನ್ನ ಅತ್ಯದ್ಭುತವಾದ ಅಭಿನಯ ಕುಶಲತೆ ಮತ್ತು ಸುಮಧುರ ಕಂಠದಿಂದ ಕುಮಾರಿ ವಿಜಯಳು ಶ್ರೇಷ್ಠ ತಾರಾಶ್ರೇಣಿಗೆ ಏರಿದ್ದಾಳೆ !.......ಇನ್ನೇನು ಕನ್ನಡ ಚಿತ್ರ ಪ್ರಪಂಚದಲ್ಲಿ ಕ್ರಾಂತಿಯಾಯಿತು ! ಕನ್ನಡ ರಂಗಭೂಮಿಯ ಮೇಲೆ ಬೆಳಕು ಬಿತ್ತು !! ಕನ್ನಡ ಚಿತ್ರಗಳು ಭಾರತದ ಯಾವದೇ ನುಡಿಯ ಚಿತ್ರಗಳಿಗಿಂತ ಕಡಿಮೆಯಾಗಲಾರವು........ " ಅದನ್ನು ಓದಿ ರಾಜನಿಗೆ ನಿರಾಸಕ್ತಿಯಲ್ಲಿ ಒಂದಿನಿತು ನೋಡಬೇಕೆಂಬ ಆಸಕ್ತಿ ಹುಟ್ಟಿತು; ರಾಜೇಂದ್ರನ ಸವಾರಿ ಮತ್ತೆ ತನ್ನ ಪ್ರೀತಿಯ 'ಪ್ರದರ್ಶನ' ಚಿತ್ರಮಂದಿರದ ಕಡೆಗೆ ಸಾಗಿತು !

## ೨

ರಾಜೇಂದ್ರ ಮದ್ರಾಸ ರೇಲ್ವೆ 'ಸೆಂಟ್ರಲ್' ನಿಲ್ದಾಣದಲ್ಲಿ ಗಾಡಿಯಿಂದ ಬಂದಿಳಿದಾಗ ಬೆಳ್ಳಗೆ ಬೆಳಗಾಗಿತ್ತು. ನಿಲ್ದಾಣದ ಎದುರಿನಲ್ಲಿರುವ " ಸೆಂಟ್ರಲ್ ಲಾಡ್ಜ "ದಲ್ಲಿಯೇ ಸಾಮಾನುಗಳನ್ನಿರಿಸಿದನು. ಕಾಫಿ ಕುಡಿದು

'ತ್ರಿಭುವನ' ಚಿತ್ರಮಂದಿರಕ್ಕೆ ಹೋಗಿ ವಿಜಯಳ ಪತ್ತೆಯನ್ನು ಕಲೆ ಹಾಕಿಕೊಂಡನು. ಸೆಂಟ್ರಲದಲ್ಲಿಯೇ ಊಟ ಮುಗಿಯಿತು. ಬಸ್ ಮೌಂಟರೋಡಿನ ಕಡೆಗೆ ನಡೆದು ಅಲ್ಲಿ ಎಷ್ಟು ಅರಸಿದರೂ ಅವನಿಗೆ ಬೇಕಾದ ಬಂಗಲೆ ಸಿಕ್ಕಲಿಲ್ಲ. ಪುನಃ ಲಾಜಿಗೆ ಬಂದು ಮೂಟೆಯುವನೊಬ್ಬನಿಗೆ ೪ ಗಂಟೆಗೆ ಎಬ್ಬಿಸಲು ಹೇಳಿ ತನ್ನ ಕೋಣೆಯಲ್ಲಿ ಅಡ್ಡಾಡಿದನು. ಆಗ ಬೆಚ್ಚಬೇಸಿಗೆ. ಮೇ ತಿಂಗಳು ಮೊದಲುವಾರ ನಡುಮಧ್ಯಾಹ್ನ ಬೇರೆ. ಬಿಸಿಲಿನ ಬೇಗೆ ಅವನನ್ನು ಸುಟ್ಟುಬಿಡುತ್ತೇನೆ ಎನ್ನುವಷ್ಟರಮಟ್ಟಿಗಿತ್ತು. ಮೇಲಾಗಿ ದುರ್ದೈವಕ್ಕೆ ಅವನು ತಂಗಿದ ಕೋಣೆಯಲ್ಲಿ ಒಂದೂ ಫಂಕವಿರಲಿಲ್ಲ. ಬರಿಮೈಯಿಂದ ಮಲಗಿದರೂ ಮೈಮೇಲೆ ನೀರು ಇಳಿಯುವುದು ತಪ್ಪುತ್ತಿರಲಿಲ್ಲ. ಮಗ್ಗುಲಲ್ಲಿಯೇ ರೇಲ್ವೆ ನಿಲ್ದಾಣ. ಹಲವು ಬಂಡಿಗಳು ಹಾಯ್ದು ಹೋಗುವ ಸಪ್ಪಳ! ಪಕ್ಕದಲ್ಲಿಯ ಬೀದಿಯಮೇಲೆ ಅತ್ತಿಂದಿತ್ತ ಚಲಿಸುವ ಟ್ರಾಂ ಮತ್ತು ಮೋಟಾರುಗಳ ರಭಸದ ರವ !! ಮಾರ್ಗದಲ್ಲಿ ಸರಿದುಹೋಗುವ ಜನಜಂಗುಳಿಯ ಗದ್ದಲ! ಎಲ್ಲವನ್ನೂ ಮೀರಿ ಕೆಳಗೆ ಹೋಟಲಿನಲ್ಲಿ ಬರಹೋಗುವ ಜನರ ಜಂಜಾಟ! ರಾಜನಿಗೆ ನಿದ್ರೆ ಹತ್ತಲಿಲ್ಲ. ಒಂದು ಸಾಸಿರ ಮೈಲು ದೂರದಿಂದ ಬಂದಿದ್ದಾನೆ. ಇಡಿಯ ದಿನವನ್ನೆಲ್ಲ ಬಂಡಿಯಲ್ಲಿ ಪ್ರವಾಸದಲ್ಲಿಯೇ ಕಳೆದಿದ್ದಾನೆ. ಪ್ರವಾಸ, ಅದೂ ರೇಲ್ವೆಯಲ್ಲಿ ಎಂಥದಿರುತ್ತದೆಂದು ಬಣ್ಣಿಸುವದು ಅನಾವಶ್ಯಕ–ರಾತ್ರಿಯನ್ನು ಎವೆಗೆ ಎವೆ ಹಚ್ಚದೆ ಕಳೆದಿದ್ದನು. ಆದರೂ ಮಧ್ಯಾಹ್ನ ನಿದ್ರೆ ಬರಲಿಲ್ಲ ಅವನು ತರ್ಕಿಸಿದಂತೆ. ಕೆಲಹೊತ್ತು ಅವನ ಮನಸ್ಸು ಹೊರಗಿನ ಸದ್ದನ್ನು ಆಲಿಸಿತು. ಮತ್ತೆ ಯಾವದೋ ಒಂದು ತೆರನಾದ ವಿಚಾರದಲ್ಲಿ ಸಿಕ್ಕಿಬಿದ್ದಿತು.

೩

ರಾಜ ಎದ್ದು ತನ್ನ ಬ್ಯಾಗಿನಿಂದ ಎರಡು ಓಲೆಗಳನ್ನು ತೆಗೆದನು. ಮತ್ತೆ ಓದಿದನು. ಬಿಸಿಯುಸಿರು ಚೆಲ್ಲಿ ಹಾಸಿಗೆಯ ಮೇಲೆ ಅಂಗಾತನಾದನು. ಅದೆಷ್ಟುಸಲ ಓದಿದ್ದನೋ ಆ ಓಲೆಗಳೆರಡನ್ನು; ಅವುಗಳ ಸ್ಥಿತಿಯೇ ತಿಳಿಸಿ ಹೇಳುವಂತಿತ್ತು ?

ಮನೆ, ಶಾಲೆ, ಕಾಲೇಜು, ಓಣಿ, ಚಿತ್ರಮಂದಿರ, ಪತಿಯ ಮನೆಯಲ್ಲಿಯ ಗೌರಿ ಮೊದಲಾದ ಎಲ್ಲವುಗಳ ನೆನಹು ಎದ್ದು ನಿಂತಿತು.

*　　*　　*　　*

ರಾಜನು ತುಂಬಾ ಆಲಸಿ! ಮೇಲಾಗಿ ಸ್ವಾರ್ಥಿ! ಇತರರಿಗಾಗಿ ಒಂದಿನವೂ ಕರಗಿ ಮರುಗಿದವನಲ್ಲ. ಆದರೆ ಸುತ್ತಲಿನವರೆಲ್ಲರೂ ತನಗಾಗಿ ಕರಗಿ ಕೊರಗಬೇಕೆಂಬ ಹಟವೂ ಅವನಿಗೆ ಇರಲಿಲ್ಲ. ಅದಷ್ಟು ಏಕಾಕಿಯಾಗಿರಲು ಅವನಿಗೆ ಬಯಕೆ. ಅವನ ಕೋಣೆಯಲ್ಲಿ ಒಂದು ಮೂಲೆಯಲ್ಲಿ ಮೇಜು: ಪಕ್ಕನಲ್ಲಿ ಒಂದು ಕುರ್ಚಿ; ಹತ್ತಿರದಲ್ಲಿ ಇನ್ನೊಂದು 'ಆರಾಮಕುರ್ಚಿ; ಮೇಜಿನ ಆಚೆಯ ಪಕ್ಕದಲ್ಲಿ 'ಒಂದು ಪುಸ್ತಕದ ಸೆಲ್ಫ್': ಎದುರಿನಲ್ಲಿ ಒಂದು ಸ್ಪ್ರಿಂಗಿನ ಮಲಗುವ ಪಲ್ಲಂಗ. ಗೋಡೆಗಳಿಗೆ ನಾಲ್ಕು ಕಡೆಗೂ ನಾಲ್ಕಾರು ಕನ್ನಡಿಹಾಕಿ ಹೊಂದಿಸಿದ ಚಿತ್ರಗಳು! ಅವುಗಳಲ್ಲಿ ಬಹಳಪಾಲು ಸಿನಿಮಾ ನಟಿಯವರವೇ! ಅವುಗಳಲ್ಲಿ ಒಂದು ಕವಿ ರವೀಂದ್ರರದು, ಇನ್ನೆರಡು ಕನ್ನಡ ಕವಿ ಸಾಮ್ರಾಟವು —"ಅಂಬಿಕಾತನಯದತ್ತ" "ಕುವೆಂಪು" ಉಳಿದವುಗಳು ಗೆರಸಪ್ಪೆ ಧಬಧಬೆ. ತಾಜಮುಹಾಲು ಇತ್ಯಾದಿ ಒಟ್ಟಾರೆ ಕೋಣೆಯನ್ನು ಕಂಡಕೂಡಲೆ ಕೋಣೆಯಲ್ಲಿ ವಾಸಿಸುನವನ ಕಲಾಭಿರುಚಿಯೂ. ರಸಿಕತೆಯೂ ಎದ್ದು ತೋರುವಂತಿತ್ತು. ಬೆಳಗಿನಲ್ಲಿ ನಿತ್ಯ ಅವನು ಏಳುವದು ಹೊತ್ತುಮಾಡಿಯೇ! ಹೀಗಾಗಿ ಕಸಗೂಡಿಸುವದು ನಿತ್ಯ ಬೆಳಗಿನಲ್ಲಿ ಬಾಕಿಯೇ! ಮನೆಯವರು ತಮ್ಮ ಕೆಲಸದಲ್ಲಿ ಬಿಡುವು ಮಾಡಿಕೊಂಡು ಇವನ ಕೋಣೆಯನ್ನು ಸ್ವಚ್ಛಮಾಡಲು ಬಂದಾಗ ಇವನಿಗೆ ಮನಸ್ಸಿರಲಿಕ್ಕಿಲ್ಲ. ಇವನಿಗೆ ಬಿಡುವಿದ್ದಾಗ ಅವರಿಗೆ ಇಚ್ಛೆಯಿರಲಿಕ್ಕಿಲ್ಲ. ಹೀಗಾಗಿ ರಾಜುವಿನ ಕೋಣೆಯು ಒಂದು ವಾರದತನಕ ಕಸ ಬಿದ್ದರೂ ಲಕ್ಷಕ್ಕೆ ತಾರದೆ ಹಾಗೆಯೇ ವಾಸವಾಗಿದ್ದ. ಪರಸ್ಥಳದ ವಿದ್ಯಾರ್ಥಿಗಳ ಕೋಣೆಯನ್ನು ನೆನಪಿಗೆ ತಂದುಕೊಡುತ್ತಿತ್ತು.

ಪಕ್ಕದಲ್ಲಿ ಗೌರಿಯ ಕೋಣೆ—ವಿಶೇಷವೇನೂ ಇಲ್ಲ. ಒಂದು 'ಡೆಸ್ಕ್' ಎಡಬಲದಲ್ಲಿ ಎರಡು ಕುರ್ಚಿಗಳು—'ಡೆಸ್ಕ'ದ ಒಂದು ಬದಿಯಲ್ಲಿ ಸಾಲಾಗಿ ಇರಿಸಿದ ಎರಡು ಸಾಲು ಪುಸ್ತಕಗಳು. ನೆಲದಮೇಲೆ ಖಾದಿಯ ಹಾಸುಗೆ—

ಮೂಲೆಯಲ್ಲಿ ಎರಡು ಹಾಸಿಗೆಯ ಸುರುಳಿಗಳು—ಆ ಕೋಣೆಯನ್ನು ನೋಡಿದ ಕೂಡಲೇ ಅಲ್ಲಿ ಇಬ್ಬರು ಇರುವರೆಂದು ಯಾರಾದರೂ ಹೇಳಬಹುದು. ಅದು ನಿಜ; ಲಲಿತೆ ಗೌರಿಯ ಗೆಳತಿ! ಇಬ್ಬರು ಓರಿಗೆಯವರು; ಒಂದೇ ತರಗತಿಯಲ್ಲಿ ಓದುತ್ತಾರೆ; ಲಲಿಗೆಯದು ಎದುರಿನಲ್ಲಿಯೇ ಮನೆ; ಎರಡೂ ಮನೆಗಳ ಮಧ್ಯದಲ್ಲಿ ಪಕ್ಕದಲ್ಲಿ ಎರಡು ಚರಂಡಿಗಳನ್ನು ಸಿಕ್ಕಿಸಿಕೊಂಡು ಒಂದು ಬೀದಿ ಮಾತ್ರ ಓಡುತ್ತದೆ. ಇಬ್ಬರು ಗೆಳತಿಯರು ಅಭ್ಯಾಸ ಮಾಡುವದು, ಆಡುವದು, ನಕ್ಕು ನಲಿಯುವದು ಗೌರಿಯ ಮನೆಯಲ್ಲಿಯೇ!

ರಾಜಣ್ಣನ ಕೋಣೆ ಸ್ವಚ್ಛವಾಗಿ ಚೊಕ್ಕಟವಾಗಿರಬೇಕಾದರೆ ಗೌರಿಯೇ ಮನಸ್ಸು ಮಾಡಬೇಕು; ಅವನು ಹೊರಗೆ ಹೋದಾಗ ನೆಲಗುಡಿಸಿ, ಹಾಸಿಗೆ ಬಿಚ್ಚಿ ಪುಸ್ತಕ ಹೊಂದಿಸಿ ಸರಿಪಡಿಸುವಳು. ಬೆಳಗಿನಲ್ಲಿ ಓದಲು ಏಳಬೇಕೆಂದು ಅವನಿಗೆ ತುಂಬಾ ಇಚ್ಛೆ! ಆದರೆ ಏಳುವದೇ ಆಗುತ್ತಿರಲಿಲ್ಲ—'ಅಲಾರಂ' ಇಟ್ಟ ಗಡಿಯಾರವು ತನ್ನ ಕರ್ತವ್ಯ ಮುಗಿಸಿ, ಇಂಥವರ ಸೇವೆ ಮಾಡುವದು ಸಾಕೆಂದು ಸುಮ್ಮನಾಗಿಬಿಡುತ್ತಿತ್ತು! ಅಭ್ಯಾಸವಾಗದ ಕಿಚ್ಚಿಗೆ ರಾಜ ಮುಂಜಾನೆ ಎದ್ದು ಕಂಡವರ ಮೇಲೆ ಹರಿಹಾಯುತ್ತಿದ್ದನು. ಅದನ್ನರಿತ ತಂಗಿ ಮರುದಿನ ಹೊಸ ವ್ಯವಸ್ಥೆ ಮಾಡಿದಳು—ಅವನ ಕೋಣೆಯಲ್ಲಿಯ ಗಡಿಯಾರ ಆಕೆಯ ಕೋಣೆಗೆ ಬಂತು. ಗಡಿಯಾರ ಎಚ್ಚರಿಸುತ್ತೆ; ಆಕೆ ಏಳುತ್ತಾಳೆ. ಸ್ಟವ್ ಹಚ್ಚಿ ಚಹ ತಯಾರಿಸಿ ಲಲಿತೆಯನ್ನು, ಅಣ್ಣನನ್ನು ಎಬ್ಬಿಸುತ್ತಾಳೆ. ಗಡಿಯಾರದ ಘಂಟಾನಾದಕ್ಕೆ ಎಚ್ಚರವಾಗದ ರಾಜನು ಸ್ಟವ್ವಿನ ಕಿರಿನಿನಾದಕ್ಕೆ ಏಳುತ್ತಾನೆ: ಚಹದೊಂದಿಗೆ ತಂಗಿಯ ಕರೆ ಕೇಳಿದಾಕ್ಷಣ ಹಾಸಿಗೆಯಲ್ಲಿ ಜಿಗಿದು ಕುಳಿತು, ಒಮ್ಮೆಲೇ ಚಹದ ಕಪ್ಪಿನ ಕಡೆಗೆ ಕೈ ಚಾಚುತ್ತಾನೆ. ಇಷ್ಟೆಲ್ಲ ಗೌರಿ ಅವನ ಸೇವೆ ಮಾಡುತ್ತಿದ್ದರೂ ಅವನೆಂದೂ ಆಕೆಗೆ ಕಠಿನವಾದದ್ದನ್ನು ತಿಳುಹಿಸಿಕೊಡುವುದರಲ್ಲಿ ನೆರವಾಗುತ್ತಿರಲಿಲ್ಲ. ಹಲವಾರು ನೆಪಗಳು—ಅವನೊಂದು ತರಹೆ ಮನುಷ್ಯ!

ಈ ಮಧ್ಯದಲ್ಲಿ ತಂಗಿಯ ಮದುವೆಯಾಯಿತು. ಲಲಿತೆಗೂ ಲಗ್ನದ ವಯಸ್ಸು! ಲಗ್ನಕ್ಕೆ ಗೌರಿಯ ಗಂಡನ ಊರಿಗೆ ಎಲ್ಲರೂ ಹೋದರು. ಜೀವದ ಗೆಳತಿಯ ಮದುವೆಯ ಮಂಟಪದಲ್ಲಿ ಲಲಿತೆಯಿರಬೇಡವೆ? ಆ ಊರಲ್ಲಿ ಒಂದು ಚಲನಚಿತ್ರ ಪ್ರದರ್ಶಿತವಾಗುತ್ತಲಿತ್ತು. ಆ ಚಿತ್ರಕ್ಕಾಗಿ

ರಾಜೇಂದ್ರ, ಗೌರಿ, ಲಲಿತೆಯರು ಅವರೂರಲ್ಲಿ ಚಾತಕಪಕ್ಷಿ ಮಳೆಗಾಗಿ ಬಾಯಿಬಿಟ್ಟಂತೆ ಬಾಯ್ಬಿಟ್ಟು ಕಾಯ್ದಿದ್ದರು. ಹೋಗಿ ನೋಡಬೇಕೆಂಬ ಹುಮ್ಮಸ್ಸಾಯಿತು. ಲಲಿತೆ ಸೂಚಿಸಿದಳು; ರಾಜಣ್ಣ ಸಿದ್ಧನೇ! ಆಕೆ ಬರ ಲಾರಳೆಂದು ತಿಳಿದರೂ ಔಪಚಾರಿಕವಾಗಿ ಗೌರಿಯನ್ನು ನೋಡಲಿಕ್ಕೆ ಕರೆದರು. ಆಕೆ ನಗುತ್ತ 'ಹೂಂ' ಅಂದಳೇ ಹೊರತು ಹೊರಡಲಿಲ್ಲ. ಇಬ್ಬರೂ ಹೊರಟರು.

ಮನೆಗೆ ಬರುವಾಗ ಇಬ್ಬರೂ ಮೌನವಾಗಿಯೇ ಬಂದರು. ಅವ ರಿಬ್ಬರೂ ಏನೋ ತಲೆಯಲ್ಲಿ ತುಂಬಿಕೊಂಡು ಬರುತ್ತಿರುವಂತೆ ಅನಿಸಿತು. ಯಾರೊಬ್ಬರೂ ಮಾರ್ಗದ ಮೇಲೆ ಮಾತನಾಡಲು ಪ್ರಯತ್ನಿಸಲಿಲ್ಲ. ಮನೆಯ ಸಮೀಪಕ್ಕೆ ಬಂದಾಗ ರಾಜನು ತನ್ನನ್ನೇ ತಾನು ಮರೆತು ಕೂಗಿದನು.

"ಲಲಿತಾ!"

ಆಕೆ ಒಂದಿನಿತು ಬಾಗಿದಳು ಅವನ ಕಡೆಗೆ. ಆಕೆಯ ತೆರೆದ ಕಣ್ಣು ಗಳೇ ಉತ್ತರವಿತ್ತವು.

ಚಿತ್ರದ ಕತೆಯು ಸ್ವಲ್ಪ ಹೆಚ್ಚು ಕಡಿಮೆ ಇವರ ಚರಿತೆಯಂತೆಯೇ ಇತ್ತು. ಆದರಲ್ಲಿ ರಾಜ, ಲಲಿತೆ, ಗೌರಿಯರೇ ಅಭಿನಯಿಸುತ್ತಿರುವಂತೆ ಇತ್ತು. ಆದರೆ ಕತೆಯ ಕೊನೆಯ ಭಾಗವು ಕರುಳು ಕೊರೆಯುವ ದುರಂತ ವಾಗಿತ್ತು! 'ಬಾಲ ಪ್ರೇಮಿಗಳಲ್ಲಿ ಕಾರಣಾಂತರದಿಂದ ಮದುವೆಯಾಗಲಿಲ್ಲ. ಕಿಶೋರಿಯು ಮಾಯವಾಗಿಬಿಟ್ಟಳು; ಎಷ್ಟೋ ದಿನ ಆಕೆಗಾಗಿ ಅರಸುತ್ತಿರುವ ಆಕೆಯ ಮಿತ್ರ ಒಂದಿನ ಉದ್ವಿಗ್ನನಾಗಿ ತಿರುಗುವಾಗ ಯಾವುದೋ ಪುಣ್ಯಾ ತ್ಮನ ಮೋಟಾರ ಬುಡದಲ್ಲಿ ಸಿಕ್ಕು ಪ್ರಾಣ ಕೊಡುತ್ತಾನೆ' ಚಿತ್ರದ ಕೊನೆ ಕಂಡಾಗ ರಾಜನು ಗದ್ಗದ ನಡುಗಿದನು. ಲಲಿತೆಯನ್ನಂತೂ ಕೇಳುವದೇ ಬೇಡ; ಗಳಗಳನೇ ಅತ್ತುಬಿಟ್ಟಳು. ಅವರೀರ್ವರ ಮನಸ್ಸಿನಲ್ಲಿ ಅಷ್ಟು ದಿನ ಗಳವರೆಗೆ ತೋರಿಬರವ ಒಂದು ಭಾವ ತೋರಿಬರತೊಡಗಿತು. ತಾವೇಕೆ ಮದುವೆಯಾಗಬಾರದೆಂದು ಇಬ್ಬರಲ್ಲಿಯೂ ಮೂಡಿರಬೇಕು; ಅದು ಅಸಾಧ್ಯ ವೇನೂ ಇರಲಿಲ್ಲ. ಮನೆಗೆ ಬರುವಷ್ಟರಲ್ಲಿ ಹಿಂದೆ ಯಾವ ಭಾವಗಳಿಲ್ಲದವ ರಿಬ್ಬರೂ ಸ್ವಲ್ಪ ಹೆಚ್ಚು ಕಡಿಮೆ ಪ್ರೇಮಿಗಳಾಗಿ ಮನೆಗೆ ತೆರಳಿದರು.

* * * *

ಇಬ್ಬರೂ ಸೇರಿ ಸಿನಿಮಾಕ್ಕೆ ಹೋಗುವದನ್ನು ಕಿಡಕಿಯೊಳಗಿಂದ ಗೌರಿ ನೋಡುತ್ತ ನಿಂತಿದ್ದಳು. ಅವರು ಮರೆಯಾಗುವವರೆಗೂ ದಿಟ್ಟಿಸಿದಳು. ಆಗ ಆಕೆಯಲ್ಲಿ ಅದಾವುದೋ ಒಂದು ವಿಚಾರ ಹೆಡೆಯೆತ್ತಿ ನಿಂತಿತ್ತು. ಆಕೆ ಮೃದುವಾಗಿ ನಕ್ಕು ಸುಮ್ಮನಾಗಿದ್ದಳು. ಮನೆಗೆ ಸೇರುತ್ತಲೇ ಲಲಿತೆ ಗೆಳತಿಯನ್ನು ಕೂಡ್ರಿಸಿಕೊಂಡು ಚಿತ್ರದ ಕತೆಯೆಲ್ಲವನ್ನೂ ಹೇಳಿದಳು. ಕತೆಯನ್ನು ಕೇಳಿ ಅತ್ಯಾನಂದಿತೆಯಾದ ಗೌರಿ ಲಲಿತೆಯನ್ನು ಗಟ್ಟಿಯಾಗಿ ಅಪ್ಪಿಕೊಂಡು ಹೇಳಿದಳು.

"ಸಿನಿಮಾದ ಕತೆಯನ್ನು ಹೇಳಿದ್ದಕ್ಕಾಗಿ ಕೃತಜ್ಞಳಾಗಿದ್ದೇನೆ ಅತ್ತಿಗೆ!"

ಆಕೆಯ ನಗು ಕೋಣೆಯನ್ನೆಲ್ಲ ಆವರಿಸಿದ್ದಿತು; ಲಲಿತೆ ಬೆಚ್ಚಿದಳು; ನಾಚಿಕೆಯಿಂದ ಮೊಗವು ಕೆಂಪೇರಿತು; ಲಲಿತೆ ಗೌರಿಯ ವಕ್ಷಸ್ಥಲದಲ್ಲಿ ಮುಖವಿರಿಸಿದ್ದಳು—ಆಕೆಯ ಕಣ್ಣೊಳಗಿಂದ ನೀರು ಇಳಿದು ಗೌರಿಯ ಎದೆಯನ್ನು ತೊಯ್ದಿದ್ದನ್ನು ಗೆಳತಿ ತಿಳಿಯದೇ ಇರಲಿಲ್ಲ.

*    *    *    *

ರಾಜ, ಲಲಿತೆಯರು ತಮ್ಮೀರ್ವದಲ್ಲಿ ಮದುವೆಯಾಗುವದು ಎಷ್ಟು ಸುಲಭವೆಂದು ತಿಳಿದಿದ್ದರೋ ಅದು ಅಷ್ಟೊಂದು ಸುಲಭವಾಗಿರಲಿಲ್ಲ! ಅವರ ಊಹೆ ತಪ್ಪಾಯ್ತು! ಕಟ್ಟಿದ ಕಲ್ಪನಾಮಂದಿರ ಕುಸಿದುಬಿತ್ತು!!

*    *    *    *

ಹುಡಿಗಿ ಬೆಳೆದಳೆಂದು ವರಾನ್ವೇಷಣೆಗೆ ಆಕೆಯ ಮನೆಯವರು ತೊಡಗಿದರು. ರಾಜ ಕಾರಣಾಂತರದಿಂದ ಲಲಿತೆಯನ್ನು ಲಗ್ನವಾಗುವದಾಗಿ ತನ್ನ ತಾಯಿಗೆ ತಿಳಿಸಿದನು. ಇಷ್ಟರಲ್ಲಿ ಬೇರೆ ಯಾರೋ ಸಿರಿವಂತರ ಮಗಳನ್ನು ತನ್ನ ಮಗನಿಗೆ ಮದುವೆ ಮಾಡಿಕೊಂಡು ಬಿಟ್ಟರಾಯಿತೆಂದು ಹೊಂಚುತ್ತಿದ್ದ ರಾಜಣ್ಣನ ತಂದೆಯವರಿಗೆ ಒಮ್ಮೆಲೇ ಸಿಡಿಲು ಬಡಿದಂತಾಯಿತು. ಲಲಿತೆಯ ಮೇಲೆ ಉರಿದೆದ್ದರು. ತಮ್ಮ ಮನೆಗೆ ಕಾಲಿಕ್ಕಬಾರದೆಂದು ಸುಗ್ರೀವಾಜ್ಞೆಯನ್ನು ಹೊರಡಿಸಿದರು. ಆದರೂ ಬಾಲಪ್ರೇಮಿಗಳ ನೇಹಕಟ್ಟು ಕಡಿದುಹೋಗುವದರ ಬದಲು ಇನ್ನಿಷ್ಟು ಗಟ್ಟಿಯಾಗತೊಡಗಿತು.

*    *    *    *

ನಾಲ್ಕು ತಿಂಗಳ ನಂತರ; ಲಲಿತೆಯ ಲಗ್ನದ ಮಾತುಗಳೂ ಬಲವತ್ತರವಾದವು. ಇಬ್ಬರೂ ಪ್ರೇಮಿಗಳು ವಿಚಾರಿಸಿ, ವಿಚಾರಿಸಿ ಇನ್ನೂ ಒಂದು ಮಟ್ಟಕ್ಕೆ ಬಂದು ನಿಂತಿರಲಿಲ್ಲ. ಬಿದಿ ಅಡ್ಡ ಬಂತು! ರಾಜೇಂದ್ರ ಮ್ಯಾಟ್ರಿಕ್ ಪರೀಕ್ಷೆಯಲ್ಲಿ ವಿಜಯಿಯಾದನೆಂದು ವರ್ತಮಾನಪತ್ರಗಳು ಸಾರಿದವು. ಅವನ ತಂದೆಗೆ ಅದೊಂದು ಸುಸಂಧಿಯಾಯಿತು. ಮ್ಯಾಟ್ರಿಕ್ ಪರೀಕ್ಷೆ ಮುಗಿದೊಡನೆಯೇ ಮಗನನ್ನು ವ್ಯಾಪಾರಕ್ಕೆ ಹಚ್ಚಿಬಿಡಬೇಕೆಂದು ಎಂದಿನಿಂದಲೂ ಅವನ ಮತವಾಗಿತ್ತು. ಈಗ ಅದನ್ನು ಬದಲು ಮಾಡಿದನು. ರಾಜೇಂದ್ರನನ್ನು ಲಲಿತೆಯ ಲಗ್ನವಾಗುವವರೆಗೆ ಆಕೆಯಿಂದ ದೂರಸರಿಸಬೇಕಾಗಿತ್ತು. ಅದಕ್ಕಾಗಿ ರಾಜೇಂದ್ರನು ಕಾಲೇಜು ಸೇರಲು ಅರ್ಹನಾದನು 'ಸದಾ ಕಂಗಳನ್ನೇ ಕೈಗಳನ್ನಾಗಿ ಮಾಡಿ ಅಭಯುವನ್ನು ಬೇಡುತ್ತಿದ್ದ' ಲಲಿತೆಗೆ ರಾಜನು ಕಾಲೇಜು ಸೇರುವ ಮೊದಲು ಅಭಿವಚನವನ್ನು ಈಯಲು ಮರೆತಿರಲಿಲ್ಲ.

೪

ರಾಜಣ್ಣ ಬೇಗ ತೆಗೆದು ಕೋಣೆಯ ಬಾಗಿಲು ನೂಕಿದನು. ಎರಡು ಪಾಕೀಟುಗಳು ಬಿದ್ದಿದ್ದವು. 'ಲಲಿತೆಯ ಕೈಬರಹ!'! ಆತುರ ಅತಿಯಾಯಿತು! ಕೈಯೊಳಗಿನ ಪುಸ್ತಕ ಕೈಯಲ್ಲಿಯೇ ಇದ್ದವು. ಮೈಮೇಲಿನ ಅರಿವೆಗಳು ಮೈಮೇಲಿಯೇ ಇದ್ದವು. ಕಾಲೊಳಗಿನ ಚಪ್ಪಲಿ ಬಿಟ್ಟಿರಲಿಲ್ಲ. ಬಾಗಿಲು ಬಳಿಯಲ್ಲಿಯೇ ನಿಂತು ಓದಿದನು. ಮೊದಲನೆಯ ಪತ್ರವನ್ನು ಓದಿದನು ನಿಂತಲ್ಲಿಯೇ ಕುಣಿದಾಡಿದನು—ಆನಂದಾತಿಶಯದಿಂದ ಕೂಗಿದನು—ಓಲೆಗೆ ನ್ಮೃದುವಾಗಿ ಮುತ್ತ........ ....ಎರಡನೆಯದನ್ನು ಹರಿದನು ಓದುತ್ತ ಓದುತ್ತ ಸಿಡಿಸಿಡಿಲಾದನು. ಕಂಗಳು ಕೆಂಪಡಗಿದವು! ದೇಹ ಕಂಪಿಸಿತು!! ಮರುಕ್ಷಣದಲ್ಲಿ ಅಬಲ ಬಾಲಕನಂತೆ ಬಿಕ್ಕುತ್ತ ನಿರ್ವೀರ್ಯನಾಗಿ ಸೋತು ಹಾಸಿಗೆಯಲ್ಲಿ ಕುಪ್ಪಳಿಸಿದನು, ಸಾಮಾನುಗಳನ್ನು ಸಿದ್ಧಪಡಿಸಿಕೊಂಡು 'ಮತ್ತೆ ಕಾಲೇಜಿಗೆ ಸೇರಲಾರೆ'ನೆಂದು ಖಿನ್ನ ಮನಸ್ಸಿನಿಂದ ಹೇಳಿ ಹಾಸ್ಟಲಿನ ಪಾವಟಿಗೆಗಳನ್ನು ಒಂದೊಂದಾಗಿ ಇಳಿದನು.

ಟಾಂಗೆ ಬರದಿಂದ ಸಾಗಿತು; ಗಾಡಿಗೆ ಕೇವಲ ಹತ್ತೇ ನಿಮಿಷಗಳು ಸಂಗಡಿಗರೆಲ್ಲರಿಗೂ ಆಶ್ಚರ್ಯ; ಅಸಮಾಧಾನ; ಸರಿಯಾದ ಕಾರಣ ತಿಳಿಯ ಲಿಲ್ಲ. ಎಲ್ಲರೂ ಒಂದಾಗಿ ತರ್ಕಿಸಿದರು—ಯಾರಿಗೂ ಹೊಳೆಯಲಿಲ್ಲ—ಅವ ರಲ್ಲಿ ಒಬ್ಬ ಅಧಿಕಪ್ರಸಂಗಿ ಹಲ್ಲು ಕಿಸಿದು ನುಡಿದನು.

'ಕಾಲೇಜು ಅಂದರೆ ಚೈನೀ ಹೊಡೆಯುವದೆಂದು ಬಂದಿರಬೇಕು— ಅಭ್ಯಾಸಕ್ಕೆ ಅಂಜಿ ಊರಿಗೆ ಹೊರಟಿದ್ದಾನೆ!'

ಯಾರೊಬ್ಬರಿಗೂ ನಗು ಬರಲಿಲ್ಲ! ತಮಾಷೆಗೆ ಕಾಲವಾಗಿರಲಿಲ್ಲವದು!!

ಬಂಡಿಯಲ್ಲಿ ರಾಜ ಮತ್ತೆ ಓಲೆಗಳನ್ನು ಬಿಚ್ಚಿ ನೋಡಿದನು. ಮೊದ ಲನೆಯದನ್ನು ಎರಡನೆಯದಕ್ಕಿಂತ ಒಂದು ತಿಂಗಳು ಮೊದಲು ಬರೆದಿತ್ತು! ಆದರೂ 'ಪೋಸ್ಟ್' ಮಾಡಿದ್ದು ಒಂದೇ ದಿವಸ!

ಹೂಬಳ್ಳಿ
ದಿ| ೧-೮-೪೫

ಹೃದಯಮಂದಿರದ ದೇವ!

ಬರೆಯಬೇಕೆಂದು ಮನಸ್ಸೇನೋ ಆಗುತ್ತಿದೆ; ಆದರೆ ಏನನ್ನು ಬರೆ ಯಲಿ? ಆರೋಗ್ಯವಾಗಿದ್ದೇನೆಂದು ಬರೆಯಲೇ? ನೋಡುವವರಿಗೇನೋ ಮೈ ಕೈ ತುಂಬಿಕೊಂಡಿದ್ದೇನೆ. ಆದರೆ ಮನದಲ್ಲಿಯ ಕೋಲಾಹಲ ಯಾರಿಗೆ ತಿಳಿಯಬೇಕು? ನನ್ನ ಮದುವೆಗೆ ಭರದಿಂದ ಸಿದ್ಧತೆ ನಡೆದಿದೆಯೆಂದು ಅಭಿ ಮಾನದಿಂದ ತಿಳುಹಿಸಲಾ? ನಾಲ್ಕಾರು ಕಡೆಯವರು ಬಂದು ನೋಡಿ ಹೋದರು.

ಅದೆಲ್ಲ ಇರಲಿ!

ಮತ್ತೇನೋ ಬರೆದಳೆಂದು ನಗಬೇಡಿ ಮತ್ತೆ!

ಎಷ್ಟೋ ದಿನಗಳು ಸಂದವು; ನಾನು ಇತ್ತಿತ್ತಲಾಗಿ ಹೊರಗೆ ಬರು ತ್ತಿರುವದಿಲ್ಲ ಅಂದು ಏಕೋ ನಮ್ಮ ಮುಂದಿನ ಕಿಡಕಿಯಿಂದ ಹಣಿಕಿ ಹೊರಗೆ ನೋಡಿದೆ. ಎದೆಯಲ್ಲಿ ಒಂದು ತರಹದ ಹರ್ಷ ಉಕ್ಕಿತು. ಮತ್ತೆ ಹಿಂದಕ್ಕೆ ಒಂದು ವರುಷ ಓಡಿದೆ. ನಿಮ್ಮ ಮನೆಯಲ್ಲಿ ಆಗ ಎಲ್ಲರೂ ಊರಿಗೆ

ಹೋಗಿದ್ದರು. ಬಾಗಿಲಿಗೆ ಸದಾ ಬೀಗ ಹಾಕಿಯೇ ಇರುತ್ತಿತ್ತು ! ಆದರೆ ಅವೆಷ್ಟು ಆನಂದದ ದಿನಗಳವು ರಾಜಾ !

ಮತ್ತೆ ಕಣ್ಣರಳಿಸಿದೆ—ಕಟ್ಟೆಯ ಮೇಲೆ ಬೆಳದಿಂಗಳು ಹಿಟ್ಟು ಚಲ್ಲಿದ ಹಾಗೆ ಬಿದ್ದಿತ್ತು ! ಹೊರಗೆ ಸದ್ದೂ ಇರಲಿಲ್ಲ. ಆಗಸದಲ್ಲಿ ಚುಕ್ಕೆಗಳು ತಿಂಗಳನ ಎದುರಿನಲ್ಲಿ ತೇಜೋಹೀನವಾಗಿದ್ದುವು. ಜಗತ್ತೇ ಮಲಗಿ ನಿದ್ರೆ ಹೋದಂತಿತ್ತು. ಆದರೆ........ರಾಜಾ ! ನೀನು ಅಲ್ಲಿರಲಿಲ್ಲ. ಅಂದಿನಂತೆ ನೀಲ ಆಗಸದ ಬಣ್ಣದ ಹಾಸಿಗೆಯಲ್ಲಿ ಹಣಿಕಿ ಹಾಕಿದ ನಿನ್ನ ಮುಖಚಂದ್ರನು ತೋರಿಬರಲಿಲ್ಲ. ಕಟ್ಟೆ ಏಕೋ ' ಬಿಕೋ ' ಎನ್ನುತ್ತಿತ್ತು !

ಇನ್ನು ಎಷ್ಟೋ ಪ್ರಸಂಗಗಳು—ಮತ್ತೆ ಬರೆಯುವೆ.

ನಿನ್ನ ಕಾಲೇಜಿನಲ್ಲಿ ವಿಶೇಷವಿದ್ದರೆ ತಿಳುಹಿಸಲು ಮರೆಯಬೇಡ ತಿಳಿಯಿತೆ ?

ನಿನ್ನ........
ಲಲಿತೆ.

ಮಡಿಚಿ ಜೇಬಿನಲ್ಲಿರಿಸಿದನು; ಮತ್ತೊಂದನ್ನು ಬಿಚ್ಚಿದನು ಅರಳಿದ ಮುಖ ಮುದುಡಿತು

*　*　*　*

ಮೋಟೇಬೆನ್ನೂರ
ದಿ| ೨-೯-೪೫

ಹೃದಯರಾಜಾ !

ಬರೆಯಬಾರದೆಂದು ಮನಸ್ಸನ್ನು ಎಷ್ಟು ಬಿಗಿಹಿಡಿದರೂ ಮತ್ತೆ ಬರೆಯಲು ಮನಸ್ಸಾಗುತ್ತಿದೆ. ನಿನ್ನ ತಂದೆಯ ಅಣತಿ ಮೀರಿ ಬರೆದಿದ್ದೇನೆ. ದಯವಿಟ್ಟು ಕ್ಷಮಿಸಬೇಕು.

ಅಯ್ಯೋ ! ಬರೆಯಲಾರೆ. ನಿನ್ನ ತಂದೆ ಅಂದು ಆಡಿದ ನುಡಿಗಳನ್ನು ' ಬೀದಿಯ ಬಸವಿ ! ,........ನನ್ನ ಮಗನೊಬ್ಬನಿಗೆ..................ಮದುವೆ

ಮಾಡಿಕೊಡುವದಿಲ್ಲ. ಎಲ್ಲಿಯೂ ಹೆಣ್ಣು ಸಿಕ್ಕದೆ, ಹೆಣ್ಣು ಕುಲವೇ ಕಮರಿ ಹೋದಾಗ ಬೇಕಾದರೆ ನಿನ್ನ ಕಾಲು ಹಿಡಿಯಲು ಬರುವೆ... ....

ಎನ್ನರಸ, ತಂದೆಯವರ ಬಳಿಯ ಕೊನೆಯುಸಲವೆಂದು ಕೈಯಲ್ಲಿ ಜೀವಹಿಡಿದುಕೊಂಡು ಹೋಗಿ ಬೇಡಿದಾಗ ಸಿಕ್ಕಿದ ಮುಕ್ತಾಫಲಗಳು !!

ಮನೆಗೆ ಮರುಳಿಗೆ–ಸಾಮಾನು ಮೊದಲೇ ಸಾಗಿಸಿ ಆಗಿತ್ತು. ಅಂದೇ ಊರನ್ನು ಬಿಟ್ಟೆ. ಮತ್ತೇನು ಮಾಡಲು ಆಗ ನನಗೆ ಸಾಧ್ಯವಿತ್ತು ? ಪರ ಪುಟ್ಟಳು ನಾನು ! ಈಗ ಹತ್ತು-ಹದಿನೈದು ದಿನಗಳಾಗಿರಬೇಕು· ಊರಲ್ಲಿ ಗಂಟುಬೇನೆ ಮೊದಲಾಗಿ; ಯಾವ ಕೈಯಿಂದ ಬರೆಯಲಿ ? ಮೊವಲು ಆಹುತಿ ಗಳೇ ಅಪ್ಪ ಅಮ್ಮರಾಗಬೇಕೆ ?

ರಾಜಾ.

‘ ನಾನೇ ನಿಂತು ನಿನ್ನನ್ನು ಹಾಳುಮಾಡುತ್ತಿದ್ದೇನೆ ’

ಇನ್ನೂ ಏನನ್ನೋ ಆಡಿಕೊಳ್ಳುವರು. ಎನ್ನ ಜೀವದೊಡೆಯಾ, ನಿನ್ನ ಕಲ್ಯಾಣಕ್ಕಾಗಿ (ಅವರ ತಿಳುವಳಿಕೆಯಂತೆ) ನಾನು ಮರೆಯಾಗುವೆ........ ಬರೆಯಲು ಕೈ ಏಳದು,

ಕಡೆಯ ಒಂದನೆಗಳನ್ನು ಸ್ವೀಕರಿಸಿ ಹರಸು; ಮತ್ತೆ ನೋಡೋಣವಂತೆ.

ನಿನ್ನ ಚರಣಪತಿತೆ
ಲಲಿತೆ

ಪತ್ರಗಳನ್ನು ಮಡಿಚಿ ಜೇಬಿನಲ್ಲಿರಿಸಿದನು, ಹಾಗೆಯೇ ಆಡ್ಡಾಡಿದನು. ಕಣ್ಣುಗಳು ಮನೆಗೆ ಹೊಚ್ಚಿದ ಹಂಚುಗಳಲ್ಲಿ ಏಕರಸವಾಗಿದ್ದವು.

೫

ರಾಜೇಂದ್ರನು ವಿಜಯಳ ಮನೆ ಮುಟ್ಟಿದಾಗ ನಾಲ್ಕೂವರೆ ಘಂಟೆ ಯಾಗಿತ್ತು. ಮನೆಯಾಳು ಐದು ಘಂಟೆಗೆ ಬರಲಿಕ್ಕೆ ತಿಳಿಸಿದನು. ರಾಜನು ಹತಾಶಯನಾದನು. ನಿರಾಶಯ ನಿಟ್ಟುಸುರಿಟ್ಟು ಹಿಂದಿರುಗುವದರಲ್ಲಿದ್ದನು. ವಿಜಯಾ ಅಕಸ್ಮಿತಳಾಗಿ ಕಿಡಕಿಯಿಂದ ಹಣಿಕಿಹಾಕಿದಳು—ತನ್ನನ್ನೇ ತಾನು ನಂಬಲಿಲ್ಲ–ಆಕೆಗೂ ಅರಿಯದಂತೆ ಮುಖದಲ್ಲಿ ಮುಗುಳು ನಗೆಯ ಮೊಗ್ಗು

ಮೂಡಿತು. ಜಿಂಕೆಯಂತೆ ಬಾಗಿಲೊಳಗಿಂದ ಹಾರಿಬಂದು, ರಾಜೇಂದ್ರನ ಕೈಹಿಡಿದು ಕರೆದೊಯ್ದು ಆಸನದಲ್ಲಿ ಕೂಡ್ರಿಸಿ ಪಾದಮುಟ್ಟಿ ವಂದಿಸಿ. ಹತ್ತಿರದಲ್ಲಿಯೇ ನೆಲದಮೇಲೆ ಕುಳಿತಳು. ಒಂದರೆಕ್ಷಣ ಎವೆಯಿಕ್ಕದೆ ಅವನನ್ನು ನೋಡಿದಳು---ಆಕೆಯ ಕಂಗಳಿಂದ ನೀರು ಧಾರೆಧಾರೆಯಾಗಿ ಸುರಿಯುತ್ತಿತ್ತು. ರಾಜನು ನುಡಿದನು.

" ಲಲಿತಾ "

" ರಾಜಾ " ಆಕೆ ಧ್ವನಿಗೂಡಿಸಿದಳು—ಮನೆಯಾಳು ಇದೆಲ್ಲ ಕಂಡು ದಂಗಬಡಿದು ನಿಂತಿದ್ದನು--ಲಲಿತೆ ಏತಕ್ಕೋ ನೆವಹೇಳಿ ಅವನನ್ನು ಕಳುಹಿದಳು—ಮರುಕ್ಷಣದಲ್ಲಿ ಲಲಿತೆ ರಾಜೇಂದ್ರನ ತೆಕ್ಕೆಯಲ್ಲಿ ದೀರ್ಘಶ್ವಾಸ ಬಿಡುತ್ತಿದ್ದಳು.

" ಸ್ವಾಮಿ ! ಕ್ಷಮಿಸಿ, ಏಕೆ ಈ ಹಾಳು ನಟಿಯಾದೆನೋ ? ಒಂದಿನಿತಾದರೂ ಬಿಡುವಿಲ್ಲ. ನನ್ನ ಮೊದಲು ಚಿತ್ರ—' ಎದೆಯೊಲವು 'ದಲ್ಲಿಯ ಅಭಿನಯವನ್ನು ಪ್ರಶಂಸಿಸಿ ಪತ್ರ ಬರುತ್ತವೆ. ಇತರರಂತೆ ಅವುಗಳ ಕಡೆಗೆ ಔದಾಶೀನ್ಯದಿಂದಿರುವದು ನನಗೆ ಹಿಡಿಸುವದಿಲ್ಲ. ಅಂತೆಯೇ ಅವರೆಲ್ಲರಿಗೂ ಕೃತಜ್ಞತೆಯ ಮರುಓಲೆ ಬರೆಯಬೇಕು. ಸ್ವತಃ ಕಾಣಲಿಕ್ಕೆಂದು ಬರುವವರಿಗಂತೂ ಲೆಕ್ಕವೇ ಇಲ್ಲ. ಕೆಲದಿನವಂತೂ ಬಿಡುವೇ ಸಿಕ್ಕದೆ ಹೋಯಿತು. ಆದುದರಿಂದ ಬೇಸತ್ತು ಐದು ಘಂಟೆಯ ತನಕ ಯಾರು ಬಂದರೂ ಮನೆಯಲ್ಲಿ ಇಲ್ಲವೆಂದು ತಿಳುಹಿಸಿ ಬಿಡಲು ತಿಳಿಸಿದ್ದೆ. ನಿಮ್ಮ ಧ್ವನಿ ಕೇಳಿಸಿತು ನಾನು ಕನಸಿನ್ಲಿರುವೆನೋ ಎಂಬ ಭ್ರಾಂತಿಯಾಯಿತು. ಹಣಕಿ ಹಾಕಿದೆ. ಹೊರಗೆ ಏನಿತ್ತು ? ನನ್ನ ಪಾಲಿನ ಸ್ವರ್ಗವೇ ನನ್ನ ಮನೆಯೆದುರು ಬಂದು ನಿಂತಿತ್ತು. ಅಲ್ಲಿ ನನ್ನ ದೇವನು ಖಿನ್ನನಾಗಿ ಏನನ್ನೋ ಚಿಂತಿಸುತ್ತ ನಿಂತಿದ್ದನು. ಅಯ್ಯೋ ರಾಜಾ, ನಿಮ್ಮ ಬರುವನ್ನೇ ನಿರೀಕ್ಷಿಸುತ್ತ ನಿಂತು ಸ್ವಾಗತಿಸುವದನ್ನುಳಿದು ನೀವೇ ಮನೆತನಕ ಬಂದಿದ್ದರೂ ಬಾಗಿಲದಲ್ಲಿ ಕಾಯಿಸಿದೆ; ಮನೆತನಕ ನಡೆದು ಬಂದ ಭಾಗ್ಯವಿದಾತನನ್ನು ಹೊರದೂಡಿದ್ದೆ "

ಲಲಿತೆ ಮಾತುಮಾತಿಗೆ ' ನೀವು ' ಎಂದು ಸಂಬೋಧಿಸಿದುದು ರಾಜನಿಗೆ ಒಂದಿನಿತು ಸಂಶಯಕ್ಕೆಡೆಗೊಟ್ಟಿಕೊಂಡಿತು—ಅಂದು ಲಲಿತೆ ಮಾಡಿದ ಆದರಾಥಿತ್ಯ ಅವನಿಗೆ ಅತಿಯೆನಿಸಿತು. ಆಕೆ ಒಂದಿನಿತೂ ಅಂದು ಅವನನ್ನು ಬಿಟ್ಟು ಅಗಲ

ಲಿಲ್ಲ ಊರನ್ನು ಬಿಟ್ಟು ಬಂದಂದಿನಿಂದ ಅಂದಿನವರೆಗೆ ನಡೆದ ಎಲ್ಲ ಸಂಗತಿಯನ್ನೂ ಸಾದ್ಯಂತವಾಗಿ ಹೇಳಿದಳು.

" ನೆರೆಯೂ ತಪ್ಪಿತು; ಗುರಿಯನ್ನೂ ಮುಟ್ಟಲಿಲ್ಲ; ಮುಟ್ಟುವೆನೆಂಬ ಆಶೆಯೂ ಉಳಿಯಲಿಲ್ಲ ತಬ್ಬಲಿಯಾದ ನಾನು ಎಲ್ಲಿಯಾದರೂ ಆತ್ಮಹತ್ಯೆ ಮಾಡಿಕೊಂಡು ಪ್ರಾಣನೀಗಿಬಿಡಬೇಕೆಂದಿದ್ದೆ. ಆದರೆ ಮುಂದೆ ಎಂದಾದರೊಮ್ಮೆ ನನ್ನ ದೇವನು ನನ್ನನ್ನು ಅರಸಲು ಬಂದಾಗ ನಿರಾಶನನ್ನಾಗಿ ಮಾಡಬಾರದೆಂದು ಹಾಗೆ ಮಾಡಲಿಲ್ಲ. ನನ್ನ ಭಾಗ್ಯದೇವ ನನ್ನನ್ನು ಸ್ವೀಕರಿಸುವನೆಂದೇ ನಂಬಿಗೆಯಾಗಿಬಿಟ್ಟಿತ್ತು—ಇಂದಿಲ್ಲ ನಾಳೆಯಾದರೂ ಆ ದಿನ ಬರಬಹುದೆಂದು ಆತ್ಮವಂಚನೆಯ ವಿಚಾರ ಓಡಿಸಿಬಿಟ್ಟೆ. ನಿಮ್ಮಲ್ಲಿಗೆ ಬಂದು ಎಲ್ಲವನ್ನು ತೋಡಿಕೊಳ್ಳಬೇಕೆಂದು ಮನಸ್ಸು ಹಾತೊರೆಯುತ್ತಿದ್ದಿತಾದರೂ ಮಾವನವರ (ಅವರನ್ನು ನಾನು ಮಾವನವರೆಂದೇ ಗುರುತಿಸಿದ್ದೇನೆ!) ಮಾತು ನೆನಪಿಗೆ ಬಂದುಬಿಡುತ್ತಿತ್ತು! ಹೇಗೊ ದುಃಖವನ್ನು ನುಂಗಿಕೊಂಡು ಸಹೋದರಮಾವನ ಊರಿಗೆ ಬಂದು ನಿಮಗೆ ಪತ್ರ ಬರೆದೆ. ಅಲ್ಲಿ ಒಂದೆರಡು ತಿಂಗಳು ಇದ್ದಿರಬೇಕು. ಅದೊಂದು ಹಳ್ಳಿ. ಪಾಪ, ಅವರೂ ಉಳ್ಳವರಲ್ಲ. ಅದರಲ್ಲೂ ಹರೆಯದ ಅವಿವಾಹಿತ ಅಬಲೆಯೊಬ್ಬಳನ್ನು ಸಲುಹಲು ಹಿಂದೆ ಮುಂದೆ ನೋಡಿದರು. ಅದೆಲ್ಲವನ್ನೂ ಪರ್ಯಾಯದಿಂದ ಗ್ರಹಿಸಿದೆ. ಒಮ್ಮೆ 'ತ್ರಿಭುವನ' ಚಿತ್ರಮಂದಿರದವರು ಪತ್ರಿಕೆಯಲ್ಲಿ ಕೊಟ್ಟ ಪ್ರಕಟನೆಯನ್ನು ಕಂಡು ಒಂದು ಪತ್ರ ಬರೆದು ವಿಚಾರಿಸಿದೆ. ಅವರು ನನ್ನನ್ನು ಬರಮಾಡಿಕೊಳ್ಳಲು ಒಪ್ಪಿದರು; ಆಗ ನಿಮಗೊಂದು ಓಲೆಯನ್ನು ಬರೆಯಬೇಕೆಂದು ಇದ್ದೆ—ಏಕೋ ಬರೆಯಲಿಲ್ಲ—ಇಲ್ಲಿ ಬಂದು ಸೇರಲು ನಿಮ್ಮ ಒಪ್ಪಿಗೆ ಅವಶ್ಯವಿತ್ತು. ಅದನ್ನೂ ಪಡೆಯಲಿಲ್ಲ – ದಯವಿಟ್ಟು ಅಪರಾಧವಾಗಿದ್ದರೆ ಕ್ಷಮಿಸಬೇಕು."

ಲಲಿತೆ ಮಾತನ್ನು ಮುಗಿಸಿ ಅವನನ್ನೇ ದಿಟ್ಟಿಸಿದಳು; ರಾಜನೂ ಹೇಳಿದನು. " ಅಪರಾಧವೇತರದು ಲಲಿತಾ ? ಹಿಂದೆ ಒಂದುಸಲ ನಿನಗೆ ನಾನು ಹೇಳಿರಲಿಲ್ಲವೆ ? ರೂಪವಿದೆ; ಕಂಠವಿದೆ; ಅಭಿನಯ ಕುಶಲತೆಯಿದೆ; ರಂಗಭೂಮಿಯ ಮೇಲೆ ಹೋಗಿ, ಏಕೆ ಕಲೆಯ ಸೇವೆ ಮಾಡಬಾರದೆಂದು. ಆದಿರಲಿ, ಲಲಿತಾ. ಹೆಸರು ಬದಲಾಯಿಸಿಕೊಂಡಷ್ಟಕ್ಕೆ ನೀನು ಗುರುತಾಗದೇ ಇರು

ತ್ತಿದ್ದೆಯೆಂದು ತಿಳಿದೆಯಾ ? ಆಹಾ ! ಏನು ವಿಜಯಾ ! ' ಎದೆಯೊಲವು ' ನಿನ್ನ ಅಭಿನಯ ಕುಶಲತೆಯ ಪ್ರತೀಕ! ನಿನ್ನ ಕಂಠ........"

ಲಲಿತೆಗೆ ರಾಜನ ಮಾತಿನಲ್ಲಿ ಮುಖಸ್ತುತಿಯೆನಿಸಲಿಲ್ಲ; ದೇವನು ಕುಳಿತು ಭಕ್ತಳನ್ನು ಬಣ್ಣಿಸುವದೇ ಎಂದು ಮಾತ್ರ ಒಮ್ಮೆ ಅನಿಸಿತು—ಆಕೆ ಹೆಚ್ಚೇನೂ ಮಾತನಾಡಲಿಲ್ಲ.

" ಸ್ವಾಮಿ ತಮ್ಮ ಅನುಗ್ರಹ "

೬

ರಾಜೇಂದ್ರ ಲಲಿತೆಯರು ಟಾಂಗೆಯಿಂದ ಇಳಿದಾಗ ಮನೆಯವರಿಗೊಂದು ಹಬ್ಬವೇ ಆಯಿತು. ತಂದೆ ತಾಯಿಗಳಿಬ್ಬರೂ ಮಗನೊಂದಿಗೆ ಕರಗಿ ಸಣ್ಣಾಗುತ್ತ ನಡೆದವರು, ಮಗನ ಒಲವಿನಂತೆ ' ಓ ' ಕೊಡಲು ಎಂದೊ ನಿಶ್ಚಯಿಸಿದ್ದರು. ಎಲ್ಲರೂ ಉತ್ಸಾಹದಿಂದಲೇ ಸ್ವಾಗತ ಬಯಸಿದರು—ಲಲಿತೆಯೂ, ನವವಧು ಮನೆತುಂಬಿಸುವಾಗ ಪತಿಗೃಹವನ್ನು ಪ್ರವೇಶಿಸುವಂತೆ ಪ್ರವೇಶಿಸಿದಳು.

# ಕೈದಿ

●

ಮೊದಮೊದಲು ಯಾವ ಕೈದಿಯನ್ನೇ ಕಾಣಲಿ, ನಾನು ಜಿಗುಪ್ಸೆತಾಳದೆ ಇರುತ್ತಿರಲಿಲ್ಲ. ಅವರು ಸಹಜವಾಗಿಯೂ ಮನುಷ್ಯರೇ ಅಲ್ಲ; ಪಶುಗಳು; ಅವುಗಳಿಗಿಂತಲೂ ಅತ್ತತ್ತ. ಅವರಿಗೆ ಹೃದಯವಿರಲಾರದು. ಪರಪೀಡನೆಯೇ ಅವರ ನಿತ್ಯಜೀವನ ಸೂತ್ರ. ಇಲ್ಲವಾದರೆ ಇಂಥ ನೀಚ ಕೆಲಸಗಳನ್ನು ಏಕೆ ಮಾಡುತ್ತಿದ್ದರೇ ? ಅದರಲ್ಲಿಯೂ ಖೂನಿ ಮಾಡಿ ಬಂದವರನ್ನು ಕಾಣುತ್ತಲೇ ನಖಶಿಖಾಂತವಾಗಿ ಉರಿದು ಬೀಳುತ್ತಿದ್ದೆ. ಅವರಿಗೆ ಅದೆಷ್ಟು ಹೆಚ್ಚು ಕಾಲ ಸೆರೆಶಿಕ್ಷೆಯೆಂದು ಕೇಳುತ್ತಿದ್ದೆನೊ ಅಷ್ಟು ಪ್ರಮಾಣದಿಂದ ಮನದಲ್ಲಿ ಉಬ್ಬಿ ಸಂತಸಪಡುತ್ತಿದ್ದೆ. ಕರಿನೀರಿನ ಇಲ್ಲವೆ ಗಲ್ಲಿನ ಶಿಕ್ಷೆ ಅವರಿಗೆ ವಿಧಿಸಲ್ಪಟ್ಟರೆ ಮೊಗ್ಗು ಅರಳುವಂತೆ ಮುಖವರಳಿ 'ಆ ನೀಚರಿಗೆ ಇದೇ ತಕ್ಕ ಶಾಸನ; ಯೋಗ್ಯವಾದುದನ್ನೆ ವಿಧಿಸಿದ್ದಾರೆ' ಎಂದು ಅನ್ನದೆ ಬಿಡುತ್ತಿರಲಿಲ್ಲ. ಹೀಗೆ ನನ್ನ ಮನದ ಬಯಕೆಯಿದ್ದರೂ ಹೊಟ್ಟೆಯಪಾಡಿಗಾಗಿ ಎಲ್ಲಿಯೂ ಚಾಕರಿ ದೊರಕದ್ದರಿಂದ ಸೆಂಟ್ರಲ್ ಜೇಲಿನಲ್ಲಿ ಒಬ್ಬ ಸಿಪಾಯಿ ಕೆಲಸ ಕೈಕೊಂಡಿದ್ದೆ. ಹತ್ತು ವರ್ಷ ಕಳೆದಿರಬೇಕು. ಒಮ್ಮೆ ಹೆಣ್ಣು ಮಕ್ಕಳ ವಾರ್ಡಿಗೆ ವರ್ಗವಾಯಿತು. ಅಲ್ಲಿಗೆ ಹೋದಮೇಲೆ ನನ್ನ ಮನಸ್ಸಿಗೆ ಇದಕ್ಕೂ ಹೆಚ್ಚಾದ ವೇದನೆಯಾಯಿತು. ಜಿಗುಪ್ಸೆ ಇಮ್ಮಡಿಸಿತು. ಗಂಡಸರು ಹೋಗಲಿ; ಹೆಂಗಸರೂ ಇಂಥ ಅಲ್ಲದ ಕಾರ್ಯಕ್ಕೆ ಪ್ರವೃತ್ತರಾಗಬೇಕೆ ? ಶಾಲೆಯಲ್ಲಿರುವಾಗ ಹೆಣ್ಣಿನ ಸಂಬಂಧವಾಗಿ ಅದೆಷ್ಟೋ ಓದಿ ತಿಳಿದಿದ್ದೆ. 'ಹೆಣ್ಣು, ದೇವಿ; ಜೀವನ ಸಂಗಾತಿ; ಕರುಣಾನಿಧಿ; ಸಹನೆಯ ಮೂರ್ತಿ; ಪರೋಪಕಾರದ ಪರಮಾವಧಿಯ ಆಗರ;' ಇತ್ಯಾದಿ. ಅದನ್ನು ನಿತ್ಯ ಜೀವನದಲ್ಲಿಯ ಕೆಲವರೊಂದಿಗೆ ಒರೆಹಚ್ಚಿ ನೋಡಿದಾಗ ಇವು ಸಾಜವೂ ಆಗಿ ತೋರಿತ್ತು. ಆದರೆ ಅದೇ ಹೆಣ್ಣು, ಕಳವು, ಪಿಡುಗು, ಮೋಸ, ವಂಚನೆ, ಇನ್ನೂ ಎಷ್ಟೋ ಅನ್ಯಾಯಗಳನ್ನು ಮಾಡಿ ಸೆರೆಮನೆಯ ಅಥಿತಿಯಾಗುವದನ್ನೂ ನೆನೆದಾಗ

ಮೊದಲು ಅವರ ಬಗ್ಗೆ ಉಂಟಾಗಿದ್ದ ಸದ್ಭಾವನೆಗಳು ಸುಟ್ಟು ಬೂದಿಯಾದವು. ಒಂದೆರಡು ಸಲ ಮನೆಯಲ್ಲಿ ಆಕೆಯೆದುರೂ ಆಡಿ ತೋರಿಸಿದ್ದೆ. ಆಕೆಯೂ ಮೂದಲಿಸದೆ ಬಿಟ್ಟಿರಲಿಲ್ಲ.

" ಎಲ್ಲರೂ ಒಂದೇ ಏನು ? ಜಗತ್ತೆಲ್ಲ ಬರಿಯ ಕಲಂಕದಿಂದ ತುಂಬಿಲ್ಲ. ಎಷ್ಟೋ ಕೊಳಕಿನ ಮಡುಗಳಿರುವುದೆಂಬುದೇನೊ ಸತ್ಯವಾದ ಮಾತಾದರೂ, ತಿಳಿನೀರಿನ ಜಲಾಶಯಗಳಿಲ್ಲದೆ ಇಲ್ಲ. ಊರಿದ್ದಲ್ಲಿ ಹೊಲಗೇರಿಯಾದರೂ ಇರುವುದು. ಒಬ್ಬಿಬ್ಬರ ಅಪರಾಧಕ್ಕಾಗಿ ಇಡೀ ಹೆಣ್ಣು ಹೃದಯದ ಬೆಲೆ ಕಟ್ಟುವದು ಯಾವ ನ್ಯಾಯ ? "

ಏನೇ ಆದರೂ ನನ್ನ ಮನದಲ್ಲಿ ಮಂಡಿಸಿದ ಜಿಗುಪ್ಸೆ ಅಳಿಸಿ ಹೋಗಿರಲಿಲ್ಲ.

ಒಂದು ದಿನ ಇದ್ದಕಿದ್ದಂತೆ ಹದಿನೆಂಟು ವರ್ಷದ ಹೆಣ್ಣು ಕೈದಿಯೊಬ್ಬಾಕೆಯನ್ನು ಇಬ್ಬರು ಪೋಲಿಸಿನವರು ಕರೆತಂದು ಜೇಲಿನಲ್ಲಿ ಬಿಟ್ಟು ಹೋದರು. ಆವಳಿಗೆ ಒಂದು ಪ್ರತ್ಯೇಕ ಖೋಲಿಯೂ, ಕಾರಾಗಾರದ ಅಂಕಿಯೂ ಕೊಡಲ್ಪಟ್ಟವು. ಆಕೆ ನನ್ನ ಕಾವಲಿನ ಆಧೀನದಲ್ಲಿ ಬಂದಳು. ಆಕೆ ತನ್ನ ತಾಯಿಯನ್ನು ಖೂನಿ ಮಾಡಿದ್ದಳೆಂದು ಹಿಂದಿನಿಂದ ತಿಳಿಯಿತು.

ಎಷ್ಟೋ ದಿನ ಕಳೆದವು. ಆಕೆಯ ವಿಷಯವಾಗಿ ಏನೊಂದು ತಿಳಿದು ಬರಲಿಲ್ಲ. ಸೆರೆಮನೆಯ ನಿಯಮದಂತೆ ತನ್ನ ಪಾಲಿಗೆ ಬಂದ ಕೆಲಸಗಳನ್ನು ತೀರಿಸಿ ಇನ್ನುಳಿದ ಸಮಯದಲ್ಲಿ ಒಂದು ಹೊತ್ತಿಗೆಯನ್ನು ಓದುತ್ತ ಕುಳಿತು ಬಿಡುತ್ತಿದ್ದಳು. ಯಾರೊಂದಿಗೂ ಹೆಚ್ಚಾಗಿ ಮಾತುಕತೆಗಳನ್ನಾಡುತ್ತಿರಲಿಲ್ಲ; ಬೆರೆಯುತ್ತಿರಲಿಲ್ಲ. ತನ್ನ ಕೆಲಸವಾಯಿತು, ತನ್ನ ಓದಾಯಿತು; ನೋಡುವುದಕ್ಕೆ ಒಬ್ಬ ಸಾಮಾನ್ಯ ಹಳ್ಳಿಯ ಹುಡುಗಿ.

ಆರು ತಿಂಗಳು ಕಳೆಯಿತು. ಇನ್ನೊಂದು ಜೇಲಿನಿಂದ ಒಮ್ಮೆಲೇ ಬಹಳ ಜನರು ಬಿಡುಗಡೆಮಾಲ್ಪಟ್ಟರಂತೆ. ಆದುದರಿಂದ ಅಲ್ಲಿ ಕೈದಿಗಳ ಸಂಖ್ಯೆ ಕಡಿಮೆಯಾಯಿತು. ನಮ್ಮ ಜೇಲಿನಲ್ಲಿ ಕೈದಿಗಳು ಹೆಚ್ಚಿದ್ದ ಮೂಲಕ, ಅಲ್ಲಿಯ ಅಧಿಕಾರಿಗಳಿಂದ, ಇಲ್ಲಿಯ ಕೆಲವು ಕೈದಿಗಳನ್ನು ಅಲ್ಲಿಗೆ ಕಳುಹಿಸಿ ಕೊಡಬೇಕೆಂದು ತಿಳುವಳಿಕೆ ಬಂದಿತು. ಆ ಜೇಲು ಎಲ್ಲ ರೀತಿಯಿಂದ ಈ ಜೇಲಿ

ಗಿಂತ ಉತ್ತಮ ತರಗತಿಯದಾಗಿತ್ತು. ಸಾಕಷ್ಟು ಬೆಳಕು, ಉತ್ತಮ ಆಹಾರ ಇತ್ಯಾದಿ ವಿಷಯಗಳಲ್ಲಿ. ಅಂತೆಯೇ ಇಲ್ಲಿಯ ಅಧಿಕಾರಿಗಳು ಅದನ್ನು ಮನ ಕಂಡವರಾಗಿ ಸುಸ್ವಭಾವದ ಕೈದಿಗಳನ್ನೇ ಸ್ಥಳಾಂತರಿಸಬೇಕೆಂದು ಒಂದು ಯಾದಿಯನ್ನು ಸಿದ್ಧಪಡಿಸಿದರು. ಅದರಲ್ಲಿ ಮೊತ್ತಮೊದಲಿಗೇನೇ ಈ ಹುಡು ಗಿಯ ಹೆಸರಿತ್ತು. ಈ ಸಂಗತಿಯನ್ನು ಸಂಜೆಯ ಮುಂದೆ ಎಲ್ಲರೆದುರಿನಲ್ಲಿ ತಿಳಿ ಸಲಾಯಿತು. ಮರುದಿನ ಮಧ್ಯಾನ್ಹ ಎರಡು ಘಂಟೆಗೆ ಬರುವ ಮೇಲು ಬಂಡಿಗೆ ಹೋಗುವದೆಂದು ಗೊತ್ತಾಯಿತು. ಇದನ್ನಾಲಿಸಿದ ಯಾವತ್ತೂ ಕೈದಿಗಳು ಒಂದು ಕಸಯಿಂದ ಇನ್ನೊಂದು ಕಡೆಗೆ ದಿಬ್ಬಣಕ್ಕೆ ಹೋಗುವಾಗ್ಗೆ ಕುಣಿದಾಡುವಂತೆ ಕುಣಿದಾಡಿದರು. ಆದರೆ ಈ ಹುಡುಗಿ ಮಾತ್ರ ಎಂದಿನಂತೆ ಇದ್ದು ಬಿಟ್ಟಳು.

ಮರುದಿನ ಮುಂಜಾನೆ ನಾನು ನನ್ನ ಕೆಲಸದ ಮೇಲೆ ಬಂದಾಗ ಅವಳು ನಿತ್ಯದಂತೆ ಓದಿನಲ್ಲಿ ತೊಡಗಿರದೆ ತುರಂಗದ ಬಾಗಿಲ ಕಬ್ಬಿಣ ಕಂಬಿಗಳಲ್ಲಿ ಮುಖವಿರಿಸಿ, ಮತ್ತೆರಡು ಕಂಬಿಗಳನ್ನು ಕೈಯಿಂದ ಹಿಡಿದುಕೊಂಡು, ಮುಂದಿನ ಕೈದೋಟವನ್ನು ನಿರೀಕ್ಷಿಸುತ್ತಿದ್ದಳು. ನಾನು ಅತ್ತಿಂದಿತ್ತ ತಿರುಗಾಡು ತ್ತಿದ್ದೆ. ಇದು ಕಡೆಯ ದಿನ. ಇಂದು ಆಕೆಯ ಆತ್ಮಕತೆಯನ್ನು ಕೇಳಿಯೇ ತೀರಬೇಕೆಂದು ಆಲೋಚಿಸುತ್ತಿದ್ದೆ. ಹಿಂದೆ ಆಗಾಗ ಅಲ್ಪಸ್ವಲ್ಪ ಮಾತನಾಡಿ ದ್ದೆನಾದರೂ ಅದು ಕಾರ್ಯನಿಮಿತ್ತವಾಗಿತ್ತು. ಅದೂ ಒಂದೋ ಇಲ್ಲವೆ ಎರಡು ನುಡಿಗಳು—ವಿನಾಕಾರಣ ಹರಟಿರಲಿಲ್ಲ. ಎಷ್ಟೋ ಸಮಯ ಸಂಧಿಸಿ ದರೂ ಯಾವ ನಿರ್ಣಯಕ್ಕೂ ಬರಲಿಲ್ಲ. ಮನದಲ್ಲಿ ಹೊಯ್ದಾಟವೆದ್ದಿತು. ಇಂದು ಬಿಟ್ಟೆನಾದರೆ ಅವರ ವಿಷಯ ಇನ್ನೆಂದೂ ತಿಳಿಯುವಂತಿರಲಿಲ್ಲ. ಆದರೆ ಕೇಳಲು ನಾಲಿಗೆಯೇ ಬಾರದು. ಅಷ್ಟರಲ್ಲಿ ಆಕೆಯೇ,

"ನಾನು ತಮಗೆ ತುಂಬಾ ಋಣಿ; ಇಂದು ಬೇರೆ ಕಡೆಗೆ ನಮ್ಮನ್ನು ಸ್ಥಳಾಂತರಿಸಲಿರುವರು. ತಮಗೂ ತಿಳಿದಿದ್ದರೂ ತಿಳಿದಿರಬೇಕು. ಎಷ್ಟು ಒಳ್ಳೆಯವರಾಗಿದ್ದೀರಿ ನೀವು! ಒಂದು ದಿನವಾದರೂ ಕಷ್ಟ ತೊಂದರೆ ವಿನಾ ಕಾರಣ ಕೊಡಲಿಲ್ಲ. ಮತ್ತೊಬ್ಬರಿದ್ದಿದ್ದರೆ ಹೇಗಿರುತ್ತಿದ್ದಿತೋ!" ಎಂದಳು.

ನಾನು ಮಾತಿಗೆ ಇದೇ ಸಮಯವೆಂದು ಪ್ರಾರಂಭಮಾಡಿದೆ.

“ ಋಣದ ಮಾತೆಲ್ಲಿಯದು ಇದರಲ್ಲಿ. ನನ್ನ ಕರ್ತವ್ಯ ನಾನು ಮಾಡಿದ್ದೇನೆ. ಹೊಟ್ಟೆಯ ಪಾಡಿಗಾಗಿ ಚಾಕರಿ ಹಿಡಿದಿದ್ದೇನೆ. ಕಾರ್ಯತತ್ಪರತೆಯ ಭರದಲ್ಲಿ ಸ್ವಲ್ಪ ಕಠೋರನಾಗಿದ್ದರೂ ಆಗಿರಬಹುದು; ತಾವೇ ಅದನ್ನು ಸೈರಿಸಬೇಕು. ” ಇಷ್ಟು ಉಪೋದ್ಘಾತವಾಯಿತು; “ ತಮ್ಮನ್ನು ಒಂದು ವಿಷಯ ಕೇಳಬೇಕೆಂದಿದ್ದೇನೆ. ಇಷ್ಟು ದಿವಸ ಕೂಡಿರಲೇ ಇಲ್ಲ, ಇಂದು ಮಧ್ಯಾಹ್ನ ನೀವು ಇಲ್ಲಿಂದ ಹೊರಡುವಿರಿ. ಅದಕ್ಕೆ........”

“ ಹೂಂ ” ಎಂದಿಷ್ಟೇ ಅವಳು ಮುಖ ತಗ್ಗಿಸಿ ನುಡಿದಳು.

“ ತಮ್ಮ ವಿಷಯ ತಿಳಿಯಬೇಕೆಂದಿರುವೆ. ನೋಡಿದರೆ ಎಷ್ಟು ಸದಾಚಾರಿಗಳಾಗಿರುವಿರಿ, ಕಲಿತವರಂತೆಯೂ ತೋರುವುದು. ತಾವೇಕೆ ಹೀನ ನೀಚ, ಅಧಮ ಕೃತ್ಯದಲ್ಲಿ ಒಂದಾದ ಖೂನಿ ಕೆಲಸಕ್ಕೆ ಕೈ ಹಾಕಿದಿರಿ? ಅಥವಾ ಇನ್ನೊಬ್ಬರ ಅಪರಾಧದಿಂದ ತಮಗೆ ಶಿಕ್ಷೆಯಾಗಿದೆಯೋ ? ”

“ ಇಲ್ಲ, ಹಾಗೇನೂ ಇಲ್ಲ. ತಾನೇ ನಿಜವಾದ ಅಪರಾಧಿ. ನನ್ನ ಇದೇ ಕೈಗಳಿಂದ, ಇಡಿಯ ಲೋಕವೇ ತಿಳಿದಿರುವ ಈ ಹೀನ ನೀಚ, ಅಧಮ ಹೇಯಕೃತ್ಯ ಘಟಿಸಿತು. ನಿರ್ಭಾಗ್ಯ ಮಾತೆಯನ್ನು ಹತಮಾಡಿದ ಘಾತುಕಿ, ನಾನೇ....ನಾನೇ ” ಎಂದು ಕಣ್ಣೀರು ಕರೆದಳು. ನನಗೂ ದುಃಖವಾಯಿತು. ಎಡಗೈಯಿಂದ ಸೆರಗನ್ನು ಹಿಡಿದು ಕಣ್ಣೀರು ಮರೆಮಾಡಿದಳು.

“ ತಾಯೀ, ದುಃಖವಾಗುವಂತಿದ್ದರೆ ಬೇಡ....

“ ಇಲ್ಲ, ದುಃಖವೇತರದು ? ಹೃದಯ ಮಂಜಿನಂತೆ ಗಡ್ಡೆಗಟ್ಟಿ ಇಂದು ಕಲ್ಲಿನಷ್ಟು ಕಠೋರವಾಗಿದೆ. ಈ ರಾಕ್ಷಸಿಯ ಆತ್ಮವೃತ್ತವನ್ನು ಇಷ್ಟು ಆಸ್ಥೆಯಿಂದ ಕೇಳುವವರು ಸಿಕ್ಕುವರೇ ? ಇಂಥ ಸುವರ್ಣಸಂಧಿಯನ್ನು ನಾನೇ ಕಾಲಿನಿಂದ ಒದೆದು ಹೋಗುವದು ಸರಿಯಲ್ಲ. ” ಇಷ್ಟು ಸಮಯ ನಿಂತಿದ್ದವಳು ಈಗ ಅಲ್ಲಿಯೇ ಕೆಳಗೆ ಕುಳಿತಳು. ನಾನೂ ಒಂದು ಸ್ಟೂಲಿನ ಮೇಲೆ ಕುಳಿತೆ. ಸಮ್ಮಿರ್ವರಿಗೂ ನಡುವೆ ಎಂದಿನಂತೆ ಬಾಗಿಲ ಕಬ್ಬಿಣದ ಕಂಬಿಗಳು ತಾವೂ ಆತುರತೆಯಿಂದ ಆಲಿಸುವಂತೆ ನಿಂತಿದ್ದವು.

* * * *

“ ನಾಸಿನ್ನೂ ಸಣ್ಣವಳಿರುವಾಗ ತಂದೆ ತೀರಿದನಂತೆ, ನಾನದನ್ನು ಅರಿಯೆ. ನಾನು ಒಬ್ಬಳೇ ಒಬ್ಬ ಮಗಳು. ಅಂತೆಯೇ ಚಿಕ್ಕಂದಿನಲ್ಲಿ ಮೇರೆ ಮೀರಿದ ಅಕ್ಕರೆಯಿಂದ ಲಾಲನೆಪಾಲನೆ ಮಾಡಿಸಿಕೊಂಡು ದೊಡ್ಡವಳಾದೆ. ನಾವೇನೂ ಅಷ್ಟೊಂದು ಸಿರಿವಂತರಿರದಿದ್ದರೂ ತಕ್ಕಮಟ್ಟಿಗೆ ತಿನ್ನುಣ್ಣಲಿಕ್ಕೆ ಕಡಿಮೆಯಾಗಿರಲಿಲ್ಲ. ನಾನು ಹಳ್ಳಿಯ ಶಾಲೆಯಲ್ಲಿ ಸಿಕ್ಕುವಷ್ಟು ಶಿಕ್ಷಣ ವನ್ನೂ ಪಡೆದೆ. ಮಾತೃಭಾಷೆಯಲ್ಲಿ ಒಂದು ನಾಲ್ಕಾರು ತರಗತಿಗಳು ಮಾತ್ರ. ಮನೆಯಲ್ಲಿ ಅಮ್ಮನ ಅಕ್ಕರೆಯ ಅಣುಗಿಯಾದ್ದರಿಂದ ಅಮ್ಮ ಯಾವ ಕೆಲ ಸಕ್ಕೂ ಹಚ್ಚುತ್ತಿರಲಿಲ್ಲ. ಮೇಲಾಗಿ ಒಬ್ಬ ಆಳೂ ಇದ್ದ. ಹೀಗಾಗಿ ನಾನು ಆಲಸಿಯಾಗಿ ಬೆಳೆಯುವುದರ ಬದಲು ಹಳ್ಳಿಯ ವಾಚನಾಲಯದಲ್ಲಿ ಸಿಕ್ಕು ವಷ್ಟು ಪುಸ್ತಕಗಳನ್ನು ಓದಿ ಮುಗಿಸಿದೆ. ಇನ್ನೂ ಹೆಚ್ಚಾಗಿ ಓದಬೇಕೆಂದೆನಿ ಸುತ್ತಿತ್ತು. ಆದರೆ ಸಾಧ್ಯವಾಗಲಿಲ್ಲ. ನಾನು ಪುಸ್ತಕಗಳಲ್ಲಿ ಗುರುತಿಸಿದ ಹಲವಾರು ನಾಯಕಿಯರಂತೆ, ಆದರ್ಶ ಗೃಹಿಣಿಯಾಗಿ ಬಾಳಬೇಕೆಂದು ಕಲ್ಪನಾ ಸಾಮ್ರಾಜ್ಯಕಟ್ಟಿದ್ದೆ. ಅದರಂತೆ ಎಷ್ಟೋ ಗಾಳಿಗೋಪುರಗಳೂ ನಿರ್ಮಿಸಲ್ಪಟ್ಟಿದ್ದವು. ಆದರೂ ಇವೆಲ್ಲ ಕನಸುಗಳು ನನಸಾಗುವ ಸಂಭವವೂ ಇತ್ತು. ಯಾಕಂದರೆ ಅಮ್ಮ ನನಗನುಕೂಲಳೇ ಆಗಿದ್ದಳು.”

“ ನಾನು ಬೆಳೆದು ದೊಡ್ಡವಳಾದೆ. ಜನರು ಹಿಂದೆಮುಂದೆ ಆಡಿಕೊ ಳ್ಳಲು ಮೊದಲು ಮಾಡಿದರು ಅಮ್ಮ ಲಕ್ಷ್ಯಗೊಡದೆ ಹದಿನಾರನೆಯ ವರ್ಷದ ವರೆಗೂ ಲಗ್ನದ ಮಾತನ್ನೇ ಎತ್ತಲಿಲ್ಲ. ನಾನು ಸಾಧಾರಣ ರೂಪವತಿಯಾಗಿ ದ್ದುದರಿಂದ ಎಷ್ಟೋ ಜನರು ಮದುವೆಗೆ ಹಾತೊರೆದು ಹೋದರು. ಲಗ್ನ ಮಾಡಿದಾಕ್ಷಣ ಎಲ್ಲಿ ಅಗಲಿಹೋಗುವೆನೋ ಎಂದು ಅಮ್ಮ ನನ್ನ ಲಗ್ನ ಮುಂದೆ ಮುಂದೆ ಹಾಕುತ್ತಿದ್ದಳು. ನಾನಾದರೂ ಚಿಕ್ಕಂದಿನಿಂದ ಸಾಕಿ ಸಲ ಹಿದ ಅವಳ ವಿರುದ್ಧವಾಗಿ ಏಕೆ ನಡೆಯಬೇಕೆಂದು ಸುಮ್ಮನಿದ್ದೆ. ಕೆಲವು ದಿನಗಳು ಕಳೆದವು. ಅಮ್ಮ ನನ್ನ ಲಗ್ನದ ಮಾತನ್ನು ಅಲ್ಲೆ ಇಲ್ಲೆ ಎತ್ತಿ ದುದು ನನ್ನ ಕಿವಿಗಳಿಗೆ ಬಿತ್ತು. ನಾನು ಆ ಸುಮಾರಿಗೆ ನಿಜವಾಗಿಯೂ ಲಗ್ನಕ್ಕೆ ಆತುರಳಾಗಿದ್ದೆ. ‘ ಲಗ್ನವಾಗಬೇಕು; ಸುಖಿಯಾಗಬೇಕು; ಜೀವನ ಸಾರ್ಥ ಮಾಡಿಕೊಳ್ಳಬೇಕು. ಲಗ್ನವಾಗುವುದು ಅದೊಂದು ಬರಿಯ ವಿಧಿಯಲ್ಲ. ಹೃದಯಕ್ಕೆ ಒಪ್ಪಬೇಕು ?’ ಇನ್ನೂ ಎಷ್ಟೋ ವಿಚಾರಗಳನ್ನು ಹಿನ್ನೆಲೆ

ಯಾಗಿಟ್ಟುಕೊಂಡು ಲಗ್ನವಾಗಲು ಆಸಕ್ತಿ ತೋರಿಸಿದೆ. ಅಮ್ಮನಿಗೆ ಇದೆಲ್ಲದರ ತಿಳುವಳಿಕೆಯೆಲ್ಲಿ? ಕೊನೆಗೊಮ್ಮೆ ಆಕೆ ಒಬ್ಬನನ್ನು ಸೂಚಿಸಿದಳು ನಾನು ಒಪ್ಪಲಿಲ್ಲ. ಅಂದು ಅಲ್ಲಿಗೇ ಸುಮ್ಮನಾದಳು. ನನ್ನ ಬಾಳಿನಲ್ಲಿ ಆಗ ಸ್ವಲ್ಪ ನಿರಾಶೆಯ ಚುಟುಕು ಅಡ್ಡ ಬಂದಂತಾಯಿತು; ಆದರೂ ಮನದ ಯಾವುದೊ ಒಂದು ಅಂಶ ಧೃತಿಗೆಡಬೇಡವೆಂದು ಸಾರುತ್ತಿತ್ತು."

"ಎಷ್ಟು ದಿವಸ ಹಾಗೆಯೇ ಇರುವುದಕ್ಕಾದೀತು? ಅಮ್ಮನಿಗೆ ತಿಳಿಯ ದಂತೆ ಹೃದಯಕ್ಕೆ ಒಪ್ಪಿತವಾದ ಒಬ್ಬ ನಲ್ಲನನ್ನು ಗುರುತಿಸಿದೆ. ಕೆಲವೇ ದಿನ ಗಳಲ್ಲಿ ಈ ವಿಷಯವನ್ನು ಅಮ್ಮನಿಗೂ ತಿಳಿಸಿದೆ. ಅವಳು ಈ ಸಂಬಂಧಕ್ಕೆ ಒಪ್ಪಲಿಲ್ಲ. ನಾನಂತೂ ಅವನಲ್ಲಿ ಅನುರಕ್ತಳಾಗಿದ್ದೆ. ಹೃದಯ ಒಪ್ಪಿಸಿದ್ದೆ. ಅಮ್ಮನಿಗೆ ಬಗೆಬಗೆಯಿಂದ ಹೇಳಿ ನೋಡಲಾಯಿತು. ಆದರೂ ಆಕೆ ತಾನು ಹಿಡಿದ ಹುಂಡತನ (ನನ್ನ ದೃಷ್ಟಿಯಲ್ಲಿ) ವನ್ನು ಬಿಡಲಿಲ್ಲ. ನನಗೆ ಆಶ್ಚರ್ಯ ವಾಯಿತು ? ಆಗಿನ ನನ್ನಮ್ಮನ ನಡತೆ ನನಗೆ ಅರ್ಥವಾಗಲಿಲ್ಲ. ಮೊದಲು ನನ್ನಿಚ್ಛೆಗೆ ವಿರೋಧವಾಗಿ ಒಂದು ದಿನವೂ ನಡೆದಿರಲಿಲ್ಲ. ನಾನು ಮಾಡಿದ್ದು ಅಂದದ್ದು ನಡೆದೇ ತೀರುತ್ತಿತ್ತು. ಈಗ ನನ್ನ ಮಾತೊಂದು ನಡೆಯಲಿಲ್ಲ. ಅವಳು ತನ್ನದೇ ಬೇಳೆ ಬೇಯಿಸಲು ಪ್ರಾರಂಭಿಸಿದಳು. ನಾನೀಗ ತುಂಬಾ ಕುಗ್ಗಿಹೋದೆ. ಕಟ್ಟಿದ ಕಲ್ಪನಾ ಸಾಮ್ರಾಜ್ಯದ ಮೇಲೆ ಯಾರೋ ಅನಿರೀಕ್ಷಿತ ವಾಗಿ ದಾಳಿಮಾಡಿದರೆನಿಸಿತು; ಕಟ್ಟಿದ ಗಾಳಿಗೋಪುರವು ಬಿರುಗಾಳಿಗೆ ಸಿಕ್ಕಿ ಕುಸಿದು ಕುಪ್ಪಳಿಸಿ ಭೂಮಿಗೆ ಬಿತ್ತು. ಕನಸುಗಳು ನನಸಾಗದಂತಾ ದವು. ನಿರಾಶೆಯ ಪರದೆ ಕಣ್ಣೆದಿರಿನಲ್ಲಿ ಬಿದ್ದಂತಾಯಿತೇ."

"ನೆರೆಯೂರಿನಲ್ಲಿ ಯಾವನೋ ಒಬ್ಬ ಸಿರಿವಂತನಂತೆ. ಆಗ ಆಗಲೇ ಅವನಿಗೆ ಅರ್ಧಶತಮಾನ ವಯಸ್ಸು, ಅವನ ಮೊದಲ ಹೆಂಡತಿ ಗಂಟುಬೇನೆ ಯಲ್ಲಿ ತುತ್ತಾದಳಂತೆ ಮೃತ್ಯುವಿನಬಾಯಿಗೆ. ಅವಳಿಗೆ ಎರಡು ಹೆಣ್ಣುಮಕ್ಕಳು, ಒಂದು ಗಂಡು, ಹೀಗೆ ಮೂವರು ಮಕ್ಕಳು. ಅದರಲ್ಲಿ ಹಿರಿಯಳಿಗೆ ನನಗಿಂ ತಲೂ ಮೂರುವರ್ಷ ಮಿಕ್ಕಿತ್ತು; ವಯಸ್ಸಿನಲ್ಲಿ ಎರಡನೇಯವಳು ನನ್ನ ಓರಿಗೆ ಯವಳು. ಅಂಥವನಿಗೆ ಧಾರೆಯೆರೆಯಲು ಮಾತುಕೊಟ್ಟಿದ್ದಳಂತೆ. ಊರ ವರು ಮಾತಾಡುತ್ತಿದ್ದರು ಅರ್ಧಸಾವಿರಕ್ಕೆ ಬಂಗಾರದಂಥ ಹುಡುಗೆಯನ್ನು ಮುದುಕನ ಕೊರಳಿಗೆ ಕಟ್ಟುವುದರಲ್ಲಿರುವಳೆಂದು. ನಾನು ನನ್ನಿಷ್ಟೆ, ದೊಡ್ಡ

ವರ್ಷದ ಮಕ್ಕಳಿದುರಿನಲ್ಲಿ ಬಾಳುವೆಮಾಡಿಕೊಂಡು ಹೋಗಲು ಒಪ್ಪಲಿಲ್ಲ. ನನ್ನಿನಿಯನನ್ನು ಆಗಲೇ ಗುರುತಿಸಿದ್ದೆ. ಇದು ಉಗ್ರಸ್ವರೂಪವನ್ನೇ ತಾಳಿತು. ಅಮ್ಮ ಕಿಡಿಕಿಡಿಯಾದಳು.

ಒಮ್ಮೆ ಒಬ್ಬನನ್ನು ಗುರುತಿಸಿ ಹೃದಯ ಒಪ್ಪಿದ ಮೇಲೆ ಇನ್ನುಳಿದವರು ಸಹೋದರ ಸಮಾನರು. ಅಮ್ಮ ಅಂದು ಮನೆಯಲ್ಲಿರಲಿಲ್ಲ. ನಾನೂ ಏನಾದರೊಂದು ಕೊನೆಯ ನಿರ್ಣಯಮಾಡಬೇಕೆಂದು ವಿಚಾರಿಸಲು ಹಾಗೆಯೇ ನಮ್ಮ ತೋಟದಕಡೆಗೆ ನಡೆದಿದ್ದೆ.

ಅಮ್ಮ ಒಮ್ಮೆಲೇ ಅಲ್ಲಿ ಕಾಣಿಸಿಕೊಂಡಳು. ನಾನು ಆಶ್ಚರ್ಯಪಟ್ಟೆ; ನನ್ನನ್ನು ಬಲಾತ್ಕಾರವಾಗಿ ಆ ಅರ್ಧಮುದುಕನ ಊರಿಗೆ ಸಾಗಿಸುವದಕ್ಕೆ ಪ್ರಯತ್ನಿಸಿದಳು. ಬಹಳವಾಡಿ ನನಗರಿಯದಂತೆ ಮದುವೆಯ ದಿನವೂ ನಿಶ್ಚಯವಾಗಿರಬೇಕು; ನಾನು ಒಪ್ಪಲಿಲ್ಲ. ನಾನು ಎಷ್ಟೆಂದರೂ ತರುಣಿ, ಆಕೆ ವಯಸ್ಸಾದವಳು; ಅವಳಿಗೆ ನಾನು ಬಾಗಲಿಲ್ಲ. ಯಾರನ್ನೋ ನೆರವಿಗೆ ಕೂಗಿಕರೆದಳು. ತಲೆಎತ್ತಿ ನೋಡಿದೆ. ಹತ್ತಿರದ ಮಾರ್ಗದಲ್ಲಿ ಒಂದು ಎತ್ತಿನ ಬಂಡಿ, ಕೊಲ್ಲಾರಿ ಬಿಗಿಸಿಕೊಂಡು, ಗುಡಾರ ಹೊದೆಯಿಸಿಕೊಂಡು ನಿಂತಿತ್ತು. ಅದರ ಒಳಗಿಂದ ಒಬ್ಬ ವ್ಯಕ್ತಿ ಜಿಗಿದು ನಮ್ಮಕಡೆಗೆ ಧಾವಿಸಿ ಬರುತ್ತಿದ್ದ. ಆಗ ನಾನು ನನ್ನನ್ನೇ ಮರೆತೆ; ತಾಯಿಯೆಂಬುದು ಪೂರಾ ನನ್ನ ಜ್ಞಾಪಕದಿಂದ ಅಳಿಸಿಹೋಯಿತು. ಎದುರಿನಲ್ಲಿ ನಿಂತವಳು ವೈರಿಯಾಗಿ ಕಂಡಳು. ನನಗೆಲ್ಲಿ ಆ ಹಾಳು ಶಕ್ತಿ ಬಂದಿತೋ! ಬಾಗಿ ಒಂದು ದುಂಡಿಯನ್ನು ಎತ್ತಿ ಹೇರಿಬಿಟ್ಟೆ; ಅಯ್ಯೋ, ಮುಗಿದೇ ಹೋಯಿತು! ಅಮ್ಮನ ತಲೆ ಗಿಜಿಗಿಟ್ಟಿಯಾಯಿತು.' ಕೂಗಿಕೊಂಡು ಅಲ್ಲಿಯೇ ಬಿದ್ದುಬಿಟ್ಟಳು. ಪ್ರಾಣ ಪಕ್ಷಿ ಆಗಲೇ ಹಾರಿ ಬಾನನ್ನಾಶ್ರಯಿಸಿತು. ನಾನು ಮರುಕ್ಷಣದಲ್ಲಿ ಮರುಗಿ ಇದೇನು ಸಿಟ್ಟಿನಭರದಲ್ಲಿ ಮಾಡಿಬಿಟ್ಟೆನೆಂದು ಆಕೆಯನ್ನು ತಬ್ಬಿ ಗೋಳಿಟ್ಟೆ. ಆ ಮನುಷ್ಯ ಈ ಸುಮಾರಿಗೆ ಇಲ್ಲಿಯವರೆಗೆ ಬಂದವನು ಹೆದರಿ, ಈ ದೃಶ್ಯ ಕಂಡು, ಕಾಲಿಗೆ ಬುದ್ಧಿ ಕೊಟ್ಟನು.

ಅಷ್ಟರಲ್ಲಿ ನನ್ನಿನಿಯನು ಕೈಯಲ್ಲಿ ನಾಲ್ಕು ಮಾಗಿದ ಮಾವಿನ ಹಣ್ಣುಗಳನ್ನು ಹಿಡಿದು ನನ್ನನ್ನು ಕೂಗಿ ಕರೆಯುತ್ತ ಚೇಷ್ಟೆ ಮಾಡುತ್ತ ಬಂದನು.

ನನಗೆ ಪೂರಾ ಜ್ಞಾಪಕದಲ್ಲಿದೆ. "ನೋಡು, ಚಿನ್ನ, ಈ ಹಣ್ಣುಗಳು ಅದೆಷ್ಟು ಮಾಗಿವೆ! ನಿನ್ನ ಬಣ್ಣವೇ ಇವಕ್ಕೆ...." ಎಂದವನ ವಾಣಿ.

ಮುಂದೆ ಬಂದನು. ಹಳ್ಳದಲ್ಲಿ ಹಣಕಿ-ಹಾಕಿದ. ನಡೆದ ಸಂಗತಿ-ಮನಗಂಡು ಗದ್ಗದ ನಡುಗಿದ. ಇಬ್ಬರೂ ಒಂದಾಗಿ ತೆಕ್ಕೆಹಾಕಿ ಶೋಕಿಸಿದೆವು; ಭೂಮಿ ಬಗೆದು ಶೋಕಿಸಿದರೂ ಅಮ್ಮ ಮರಳಿ ಬರಲಿಲ್ಲ.

ಮರುದಿನ ಪೋಲೀಸಿನವರು ಇಬ್ಬರನ್ನೂ ಬಂಧಿಸಿದರು. ನನ್ನ ಮೇಲಿನ ಮೋಹದಿಂದ, ನನ್ನನ್ನು ಅಪರಾಧದಿಂದ ಮುಕ್ತಮಾಡಲು ತಾನೇ ಕೊಂದವನೆಂದು, ತನ್ನ ಮೇಲೆ ಪ್ರಸಂಗ ತಂದುಕೊಳ್ಳಲಿಕ್ಕೆ ಪ್ರಯತ್ನಿಸಿದ. ಆದರೆ ಅದಕ್ಕೆ ನನ್ನ ಹೃದಯ ಒಪ್ಪಲಿಲ್ಲ. ಕೊನೆಗೆ ತಾನು ನನ್ನನ್ನು ಈ ಘೋರ ದುಃಖಕ್ಕೆ ಈಡುಮಾಡಿ, ತಾನು ಬದುಕಿರಲಾರೆನೆಂದೂ, ಇಬ್ಬರೂ ಕೂಡಿಯೇ ಈ ಘೋರಕೃತ್ಯನಡಿಸಿದೆವೆಂದು ಹೇಳೋಣವೆಂದೂ ಅಂಗಲಾಚಿ ಬೇಡಿಕೊಂಡ. ನಾನು ಪೂರ್ತಿ ಒಪ್ಪದಿದ್ದರೂ ಅವನ ದೀನಾವಸ್ಥೆಗೆ ಮನಕರಗಿ ಪೋಲೀಸಿನವರ ಎದುರು ಇಬ್ಬರೂ ಸಮಾನ ಅಪರಾಧಿಗಳೆಂದು ಒಪ್ಪಿಕೊಂಡೆವು. 'ನಿರಪರಾಧಿಗೆ ಶಿಕ್ಷೆಯಾಗುತ್ತದೆ' ಎಂಬುದು ಹಗಲಿರುಳು ನನ್ನನ್ನು ಕೊರೆಯುತ್ತಿತ್ತು. ಹೇಗಾದರೂ ಮಾಡಿ ಅವನನ್ನು ಮುಕ್ತನನ್ನಾಗಿ ಮಾಡಲು ನಿಶ್ಚಯಿಸಿದೆ. ನ್ಯಾಯಾಸ್ಥಾನದಲ್ಲಿ ಅಪರಾಧ ಸಿದ್ಧಪಡಿಸುವುದರಲ್ಲಿ ತೊಡಗಿದಾಗ, ನ್ಯಾಯಮೂರ್ತಿಗಳ ಎದುರಿನಲ್ಲಿ ನಿಜಸಂಗತಿ ತಿಳಿಸಿದೆ. ಅವನ ಬಿಡುಗಡೆಯಾಯಿತು. ಆಗ ಅವನು ಪೂರಾ ಇಳಿದೇ ಹೋಗಿದ್ದ. ನಾಚಿಕೆಯಿಂದ ಲಜ್ಜಿತನಾಗಿ 'ಇದೇನು ಮಾಡಿಬಿಟ್ಟೆ ?' ಎಂದಿಷ್ಟೇ ನುಡಿದ.

ಮರುದಿನ ಖಟ್ಲೆಯ ತೀರ್ಪು ಹೇಳುವ ಸಮಯ, ನನ್ನಿನಿಯ ಎಲ್ಲಿಯೋ ಆತ್ಮಹತ್ಯೆ ಮಾಡಿಕೊಂಡನೆಂದು ಸುದ್ದಿ ಬಂತು. ಆಗ ನನಗೆನಿಸಿತು, ನಿಜವಾಗಿಯೂ ನಾನು ನೀಚ ಘಾತುಕಿಯೆಂದು. ಮಾಡಿದ ಕೊಲೆ ಯೆರಡಾದುವು. ನ್ಯಾಯಮೂರ್ತಿಗಳು ತೀರ್ಪು ಓದಿದರು, 'ಏನೇ ಕಾರಣಗಳಿದ್ದರೂ, ತಾಯಿಯ ಕೊಲೆಮಾಡಿದ್ದಾಳೆಂದಮೇಲೆ ಕ್ಷಮಿಸಲು ಬರುವಂತಿಲ್ಲ. ಹತ್ತು ವರ್ಷ ಕಠಿಣ ಶಿಕ್ಷೆ."

ನಾನು ನಡುವೆ ಆದೆಷ್ಟೋ ಕಂಬನಿಕರೆದಿದ್ದರೂ ಆಕೆ ಒಮ್ಮೆಯೂ ಅಳಲಿಲ್ಲ. ಈಗ ಅವಳ ಹೃದಯ ನಿಜವಾಗಿಯೂ ಕಲ್ಲಿನಂತೆ ಕಠಿನವಾಗಿರಬೇಕು. ನಾನು ಇಷ್ಟುದಿವಸ ಕೈದಿಗಳ ವಿಷಯವಾಗಿ ತಳೆದಿದ್ದ ಜಿಗುಪ್ಸೆ ಇಂದು ಹಾರಿಹೋಯಿತು. ‘ ನಿಜ, ಕಾಗೆಗಳ ಬಳಗದಲ್ಲಿ ಕೋಗಿಲೆಯ ಮರಿಗಳೂ ಇರುತ್ತವೆ ’ ಎನಿಸಿತು.

“ ನೀನು ನನ್ನೊಬ್ಬ ತಂಗಿಯ ಸಮಾನಳು. ಮೇಲಾಗಿ ಈಗ ಅನಾಥೆ. ಶಿಕ್ಷೆ ಮುಗಿದನಂತರ ಎಲ್ಲಿಗೂ ಹೋಗದೆ ನೇರವಾಗಿ ನಮ್ಮಲ್ಲಿಗೆ ಬಂದುಬಿಡಮ್ಮಾ. ಆಕೆ ನಿನ್ನನ್ನು ಮಗಳಂತೆ ಕಾಣುವಳು.– ” ಎದೆ. ಆಕೆ ಈಗ ಮಾತ್ರ ಚಿಕ್ಕಮಗುವಿನಂತೆ ಅತ್ತುಬಿಟ್ಟಳು; ಬಂಡಿ ನಿಲ್ಲದೆ ಮುಂದೆ ಸಾಗಿತು.

# ಅಪರಾಧಿನಿಯ ಅಂತರಾಳ

೧

ತನ್ನವರೇ ಮೋಸಮಾಡಿದಾಗ ಮಾನವರು ಮಂಕರಾಗಿ ಬಿಡುತ್ತಾರೆ. ಲೋಕದಲ್ಲಿ ಯಾರನ್ನು ನಂಬಬೇಕು, ಯಾರಲ್ಲಿ ವಿಶ್ವಾಸವಿಡಬೇಕೆಂಬುದೊಂದು ಅವನ ಪಾಲಿಗೆ ಪೂರ್ತಿಯಾಗಲಾರದ ಸಮಸ್ಯೆಯಾಗಿ ಬಿಡುತ್ತದೆ. ಪ್ರಪಂಚವೇ ಅವರಿಗೆ ಅವಿಶ್ವಾಸದ ಗೊಟ್ಟೆಯಾಗಿ ತೋರಿದರೆ ಸೋಜಿಗವಲ್ಲ. ಅದರಲ್ಲಿಯೂ ಮೋಸ ಮಾಡಿದವರು ಖಚಿತವಾಗಿ ತಿಳಿದು ಬಾರದಾಗಂತೂ ಅವರ ಸ್ಥಿತಿ ಹೇಳತೀರದು. ಯಾರ ಮೇಲೆ ಸಂಶಯಪಡೆಯಬೇಕೆಂಬುದರಲ್ಲಿಯೇ ಸದಾ ಸವೆದು ಸುಸ್ತಾಗಿಬಿಡುತ್ತಾರೆ. ಅಂಥ ಸಮಯ ಅವರ ಮನಸ್ಸಿನ ಸ್ಥಿತಿಯನ್ನಂತೂ ಬಣ್ಣಿಸುವದು ಅಸದಳ! ಯಾರ ಬಗೆಗೋ, ಏತಕ್ಕಾಗಿಯೋ ಇಲ್ಲದ್ದೊಂದು ಕಲ್ಪಿಸಿ ಅದರಲ್ಲಿ ತಾವೂ ಮಡಗಲು ಹೆಣಗುತ್ತಾರೆ. ಮನಸ್ಸುಗಳನ್ನು ಹರಿದಂತೆ ಹರಿಯಗೊಡುತ್ತಾರೆ. ಒಂದಿನಿತು ಸ್ಥೈರ್ಯ, ಸಂಯಮ, ವಿವೇಕಗಳು ಆಗ ಅಡ್ಡ ಬರದಿದ್ದರೆ ಕೊಂಬೆಯಿಂದ ಕೊಂಬೆಗೆ ಜಿಗಿಯುವ ಮಂಗಗಳ ಸ್ಥಿತಿ ಅವರದಾಗುವದು. ಅಧೋಗತಿಯ ಒಂದೊಂದೇ ಮೆಟ್ಟಲಿಗಿಳಿದು ಸೇಡು ತೀರಿಸಿಕೊಂಬುವಂತಹ ಹೀನ ಕೃತಿಗೂ ಹಲವು ಸಲ ಮನಸ್ಸುಮಾಡುವದು; ಒಂದು ಸಮಯ ಅದು ಈಡೇರದಿದ್ದಲ್ಲಿ ತಾವು ನಿರ್ಮಿಸಿದ ಜಾಲಗಳಲ್ಲಿ ತಾವೇ ಹೊರಳಾಡಿ ಆತ್ಮನಾಶವನ್ನೂ ಮಾಡಿಕೊಳ್ಳುವದುಂಟು. ಅಂಥವರಿಂದ ಅವರಿಗೂ ಸುಖವಿಲ್ಲ; ಅವರನ್ನು ಹೊತ್ತ ಭೂಮಿಗೂ ಸಂತಸವಿಲ್ಲ. ಆದರೆ ಅವರು ಸದಸದ್ವಿವೇಕಿಗಳಾಗಿ ನೇಸರನಿನ ಬೆಳಕಿನಷ್ಟು ನಿಚ್ಚಳವಾದ ಮನಸ್ಸುಗಳವರಾಗಿದ್ದರೆ ಎದುರುಗಾಳಿಗಳು ನಿರ್ಮಲ ಮನಸ್ಸಿನಿಂದ ಮೋಸತನವನ್ನೆಲ್ಲ ಅವರೆದುರಿನಲ್ಲಿ ತೋಡಿಕೊಂಡಾಗ ಅವರ ಬಗೆಗಿದ್ದ ತಿರಸ್ಕಾರ, ಸೇಡು ಇತ್ಯಾದಿ ನೀಚಭಾವನೆಗಳು ಮಾಯ್ದು ಹೋಗಿ ಇನ್ನಿನಿತು ಆದರ-ಆತ್ಮೀಯತೆಗಳೂ ಬೆಳೆದು ಬರುವದುಂಟು. ಇನ್ನು ವಂಚಕರಿಗಾದರೂ

ಸುಖ ಸಂತಸಗಳಿವೆಯೇ? ಮೋಸಮಾಡಿದ ಗಳಿಗೆಯಿಂದ ಅವರ ವಿವೇಕಕ್ಕೆ ಹುಳಹತ್ತಿ ಬಿಡುತ್ತದೆ; ಸದಸದ್ವಿವೇಕ ಬುದ್ಧಿಗೂ ಹರಿದಾಡುವ ಮನಸ್ಸಿಗೂ ತಿಕ್ಕಾಟ ನಡೆಯುತ್ತದೆ. ಆದರ ಪರಿಣಾಮ ಭೀಕರವಾದ ಒಡವಾಗ್ನಿಗೆ ಮಾರ್ಗಮಾಡಿಕೊಟ್ಟಾಗ ಬಾಹ್ಯ ಸೌಂದರ್ಯವು ಎಷ್ಟೇ ಆಕರ್ಷಣೀಯವಾಗಿದ್ದರೂ, ಒಳಗೆ ಹೊತ್ತಿದ ಅಗ್ನಿಯ ಧೂಮದಿಂದ ಅಂತರ್‌ಸೌಂದರ್ಯವು ಕಪ್ಪಾಗಿ, ಅಂವಗೆಟ್ಟು, ಅವರ ವ್ಯಕ್ತಿತ್ವಗಳೇ ಹಾಳಾಗಿ ಹೋಗುತ್ತದೆ. ಇದರ ಬಗೆಗೆ ಸಾಧ್ಯವಿದ್ದಷ್ಟು ತೀವ್ರ ಜಾಗ್ರತೆವಹಿಸಿದಷ್ಟು ನೆಟ್ಟಗೆ. ಅಂಥವರಿಗೆ ಎದುರಲ್ಲಿರುವವು ನೇರವಾದ ಎರಡು ಮಾರ್ಗಗಳು; ತಾವು ಮಾಡಿದ್ದು ತಪ್ಪೆನಿಸುತ್ತಿದ್ದರೂ ಅದು ಒಪ್ಪೆಂದೇ ಸಾಧಿಸುವದೊಂದು ಮಾರ್ಗ! ತಪ್ಪನ್ನು ಒಪ್ಪಿಕೊಂಡು ಮನಸ್ಸಿನಲ್ಲಿಯ ಕೊಳಚೆಯನ್ನು ಸ್ವಚ್ಛಮಾಡಿಕೊಂಬುವದಿನ್ನೊಂದು ಮಾರ್ಗ!! ಯಾವ ಮಾರ್ಗವನ್ನು ಹಿಡಿದು ನಡೆದರೂ ಒಂದೊಂದು ಗುರಿ ಸಾಧಿಸುತ್ತಾರೆ; ಆದರೆ ಅವೆರಡು ಗುರಿಗಳಲ್ಲಿ ಎರಡು ಧ್ರುವಗಳಷ್ಟು ಅಂತರವಿದೆ. ಒಂದು ಗುರಿಯು ಮಾನವರನ್ನು ಮತ್ತೆ ಚರಿತ್ರೆಯಲ್ಲಿ ಹಿಂದಕ್ಕೆಳೆದು ಪಶುವೃತ್ತಿಗೆ ಹಚ್ಚುವದರೆ ಇನ್ನೊಂದು ಮಾನವರನ್ನು ಮಾನವತೆಯ ಪಟ್ಟದಲ್ಲಿಯೇ ಭದ್ರವಾಗಿ ನಿಲ್ಲಿಸಲು ಪ್ರಯತ್ನಿಸುತ್ತದೆ.

*   *   *   *

'ಹಿತಚಿಂತಕ ಸಂಘ'ದ ಕಾರ್ಯಕಾರೀ ಮಂಡಲದಲ್ಲಿದ್ದವರು ಹತ್ತು ಜನರು ಸದಸ್ಯರು. ಅದರಲ್ಲಿ ಐದು ಜನರು ಗಂಡಸರು; ಐದು ಜನ ಹೆಂಗಸರು. ಮಾನವ ಜಾತಿಯ ಅರ್ಧ ಹಳ್ಳಿಗಳಿಗೆ ಹೊಣೆಗಾರರಾದ ಹೆಂಗಸರು ಮುಂದೆ ಬಂದು ಚುನಾವಣೆಯಲ್ಲಿ ಭಾಗವಹಿಸಿ ಎದುರಾಳಿಗಳನ್ನು ಸೋಲಿಸಿ ಕಾರ್ಯಕಾರೀ ಮಂಡಲದ ಸದಸ್ಯೆಯರಾದುದು ಮಾನವನ ಪ್ರಗತಿಯ ಮುಂಬೆಳಕಾಯಿತು; ಮಾನವ ಜಾತಿಯ ಅರ್ಧದಷ್ಟಿರುವ ಹೆಂಗಸರನ್ನು ಹೊಗೆವಿಡಿದು, ಅಜ್ಞಾನದ ಕತ್ತಲೆ ತುಂಬಿದ ಅಡಿಗೆಮನೆಗಳಿಂದ ಹೊರಬರುವಂತೆ ಮಾಡದ ವಿನಃ ಮಾನವ ಜಾತಿಗೆ ಮೋಕ್ಷವಿಲ್ಲವೆಂದು ಕಳಕಳಿಯಿಂದ ಕಾರ್ಯ ಮಾಡುತ್ತಿದ್ದ ಸಮಾಜಸೇವಕರ ಮನಸ್ಸಿನ ಆಶೆಗಳು ಅಂದು ಕೈಗೂಡಿದವು. ಎಲ್ಲರೂ ಸೇರಿ ಒಮ್ಮತದಿಂದ ಸಂಘದ ಗೌರವಕಾರ್ಯದರ್ಶಿಯ ಸ್ಥಳಕ್ಕೆ ಹೆಂಗಸರಲ್ಲಿಯ ಒಬ್ಬಳನ್ನೇ ಆರಿಸಿ, 'ಕಾರ್ಯದರ್ಶಿ' ಎಂಬ

ಪದಕ್ಕೆ ಬದಲಾಗಿ ‘ ಕಾರ್ಯದರ್ಶಿನಿ ’ಯೆಂದ ನಾಮಕರಣ ಮಾಡಿದರು. ಇಷ್ಟೆಲ್ಲವನ್ನೂ ನಿರ್ವಂಚನೆಯಿಂದ ಮಾಡಿದಾಗ ಹೆಂಗಳೆಯರ ತಲೆತಿರುಗಿತು. ತಾವು ಗಂಡಸರಿಗಿಂತೇನೂ ಕಡಿಮೆಯವರಲ್ಲ; ಇಷ್ಟು ದಿವಸ ಅವರಿಗೆ ಆಧೀನ ರಾಗಿ, ಅವರ ದಾಸಿಯರಂತೆ ಇದ್ದುದು ನಮ್ಮ ಕುಲಶೀಲಗಳಿಗೆ ಒಪ್ಪುವ ಮಾತಲ್ಲ. ಇಷ್ಟು ದಿವಸ ನಡೆದುದಂತೂ ಸರಿಯೇ, ಇನ್ನು ಮುಂದಾದರೂ ನಾವು ಕಣ್ಣು ತೆರೆಯಬೇಕು; ಇಷ್ಟು ದಿನಗಳ ವರಗೆ ನಮಗಾದ ಅನ್ಯಾಯ ಅತ್ಯಾಚಾರ(?) ಗಳ ಸೇಡುಗಳನ್ನು ತೀರಿಸಿಕೊಳ್ಳದೆ ಬಿಟ್ಟರೆ ತಾವು ಹೆಂಗಸ ರಾಗಿ ಹುಟ್ಟಿದುದರ ಫಲವೇನು ? ಇತ್ಯಾದಿ ಅಹಂಕಾರಕ್ಕೆ ಇಳಿದರು. ಸಂಘ ದಲ್ಲಿ ಗಂಡಸರನ್ನು ಕಡೆಗಣಿಸುವ ಹಲವಾರು ಹಕ್ಕುಗಳನ್ನು ಬೇಡಿದರು. ಗಂಡ ಸರಾದರೂ ತಮ್ಮ ಸ್ಥಾನ-ಮಾನಗಳನ್ನು ಲೆಕ್ಕಿಸದೆ ಹೇಗಾದರೂ ಮುಂದೆ ಬಂದರೆ ಸಾಕೆಂದು ಅವರ ಮಾತಿಗೆ ಎದುರುನುಡಿಯಾಡಲಿಲ್ಲ. ಸಿಮಾರ ಳೊಬ್ಬಳನ್ನು ಬಿಟ್ಟರೆ ಒಬ್ಬರಿಗೂ ಹೆಂಗಸರಲ್ಲಿ ಸಾರಾಸಾರ ವಿಚಾರ ಮಾಡುವ ಶಕ್ತಿಯಿದ್ದಿಲ್ಲ. ಒಂದಿಬ್ಬರು ಮಿಕ್ಕಿದ ಕುಶಲಮತಿಯರಾಗಿದ್ದರೂ ಮೇಲು ಬುದ್ಧಿ ಕಡಿಮೆ ! ಅವರನ್ನೆಲ್ಲ ವಿಹಂಗಮದೃಷ್ಟಿಯಿಂದ ಒಮ್ಮೆ ನಿರೀಕ್ಷಿಸಿದಲ್ಲಿ ಅವರು ಸಂಘದಲ್ಲಿ ಸೇರಿದುದರ ಸ್ಪಷ್ಟ ಕಲ್ಪನೆ ಬಂದು ಬಿಡಬಹುದಾಗಿತ್ತು. ಗೌರವ ಕಾರ್ಯದರ್ಶಿನಿ ನಳಿನಿ, ತುಂಬಾ ಸುಸ್ವಭಾವಿ ಏನೋ ನಿಜ; ಸಾಕಷ್ಟು ಓದಿಕೊಂಡಿದ್ದಾಳೆ; ಗೌರವ ಕಾರ್ಯದರ್ಶಿನಿಗೆ ಇರಬೇಕಾದ ಸಕಲ ಗುಣ ಗಳೂ ಅವಳಲ್ಲಿವೆ. ಕಾರ್ಯನಿರ್ವಹಣ ಶಕ್ತಿಗೂ ಕಡಿಮೆಯಿಲ್ಲ; ಆದರೂ ಒಂದಿಬ್ಬರು ಗಂಡುಬೀರಿಯರ ಮಾತಿಗೆ ಮರುಳಾಗಿ ಗಂಡು ಜನ್ಮದ ಮೇಲೆಯೇ ಸೇಡುತೀರಿಸಿಕೊಳ್ಳಲು ಕಚ್ಚೆಹಾಕಿ ಅಧಿಕಾರದಂಡ ಹಿಡಿದಿದ್ದಳು. ಸರೋಜ ಳಿಗೆ ತನ್ನ ಸೌಂದರ್ಯದ ಹೆಮ್ಮೆಯೇ ಸಾಕಷ್ಟಕ್ಕಿಂತ ಹೆಚ್ಚಾಗಿತ್ತು. ತಾನು ಆಯ್ಕೆಯಲ್ಲಿ ವಿಜಯಿಯಾದುದು ತನ್ನ ಸೌಂದರ್ಯದಿಂದ; ಈಗ ತಾನೂ ಎಲ್ಲರ ಆದರ್ಶದೇವಿಯಾಗಬೇಕೆಂದು ಸದಾ ಹಂಬಲಿಸುವಾಕೆ; ನಿಜವಾಗಿಯೂ ಆಕೆ ಸೌಂದರ್ಯಶಾಲಿನಿಯೇ ! ಬಣ್ಣ ನಸುಗಪ್ಪಾದರೇನಾಯಿತು ? ಬಣ್ಣ ಒಂದೇ ಸೌಂದರ್ಯದ ಹಣೆಬರಹ ಬರೆಯುವದಿಲ್ಲವಲ್ಲ ? ಕಪ್ಪು ಗುಂಗುರ ಕೂದಲು, ಬಟ್ಟ ಮುಖ, ವಿಶಾಲವಾದ ಕಂಗಳು, ನಿಡಿದಾದ ನಾಶಿಕ, ತುಂಬಿದ ಗಲ್ಲಗಳು, ಮಲ್ಲಿಗೆಯ ಮೊಗ್ಗಿನಂತಹ ದಂತಪಂಕ್ತಿಗಳು, ಚಿಕ್ಕದಾದ

ಕಟಿ, ಬಳ್ಳಿಯಂತೆ ಬಳಕುವ ದೇಹ, ವೈಯಾರದ ನಡಿಗೆ; ಇಂಪಾದ ಧ್ವನಿ ಇತ್ಯಾದಿ ಕಾವ್ಯವೆಣ್ಣಿನಲ್ಲಿರಬೇಕಾದ ಸಕಲ ಗುಣಗಳು ಆಕೆಯಲ್ಲಿದ್ದವು. ಇಷ್ಟೊಂದು ಸೌಂದರ್ಯದ ಅಧಿದೇವಿಯರಾದ ಹೆಂಗಸರನ್ನು ಈ ಕುರೂಪಿಗಳಾದ ಗಂಡುಗಳು ನಿರ್ದಾಕ್ಷಿಣ್ಯವಾಗಿ ಒಲೆಯ ಮುಂದೆ ಇಷ್ಟು ದಿವಸ ಕೂಡಿಸಿ ಅನ್ಯಾಯ ಬಗೆದಿದ್ದಾರೆಂದು ತನ್ನ ಮನಸ್ಸಿಗೆ ಅನಿಸಿ, ಕಳವಳಗೊಂಡು ಸೌಂದರ್ಯವತಿಯರ ಉದ್ಧಾರಕ್ಕಾಗಿ ಕುರೂಪಿಯರಾದ ಗಂಡುಗಳನ್ನು ದಂಡಿಸಲು ಸಿದ್ಧಳಾದ ಸೈನಿಕೆಯಾಕೆ! ಮೂರನೆಯಾಕೆ ಚಂಚಲೆ; ಸ್ವಭಾವಕ್ಕೆ ತಕ್ಕಂತಹ ಹೆಸರು! ಸರೋಜಳಲ್ಲಿ ಕಡಿಮೆಯಾದ ಬಣ್ಣವೂ ಈಕೆಗೆ ಕೂಡಿತ್ತೆಂದ ಮೇಲೆ ಕೇಳಬೇಕೆ? ಗಂಡಸರು ಸಿಕ್ಕಲ್ಲಿ ತಿರುಗುತ್ತಾರೆ; ಸಿಕ್ಕ ಹಾಗೆ ಮನಬಂದವರಲ್ಲಿ ರಮಿಸುತ್ತಾರೆ; ಆದರೂ ಅವರಿಗೆ ಸಮಾಜವು ಹೆಂಗಸರಿಗಿರುವಂತೆ ಉಗ್ರವಾದ ಕಟ್ಟುನಿಟ್ಟುಗಳನ್ನು ಹಾಕಿಲ್ಲ; ಆ ಸಮಾಜವಿರುವದಾದರೂ ಗಂಡಸರ ಕೈಯಲ್ಲಿ; ಅವರ ಸೂತ್ರಧಾರರೇ ಗಂಡಸರು; ಅದೆಲ್ಲ ಹೋಗಬೇಕು; ಅದರ ಸೂತ್ರಗಳನ್ನೆಲ್ಲ ಇನ್ನು ಹೆಂಗಸರು ಹಿಡಿಯಬೇಕು. ಇಂದು ಹೆಣ್ಣಿನ ಬಗೆಗಿದ್ದ ಕಟ್ಟುನಿಟ್ಟುಗಳೆಲ್ಲ ದೂರವಾಗಿ ತಾವೂ ಮನಬಂದಂತೆ ವರ್ತಿಸಿ ನರ್ತಿಸಲಿಕ್ಕೂ ಹಕ್ಕು ಬೇಕೆಂದು ಹಲವಾರು ಕಡೆಯಲ್ಲಿ ನುಡಿದು, ಹಾಗೆಯೇ ವರ್ತಿಸಿ, ಮುಖಭಂಗಮಾಡಿಕೊಂಡು ತಣ್ಣಗೆ ಕುಳಿತಾಗ ಇಂಥ ಕೆಲಸ ಸಿಕ್ಕಮೇಲೆ ಕೇಳುವದೇನು? ಒಂದು ಕೈ ನೋಡಿಬಿಡುತ್ತೇನೆಂದು ಆಹ್ವಾನವಿತ್ತೇ ಸದಸ್ಯಳಾಗಿದ್ದಳಾಕೆ. ನಾಲ್ಕನೆಯಾಕೆ ಗರತಿ ಹೆಸರಿಗೆ ತಕ್ಕಂತೆ ಗರತಿಯೇ ಸರಿ; ಗಂಡನೇ ದೇವರು, ಧರ್ಮ ಇತ್ಯಾದಿ ಬಲವಾಗಿ ನಂಬಿದವಳು; ಆದರೂ ಉಳಿದಗೆಳತಿಯರ ಸೆಳವಿಗೆ ಸಿಕ್ಕು, ರಾಜಕಾರಣಿಗಳು ಹೊತ್ತು ಬಂತಾಗ ತಮ್ಮ ಧೋರಣಗಳನ್ನು ಬದಲಿಸುವಂತೆ, ತನ್ನ ಸ್ವಭಾವದಲ್ಲಿ ಒಂದಿನಿತು ಮಾರ್ಪಾಡು ಮಾಡಿ, ಗೆಳತಿಯರು ಅನ್ನುವ ಮಾತಿಗೊಂದಕ್ಕೂ ಅಡ್ಡಬರುತ್ತಿರಲಿಲ್ಲ. ಕೊನೆಯವಳೇ ಸಿಮಾರಾ—ಕ್ರಿಶ್ಚನ ಹೆಣ್ಣುಮಗಳು. ಆಕೆ ಹೆಮ್ಮೆ ಪಡಲಿಕ್ಕೆ ಉಳಿದವರಂತೆ ಸೌಂದರ್ಯವತಿಯೂ ಅಲ್ಲ; ಪಾಂಡಿತ್ಯವೂ ಇರಲಿಲ್ಲ. ಸರ್ವಸಾಧಾರಣ ಓದಿಕೊಂಡಿದ್ದಾಳೆ; ಕನ್ನಡದಲ್ಲಿ ಕವಿತೆಗಳನ್ನೂ ಸ್ಫೂರ್ತಿ ಬಂದಾಗ ರಚಿಸುತ್ತಿದ್ದಳಂತೆ! ಎಂಥ ಕವಿತೆ ರಚಿಸುತ್ತಿದ್ದಳೋ ಆಕೆಗೇ ಗೊತ್ತು! ಆದರೂ ತನ್ನ ಕವಿತೆಯ ಬಗೆಗೆ

ಬಹಳವಿಲ್ಲದಿದ್ದರೂ ಸ್ವಲ್ಪ ಹೆಮ್ಮೆ ಆಕೆಗಿದೆ; ಅದನ್ನು ಒಂದೆರಡು ಸಲ ಒಬ್ಬಿಬ್ಬರ ಮುಂದೆ ಆಡಿಯೂ ತೋರಿಸಿದ್ದಳು. ಇನ್ನು ಸೌಂದರ್ಯದ ಮಾತು ಪಕ್ಷಪಾತವಿಲ್ಲದೆ ಹೇಳಬೇಕೆಂದರೆ ಆಕೆ ಕುರೂಪಿ; ನಂದಿಯಕೋಲಿನಂತೆ ಉದ್ದವಾದ ಸೊರಗಿದ ದೇಹ, ಕಪ್ಪು ಬಣ್ಣ, ಗೂಳಿಬಿದ್ದ ಕಣ್ಣು, ಒಳಸೇರಿದ ಗಲ್ಲ; ಏರುಬಾಚಿದ ಕೂದಲು ಇತ್ಯಾದಿ ಆಕೆಯ ಕುರೂಪತ್ವದ ಸೊತ್ತುಗಳು. ಆದರೆ ಅವರು ಐವರಲ್ಲಿ ಆಕೆಯೂ ಒಬ್ಬ ಮುಷ್ಯಳು! ಕ್ರಿಶ್ಚನ್‌ಳೆಂದು ಇದ್ದರೂ ಇರಬೇಕು. ಧರ್ಮದ ತತ್ವಗಳು ಆಕೆಯಲ್ಲಿ ಮನೆ ಮಾಡಿಕೊಂಡಿದ್ದವು ಎಲ್ಲ ಧರ್ಮಗಳ ತಳಹದಿಯಾದ ದಯೆಯು ಆಕೆಯ ಜೀವವುಸುರಾಗಿತ್ತು! 'ಎಲ್ಲರೂ ದೇವರ ಮಕ್ಕಳು!' ಎಂಬ ತನ್ನ ಧರ್ಮ ಗ್ರಂಥದಲ್ಲಿಯ ನುಡಿಯನ್ನು ಚನ್ನಾಗಿ ಅರ್ಥ ಮಾಡಿಕೊಂಡಿದ್ದಳು. ಆದುದರಿಂದ ಗಂಡಸರು ಹೆಂಗಸರ ಮೇಲೆ ಯಾವ ಅನ್ಯಾಯವನ್ನೇ ಮಾಡಿರಲಿ, ಆಕೆ ಅವರ ಮೇಲೆ ಸೇಡು ತೀರಿಸಿಕೊಳ್ಳಲು ಸಿದ್ಧಳಾಗಿರಲಿಲ್ಲ. ಪ್ರೇಮ, ಸತ್ಯ, ನಂಬುಗೆಗಳೇ ಆಕೆಯ ಬಾಳಅಡಿಗಲ್ಲುಗಳು; ಆದುದರಿಂದ ಏನಾದರೊಂದು ನೆಪದಿಂದ ಗಂಡುಜನ್ಮದ ಮೇಲೆ ಸೇಡು ತೀರಿಸಿಕೊಳ್ಳಲು ಹವಣಿಸುತ್ತಿರುವ ಇತರ ಸದಸ್ಯೆಯರನ್ನು ಕಂಡರೆ ಆಗುತ್ತಿರಲಿಲ್ಲ. ಎಷ್ಟೋ ಸಲ ಅವರನ್ನು ದಾರಿಗೆ ತರಲು ಪ್ರಯತ್ನಿಸಿದಾಗ ಅದು ಇನ್ನಿನಿತು ವಿಷಮತೆಯಲ್ಲಿಯೇ ಕೊನೆಗೊಂಡಿತ್ತು. ಮೇಲಾಗಿ ನಿಷ್ಠುರವಾದಿ; ನಿಷ್ಠುರವಾದಿ ಹೇಗೆತಾನೇ ಮೊಗತುತಿಮಾಡಬಹುದು? 'ಯೋಗ್ಯತೆಗೆ ತಕ್ಕ ಸ್ಥಾನಮಾನ ದೊರೆಯಬೇಕು' ಇದೇ ಆಕೆಯ ಹಂಬಲು.

ಸಂಘದ ಕಾರ್ಯಕ್ಷೇತ್ರ ಬಿತ್ತರವಾಗಿತ್ತು. ಜನ ಹಿತದ ಕಡೆಗೆ ನಿತ್ಯವೂ ಲಕ್ಷಹಾಕಬೇಕಿತ್ತು; ಅದಕ್ಕಾಗಿ ಹಲವಾರ ನೇಮ-ನಿತ್ಯಗಳನ್ನು ನಿರ್ಣಯಿಸುವದು ಸಂಘಕ್ಕೆ ಸೇರಿದ ಕಾರ್ಯವೇ ಆಗಿತ್ತು. ಜನ ಜೀವನವನ್ನು ಬೆಳಿಸಲು ಅವಶ್ಯಕಗಳಾದ ಒತ್ತಾಯ ಶಿಕ್ಷಣ, ಅಭ್ಯಾಸ ಮಂಡಲ, ಚರ್ಚಾಕೂಟ, ವಾಚನಾಲಯ, ಪ್ರಕಟನಾಯೋಜನೆ—ಇನ್ನೂ ಹಲವಾರು ಕಾರ್ಯಗಳು ಸಂಘದ ಮುಂದಿದ್ದವು; ತಮಗೆ ನೀಗದಿದ್ದರೂ, ಆ ವಿಷಯಗಳಲ್ಲಿ ಅಜ್ಞಾನಿಗಳಾಗಿದ್ದರೂ ನಳಿನಿ, ಸರೋಜ, ಚಂಚಲೆಯರು ಎಲ್ಲ ಅಧಿಕಾರಗಳನ್ನೂ ಎತ್ತಿಹಾಕಿಬಿಟ್ಟಿದ್ದರು ಒತ್ತಾಯದಿಂದ, ಸ್ತ್ರೀಶಿಕ್ಷಣ, ಆರೋಗ್ಯ ಖಾತೆ

ಗಳಿಂಡು ಗರತಿ ಮತ್ತು ಸಿಮಾರೆಯರಿಗೆ ದೊರಕಿದ್ದವು. ಇಷ್ಟು ದಿವಸ ಸಂಘದ ಆಧಾರ ಸ್ತಂಭರಾಗಿದ್ದ ಗಂಡುಗಳು ಒಂದರ ಮುಖ ಇನ್ನೊಂದು ನೋಡುತ್ತ ಕುಳಿತುಬಿಟ್ಟಿದ್ದವು; ಅವರಿಗೆ ಯಾವ ಸ್ಥಾನವೂ ಸಂಘದಲ್ಲಿ ದೊರೆತಿರಲಿಲ್ಲ. ' ಹೆಂಗಸರು ಮುಂದೆ ಬಂದರೆ ಸಾಕು; ಯಾರು ಅಧಿಕಾರದಲ್ಲಿದ್ದರೇನು ? ಕೆಲಸ ಮಾಡುವದು ಮುಖ್ಯ; ಅಧಿಕಾರದಲ್ಲಿದ್ದರೇನೆ ಕೆಲಸ ಮಾಡಲಿಕ್ಕೆ ಬರುವದೇ ? ಹೊರಗೆ ಇದ್ದು ಕೆಲಸ ಮಾಡಲಿಕ್ಕೆ ಯಾವ ಅಡ್ಡಿ ? ' ಮುಂತಾಗಿ ವಿಚಾರಿಸುವ ವಿಶಾಲಹೃದಯಿಗಳಾದ ನೀಲರಾಜ, ಪದ್ಮನಾಭರಿಬ್ಬರು ಅವರ ಕಾರ್ಯವಾವುದಕ್ಕೂ ಅಡ್ಡಿ ಮಾಡಗೊಟ್ಟಿರಲಿಲ್ಲ; ಅವರಲ್ಲಿ ತಲೆತಿರುಕನೆಂದ ಪರಭನೊಬ್ಬನು ಒಂದಿನಿತು ಸ್ವಾರ್ಥಿಯೂ ಅಹುದು; ತನ್ನ ಸ್ಥಾನ ಇತರರು ಆಕ್ರಮಿಸಿದ್ದರೆ ಒಂದಿನಿತು ಕೋಪ; ಮೇಲಾಗಿ ಅಡಿಗಡಿಗೆ ಆಗುವ ಅಪಮಾನಗಳನ್ನು ಸಹಿಸುವಷ್ಟು ಸಾಮರ್ಥ್ಯ ಅವನಲ್ಲಿರಲಿಲ್ಲ. ಆದರೂ ಅವನನ್ನು ತಡೆಹಿಡಿದವರು ನೀಲರಾಜ, ಪದ್ಮನಾಭ, ರಾಜಶೇಖರ, ಮುಕುಂದರು ಒಂದು ತರಹದ ಮನುಷ್ಯರು; ' ಮಾಡುವದನ್ನು ನೋಡೋಣ 'ವೆನ್ನುವದೇ ಅವರ ಮನದಿಚ್ಛೆ !

ಉಳಿದುದು ಒಂದೇ ಒಂದು ಸ್ಥಾನದ ಆಯ್ಕೆ! ಸಂಘದವರು ಹೊರಡಿಸುತ್ತಿದ್ದ ಪತ್ರಿಕೆಗೆ ' ಸಂಪಾದಕ (ಸಂಪಾದಿಕೆ)' (ಯ)ರನ್ನು ಚುನಾಯಿಸುವದು ಅದಕ್ಕೂ ಚಂಚಲೆ ಆಶೆ ಮಾಡಿದಳು. ಸಿಮಾರಾ ಚನ್ನಾಗಿ ಕೈಝಾಡಿಸಿದಳು. ನಿಜವಾಗಿಯೂ ಒಂದು ಪತ್ರಿಕೆಯನ್ನು ನಡೆಯಿಸಿಕೊಂಡು ಹೋಗುವ ಶಕ್ತಿ ಚಂಚಲೆಯದಲ್ಲ. ಎದೆ ಸೀಳಿದರೆ ಎರಡು ಅಕ್ಷರಗಳಿಲ್ಲ; ಸಾಹಿತ್ಯವೆಂದರೇನೆಂಬುದರ ಕಲ್ಪನೆಯಿಲ್ಲ; ಅಂಥವಳಿಗೆ ' ಸಂಪಾದಿಕೆ 'ಯಾಗಬೇಕಿತ್ತಂತೆ; ಸಿಮಾರಾ ಆಕೆಗೆ ಚನ್ನಾಗಿ ಬಯ್ದು ಈ ರೀತಿಯ ಸ್ವಾರ್ಥಕ್ಕೆ ಬಲಿಬಿದ್ದು ಸದಸ್ಯರು ಕೆಲಸಮಾಡುವದಿದ್ದಲ್ಲಿ ತಾನು ' ತನ್ನ ಸದಸ್ಯತ್ವಕ್ಕೇ ರಾಜೀನಾಮೆ ಕೊಟ್ಟುಬಿಡುವೆ' ನೆಂದಳು; ಆದರೂ ಹಾಗೆ ಮಾಡಲಿಲ್ಲ; ಆಕೆಯ ವಿರುದ್ಧ ಆ ಸ್ಥಳಕ್ಕೆ ಮುಕುಂದನನ್ನು ನಿಲ್ಲಲು ಅರಿಕೆ ಮಾಡಿಕೊಂಡಳು. ಮುಕುಂದ, ಅವರೆಲ್ಲರಲ್ಲಿ ಆ ಕೆಲಸಕ್ಕೆ ತಕ್ಕವನು; ಈಗಾಗಲೇ ತರುಣ ಸಾಹಿತಿಗಳ ಸಾಲಿನಲ್ಲಿ ಅವನ ಹೆಸರು ಬಂದುಬಿಟ್ಟಿದೆ; ಎಷ್ಟೋ ವರುಷ ಸಾಲೆ, ಕಾಲೇಜಗಳಲ್ಲಿರುವಾಗ ' ಕೈಬರಹ 'ದ ಪತ್ರಿಕೆಯ ಸಂಪಾದಕನಾಗಿ

ಕೆಲಸ ಮಾಡಿದ್ದಾನೆ. ಅವನಿಗೂ ಈಗ ಸಂಪಾದಕನಾಗಿ ಕೆಲಸ ಮಾಡಲು ತುಂಬಾ ಇಚ್ಛೆ; ಆದರೂ ಮೊದಮೊದಲು ಮನಸ್ಸು ಮಾಡಲಿಲ್ಲ; ಸುಮ್ಮನೇ ವಿರೋಧವನ್ನೇಕೆ ಕಟ್ಟಿಕೊಂಬುವದು ? ಅವಿರೋಧವಾಗಿ ಸಿಕ್ಕರೆ ಮಾತ್ರ ಸ್ವೀಕರಿಸುವದು; ಒಟ್ಟಾರೆ ಮುಕುಂದನನ್ನು ಸಂಪಾದಕನನ್ನು ಮಾಡಬೇಕೆಂದವರು ಐದು ಸದಸ್ಯರು–ರಾಜಶೇಖರ, ನೀಲರಾಜ, ಪದ್ಮನಾಭ, ಶರಭ ಮತ್ತು ಸಿಮಾರಾ. ಮುಕುಂದನ ನಾಮಪತ್ರ ಕೊಡಿಸಿದರು. ನಿಚ್ಚಳವಾಗಿ ಬಹುಮತವಾಗುವಂತಿದ್ದರೂ ಚಂಚಲೆ ಹಿಂದುಮುಂದು ನೋಡಲಿಲ್ಲ. ತಾನೂ ನಾಮಪತ್ರ ಸಲ್ಲಿಸಿದಳು. ಗುಪ್ತ ಮತದಾನ ಪದ್ಧತಿಯಿಂದ ಆಯ್ಕೆ ನಡೆಯಬೇಕಾಗಿತ್ತು.

*　　*　　*　　*

“ ಈ ರೀತಿ ಒಂದು ಹೆಣ್ಣಿನ ಎದುರಾಳಿಯಾಗಿ ನಿಂತು ಸೋಲುವಂತಿದ್ದರೆ ಖಂಡಿತವಾಗಿ ನಾನು ಎದುರಿಸುತ್ತಿರಲಿಲ್ಲ ”

“ ಈ ರೀತಿ ಮೋಸವಾಗುತ್ತಿತ್ತೆಂದು ಯಾರು ತಿಳಿದಿದ್ದರು ?” ಖಿನ್ನನಾದ ಪದ್ಮನಾಭ ನುಡಿದನು.

“ ನಾನು, ರಾಜ, ಶರಭ ಮೂವರು ಸೇರಿಯೇ ಮತಹಾಕಿದ್ದೇವೆ.... ಇನ್ನು ಉಳಿದವರು ನೀಲರಾಜ ಮತ್ತು ಸಿಮಾರಾ ”

“ ಸಿಮಾರಳ ಬಗೆಗೇ ನನಗೆ ಸಂಶಯ ಬರುತ್ತ.... ” ಪದ್ಮನಾಭನು ಮಾತು ಮುಗಿಸಲಿಕ್ಕೆ ಹಿಂದುಮುಂದು ನೋಡಿದನು.

“ ಸಿಮಾರಳ ವಿಷಯಕ್ಕೆ ? ಸಾಧ್ಯವಿಲ್ಲ. ಸ್ವತಃ ಆಕೆಯೇ ನಿಲ್ಲಿಸಿದ್ದಾಳೆ; ಮೇಲಾಗಿ ಒಂದೆರಡು ಸಲ ಮತಕೇಳಲು ಚಂಚಲೆ ಬಂದರೆ ನಿರ್ದಾಕ್ಷಿಣ್ಯವಾಗಿ ಕೊಡುವದಿಲ್ಲವೆಂದು ಹೇಳಿಬಿಡುವೆನೆಂದು ನನ್ನೆದುರಿನಲ್ಲಿ ನುಡಿದಿದ್ದಾಳೆ; ಮೇಲಾಗಿ ನಾನೇನು ಕಡಿಮೆಯುವನೇ ? ನಿನ್ನೆ ಸಂಜೆಗೆ ಆಕೆಯ ಬಳಿಗೆ ಹೋದಾಗ ಮತ್ತೂ ಒಂದು ಸಲ ಕೇಳಿದೆ. ಆಗ ಆಕೆ ಆಣೆಯನ್ನೇ ಮಾಡಿದಳು. ”

“ ಏನು ನೀಲರಾಜ ಮೋಸ ಮಾಡಿದನೆಂದು ನಿನ್ನ... ....”

“ ನೀಲರಾಜನ ಸ್ವಭಾವ ನನಗೆ ಗೊತ್ತಿಲ್ಲವೇ ? ಅವನೆಂದೂ ಹಾಗೆ ಮಾಡುವವನಲ್ಲ. ”

“ ಹಾಗಾದರೆ ಯಾರು ? ”

“ ಸುಮ್ಮನೆ ವಿಚಾರವಾಡಿ ಒಬ್ಬರ ಮೇಲೆ ವ್ಯರ್ಥ ಸಂಶಯ ತಕ್ಕೊಳ್ಳುವದು ನನ್ನ ಮನಸ್ಸಿನಲ್ಲಿಲ್ಲ. ” ಮುಕುಂದ ಸೋತು ನುಡಿದನು.

“ ನೀಲರಾಜ–ಸಿವಾರಾ ಇಬ್ಬರಲ್ಲಿ ಒಬ್ಬರು ಮೋಸ ಮಾಡಿರಲಿಕ್ಕೇ ಬೇಕು. ಬಿದ್ದವು ನಾಲ್ಕುಮತ ! ನೀಲರಾಜ ನಿನ್ನ ಆತ್ಮೀಯ ಗೆಳೆಯ-ಸಿವಾರಾ ಕರ್ತವ್ಯನಿಷ್ಠ ಹೆಣ್ಣು ! ಮಾತುಕೊಟ್ಟಮೇಲೆ ತಲೆಹೋದರೂ ಅಳಕುವವಳಲ್ಲ !”

“ ಏನಪ್ಪಾ ನನ್ನ ದುರ್ದೈವ ! ಆಕೆಯ ಎದುರಿನಲ್ಲಿ ನನ್ನ ಅಪಮಾನವಾಗಬೇಕಿತ್ತು ಇಷ್ಟೆ ! ” ಮುಕುಂದ ತಲೆಹಿಡಿದುಕೊಂಡು ಕುಳಿತನು.

“ ನಮ್ಮದು ನಿಚ್ಚಳವಾಗಿ ಬಹುಮತವಾಗುದೆಂದೇ ನಾನು ಇಂದಿನ ಸಭೆಗೆ ಅಧ್ಯಕ್ಷನಾಗಲು ಒಪ್ಪಿದೆನಲ್ಲವೇ ? ನನ್ನೊಬ್ಬನನ್ನು ಬಿಟ್ಟರೆ ನಮ್ಮ ಕಡೆಗೆ ಐದು, ಆಕೆಯ ಕಡೆಗೆ ನಾಲ್ಕು ಮತಗಳು ಬೀಳುವವೆಂದೇ, ನಾನು ಅಧ್ಯಕ್ಷನಾಗಿ ನನ್ನ ಒಂದು ಮತ ಕಳೆದುಕೊಂಡು ಅವರ ಸೂಚನೆಯಂತೆ ಅಧ್ಯಕ್ಷನಾಗಲಿಕ್ಕೆ ಒಪ್ಪಿದೆ; ಇಲ್ಲವಾದಲ್ಲಿ ನಾನಾದರೂ........” ಪದ್ಮನಾಭ ಇನ್ನೂ ಹೇಳುತ್ತಲಿದ್ದನು.

“ ಎಲ್ಲಾ ನಮ್ಮ ಅಪಮಾನದ ಕಾಲ ! ” ಮುಕುಂದನಿಗೆ ಮಾತನಾಡುವ ಸ್ಥೈರ್ಯವೇ ಉಳಿದಿರಲಿಲ್ಲ; ತಲೆ ಹಿಡಿದುಕೊಂಡು ಹಾಸಿಗೆಯ ಮೇಲೆ ಅಡ್ಡಾದನು.

‘ ಇದ್ದ ಮೂವರಲ್ಲಿ ಕದ್ದವರಾರು ?’

ಅಂದು ಇಡೀಯ ಇರುಳು ಮುಕುಂದ ಕಣ್ಣಿಗೆ ಕಣ್ಣು ಹಚ್ಚಲಿಲ್ಲ. ಅವನ ಎದುರಿನಲ್ಲಿ ಕಾಣುತ್ತಿದ್ದ ವ್ಯಕ್ತಿಗಳು ಎರಡು–ನೀಲರಾಜ ಮತ್ತು ಸಿವಾರಾ. ಯಾರೂ ಅವನಿಗೆ ಮೋಸಗಾರರಾಗಿ ಕಾಣಲಿಲ್ಲ. ಹಲವು ಸಲ ನೀಲರಾಜನನ್ನು ಅಪರಾಧಿಯ ಸ್ಥಳದಲ್ಲಿ ನಿಲ್ಲಿಸುವನು; ಮರುಕ್ಷಣದಲ್ಲಿ ಆವನು ನಿರಪರಾಧಿಯೆಂಬುದನ್ನು ಸಿದ್ಧ ಮಾಡಿ ಬಿಟ್ಟುಬಿಡುವನು. ಸಿವಾರ

ಳಂತೂ ಆವನ ದೃಷ್ಟಿಯಲ್ಲಿ ಒಮ್ಮೆಯೂ ಅಪರಾಧಿಯಂತೆ ಕಾಣಲಿಲ್ಲ. ಒಂದು
ಯೋಗ್ಯತೆಯಿಲ್ಲದ ಹೆಣ್ಣಿನ ಎದುರಾಳಾಗಿ ಸೋತದ್ದು ಅವನಿಗೆ ಈಗ ಅಷ್ಟು
ಮನಸ್ಸಿಗೆ ಹತ್ತಲಿಲ್ಲ. ತನ್ನವರೆಂಬವರಲ್ಲಿ ಒಬ್ಬರು ಮೋಸ ಮಾಡಿದರಲ್ಲಾ!
ಎಂಬುದೇ ಅವನ ವ್ಯಥೆಗೆ ಮೂಲ ಕಾರಣವಾಯಿತು; ಹಲವು ಸಲ ' ಇಬ್ಬರೂ
ನಿರಪರಾಧಿಗಳು; ಯಾರೂ ಮೋಸಮಾಡಿಲ್ಲ; ಮತಗಳ ಎಣಿಕೆಯಲ್ಲಿ ತಪ್ಪಾ
ಗಿರಬೇಕು ' ಎಂದೆನಿಸಿ ಬಿಡುವದು. ಆದರೆ ? ಸ್ವತಃ ಪದ್ಮನಾಭನೇ ಅಧ್ಯಕ್ಷ
ಪೀಠದಲ್ಲಿ ಕುಳಿತು ಮತಗಳ ಎಣಿಕೆ ಮಾಡಿದ್ದಾನೆ; ಇಪ್ಪತ್ತು ಕಣ್ಣುಗಳೂ
ಅವುಗಳನ್ನು ದಿಟ್ಟಿಸಿವೆ; ಮುಕುಂದನಂತೂ ಪ್ರತಿಯೊಂದು ಮತದ ಹಾಳೆ
ಯನ್ನು ತನ್ನ ಕೈಯಲ್ಲಿ ಹಿಡಿದು ನೋಡಿದ್ದಾನೆ. ನಾಲ್ಕೇ ನಾಲ್ಕು ! ಮೂರು
ಮಸಿಯಿಂದ ಹಾಕಿದವು; ಒಂದೇ ಒಂದು ಪೆನ್ಸಿಲಿನಿಂದ ಹಾಕಿದ್ದು ಒಂದೇ
ಪೌಂಟನಪೆನ್ನಿನಿಂದ ಮುಕುಂದ, ರಾಜಶೇಖರ, ಶಂಭರು ಕತ್ತರಿ ಹಾಕಿ
ದ್ದಾರೆ ಇನ್ನು ಪೆನ್ಸಿಲಿನಿಂದ ಹಾಕಿದ್ದು; ಸಿಮಾ -ಆಕೆಯೇ ಮೋಸಲು
ಬಂದು ಬಿಡುವಳು—ಅಲ್ಲಲ್ಲ—ನೀಜರಾಜ-ಅವನ ಮತ ಮುಕಂದನ ಸ್ಮೃತಿ
ನೆನೆದಾಗ ಅವನೂ ಬಂದು ಹೋಗುವನು-ಮುಕುಂದನಿಗೆ ಅವರೀರ್ವರಲ್ಲಿ
ಯಾರು ಮೋಸಗಾರರೆಂಬುದನ್ನು ಕಂಡುಹಿಡಿಯಲು ಸಾಧ್ಯವಾಗಲಿಲ್ಲ;
ಕ್ರಮೇಣ ಅವನ ದುರ್ಬಲವಾದ ಮನಸ್ಸು ಅಧೋಗತಿಗಿಳಿಯಿತು; ಅವ
ರೀರ್ವರೂ ಅವನ ಪಾಲಿಗೆ ಮೋಸಗಾರರಾಗಿ ಕಂಡರು. ಯಾವ ಬಗೆಯಾಗಿ
ಅವರ ಮೇಲೆ ಸೇಡು ತೀರಿಸಿಕೊಳ್ಳಬೇಕೆಂದು ನಾನಾಬಗೆಯಾಗಿ ಚಿಂತಿಸಿದನು.
ಅವನು ಮಲಗಿದ್ದುದು ಹಾಸಿಗೆಯ ಮೇಲಲ್ಲ; ಕಾದ ಹಂಚಿನ ಮೇಲೆ; ಸದಾ
ಉರುಳಾಡುತ್ತಿದ್ದನು-ಒಂದು, ಎರಡು, ಮೂರು ಘಂಟೆಗಳು ಬಾರಿಸಿದವು!
ಆಗಲೇ ಎದ್ದು ಹೋಗಿ ನೀಲರಾಜನನ್ನು ಕೇಳಿಬಿಡಬೇಕೆನ್ನಿಸಿತು; ಹಾಗೆಯೇ
ಎದ್ದನು. ನೀಲರಾಜನ ಮನೆಗೆ ಹೋಗಿ ಕೂಗಿದನು. ಬಾಗಿಲು ತೆರೆಯ
ಲಿಲ್ಲ; ಅವನ ಹೆಂಡತಿಯು ಅವನು ಇಲ್ಲವೆಂದು ಒಳಗಿಂದಲೇ ಹೇಳಿದಳು.
ಅವನು ಅಂದು ಅಗತ್ಯ ಕೆಲಸವಿದ್ದುದರಿಂದ ಸಂಜೆಗೇ ಪರಊರಿಗೆ ಹೋಗಿ
ದ್ದನು; ಆದನ್ನು ಮಧ್ಯಾಹ್ನದಲ್ಲಿ ಮುಕುಂದನ ಎದುರಿನಲ್ಲಿಯೂ ಆಡಿದ್ದನು.
ಆದರೆ ಮುಕುಂದ ಇಷ್ಟೆಲ್ಲ ತಿಳಿದುಕೊಳ್ಳುವ ಸ್ಥಿತಿಯಲ್ಲಿ ಇರಲಿಲ್ಲ; ಅವನೇ
ಮೋಸ ಮಾಡಿದ್ದಾನೆ. ಈಗ ಮುಖ ತೋರಿಸಲು ಮನಸ್ಸು ಬಾರದೆ, ತನ್ನ

ಹೆಂಡತಿಯಿಂದ ‘ ಇಲ್ಲ ’ ವೆಂದು ಹೇಳಿಸಿದ್ದಾನೆಂದು ಕುದಿಯುತ್ತ, ರೋಷ ಕಾರುತ್ತ ತನ್ನ ಕೋಣೆಗೆ ಬಂದನು; ಸರಿಯಾಗಿ ನಾಲ್ಕು ಬಾರಿಸಿತ್ತು ! ಅವನು ಬರುವದರೊಳಗಾಗಿ ಪದ್ಮನಾಭ ಬಂದಿದ್ದನು. ಅವನಿಗೂ ತುಂಬಾ ಮನನೊಂದಿತ್ತು ! ನಿದ್ರೆಯೇ ಬಂದಿರಲಿಲ್ಲ. ಮುಕುಂದನನ್ನು ಸಮಾಧಾನ ಪಡಿಸಲಿಕ್ಕೆ ಬಂದಿದ್ದನು. ಅವನನ್ನು ಕಂಡೊಡನೆಯೇ ಮುಕುಂದ ನೀಲ ರಾಜನ ಬಗೆಗೆ ಸಿಕ್ಕಾಪಟ್ಟೆ ರೇಗಿ ಒದರಾಡಿದನು. ಮುಕುಂದನಿಗೂ ನಿಜ ವೆನಿಸಿತು. ಇಬ್ಬರೂ ಹಾಗೆಯೇ ಕುಳಿತಿದ್ದರು. ಕೋಳಿ ಕೂಗುವದಕ್ಕೂ, ಪದ್ಮನಾಭನು ಬಾಯಿಬಿಡುವವಕ್ಕೂ ಗಂಟೇ ಬಿತ್ತು.

“ ಯಾರನ್ನು ನಂಬುವದು ? ? ”

*　　　*　　　*　　　*

ಮುಕುಂದ ನೀಲರಾಜನ ಮೇಲೆ ಸೇಡು ತೀರಿಸಿಕೊಳ್ಳಬೇಕೆಂದಿದ್ದ ಆದರೆ ನೀಲರಾಜ ಎರಡು ದಿನ ಊರಿಗೆ ಹೋದವನು ಬರಲಿಲ್ಲ. ಆವನು ಬೇಕೆಂದೇ ಮುಖ ತೋರಿಸಲಲ್ಲವೆಂದು ಎಲ್ಲರೂ ತರ್ಕಿಸಿದರು. ಅಂದೇ ಸಿಮಾರಾ ತನ್ನ ಸದಸ್ಯತ್ವಕ್ಕೆ ರಾಜೀನಾಮೆ ಕಳಿಸಿದ್ದಳು. ಅದಕ್ಕೆ ಕಾರಣ ಕೊಟ್ಟು, ‘ ತನಗೆ ಮೈಯಲ್ಲಿ ಅಸ್ವಸ್ಥತೆಯಾದುದರಿಂದ ರಾಜೀನಾಮೆ ಕೊಟ್ಟಿ ರುವೆ. ದಯವಿರಿಸಿ ಸ್ವೀಕರಿಸಬೇಕೆ’ ಂದು ಬೇಡಿಕೊಂಡಿದ್ದಳು; ನಳಿನಿ, ಚಂಚಲೆ, ಗರತಿ, ಸರೋಜಯರು ತುಟಿ ಪಿಟ್ಟೆನ್ನದೆ ಸ್ವೀಕರಿಸಲು ಸಿದ್ಧ ರಾದರೂ, ಮುಕುಂದ, ಪದ್ಮನಾಭ, ರಾಜಶೇಖರ, ಶರಭ ಸ್ವೀಕರಿಸಲು ಸಿದ್ಧರಾಗಲಿಲ್ಲ; ಸಧ್ಯ, ಅಸ್ವಸ್ಥತೆಯಿದ್ದರೆ ಕೆಲದಿನ ರಜೆಪಡೆಯಲಿ, ನಂತರ ಕೆಲಸಕ್ಕೆ ಮೊದಲು ಮಾಡಲಿ ಎಂದು ವಾದಿಸಿದರು. ಕೊನೆಗೆ ಪದ್ಮನಾಭ ಹೋಗಿ ಆಕೆಯನ್ನು ಕೇಳಿಬಂದನಂತರ ಏನೆಂಬುದನ್ನು ನಿರ್ಣಯಿಸುವ ದೆಂದು ತೀರ್ಮಾನಾಯಿತು.

*　　　*　　　*　　　*

ಮನೆಗೆ ಬಂದ ನೀಲರಾಜನನ್ನು ಮುಕುಂದ ಮಾತನಾಡಿಸಲಿಲ್ಲ; ನೀಲ ರಾಜ ಬೇರೆ ತಿಳಿದುಕೊಳ್ಳಲಿಲ್ಲ; ಚುನಾವಣೆಯಲ್ಲಿ ಬಿದ್ದುದಕ್ಕೆ ಗೆಳೆಯ

ನೊಂದು ಹೋಗಿದ್ದಾನೆಂದು ಹೋಗಿ ಅವನ ಪಕ್ಕದಲ್ಲಿ ಸುಮ್ಮನೇ ಕುಳಿತಿದ್ದನು. ಪದ್ಮನಾಭ ಒಳಗೆ ಬಂದು ಒಡೆದ ಓಲೆಯೊಂದನ್ನು ಮುಕುಂದನ ಕೈಯಲ್ಲಿ ಇಟ್ಟನು. ಮುಕುಂದನು ಓದಲಾರದ ಮನಸ್ಸಿನಿಂದ ಓದಿದನು.

‘ ಚರ್ಚ ’ರೋಡ
ಮೇರಿ ಮಹಾಲ
ದಿ| ೩೦—೮—೪೭

ಶ್ರೀಮಾನ್ ಪದ್ಮನಾಭ !

ಮನಸ್ಸಿನಲ್ಲಿಯದೆಲ್ಲವನ್ನೂ ಒಮ್ಮೆ ತೋಡಿಕೊಂಡು ಬಿಡಬೇಕೆನ್ನಿಸುತ್ತದೆ; ಚನಾವಣೆಯು ನಡೆದಂದಿನಿಂದ ನಾನೊಂದು ತೆರನಾಗಿ ಬಿಟ್ಟಿದ್ದೇನೆ. ಎಷ್ಟೋ ಬಗೆಯಾಗಿ ಸಮಾಧಾನ ಹಚ್ಚಿಕೊಳ್ಳಲು ಹವಣಿಸಿದರೂ ನನಗೆ ಸಾಧ್ಯವಾಗಲಿಲ್ಲ. ಇನ್ನೂ ಅಷ್ಟು ದುಃಖಿತೆಯೇ ಆಗುತ್ತ ನಡೆದಿದ್ದೇನೆ; ನನ್ನ ಅಂತರಾಳಕ್ಕೆ ಬೆಂಕಿಹತ್ತಿದೆ; ಅದನ್ನು ಮುಚ್ಚಲಿಕ್ಕೆ ಪ್ರಯತ್ನಿಸುವದೆಂದರೆ ಅದರ ಹಬ್ಬುವಿಕೆಗೆ ಸೌದೆ ಒದಗಿಸಿಕೊಟ್ಟಂತೆ ! ಅಲಕ್ಷಿಸಿದಲ್ಲಿ ಅದು ನನ್ನನ್ನು ಪೂರ್ತಿಯಾಗಿ ಸುಟ್ಟು ಭಸ್ಮಮಾಡಿಬಿಡುವದರಲ್ಲಿ ಸಂದೇಹವೇ ಇಲ್ಲ. ಈಗಾಗಲೇ ಅರ್ಧ ಬೆಂದುಹೋಗಿದ್ದೇನೆ; ಪೂರ್ತಿಯಾಗಿ ಬೆಂದುಹೋಗಿ ಬಿಡುವ ಮೊದಲು ತಪ್ಪು ಒಪ್ಪಿಕೊಂಡು ಬಿಡಬೇಕೆನ್ನಿಸುತ್ತದೆ.

ನಾನು ಮುಕುಂದರಾಯರಿಗೆ ವಂಚನೆ ಮಾಡಲಿಲ್ಲ ! ನನ್ನನ್ನೇ ನಾನು ವಂಚಿಸಿಕೊಂಡಿದ್ದೇನೆ. ನನ್ನಂತಹ ಆತ್ಮವಂಚಕಳು ಬೇರೊಬ್ಬರು ಸಿಕ್ಕಲಿಕ್ಕಿಲ್ಲ !! ನಾನೇ ಅವರನ್ನು ಅವರ ಮನಸ್ಸಿನ ವಿರುದ್ಧ ಚಂಚಲೆಯ ಎದುರಾಳಿಯನ್ನಾಗಿ ನಿಲ್ಲಿಸಿದೆ; ಮಾತುಕೊಟ್ಟೆ; ಏಸುವಿನ ಆಣೆಯಿಟ್ಟು ಭರವಸೆಯನಿತ್ತೆ ! ಆದರೆ ಅವೆಲ್ಲ ಎಲ್ಲಿ ಹೋದವು ? ಇಷ್ಟು ದಿನಗಳವರೆಗಿನ ನನ್ನ ಶಿಕ್ಷಣವನ್ನೆಲ್ಲ ಯಾವ ತೆರೆಯಲ್ಲಿ ಹರಿಯಬಿಟ್ಟೆ ? ನನ್ನ ಸತ್ಯ-ಸಂಧತೆ ಲೋಕದ ಸುಡಿಯಾಗಲಿಕ್ಕಿಲ್ಲವೆ ? ಧರ್ಮಗ್ರಂಥ ‘ ಬೈಬಲ ’ನ್ನು ಒಂದೇ ನಿಮಿಷದಲ್ಲಿ ತೂರಿ ಒಗೆದೆ; ಧರ್ಮವೀರ ಏಸುವಿನನ್ನು ಧಿಃಕರಿಸಿದೆ.

ಮೊದಲು ನನ್ನಲ್ಲಿ ಅಸ್ವಸ್ಥತೆಯಿರಲಿಲ್ಲ; ಈಗ ಅದು ಸತ್ಯವಾಗಿದೆ; ಬಯಸಿ ಪಡೆದ ಬೇಗೆ ಹೇಗೆ ನಾಶಿಯಾದೀತು ? ಒಬ್ಬರನ್ನು ವಂಚಿಸಿದ ಮೇಲೆ ಅವರ

ಎದುರಿನಲ್ಲಿ ಮುಖವೆತ್ತಿಕೊಂಡು ನಡೆಯುವದು ಆಗದಮಾತು! ನಿಮ್ಮೆಲ್ಲ ರೊಂದಿಗೆ ಹಿಂದಿನಂತೆ ವರ್ತಿಸಲು ಸಾಧ್ಯವಿದೆಯೆ? 'ಕಳ್ಳರಜೀವ ಹುಳು ಹುಳು ಅನ್ನುವದಂತೆ' ಈಗ ನನಗೆ ತಿಳಿಯುತ್ತಿದೆ, ಅವರು ಎಂಥ ಮಹತ್ವಾಕಾಂಕ್ಷಿಗಳೆಂಬುದು! ಒಂದು ಮತಕ್ಕಾಗಿ ನನ್ನನ್ನು ಬಲಿಕೊಡಲೂ ಹಿಂದೆ ಮುಂದೆ ನೋಡಲಿಲ್ಲ. ಅಷ್ಟೆ ನಡೆದ ಮೇಲೆ ರಾಜೀನಾಮೆ ಕೊಡಲಿಕ್ಕೂ ಅವರೇ ಸೂಚಿಸಿದರು; ಅದರಿಂದ ನನ್ನ ಮನಸ್ಸು ಅಳುಕುವದಿಲ್ಲವಂತೆ; ನನಗೆ ಖೇದವಾಗುವದಿಲ್ಲವಂತೆ; ರಾಜೀನಾಮೆಯನ್ನೇನೋ ಕಳಿಸಿದೆ; ಕಲಕಿದ ಮನಸ್ಸು ತಿಳಿಯಾಗಲಿಲ್ಲ! ಗಾಯಗೊಂಡ ಹೃದಯ ಮಾಯಲಿಲ್ಲ!!

ನಾನಿಷ್ಟು ನೀಚ ಕೆಲಸಕ್ಕೆ ಇಳಿಯುವೆನೆಂದು ನನಗೂ ಅನಿಸಿರಲಿಲ್ಲ. ಅವರಾದರೂ ಅಂಥ ಮಾತುಗಳನ್ನು ನನ್ನೆದುರಿನಲ್ಲಿ ಆಡಲಿಕ್ಕಾದರೂ ಅಳುಕಿ ಅಂಜಬೇಕಾಗಿತ್ತು; ಜಾತಿಯ ಅಭಿಮಾನವನ್ನು ಹಿಡಿದಾದರೂ ನಿಮಗೆ ವಂಚನೆಮಾಡಲು ಕೇಳಿಕೊಂಡರು-ನಿಮ್ಮದು ಗಂಡಸುಜಾತಿ-ಅವರದು ಹೆಣ್ಣು ಜಾತಿ; 'ನಾನೂ ಹೆಣ್ಣು-ನನ್ನ ಜಾತಿಯ ಅಭಿಮಾನ ನನಗೆ ಬೇಡವೇ?' ಥೂ! ಎಂಥ ಹೇಸಿ ಭಾವನೆಗಳು!! ನನ್ನ ಬೆಲೆ ಅಷ್ಟೇ ರೂಪಾಯಿಗಳೇ? ಒಂದು ಸರ್ವಸಾಧಾರಣ ಸೀರೆ ನನ್ನ ಆದರ್ಶಕ್ಕೆ ಸರಿಯಾಯಿತೆ?— ಇಲ್ಲ. ನಿಮ್ಮನ್ನು ವಂಚಿಸಲಿಲ್ಲ! ಮೋಸಮಾಡಲಿಲ್ಲ!! ನಂಬಿ ಕೊರಳ ಕೊಟ್ಟವರ ಕುತ್ತಿಗೆ ನಲುಮೆ ಒಲುಮೆಗಳ ಕತ್ತಿಯಿಂದ ಕೊಯ್ದೆ! 'ಘಾತಕಿ'ಯೆಂದು ಇನ್ನೆಂಥವರಿಗೆನ್ನಬೇಕು? ಚಂಚಲೆಯ ಹೆಸರಿನ ಮುಂದೆ ಹಾಕಿದ್ದು ಮಸಿಯ ಕತ್ತರಿ! ಮುಕುಂದರಾಯರ ಕೊರಳಿಗೆ ಹಾಕಿದ್ದು ಉಕ್ಕಿನ ಕತ್ತರಿ!! ಮತ ಹಾಕುವಾಗ್ಗೆ ನೀವಾರೂ ನನ್ನ ಕಡೆಗೆ ನೋಡಲಿಲ್ಲ. ಆಗಲೇ ನನ್ನ ನೀಚ ಹೃದಯದ ಕಲ್ಪನೆಯಾಗಿಬಿಡಬಹುದಾಗಿತ್ತು; ಕತ್ತರಿ ಹಾಕಲು ಕೈ ಏಳಲಿಲ್ಲ; ಕೈಯಲ್ಲಿ ಹಿಡಿದ ಪೆನ್ನು ಎರಡು ಸಲ ಜಾರಿ ಕೆಳಗೆ ಬಿತ್ತು! ನಳಿನಿ ಎತ್ತಿ ಕೊಟ್ಟಳು; ಮುಖ ಬೆವರಿಟ್ಟಿತ್ತು! ಕತ್ತರಿ ಹಾಕಿದಾಗ ಕಣ್ಣು ಮಂಜಾಗಿದ್ದವು—ಅಸತ್ಯವಲ್ಲ; ಯಾರು ಆರಿಸಿಬಂದರೆಂಬದು ನನಗೆ ಆಗ ತಿಳಿಯಲಿಲ್ಲ. ನನ್ನ ಮೈಮೇಲೆ ಎಚ್ಚರವೇ ಇರಲಿಲ್ಲ-ಆದರೂ ಖಂಡಿತ ಗೊತ್ತಿತ್ತು ನನ್ನ ಆತ್ಮಕ್ಕೆ ಮುಕುಂದರಾಯರು ಬಿದ್ದರೆಂದು;

ನಿನ್ನೆ ಎಲ್ಲವನ್ನೂ ಒಪ್ಪಿಸಿ ಸ್ವಚ್ಛಳಾಗಬೇಕೆಂದು ಚರ್ಚಿಗೆ ಹೋದೆ; ಆದರೆ ವ್ಯರ್ಥವಾಯಿತು; ಪಾದ್ರಿಗಳು ನನ್ನ ತಪ್ಪನ್ನು ಮನ್ನಿಸಲಿಲ್ಲ; 'ಏಸುವಿಗೆ ಇಂಥ ಕೃತಘ್ನಮಕ್ಕಳು ಬೇಕಾಗಿಲ್ಲ. ಅಂಥವರನ್ನೆಂದೂ ಕ್ಷಮಿಸುವದಿಲ್ಲ' ವೆಂದು ಖಡಾಖಡಿಯಾಗಿ ಹೇಳಿಬಿಟ್ಟರು—ಹಿಂದೆ ಶೀಲ, ಮರ್ಯಾದೆ ತೊರೆದು ಅನೀತಿಗೆಳಿಸಿದ ಎಷ್ಟೋ ಅಪರಾಧಗಳನ್ನೂ ಅವರು ತುಟಿಬಿಚ್ಚದೆ ಮನ್ನಿಸಿದ್ದರು. ಏಸುವಿನ ದೃಷ್ಟಿಯಲ್ಲಿ 'ವಂಚನೆ'ಗಿಂತ ಹಿರಿದಾದ ಅಪರಾಧವಾವದೂ ಇಲ್ಲವಂತೆ! ಅವನೇ ನನ್ನ ತಪ್ಪನ್ನು ಮನ್ನಿಸಲಿಲ್ಲವೆಂದ ಮೇಲೆ ಯಾರು ತಾನೇ ಮನ್ನಿಸಲು ಸಾಧ್ಯ?

ಅಯ್ಯೋ! ಈ ವಂಚಕಳ ಇಷ್ಟು ಉದ್ದವಾದ ಓಲೆಯನ್ನು ನೀವು ಓದಲು ಮನಸ್ಸು ಮಾಡುವಿರಾ? ನಿಮ್ಮಲ್ಲಿ ಏನನ್ನು ಬೇಡಲಿ?—ಇಲ್ಲ ಏನನ್ನೂ ಬೇಡುವದಿಲ್ಲ. ಅದಕ್ಕೆ ನಾನು ಯೋಗ್ಯಳಿಲ್ಲ...............ಇನ್ನೂ ಏನನ್ನೋ ಬರೆಯಬೇಕೆನ್ನಿಸುತ್ತದೆ........ಬರೆಯಲಾರೆ........ಬರೆಯಲಾರೆ!

ಚಂಡಾಲಿನಿ—

**ಸಿವಾ**

ಪತ್ರ ಮುಗಿಸಿದಾಗ ಮುಕುಂದನಲ್ಲಿ ಆಕೆಯ ಬಗೆಗಾಗಿ ಯಾವ ಪುರಸ್ಕಾರ, ತಿರಸ್ಕಾರಗಳೂ ಉದ್ಭವಿಸಲಿಲ್ಲ. ಪತ್ರವನ್ನು ಕೈಯಲ್ಲಿ ಹಿಡಿದುಕೊಂಡೇ ಭರದಿಂದ ನೀಲರಾಜನನ್ನು ಅಪ್ಪಿದನು; ಎರಡು ಹನಿ ಕಣ್ಣೀರು ನೀಲರಾಜನ ಹೃದಯದ ಮೇಲೆ ಬಿದ್ದವು. ಮುಕುಂದನ ಕಂಠ ಬಿಗಿದು ಹೋಗಿತ್ತು.

"ನೀಲಾ, ನೀನು ಕ್ಷಮಿಸಬೇಕಪ್ಪಾ! ನಿನ್ನಂಥವನ ಮೇಲೆ ನಾನು...." ಮಾತುಗಳೇ ಹೊರಡಲಿಲ್ಲ. ಮಗುವಿನಂತೆ ನೀಲರಾಜನ ಹೃದಯದಲ್ಲಿ ಮೊಗವಿಟ್ಟು ಬಿಕ್ಕುತ್ತಿದ್ದನು; ನೀಲರಾಜನಿಗೆ ಏನೂ ತಿಳಿಯದು; ಗಾಬರಿಗೊಂಡ ಮುಖಮುದ್ರೆಯಿಂದ ಪದ್ಮನಾಭನನ್ನೇ ದಿಟ್ಟಿಸುತ್ತಲಿದ್ದನವನು!

# ಇಪ್ಪತ್ತಾರು!!

## ೧

ಕತ್ತಲೆ ಮುತ್ತುವದರಲ್ಲಿತ್ತು! ಎಲ್ಲರೂ ಮನೆಯ ಕಡೆಗೆ ಮರುಳ ಬೇಕೆಂಬ ಮನಸ್ಸಿನವರೇ ಆಗಿದ್ದರು! ಎದುರಿನಲ್ಲಿ ವಿಶಾಲವಾದ ಸಾಗರ ಬೋರ್ಗರೆಯುತ್ತಿತ್ತು! ಕಪ್ಪಾಗಿ ಮಲಗಿದಂತಿದ್ದ ಸಾಗರದಲ್ಲಿ ಅಲ್ಲಲ್ಲಿ ತೆರೆಗಳು ಬೆಳ್ಳಗೆ ಹಾಲಿನಂತೆ ಏರಿ ಇಳಿಯುತ್ತಲಿದ್ದವು. ಪಡುವಲ ಬಾನುವೆಣ್ಣು ಸಂಧ್ಯೆಯ ಚೆಂಬಣ್ಣದಿಂದ ಕೆಂಪಡರಿದ್ದಳು! ದೂರದ ದ್ವೀಪದ ಮೇಲಿನ ಟೆಂಗಿನ ಗಿಡಗಳು ಚಿತ್ರದಲ್ಲಿ ಬರೆದ ಕಪ್ಪುಬಣ್ಣದ ಗೊಂಬೆಗಳಂತೆ ನಿಂತಿದ್ದವು. ಹೊಂಬಣ್ಣದ ನುಣ್ಣನೆಯ ಉಸುಕು ದಂಡೆಗುಂಟ ಹಾಸಿತ್ತು; ಅಲ್ಲಲ್ಲಿ ಜನರು ಗುಂಪುಗುಂಪಾಗಿ ಕುಳಿತು ಚಕ್ಕಂದದಿಂದ ಹರಟೆಕೊಚ್ಚುತ್ತಿದ್ದರು; ನಲ್ಲನಲ್ಲೆಯರ ಒಲುಮೆಯ ಮೆಲುಮಾತಿನ ಗುಲ್ಲು ಕೇಳಬರುತ್ತಿತ್ತು; ಚಿಂದಿಯನ್ನು ಉಟ್ಟ ತಿರುಕನೊಬ್ಬ ಹರುಕುಮುರುಕು ಹಿಂದಿಯಲ್ಲಿ 'ತಾನು ಎಂಟು ದಿನಗಳಿಂದ ಊಟಮಾಡಿಲ್ಲ! ಒಂದು ಬಿಡಿಕಾಸು ದ್ಯೇವರು!!' ಎಂದು ಅಂಗಲಾಚುತ್ತ ಸಾಗರತೀರವನ್ನೆಲ್ಲ ಸುತ್ತಿದ; ಹೊಟ್ಟೆತುಂಬಿ, ಹೃದಯಬಿರಿದ ಜೀವಿಗಳಿಗೆ ಅವನ ಕೂಗು ಕೇಳಿಲಿಲ್ಲ. ಕೇಳಿಸಿದ ಕೆಲವರು ಕೇಳಸದವರಂತೆ ನಟಿಸಿದರು; ಮತ್ತೆ ಕೆಲವರು ಆಡಬಾರದ ಮಾತುಗಳನ್ನು ಆಡಿ ಗದ್ದರಿಸಿದರು. ಆತ ನಿರಾಶನಾಗಿ ಸೋತು ಒಂದೆಡೆ ಕುಸಿದನು. ಮತ್ತೆ ಜೋಲೆಹೊಡೆಯುತ್ತ ಎದ್ದುನಿಂತನು; ಮೈಯಲ್ಲಿ ಕಸುವು ಸಾಲದೆಂದು ತೋರುತ್ತದೆ—'ಧೊಪ್ಪನೆ' ಬಿದ್ದನು ಮತ್ತೆ ಎದ್ದು, ತಾನು ಬಿದ್ದುದನ್ನು ಯಾರಾದರೂ ನೋಡಿದ್ದಾರೆಯೋ ಎಂದು ಸುತ್ತಲೂ ಕಣ್ಣರಳಿಸಿದನು. ದೂರದಲ್ಲಿ ಉಸುಕಿನ ಕಿರುದಿನ್ನೆಯ ಮೇಲೆ ತನಗಿಂತಲೂ ಹೆಚ್ಚಾಗಿ ಸೊರಗಿ ಕರಗಿ ಕುಳಿತ ವ್ಯಕ್ತಿಯನ್ನು ಕಂಡನು. ಅವನ ಬಳಿಗೆ ಹೋಗಿ ಅವೇ ಮಾತುಗಳನ್ನು ಹೇಳಿದನು; ಆತನಿಗೆ ತಡೆಯುವದಾಗಲಿಲ್ಲ. ಆತನ ದುಃಖದ ಎದುರಿನಲ್ಲಿ ತನ್ನ ದುಃಖ ಅಲ್ಪವೆನಿಸಿತು. ಒಂದೇ ಒಂದು ದಿವಸ ತನಗೆ ಅನ್ನ ದೊರೆತಿಲ್ಲ! ಅಷ್ಟಕ್ಕೆ ಇಳಿದು

ಬಿಟ್ಟಿದ್ದಾನೆ. ಮರುದಿನದವರೆಗಾದರೂ ಜೀವಂತನಾಗಿರುವನೋ ಇಲ್ಲವೋ ಎಂಬುದೂ ತಿಳಿಯದಾಗಿತ್ತು! ತಿರುಕನ ಮಾತಿನಲ್ಲಿ ನಂಬಿಗೆಯಿಟ್ಟಾಗ ಅವನ ಸ್ಥಿತಿಯ ಅರಿವಾಯಿತು. ಕಿಸೆಯಲ್ಲಿ ಕೈಹಾಕಿದನು. ಏನಿತ್ತು? ಕೊನೆಯ ಬರೀಯ ಎರಡಾಣೆಯ ಚೂರು! ಸಂಜೆಗೆ ಎಲ್ಲಿಯಾದರೂ ಚಹಕುಡಿಯ ಬೇಕೆಂದು ಇಟ್ಟುಕೊಂಡಿದ್ದನು. ಆಗ ಅದರ ಅವಶ್ಯಕತೆಯೆನಿಸಲಿಲ್ಲ. ಅವ ನಿಗೆ ಕೊಟ್ಟುಬಿಟ್ಟನು. ತಿರುಕನು ಕಡಾರವನ್ನು ಕಂಡ ಕಡುಬಡವನಂತೆ ತನ್ನ ಕಣ್ಣನ್ನೇ ತಾನು ನಂಬದೆ ಬಾಗಿ ಮಾಯವಾದನು ತ್ವರೆಯಿಂದ. ಇನ್ನೊಂದು ಕ್ಷಣ ಅಲ್ಲಿದ್ದರೆ ಮತ್ತೆ ಎಲ್ಲಿ ತಿರುಗಿ ತಕ್ಕೊಳ್ಳುವರೋ ಎಂದು ತಿಳಿದಿರಬೇಕು. ಕತ್ತಲು ದಟ್ಟವಾಯಿತು! ಆಗಸವೆಲ್ಲ ಮುಗಿಲು ಗಳಿಂದ ಮುಚ್ಚಿಬಿಟ್ಟಿತ್ತು! ಮುಂಗಾರಿಯ ಮೋಡಗಳು ತೇಲಿಬರುತ್ತಿದ್ದವು. ಎಲ್ಲರೂ ಅಲ್ಲಿಂದೆದ್ದು ತೆರಳಿದರು; ಸಾಗರದೇವಿಯು ಬೋರ್ಗರೆದು ಆರ್ಭಟಿ ಸುತ್ತಿದ್ದಳು—ತನ್ನ ಗುರಿಯನ್ನು ಸಾಧಿಸಲೆಂದು ಎದ್ದುನಿಂತಿತು ಆ ವ್ಯಕ್ತಿ! ಹೊರಳಿ ಸುತ್ತಲೂ ನೋಡಿದನು. ದೂರದಲ್ಲಿ ಆ ತಿರುಕನು ಸಾಗಿಹೋಗು ವದು ಕಾಣಿಸಿತು; ಮನವು ಅವನ ಬಗೆಗೆ ಬಗೆಬಗೆಯಾಗಿ ಚಿಂತಿಸಿತು. ಆದರೂ ಆ ತಿರುಕನು ಅಂದಿನ ಸ್ಥಿತಿಗೆ ಇಳಿದ ಸರಿಯಾದ ಕಾರಣ ತಿಳಿಯಲಿಲ್ಲ. ಒಮ್ಮೆಲೇ ತನ್ನ ಸ್ಥಿತಿಯ ಅರಿವಾಯಿತು! 'ತನ್ನದೇ ತನಗೆ ಹಾಸಲು ಹೊದೆಯ ಲುಂಟು ಅನ್ಯರ ಚಿಂತೆ ತನಗೇಕಯ್ಯಾ' ಎಲ್ಲವೂ ಒಂದೊಂದಾಗಿ ಕಣ್ಣೆದುರಿ ನಲ್ಲಿ ಕಟ್ಟಿದವು. ಆತ್ಮಹತ್ಯ ಮಾಡಿಕೊಂಬುವವಕ್ಕಾಗಿ ಅರ್ಧಸಾವಿರ ಮೈಲು ಪ್ರವಾಸಮಾಡಿದ್ದಾನೆ. ಅಂದು ಮನೆಯಿಂದ ಹೊರಟಾಗ ಅವನ ಗುರಿ ಯಾದರೂ ಏನಿತ್ತು?............ಗುರಿಗಳೊಂದೂ ಇರಲಿಲ್ಲ. ಕಾಲುಗಳು ಅವನನ್ನು ಹೇಗೋ ಹೊತ್ತು ರೇಲ್ವೆ ನಿಲ್ಮನೆಗೆ ತಂದುಬಿಟ್ಟವು! ಆಗಲೇ ಪುಣೆಯ ಪ್ಯಾಸಿಂಜರ ಬಂಡಿ ಸಿದ್ಧವಾಗಿತ್ತು. ಏರಿ ಹೊರಟೇಬಿಟ್ಟನು! 'ಟಿಕೆಟ್?' ಎಂದು ಪರೀಕ್ಷಕ ಕೇಳಿದಾಗ 'ಎಲ್ಲಿಗೆ' ಎಂದು ಅವನೇ ಕೇಳಿ, ನಂತರ ಮೈತಿಳಿದು ತನ್ನ ಹತ್ತಿರ 'ಟಿಕೆಟ್' ಇಲ್ಲವೆಂದು ಹೇಳಿ 'ಎಕ್ಸೆಸ್' ತಕ್ಕೊಳ್ಳಲಿಕ್ಕೆಂದು ಕೇಳುವ ಮೊದಲೇ ತನ್ನಲ್ಲಿದ್ದ ನಾಲ್ವತ್ತೇಳು ರೂಪಾಯಿ—ಹತ್ತಾಣೆ—ಆರುಪೈಗಳನ್ನು ಅವನ ಕೈಗಿತ್ತನು ಪರೀಕ್ಷಕನು, ಪಾಕೀಟು ಬಿಚ್ಚಿ ಎಲ್ಲ ದುಡ್ಡು ಸುರುವಿದ್ದನ್ನು ನೋಡಿ,

ಅನಾಕ್ಸಾದನು. “ಇಷ್ಟೇಕೆ ಸ್ವಾಮಿ?” ಎಂದ. “ಎಷ್ಟು?” ಎಂದು ಉತ್ತರ ಬಂತು. ಅವನನ್ನು ಕಂಡು ಪರೀಕ್ಷಕನಿಗೆ ಏನು ಅನಿಸಿತೋ ಏನೋ! ರಕ್ಷಕನ ಡಬ್ಬಿಗೆ ಕರೆದೊಯ್ದನು! ಅವನ ಬಗೆಗಾಗಿ ವಿಚಾರಿಸಿದನು. ಯಾವ ರೀತಿಯಲ್ಲಿಯೂ ಸರಿಯಾದ ಉತ್ತರ ಸಿಗಲಿಲ್ಲ. ‘ಎಕ್ಸಸ್’ ಬೀಳಲಿಲ್ಲ. ಎಲ್ಲಿಗೆ ಹೋಗಬೇಕಿತ್ತೆಂದು ವಿಚಾರಿಸಿ ಹುಬ್ಬಳ್ಳಿ ನಿಲ್ದಾಣದಲ್ಲಿ ಒಂದು ಟಿಕೆಟ್ ತೆಗೆದು ಉಳಿದ ರೂಪಾಯಿಗಳನ್ನೆಲ್ಲ ಲೆಕ್ಕಮಾಡಿ ವಾಪಸ್ಸು ಕೊಟ್ಟನು! ಎಲ್ಲವನ್ನು ಮತ್ತೆ ಪಾಕೀಟಿನಲ್ಲಿರಿಸಿ ಪುನಃ ಮೊದಲಿನ ಡಬ್ಬಿಯಲ್ಲಿ ಬಂದು ಕುಳಿತನು. ಪುಣೆಯಲ್ಲಿ ಇಳಿದು ಟಿಕೆಟ್ ಕಲೆಕ್ಟರನಿಗೆ ಟಿಕೆಟ್ ಒಪ್ಪಿಸಿ ನಿಲ್ದಾಣದಿಂದ ಹೊರಗೆ ನಡೆದಿದ್ದನು. ಎಲ್ಲಿಗೆ ಹೋಗಬೇಕೆಂಬುದೇ ತಿಳಿದಿರಲಿಲ್ಲ. ಬಂದುದೇಕೆಂಬುದಂತೂ ದೂರು ಉಳಿಯಿತು ಅಷ್ಟರಲ್ಲಿ ಟಿಕೆಟ್ ಕಲೆಕ್ಟರ ಕರೆದು ಮುಂಬಯಿ ‘ಟಿಕೆಟ್’ ಇಲ್ಲೇಕೆ ಕೊಟ್ಟೆರೆಂದು ಅವನ ಕೈಗಿತ್ತನು. ಟಿಕೇಟ್ ಪರೀಕ್ಷಕನಿಗೆ ಹಿಂದೆ ಅವನು ಎಲ್ಲಿಗೆ ಹೋಗಬೇಕೆಂದು ಕೇಳಿದಾಗ ಮುಂಬಯಿ ಅಂದಿರಬೇಕು. ಆ ಟಿಕೆಟ್ ನೋಡಿದೊಡನೆಯೇ ಪುಣೆಯಲ್ಲಿ ತನ್ನದು ಏನೂ ಕೆಲಸವಿಲ್ಲೆಂದು ನಿರ್ಧರಿಸಿದನು. ಮತ್ತೆ ನಿಲ್ದಾಣುಹೊಕ್ಕು ಮುಂಬಯಿಗಾಡಿ ಹಿಡಿದನು.

ನಾಲ್ಕುದಿನ ಅದಾವುದೋ ಹೋಟಲಿನಲ್ಲಿ ಇದ್ದುದಾಯಿತು. ತಾನು ಮುಂಬಯಿಗೆ ಬಂದುದೇಕೆಂಬುದು ತನ್ನಲ್ಲಿ ದುಡ್ಡಿರುವ ತನಕ ಅವನಿಗೆ ತಿಳಿಯಲಿಲ್ಲ. ಮನಸ್ಸು ತನಗೂ ಅರಿಯದ ನಿಗೂಢ ವಿಚಾರದ ತಂತ್ರದಲ್ಲಿ ಸಿಕ್ಕು ಹೋಗಿತ್ತು! ಇನ್ನು ಕೇವಲ ಅವನಲ್ಲಿ ಉಳಿದುದು ಐದೇ ಐದು ರೂಪಾಯಿಗಳು. ಎಂದಾಗ ಮುಂದಿನ ಹಿಂದಿನ ವಿಚಾರಗಳು ಎದ್ದವು! ಹೊಟ್ಟೆಗಾಗಿ ಒಂದು ಕೆಲಸ ಹಿಡಿಯಬೇಕೆಂದು ನಿರ್ಧರಿಸಿದ್ದಾಯಿತು. ‘ಮುಂಬಯಿ ಪಟ್ಟಣದಲ್ಲಿ ಕೆಲಸಕ್ಕೇನು ಕೊರತೆ?’ ಎಂದು ಹೇಳಿಕೆಯೊಂದನ್ನು ನಂಬಿದ್ದ ಬೇರೆ! ಎರಡು ದಿವಸ ತಲೆಕೆಳಗೆ ಮಾಡಿಕೊಂಡು ತಿರುಗಿದರೂ ಯಾವ ಕೆಲಸವೂ ಸಿಕ್ಕಲಿಲ್ಲ. ಒಂದೆರಡು ಕಡೆಗೆ ಕೆಲಸಗಳಿವೆ; ಆದರೆ ನಿಮಗೆ ಇರಲಿಕ್ಕೆ ‘ರೂಂ’ ಸಿಕ್ಕಿದೆಯೇ?’ ಎಂದು ಕೇಳಿದ್ದರು. ‘ಇಲ್ಲ’ವೆಂದಾಗ ಅವರೂ ಕೆಲಸ‘ವಿಲ್ಲ’ವೆಂದಿದ್ದರು. ಕೆಲಸಕ್ಕೂ ‘ರೂಂ’ಗೂ ಇರುವ ಸಂಬಂಧವು ತಿಳಿಯಲಿಲ್ಲ. ಆಗ ಉಳಿದುದು ಎರಡೂವರೆ ರೂಪಾಯಿ

ಗಳು ಮಾತ್ರ! ಇನ್ನು ಹೋಟಲಿನಲ್ಲಿರುವದು ತರವಲ್ಲವೆಂದು ಬೀದಿಗೆ ಬಂದನು! ಊಟವನ್ನು ಮಾತ್ರ ಹೊಟಲಿನಲ್ಲಿ ಮಾಡುವದು! ಒಂದು ಸಾರ್ವಜನಿಕ ತೋಟಹೊಕ್ಕು-ಅಲ್ಲಿ ರಾತ್ರಿ ಕಳೆದರಾಯಿತೆಂದು ಒಳಹೊಕ್ಕನು. ಕಾವಲುಗಾರರು ಒಳಬಿಡಲಿಲ್ಲ! ಅಲ್ಲಿಂದ ನಡೆದು ‘ ವ್ಹಿಕ್ಟೋರಿಯಾ ಟರ್ಮಿನಸ್ ’ ನಿಲ್ದಾಣಕ್ಕೆ ಬಂದು ಅಲ್ಲಿಯೆ ರಾತ್ರಿ ನೂಕಿದನು ಮೂರನೆಯ ವರ್ಗದ ಕಾಯುವ ಸ್ಥಳದಲ್ಲಿ. ಮರುದಿನ, ಯಾವದಾದರೊಂದು ಗಿರಣಿಯಲ್ಲಿ ಕೆಲಸ ದೊರಕಿಸಬೇಕೆಂದು ಹೆಣಗಾಡಿದ್ದೂ ಆಯಿತು; ಇದ್ದವರನ್ನೇ ತಗೆಯುವವದರಲ್ಲಿದ್ದ ಗಿರಣಿಯೊಡೆಯನನ್ನು ಮಾತ್ರ ಅವನು ಕಂಡಿದ್ದು ಆ ದೊಡ್ಡ ಪಟ್ಟಣದಲ್ಲಿ! ಕೆಲಸಗಾರರ ಕೊರತೆಯಿದ್ದ ಗಿರಣಿ ಅವನಿಗೆ ಸಿಕ್ಕಲಿಲ್ಲ. ನಿರಾಶೆ ಬಲವತ್ತರವಾಯಿತು; ಕಿಸೆ ಬೇರೆ ಖಾಲಿಯಾಗಿದೆ. ಕೇವಲ ಎಂಟು ಆಣೆಗಳು ಮಾತ್ರ ಉಳಿದಿದ್ದವು. ಇರುಳು ಕಾಲಬೀದಿಯ ಮೇಲೆ ಕುಳಿತು ವಿಚಾರಿಸಿದನು. ‘ ಮುಂಬಯಿಗೆ ಬಂದುದೇತಕ್ಕೆ ? ಈಗ ತಾನು ಮಾಡುತ್ತಿದ್ದುದೇನು ? ಮುಂದೆ ಮಾಡುವದೇನು ಉಳಿದಿದೆ ? ’ ಹೊಟ್ಟೆ ಕೆರೆಯುತ್ತಿತ್ತು— ಬೀದಿಯಲ್ಲಿ ಮಾರುವ ನಾಲ್ಕಾಣೆಯ ಬಟ್ಟಗಡಲೆ ತಿಂದು ನಲ್ಲಿಯ ನೀರು ಕುಡಿದು ಕಾಲುಬೀದಿಯ ಮೇಲೆಯೇ ಮಲಗಿ ಆ ಇರುಳನ್ನು ಕಳೆದನು. ತನ್ನಂತವರು ಲಕ್ಷ ಜನ ಅಲ್ಲಿ ಮಲಗುವರು. ಮೊದಮೊದಲು ಅಸಹ್ಯವೆನಿಸಿದರೂ ಅದರಲ್ಲಿ ಯಾವ ಅಪರಾಧವೂ ಕಾಣಲಿಲ್ಲ. ಹಿಂದಿನದಿವಸ ಬರೀಯ ಅದನ್ನು ಇದನ್ನು ತಿಂದು ಹೊಟ್ಟೆ ತುಂಬಿಸಿಕೊಂಡುದಾಗಿತ್ತು! ಅದಕ್ಕಾಗಿ ಬೆಳಗಿನಲ್ಲಿ ಯಾವದಾದರೂ ಒಂದು ಹೊಟಲಿಗೆ ಹೋಗಿ ಊಟ ಮಾಡದ ಹೊರತು ನಿರ್ವಾಹವೇ ಇರಲಿಲ್ಲ. ಬೆಳಿಗ್ಗೆ ಎದ್ದಾಗ ಕಿಸೆಯಲ್ಲಿ ಇದ್ದುದು ಬರೀಯ ನಾಲ್ಕಾಣೆಗೆ ಊಟ ಸಿಕ್ಕುವಂತಿರಲಿಲ್ಲಿ. ಒಂದು ಊಟಕ್ಕೆ ಇಡೀಯ ರೂಪಾಯಿ! ಇನ್ನೂ ಹನ್ನೆರಡು ಆಣೆಗಳು ಬೇಕು; ಎಲ್ಲಿಂದ ತರುವದು ? ಯೋಚಿಸಿ ಯೋಚಿಸಿ ಕೊನೆಯ ನಿರ್ಧಾರಕ್ಕೆ ಬಂದನು! ಅದೊಂದೇ ಆಗ ಸಾಧ್ಯವೆನಿಸಿತು; ಮನಸ್ಸು ‘ಅಷ್ಟೊಂದು ನೀಚ ಕೆಲಸಕ್ಕೆ ಸಿದ್ಧನಾಗಬೇಡ’ ವೆನ್ನುತ್ತಿದ್ದರೆ, ಹೊಟ್ಟೆ! ‘ಮಾಡು! ಅದರಲ್ಲಿ ತಪ್ಪೇನಿದೆ ’ ಎಂದು ಒತ್ತಾಯಪಡಿಸುತ್ತಿತ್ತು. ‘ ಹಮಾಲನು ಬೇಕೆ ? ’ ಎಂದು ಕಳ್ಳ ಮತ್ತು ತಿದ್ದಿದ ನುಡಿಯಲ್ಲಿ ನುಡಿಯುತ್ತ ನಿಲ್ದಾಣದ ಹೊರಬದಿಯಲ್ಲಿ ನಿಂತ. ಪ್ರವಾಸಿಕರನ್ನು

ಕೇಳಿದ್ದಾಯಿತು; ‘ ಪರಿಚಿತರು ಯಾರಾದರೂ ಭೆಟ್ಟಿಯಾದರೆ ಹೇಗೆ ? ’ ಎಂದು ಮನಸ್ಸು ಮಿಟುಕುತ್ತಿದ್ದರೂ ಮರುಕ್ಷಣದಲ್ಲಿ ‘ ಇಲ್ಲಿ ಯಾರು ಬರಬೇಕು ಗೊತ್ತಿನವರು ? ’ ಎಂಬ ಸಮಾಧಾನದ ಕವಚದಲ್ಲಿ ಸಮಾಧಾನ ಪಡೆಯುತ್ತಿತ್ತು. ಅವನು ಹಮಾಲನಂತೆ ಕಾಣುತ್ತಿರಲಿಲ್ಲ. ಅಂತೆಯೇ ಹಲವರು ಅವನನ್ನು ತಲೆಯಿಂದ ಕಾಲತನಕ ನೋಡಿ ಮುಂದೆ ನಡೆದರು. ಒಂದೆರಡು ಜನರು ಮಾತ್ರ ಯಾವದೇ ಒಂದು ಬೀದಿಯ ಹೆಸರು ಹೇಳಿ ‘ ಅಲ್ಲಿಗೆ ಒಯ್ದು ಮುಟ್ಟಿಸಿದರೆ ಮಾತ್ರ ಹಮಾಲಿ ! ’ ಅಂದರು. ಅವನಿಗೆ ಆ ಬೀದಿ ತಿಳಿಯದು; ಅವರೂ ಹೊಸಬರು ! ಹೀಗಾಗಿ ಅದೂ ನಿಲುಕಲಿಲ್ಲ, ಬೇಕಾದ ಹೊತ್ತಿಗೆ ! ಊಟದ ಸಮಯ ಸರಿದು ಹೊತ್ತು ಹೋಳಾಯಿತು. ಮತ್ತೆ ಎರಡಾಣೆಗಳು ವೆಚ್ಚವಾದವು. ಕೊಂಚ ಹಸಿವು ತಣಿದಿರಬೇಕು. ಆದಿನವೂ ಕಾಲುಬೀದಿಯೇ ಕಾಯ್ದಿತು; ಇಡೀಯದಿನ ವಿಚಾರಿಸಿದ್ದೇ ವಿಚಾರಿಸಿದ್ದು. ‘ ಕೆಲಸ ಸಿಕ್ಕಲಿಲ್ಲ. ಮುಂದೆ ಮಾರ್ಗವಿಲ್ಲ ! ’ ಉಳಿದುದು ಒಂದೇ ಒಂದು ಮಾರ್ಗ........ ‘....ಆ....ತ್ಮ....ಹ....ತ್ಯ!!!’ ಯಾವ ಬಗೆಯಾಗಿ ಜೀವಕೂಡಬೇಕೆಂಬ ಬಗ್ಗೆಯೇ ಇಡಿ ದಿನ ವಿಚಾರಿಸಿದ್ದು ! ಬೆಳಗು ಹರಿದರೂ ಯಾವ ನಿರ್ಣಯಕ್ಕೂ ಬರಲಿಲ್ಲ. ನಸುಕಿನಲ್ಲಿ ಎಚ್ಚತ್ತಾಗ, ‘ ಮುಂಬಯಿಯಲ್ಲಿ ಯಾವದೋ ಭಾಗದಲ್ಲಿ ದಂಗೆ ನಡೆದಿದೆ. ಅಲ್ಲಿ ಹೋಗಿ ಸೇರಬೇಕು. ಅನಾಯಾಸವಾಗಿ ಜೀವ ಹೋಗುತ್ತದೆ ’ ಎನಿಸಿರಬೇಕು. ಅಲ್ಲಿಗೆ ನಡೆದುದೂ ಆಯಿತು. ಅಲ್ಲಲ್ಲಿ ಸೈನಿಕರು, ಪೋಲಿಸರು ಸಶಸ್ತ್ರರಾಗಿ ಕಾವಲು ನಿಂತಿದ್ದರು; ದೂರದಲ್ಲಿ ಒಂದುತಂಡ ಜನಜಂಗುಳಿ ಎತ್ತಲಿಂದಲೋ ನುಗ್ಗಿತು ! ಕಣ್ಣೆದುರಿನಲ್ಲಿಯೇ ಒಬ್ಬನ ಪಕ್ಕೆಯಲ್ಲಿ ಕೈಗತ್ತಿ ಹಾಯಿತು ! -- ಕೆಳಗೆ ಬಿದ್ದು ವಿಲಿವಿಲಿ ಒದ್ದಾಡಿದನು; ಪೋಲಿಸರ ಗೋಳಿಬಾರು ! ಅವನಿಗೆ ಅದನ್ನು ನೋಡಿ ತಡೆಯುವದಾಗಲಿಲ್ಲ. ಅವನು ಸಾಯಲಿಕ್ಕೆನೋ ಸಿದ್ಧನಾಗಿದ್ದಾನೆ. ಆದರೆ ಈ ರೀತಿಯಾಗಿ ಅಲ್ಲ— ಕೊನೆಗೆ ಕಡಲತೀರಕ್ಕೆ ಬಂದನು— ಇನ್ನೇನು ಧುಮುಕಿ ಪ್ರಾಣಕೊಟ್ಟು ಬಿಡಬೇಕು ಎನ್ನುವಷ್ಟರಲ್ಲಿ ಏನೋ ಸುಳಿದಂತಾಯಿತು ! ಮತ್ತೆ ತಡೆ ! ! ಕರ್ತವ್ಯದಲ್ಲಿ ವಿಘ್ನವಾದುದಕ್ಕೆ ಮನಸ್ಸು ತಳಮಳಿಸಿತು; ಜಪ್ಪಿಸಿದನು— ನಿಂತ ಬಂಡೆಯಿಂದ ಕೆಳಗೆ ಜಿಗಿದನು. ಮುಗಿಯಿತೆಂದು ಅಂಜಿದರೂ ಸಮಾದಾನ ಹಚ್ಚಿಕೊಂಡನು.

ಆದರೇನು ? ಮುಗಿದಿರಲಿಲ್ಲ. ಬಲವಾದ ತೆರೆಯೊಂದು ಚಿಮ್ಮಿ ದಂಡೆಯ ಮೇಲೆ ಎತ್ತಿ ಹಾಕಿತ್ತು ! ಮೈಮೇಲಿನ ಬಟ್ಟೆಗಳೆಲ್ಲ ಒದ್ದೆಯಾಗಿದ್ದವು. ಕಣ್ಣು ಮೂಗುಗಳಲ್ಲಿ ಉಸುಕು ! ಕಣ್ಣು ತೆರೆಯಲೂ ಬಾರದು ! ! ಉಪ್ಪು ನೀರಿನಿಂದ ಮೈ ಬಿಗಿಯಾಗಿತ್ತು; ಹೇಗೋ ಮೂಗಿನೊಳಗಿಂದ ಅಲ್ಪ ಸ್ವಲ್ಪ ತೆಗೆದು ಉಸುರಾಡಿಸಲು ಅನುವು ಮಾಡಿಕೊಂಡನು. ಹಾಗೆಯೇ ಬಿದ್ದಿದ್ದನು. ಏಳಲು ಶಕ್ತಿಯಿದ್ದರೆ ಪುನಃ ಅಲ್ಲಿಂದೆದ್ದು ಮತ್ತೆ ಜಿಗಿಯುತ್ತಿದ್ದನು. ಆದರೆ ಅದು ಸಾಧಿಸಲಿಲ್ಲ. ಹಾಗೆಯೇ ಜಂಪು ಹತ್ತಿರಬೇಕು. ಎಚ್ಚತ್ತಾಗ ಮೂಡಲ ಬಾನುದೇವಿಯ ಬಸುರಿನಲ್ಲಿ ತಿಂಗಳು ಮೂಡಿದನು. ತಿಳಿಗಾಳಿ ಸೂಸುತಲಿತ್ತು ! ಕಡಲು ಪ್ರಶಾಂತವಾಗಿತ್ತು. ಪಕ್ಕಕ್ಕೆ ಹೊರಳಿ ಸಾಗರವನ್ನು ಈಕ್ಷಿಸಿದನು. ಯಾರೋ ಸಾಗರದಲ್ಲಿ ಈಜಿ ಅವನೆಡೆಗೆ ಬಂದಂತೆನಿಸಿತು.....ಅದಾರು ? ಗೆಳೆಯ ಶ್ಯಾಮು ? ಕಣ್ಣಿಟ್ಟು ನೋಡಿದನು. ಅಹುದು ಅವನೇ ! ಅಂದಿಗೂ ಇಂದಿಗೂ ಎಷ್ಟು ಅಂತರ ! ಅವನೆಷ್ಟು ದಿವ್ಯ ತೇಜಸ್ಸಿನ ವ್ಯಕ್ತಿ ! ಅಂಗಾಂಗ ಗಳು ಎಷ್ಟು ತುಂಬಿವೆ ! ಮಾರುಗೈಯಿಂದ ಅವನೆಡೆಗೆ ಸಾಗಿಬಂದಂತೆನಿಸಿತು.

ಸಾವಿರದ ಒಂಬತ್ತುನೂರು ನಾಲ್ವತ್ತುಮೂರನೆಯ ಜನವರಿ ಇಪ್ಪತ್ತಾರು ಕಣ್ಮುಂದೆ ಕಟ್ಟಿತು. ದಳದಳ ನೀರು ಇಳಿಯಿತು. ಮತ್ತೆ ದಿಟ್ಟಿಸಿದನು. ಏನಿತ್ತು ಸಾಗರದಲ್ಲಿ ? ಚಂದ್ರಮನ ಬೆಳಕಿನ ಝುಳಕೊಂದು ಪ್ರಶಾಂತ ಸಾಗರದಲ್ಲಿ ಮುಳುಗಿ ಏಳುತಲಿತ್ತು ! ಗೆಳೆಯನ ಚಿತೆಯ ಎದುರಿನಲ್ಲಿ ಮಾಡಿದ ಪ್ರತಿಜ್ಞೆಯು ಜ್ಞಾಪಕಕ್ಕೆ ಬಂತು ! ಅಂದೇ ಅವನಿಗಾಗಿ ಮೀಸ ಲಿರಿಸಿದ ಜೀವವನ್ನು ಅಪಹರಿಸಲು ಅವನಿಗೆ ಅಧಿಕಾರವಿರಲಿಲ್ಲ ! ಒಂದು ವೇಳೆ ಅದರ ಅಪಹಾರ ಮಾಡಿದ್ದರೆ ಅಲ್ಲಿ ಏನೆಂದು ಉತ್ತರಿಸಬೇಕಾಗಿತ್ತು ? ಒಟ್ಟಾರೆ ಆತ್ಮಹತ್ಯೆಯ ವಿಚಾರ ಬೆಳಗಾಗುವಷ್ಟರಲ್ಲಿ ಪೂರ್ತಿಯಾಗಿ ಅವನ ಮನಸ್ಸಿನೊಳಗಿಂದ ಅಳುಕಿಹೋಗಿತ್ತು ! ಮೈಮೇಲಿನ ಬಟ್ಟೆಗಳೂ ಒಣಗಿದ್ದವು. ಸಾವಕಾಶವಾಗಿ ಅಲ್ಲಿಂದ ಎದ್ದು ನಡೆದನು. ಮನೆಯಕಡೆಯ ನೆನಹು ಮೂಡಹತ್ತಿತು ! ಅತ್ತು ಗೋಳಾಡುವ ಅಮ್ಮನ ದೀನ ಅಬಲಚಿತ್ರ ಅವನನ್ನು ಹಿಂಡಿ ಹಿಪ್ಪೆ ಮಾಡಿತ್ತು; ಹೆತ್ತಮ್ಮನಿಗೆ ಶಿಕ್ಷೆ ವಿಧಿಸಿದ ಪಾಪಿ ತಾನೆಂದು ಕೊಂಡನು. ಆದಷ್ಟು ಬೇಗ ಊರಿಗೆ ಹೊರಡಬೇಕೆನ್ನಿಸಿತು.. ನಾಲ್ಕಾರು ದಿನಗಳಿಂದ ಅನ್ನವಿಲ್ಲ ! ನಿದ್ರೆಯಿಲ್ಲ ! ! ತಂಗಲು ಸರಿಯಾದ ಸ್ಥಾನ

ವಿರಲಿಲ್ಲ. ಆದರಲ್ಲೂ ಇಡೀಯ ಇರುಳು ಒದ್ದೆಯಾದ ಬಟ್ಟೆಯಲ್ಲಿ ಸಾಗರದ ಹಸಿ ಉಸುಕಿನ ಹಾಸಿಗೆಯಲ್ಲಿ ತಂಗಾಳಿಗೆ ಮೈಬಿಟ್ಟುಕೊಂಡು ಮಲಗಿದ್ದನು. ಸ್ವಲ್ಪ ನೆಗಡಿಯೂ ಕಾಣಿಸಿಕೊಂಡಿತ್ತು. ವಿಶ್ವಪ್ರಯತ್ನ ಮಾಡಿ ನಿಲ್ದಾಣಕ್ಕೆ ಬಂದಾಗ ಮೈಯಲ್ಲಿ ಜ್ವರವೂ ಏರಿತು!

ಗಾಡಿಗೆ ರೊಕ್ಕವಿರಲಿಲ್ಲ. ಮೈಯಲ್ಲಿ ನೆಟ್ಟಗಿರಲಿಲ್ಲ. ಹೆತ್ತಮ್ಮನನ್ನು ಕಾಣಬೇಕೆಂಬ ಬಯಕೆಯಾದರೋ ಅತಿಯಾಗಿತ್ತು. ಅವ್ವನನ್ನು ಕಾಣುವ ದಿದ್ದರೆ ದೇವರೇ ಕಾಪಾಡಲಿ! ಎಂದು ಗಟ್ಟಿಮನಸ್ಸು ಮಾಡಿ ಹಾಗೆಯೇ ಗಾಡಿ ಏರಿದನು.

೨

ಆ ದಿನ ಇಪ್ಪತ್ತಾರು!

ಜನವರಿ ತಿಂಗಳು ಇಪ್ಪತ್ತಾರು!!

ಸಾವಿರದ ಒಂಭತ್ತುನೂರಾ ನಾಲ್ವತ್ತುಮೂರನೆಯ ಜನವರಿ ಇಪ್ಪತ್ತಾರು!!

ಇಡೀಯ ದಿನವೆಲ್ಲ ಕಾಲೇಜಿನಲ್ಲಿ, ಬೀದಿಯಲ್ಲಿ ಕೂಗಾಡಿ, ಚೀರಾಡಿ ವೀರಧ್ವನಿ ಬೇರೆ ಕುಗ್ಗಿಹೋಗಿತ್ತು! ಬಿಸಲಿನಲ್ಲಿ ಸಿಕ್ಕಹಾಗೆ ತಿರುಗಿ ದಣಿದು ಬಿಟ್ಟುದುದರಿಂದ ಚನ್ನಾಗಿ ಥಳಿಸಿಕೊಂಡವನಂತೆ ಮೆತ್ತಗಾಗಿ ಬಿಟ್ಟಿದ್ದನು. ನೆಲವು ಸಿಕ್ಕರೆ ಸಾಕೆಂದು ಬಯಸುತ್ತಿದ್ದಾಗ 'ಕ್ಲಬ್ಬಿ'ನ ಊಟವೂ ಸೇರ ದಾಗಿತ್ತು! ಆದರೂ ಹೊಟ್ಟೆ ಅತಿಯಾಗಿ ಹಸಿದಿತ್ತಾದ್ದರಿಂದ ಮನಸ್ಸಿಲ್ಲದೆ ನಾಲ್ಕುತುತ್ತು ತಿಂದು ಭಾರವಾದ ಮನಸ್ಸು ದೇಹಗಳನ್ನೆರಡನ್ನು ಎಳೆಯುತ್ತ ಕೋಣೆಗೆ ಬಂದಾಗ ಒಮ್ಮೆಲೇ ಇಳಿದುಹೋದನು. ಆಗಲೇ ಒಂಭತ್ತು ಘಂಟೆಯ ಮೇಲಾಗಿದ್ದರೂ ಕೋಣೆಯಲ್ಲಿ ದೀಪವಿರಲಿಲ್ಲ. ಅವರಿದ್ದುದು ಗಣೇಶಖಿಂಡ ರಸ್ತೆಯ ಮೇಲಿರುವ ಮೂರನೆಯ ನಂಬರ ಬಂಗಲೆಯಲ್ಲಿ. ಕಾಲೇಜಿನ ವಸತಿಗೃಹದಲ್ಲಿ ಸ್ಥಳಾಭಾವವೆಂದು ಕೋಣೆ ಸಿಕ್ಕಿರಲಿಲ್ಲ. ಸರ ಕಾರದವರೇ ಆ ಬಂಗಲೆಯನ್ನು ಭಾಡಿಗೆಯಿಂದ ಹಿಡಿದು ಅಲ್ಲಿಯೂ ವಸತಿ ಗೃಹದ ಶಾಖೆಯನ್ನು ತೆರೆದಿದ್ದರು. ಭವ್ಯವಾದ ಬಂಗಲೆ! ಬಂಗಲೆ ಮಾತ್ರ

ಸ್ವಲ್ಪ ಹಳೆಯತರದ್ದೆಂದೇ ಹೇಳಬೇಕು. ಕರಿಯ ಹರಿನಾಳಿಗೆಯಾಕಾರದ
ಹಂಚುಗಳನ್ನೇ ಹೊಚ್ಚಿದ್ದಾರೆ. ವಿಶಾಲವಾದ ಆವಾರ! ಚಿಕ್ಕದಾದರೂ
ಚೊಕ್ಕಟವಾದ ಕೈದೋಟ! ಅವನ ಕೋಣೆಯನ್ನುಳಿದು ಎಲ್ಲ ಕೋಣೆ
ಗಳಲ್ಲಿಯೂ ದೀಪವಿದ್ದುದು ಕಂಡುಬರುತ್ತಿತ್ತು. ಒಟ್ಟಾರೆ ಆ ಬಂಗಲೆಯಲ್ಲಿ
ಇಪ್ಪತ್ತೈದು ಜನ ವಿದ್ಯಾರ್ಥಿಗಳು ವಾಸವಾಗಿದ್ದರು. ಕೋಣೆಗಳ ಮಾನಕ್ಕೆ
ತಕ್ಕಂತೆ ಮೂರೋ ನಾಲ್ಕೋ ಗೆಳೆಯರು ವಾಸವಾಗಿದ್ದರು. ಆ ಬಂಗಲೆಯು
ಅಖಿಲಭಾರತದ ಚಿಕ್ಕಪಡಿರೂಪವಾಗಿತ್ತು! ನಾಲ್ಕು ವಿದ್ಯಾರ್ಥಿಗಳು ಮುಸ
ಲ್ಮಾನರು! ಅವರಲ್ಲಿ ಮೂವರು ಕಟ್ಟಾ ಮುಸಲೀಮ ಲೀಗಿನ ಅನುಯಾಯಿ
ಗಳು! ಒಬ್ಬ ಶೀಖ! ನಾಲ್ಕಾರು ಜನ, ನಿತ್ಯ ಬೈಲಿನಲ್ಲಿ ಬಡಿಗೆಗಳನ್ನು
ಹಿಡಿದು ಕವಾಯತು ಮಾಡಲಿಕ್ಕೆ ಹೋಗುವ ರಾಷ್ಟ್ರೀಯ ಸ್ವಯಂಸೇವಕ
ಸಂಘದ ಸೈನಿಕರು! ಮತ್ತೆ ಕೆಲವರು ಕಾಂಗ್ರೆಸ ಅನುಯಾಯಿಗಳು! ಇನ್ನು
ಳಿದ ಮೂರು ನಾಲ್ಕು ಜನರು, ನಿಷ್ಪಕ್ಷಪಾತಿಗಳಾದರೂ, ಒಳಗೊಳಗೇ ಸಾರ್ವ
ಭೌಮ ಸರಕಾರದಲ್ಲಿ ಹೊಕ್ಕಾಡಿ ಬಿರುದು ಬಾವಲಿಗಳನ್ನು ಸಂಪಾದಿಸಲು
ಅನುವಿದ್ದ ಸ್ವತಂತ್ರ ಪಕ್ಷದವರು! ಒಂದನೆಯ ನಂಬರಿನ ಕೋಣೆಯಲ್ಲಿ
ಇದ್ದವರು ಮೂವರು ಗೆಳೆಯರು—ಮೂವರಲ್ಲಿ ವೀರನೇ ಹಿರಿಯನು.
ಮೂವರೂ ಬೇರೆ ಬೇರೆ ಕಡೆಯವರು—ಆದರೂ ಅಖಂಡ ಕರ್ನಾಟಕ
ಮಕ್ಕಳು! ಒಬ್ಬ ವಿಜಾಪುರದವರು—ಇನ್ನೊಬ್ಬರು ಅಥಣಿಯವರು—ವೀರು
ಧಾರವಾಡ ಜಿಲ್ಲೆಗೆ ಸೇರಿದ ಮೋಟೆಬೆನ್ನೂರಿನವನು. ಅಥಣಿಯ ಗೆಳೆಯರು
ತುಂಬಾ ಉತ್ಸಾಹಿ! ಸ್ವಲ್ಪ ತೆಳ್ಳನೆಯ ನಸುಗಪ್ಪಾದ ಕುಳ್ಳ ಆಳು! ಸ್ವಭಾವ
ದಿಂದ ಒಂದಿನಿತು ಮೆತ್ತಗೆ! ತಾನಾಯಿತು; ತನ್ನ ಓದಾಯಿತು. ಪಕ್ಷಪಂಗಡ
ಗಳ ಹೆಚ್ಚುಳ ಅವನಿಗಿರಲಿಲ್ಲ ಹೆಚ್ಚೇನು! ದೇಶ, ಸ್ವಾತಂತ್ರ್ಯ, ದಾಸ್ಯ,
ಕ್ರಾಂತಿ, ಭ್ರಾಂತಿ ಯಾವವೂ ಅವನನ್ನು ಅಲುಗಾಡಿಸಿರಲಿಲ್ಲ. ಹಿಮಾಲಯ,
ಪರ್ವತವು ತನ್ನ ತಾಣ ಬದಲಿಸಿದರೂ ಅವನು ನಾಡಿಗಾಗಿ ನೀರುಣಿಸುವವನಲ್ಲ
ವೆಂದು ಅವನನ್ನ ಅರಿತವರು ಯಾರೂ ಹೇಳಬಹುದಾಗಿತ್ತು! ಬಂಗಲೆಯ
ಹೆಬ್ಬಾಗಿಲುಗಳನ್ನು ನೂಕಿ ವಿಜಯನು ಒಳಗೆ ಬಂದನು—ಪಕ್ಕದಲ್ಲಿಯ
'ಇರುಳು ರಾಣಿ' ಹೂಗಿಡಗಳಿಂದ ಸುಗಂಧವು ಹೊಂಚಿಕೊಂಡು ಕುಳಿತು.
ಒಮ್ಮೆಲೇ ಜಿಗಿದು ಹಾರುವ ಹುಲಿಯಂತೆ ಮೂಗನ್ನು ಮುತ್ತಿತು. ಅದಕ್ಕೆ

ಸೌಗಂಧ ಅತಿಯಾಗಿತ್ತು. ಅಂತೆಯೇ ಒಂದು ಅಡ್ಡವಾಸನೆ ಸೇರಿದಂತಿತ್ತು. ಒಮ್ಮೆಲೇ ಆ ವಾಸನೆಗೆ ಒಲಿದುಬರುವ ಕಾಳಸರ್ಪದ ನೆನಪು ಮೂಡಿತು. ಮುಂದೆ ಬಂದು ಇನ್ನೂ ಬಂಗಲೆಯ ಮೆಟ್ಟಲುಗಳನ್ನು ಏರಿರಲಿಲ್ಲ; ಬಸವ ರಾಜ—ವಿಜಾಪುರದ ಗೆಳೆಯರ ಹೆಸರು—ಮುಂದೆ ಬಂದು ತೆಕ್ಕೆಹಾಕಿ 'ಭೋರೆ'ಂದು ಅತ್ತುಬಿಟ್ಟರು. ಉಳಿದ ಗೆಳೆಯರೆಲ್ಲರೂ ವೀರುವನ್ನೇ ದಿಟ್ಟಿಸುತ್ತಿದ್ದರು. ಯಾರೊಬ್ಬರ ಮುಖದ ಮೇಲೂ ಉತ್ಸಾಹದ ಚಿನ್ಹೆಗಳಿರಲಿಲ್ಲ. ಏನೋ ಅನರ್ಥ ಒದಗಿದೆಯೆಂದು ವೀರುವಿಗೆ ಖಚಿತವಾಯಿತು. ಕೇಳುವ ಧೈರ್ಯವಾಗಲಿಲ್ಲ. ಹೇಳುವಷ್ಟು ಶಕ್ತಿ ಅವರಲ್ಲಿ ಉಳಿದಿರಲಿಲ್ಲ. ಸುತ್ತಲೂ ನೋಡಿದನು. ಏನೋ ಕೊರತೆ ಗೆಳೆಯರ ಗುಂಪಿನಲ್ಲಿ ಅನಿಸಿತವನಿಗೆ. ಅವನಿಗೇ ತಿಳಿಯದು, ಒಮ್ಮೆಲೇ ಕೇಳಿಬಿಟ್ಟನು. "ಶ್ಯಾಮನೆಲ್ಲಿ?" ಶ್ಯಾಮ ಅಥಣಿಯ ಗೆಳೆಯರ ಹೆಸರು. ಬಸವ ತೆಕ್ಕೆಹಾಕಿದವನು ಇನ್ನೂ ಅಳುವದನ್ನು ನಿಲ್ಲಿಸಿರಲಿಲ್ಲ. ಬಿಕ್ಕುತ್ತಲೇ ಎಲ್ಲವನ್ನೂ ಹೇಳಿದನು. ಎಲ್ಲ ಗೆಳೆಯರ ಕಂಗಳಲ್ಲಿ ಆ ಸುದ್ದಿ ಕೇಳುತ್ತಲೇ ನೀರೂರಿತು. ವೀರುವಿಗೂ 'ಒಡಲಿನಲ್ಲಿ ಅಲಗಿಕ್ಕಿ ತಿರುವಿದಂತಾಯಿತು. ಆದರೂ ಕಣ್ಣೀರು ಕಣ್ಣಿನಲ್ಲಿ ಕಾಣಿಸಿಕೊಳ್ಳಲಿಲ್ಲ. ಕೋಣೆಯ ಕೀಲಿ ತೆಗೆದು ದುಃಖಿಸಿ ದುಃಖಿಸಿ ಇಳಿದು ಹೋಗಿದ್ದ ಗೆಳೆಯನನ್ನು ಮಂಚದ ಮೇಲೆ ಮಲಗಿಸಿದನು. ಕೋಣೆಯಲ್ಲಿ ಮೂರು ಮಂಚಗಳು! ಮೂರು ಮೇಜುಗಳು!! ಮೂರು ಖುರ್ಚಿಗಳು—ಮೂರು ಪುಸ್ತಕ 'ಸೆಲ್ಫು'ಗಳು! ಒಂದರ ಪಕ್ಕದಲ್ಲೊಂದು ಆಶ್ರಯಿಸಿಕೊಂಡು ತೂಗುಬಿದ್ದ ಮೂರೂ 'ಹ್ಯಾಟು'ಗಳು!—ಕೋಣೆಯಲ್ಲಿ ನಿಲ್ಲುವದಾಗಲಿಲ್ಲ; ಹೊರಗೆ ಬಂದನು. ಸುತ್ತಲೂ ಬೆಳದಿಂಗಳು. ನೀಲಾಕಾಶದಲ್ಲಿ ತಿಂಗಳನು ತಾನೇ ತಾನಾಗಿ ನಡೆದಿದ್ದನು. ಚಿಕ್ಕೆಗಳು ಚುಮುಕಿಸುತ್ತಿದ್ದವು—ತಿಳಿಗಾಗಿ ತೀಡುತಲಿತ್ತು. 'ಡಾಂಬರಿ'ನ ಬೀದಿಯಲ್ಲಿ ತಿಂಗಳನ ಪಡಿರೂಪು ಮೂಡಿ ನಿಂತಿತ್ತು. ಬೀದಿಯ ಎರಡೂ ಕೆಲದಲ್ಲಿ ಆಲದ ಮರಗಳು ತಮ್ಮ ಸಂಸಾರಗಳೊಂದಿಗೆ ಬೀಡುಬಿಟ್ಟಿದ್ದವು. ಅವುಗಳ ಕೆಳಗೆಲ್ಲ ನೆರಳು ಬಿದ್ದು ಆಕಡೆ ನೋಡಿದಾಗ ಭೀತಿಯನ್ನು ತರುತ್ತಿದ್ದವು. ಸನಿಯದ ಸುಂಕದ ಕಟ್ಟೆಯಲ್ಲಿ ಕಾರಕೂನನು ತೂಕಡಿಸುತ್ತಿದ್ದನು. ಕಾವಲಿನವರು ಹೊರಗಡೆಗೆ ಹಾಸಿಗೆ ಬಿಚ್ಚಿ, ಹಿರಿಯಾದ ಡೊಣ್ಣೆಯನ್ನು ತಲೆದಿಂಬಿಗಿರಿಸಿಕೊಂಡು ಅಡ್ಡಾಗಿ

ದ್ದರು. ಅದರ ಹಿಂದುಗಡೆಯಲ್ಲಿ ಸೈನಿಕರ ವಸತಿ—ಅದಕ್ಕೆ ‘ ಚತುಃಶೃಂಗಿ ಸೈನ್ಯದ ಬಿಡಾರ ’ವೆಂದು ಹೆಸರು. ಆಚೆಗೆ ಮಗ್ಗುಲಲ್ಲಿಯೇ ಚತುಃಶೃಂಗಿ ಬೆಟ್ಟ. ಬೆಟ್ಟದ ಪಡುವಣ ಕಿಬ್ಬಿಯ ಮಧ್ಯದಲ್ಲಿ ದೇವಿ ಚತುಃಶೃಂಗಿಯ ದೇವಾಲಯ ಅಲ್ಲಿಯ ತನಕವೂ ಏರಿಹೋಗಲು ಪಾವಟಿಗೆಗಳು—ಒಂದೊಂದೇ ಪಾವಟಿಗೆಗಳನ್ನು ಏರಿ ನಡೆದನು. ದೇವಾಲಯವನ್ನು ಎಡಕ್ಕೆ ಮಾಡಿಕೊಂಡು ಬೆಟ್ಟವನ್ನು ಏರತೊಡಗಿದನು. ಅಲ್ಲಿಂದ ಮುಂದೆ ಬೆಟ್ಟವನ್ನು ಏರಲು ಸರಿಯಾದ ಮಾರ್ಗವಿಲ್ಲ. ಅಲ್ಲಲ್ಲಿ ಸಣ್ಣ ಕಂಟಿಗಳು; ಹಿರಿಹಿರಿ ಕೊರಕಲುಗಳು! ಅಸಹ್ಯವಾದ ಬಂಡೆಗಳು! ಮುಂದೆ ನಡೆಯುತ್ತಿದ್ದನು. ಬೆಳದಿಂಗಳು ಏನೋ ಲಕಲಕ ಹೊಳೆಯಿತು; ಸರಸರ ಸಪ್ಪಳವಾಯಿತು; ನೋಡುತ್ತಾನೆ—ಒಂದು ಮಾರು ಉದ್ದವಾದ ಗೋಧಿವರ್ಣದ ನಾಗರಹಾವೊಂದು ಸಳಸಳನೆ ಸರಿದು ಹೋಯಿತು - ಒಂದು ಚಣ ಅಲ್ಲಿಯೇ ನಿಂತನಾದರೂ ಅವನು ಅಂಜಿದಂತೆ ತೋರಲಿಲ್ಲ ಮತ್ತೆ ಮುಂದೆ ನಡೆದನು. ಒಮ್ಮೆ ಶಿಖರವನ್ನು ಏರಿದ್ದಾಯಿತು. ವಾಸ್ತವವಾಗಿಯೂ ಚತುಃಶೃಂಗಿ ಬೆಟ್ಟವು ನಾಲ್ಕು ಶೃಂಗಗಳಿಂದ ಮೆರೆಯುತ್ತ ಭವ್ಯವಾಗಿ ನಿಂತರೆ ಮಗ್ಗುಲಲ್ಲಿ ಒಂದು ಕಡೆ ಗಣೇಶಖಿಂಡಕ್ಕೆ ಹೋಗುವ ಡಾಂಬರು ಬೀದಿ ಅದರಾಚೆಗೆ ಗವ್ಹರ್ನರ ಬಂಗಲೆ; ಅದರ ಎದುರಿನಲ್ಲಿ ಗವ್ಹರ್ನರ ಬೆಟ್ಟ. ಕೆಳಗಡೆ ಅವರು ವಾಸವಾಗಿದ್ದ ‘ ರಿಟ್ರೀಟ ’ ಬಂಗಲೆ. ಅದಕ್ಕೂ ಕೆಳಬದಿಗೆ ಅವರ ಕಾಲೇಜದ—(ಅಗ್ರಿಕಲ್ಚರ)—ಹೊಲಗಳು—ಒಂದು ಬದಿಗೆ ಕಾಲೇಜಿನ ಕಟ್ಟಡ. ಬೆಳದಿಂಗಳಷ್ಟೇ ಬೆಳ್ಳಗಾದ ಹಿರಿದಾಗಿದ್ದರೂ ಕಿರಿದಾಗಿ ಕಾಣುವ ‘ ಗುಮ್ಮಟ ’! ಅದನ್ನು ಆವರಿಸಿದ ಕಪ್ಪಾಗಿ ಕಾಣುವ ಹಸಿರುಲತೆ—ಅದಕ್ಕೂ ಮುಂದೆ ಶಿವಾಜಿನಗರ ರೇಲ್ವೆ ನಿಲ್ದಾಣದಿಂದ ಖಡಿಗಿ ನಿಲ್ದಾಣಕ್ಕೆ ಹೋಗವ ಜೋಡು ರೇಲು ಮಾರ್ಗ—ತಂತಿಯ ಕಂಬಗಳು! ಇನ್ನೂ ಮುಂದೆ ಮುಳಾಮುಠಾ ನದಿಗಳು ಅತ್ತಲಿತ್ತ ಒಂದನೊಂದು ಅರಸಿಕೊಂಡು ಬಂದು ಒಂದರ ತೆಕ್ಕೆಯಲ್ಲಿ ಒಂದು ಸಿಕ್ಕಿಕೊಂಡ ಸುಮನೋಹರ ದೃಶ್ಯ—ಅನತಿದೂರದಲ್ಲಿ ಕಂಡೂ ಕಾಣದಂತಿದ್ದ ‘ ಕಟ್ಟು-ತೋಟ ’! ಪುಣೆ, ಎರವಡೆಗಳನ್ನು ಜೋಡಿಸುವ ಹಿರಿದಾದ ಪೂಲಿನ ಕಮಾನುಗಳು! ಗವ್ಹರ್ನರ ಬಂಗಲೆಯಾಚೆಗೆ ಖಡಕಿಯಲ್ಲಿರುವ ಸೈನಿಕರ ವಸತಿ! ಇನ್ನೊಂದು ಮಗ್ಗುಲಲ್ಲಿ ವೇತಾಳಬೆಟ್ಟ—‘ ಫರ್ಗೂಸನ್ ’ ಬೆಟ್ಟ—ಲಾ ಕಾಲೇಜಿನ ಬೆಟ್ಟ—ಅದರಾಚೆಗೆ ಪರ್ವತಿಬೆಟ್ಟ—ಬೆಟ್ಟದಮೇಲೆ ದೇವಿಯ

ಬೆಳ್ಳನೆಯ ದೇವಾಲಯ—ಅದರಾಚೆಗೆ, ಅನತಿದೂರದಲ್ಲಿ ಆಗಸವು ಕ್ಷಿತಿಜವನ್ನು ಚುಂಬಿಸುವಡೆಯಲ್ಲಿ ಸಿಂಹಗಡಬೆಟ್ಟ! ಕೆಳಗಡೆ ಪುಣ್ಯಪತ್ತನ! ಕಪ್ಪಾಗಿ ತೋರಿಬರುವ ಗುಂಪುಗಳಲ್ಲಿ ಕಣ್ಣೆಳೆಸುವವರೆಗೆ ತೋರಿಬರುವ ಸೌಧೆ, ದೇವಾಲಯಗಳು! ಸುತ್ತಲೂ ಪಟ್ಟಣದ ವ್ಯೈಗಾವಲಿಗೆ ನಿಂತಂತಿದ್ದ ಸೈನಿಕರ ಕೆಂಪು ಹಂಚಿನ ಛಾವಣಿಗಳು! ಬಿಳಿಯ ಬಣ್ಣದ ಢೇರೆಗಳು!! ಇವೆಲ್ಲವೂ ಆ ಸಪಾಟಾದ ಬೆಟ್ಟದ ಶಿಖರದ ಮೇಲಿಂದ ಒಂದು ಸಲ ಕಣ್ಣು ಹೊರಳಿಸಿದರೆ ಕಾಣುತ್ತಿದ್ದವು- ಬೆಟ್ಟದ ತುದಿಯು ಮೊನೆಯಾಗಿರದೆ, ಸಪಾಟಾಗಿದೆ. ವಿಶಾಲವಾಗ ನಾಲ್ಕಾರು ಎಕರೆ ಬೈಲು! ಮಾನವನು ಬೇಕೆಂದೇ ನಿರ್ಮಿಸಿದ ಕ್ರೀಡಾಂಗಣದಂತೆ ಸುಸಜ್ಜಿತವಾಗಿದೆ. ಅಲ್ಲಿಯೇ ಒಂದು ಬಂಡೆಯ ಮೇಲೆ ವೀರು ಧ್ಯಾನಾಸಕ್ತ ಯೋಗಿಯಂತೆ ಕುಳಿತಿದ್ದನು. ಒಂದು ನರಿಯ ಕೂಗು ಅಸಹ್ಯವಾಗಿ ತೇಲಿಬಂತು. ಇಷ್ಟು ಸಮಯ ದೂರದೂರ ದಿಟ್ಟಿಸುತ್ತಿದ್ದವನು ಈಗ ಮಾಡಲಕಿಬ್ಬಿಯಲ್ಲಿ ನೋಡಿದನು. ಕೆಳಗಡೆ ಇಳುಕಲಿನಲ್ಲಿ ಸೈನಿಕರ ಬಿಳಿಯ ಢೇರೆಗಳು ಮಳೆಗಾಲದಲ್ಲಿ ತಿಪ್ಪೆಯ ಮೇಲೆ ಎದ್ದುನಿಂತ ನಾಯಿಯ ಕೊಡೆಯಂತೆ ಕಂಡವು—'ರೆಡಿಯೋ' ಒಂದು ಅಲ್ಲಿ ಕಿರಿಚಿಕೊಳ್ಳುತ್ತಲಿದ್ದುದು ಕೇಳಿಸುತ್ತಿತ್ತು. ಮಗ್ಗುಲಲ್ಲಿಯೇ ಸಹಸ್ರಾರು ಗುಡಿಸಲುಗಳು! ಅವ್ಯವಸ್ಥೆಯ ಮಟ್ಟಿಯ ಮಾರುಗಳು! ಭಾರತದ ದೀನ ದರಿದ್ರರ ನಿವಾಸಸ್ಥಾನ! ಅವರೆಲ್ಲರೂ ಕನ್ನಡದೇಶದಿಂದ ಕುಲಿಹಾಲಿಗೆಂದು ಬಂದು ನಿಂತ ಕಾರ್ಮಿಕರಾದ ಒಡ್ಡರುಗಳು. ವಿಜ್ಞಾನವು ಹೇಳುವಂತೆ ಒಬ್ಬರು ನೆಲಸಲೂ ಚಿಕ್ಕವುಗಳಾದ ಕಿರಿ ಗುಡಿಸಲುಗಳಲ್ಲಿ ಅವರು ಸಂಸಾರ ಸಮೇತ ವಾಸವಾಗಿದ್ದಾರೆ. ಗುಡಿಸಲು ಎತ್ತರವಾಗಿರಲೂ ಬೇಡವೇ? ಅಂಥವುಗಳಲ್ಲಿ ನೆಲಸಿದ ಅವರ ಬಾಳು, ವ್ಯಕ್ತಿತ್ವಗಳೇ ಮುದುಡಿಹೋಗಿವೆ. ನಮ್ಮ ಸಾರ್ವಭೌಮ ಸರಕಾರದವರು ಕೋಳಿಗಳನ್ನು ಸಾಕುವದಕ್ಕೆಂದು 'ಕೋಳಿ ಫಾರ್ಮ'ದಲ್ಲಿ ಕಟ್ಟಿಸಿದ ಕೋಳಿ ಗೂಡುಗಳು ಆ ಗುಡಿಸಲುಗಳಿಗಿಂತ ನೂರುಪಟ್ಟು ಚನ್ನಾಗಿವೆಯೆಂದರೆ ನಿಮಗೆ ನಂಬುಗೆ ಸಾಲಲಿಕ್ಕಿಲ್ಲ. ಅದೆಷ್ಟೋತೆರನಾದ ಚಿಂತೆಗಳು ಅವನನ್ನು ಆವರಿಸಿದ್ದುವಾಗ! ನದಿಯ ದಂಡೆಯ ಮೇಲೆ ಉರಿಯು ಕಾಣಿಸಿತು. ಆ ಕಡೆಗೆ 'ಸುಡವಕಾಡು' ಇರುವದೆಂದು ಕೇಳಿ ತಿಳಿದಿದ್ದನು. ಆ ಬೆಂಕಿ ಬ್ರಹ್ಮಾಂಡವನ್ನೇ ಸುಟ್ಟು ಬೂದಿಮಾಡಿ ಬಿಡುವ ಬೆಂಕಿಯಾಗಿ ತೋರಿತು; ಉಸಿರು ಮೆಲ್ಲನೆ

ಆಡಲನುವಾಯಿತು. ಕಣ್ಣು ಮಂಜುಗಟ್ಟಿದಂತೆನಿಸಿದವು. ಇಷ್ಟೊತ್ತಿನ ವರೆಗೆ ಚಿಂತಿಸುತ್ತಿದ್ದ ವಿಚಾರಗಳು ಮಾಯವಾದವು; ಪ್ರಶ್ನೆಗಳು ಹಿಂದೆಗೆದವು. ಅವನಿಗೆ ಕಾಣುತ್ತಿದ್ದುದಾಗ ಅದೊಂದೋ ಬೆಂಕಿಯ ರಾಶಿ! ಅದರ ಮೇಲೆ.... 'ಗೆಳೆಯ... ಶ್ಯಾ....ಮನ ಶ....ವ' ತಡೆಯುವದಾಗಲಿಲ್ಲ. ಮಕ್ಕಳಂತೆ ಅತ್ತು ಬಿಟ್ಟನು. ಅವನನ್ನು ಸಂತೈಸಲು ಆಗ ಚಂದ್ರಮನೂ ಬಳಿಸಾರಲಿಲ್ಲ. ಚಿಕ್ಕೆಗಳೂ ಬರಲಿಲ್ಲ. ಕಣ್ಣೀರು ಒರೆಯಿಸಲು ತನ್ನ ಎಡಗೈಯಲ್ಲಿ ಸೀರೆಯ ಸೆರಗನ್ನು ಹಿಡಿದುಕೊಂಡು ನಿಶಾರಾಣಿಯೂ ಮುಂದೆ ಬರಲಿಲ್ಲ ಪ್ರಕೃತಿ ದೇವಿಯೂ ಮನಸ್ಸು ಮಾಡಲಿಲ್ಲ. ಅತ್ತು ಅತ್ತು ಅವನೇ ಸುಮ್ಮನಾಗಬೇಕಾಯಿತು. ಶ್ಯಾಮನ ಕೊನೆಯ ನುಡಿಗಳು ಚಲನ ಚಿತ್ರದಲ್ಲಿ ರಜತ ಪರದೆಯ ಮೇಲೆ ಮೂಡುವ ಚಿತ್ರಗಳಂತೆ ಹವೆಯಲ್ಲಿ ಮೂಡಿ ನಿಂತವು. "ಭಾರತೀಯರ ಬಂಧವಿಮೋಚನೆ!.......ಭಾರತದ ಸ್ವಾತಂತ್ರ್ಯ!!........ ಗೆಳೆಯರಿಬ್ಬರಿಗೂ ನಮಸ್ಕಾರಗಳು!!!........ಪ್ರೇಮಳಿಗೆ ಸಮಾಧಾನ.......!" ಅವನ ಕೊಹ್ಲೆಯ ಮನಸ್ಸಿನ ಆಶೆಗಳನ್ನು ಕೊನೆಗೊಳಿಸಲು ಸಾಧ್ಯವಿರಲಿಲ್ಲ. ಜೀವನ ಕೊನೆಯ ನಮಸ್ಕಾರಗಳನ್ನು ಸ್ವೀಕರಿಸುವ ಸ್ಥಿತಿಯಲ್ಲಿ ಗೆಳೆಯರಿಬ್ಬರೂ ಇರಲಿಲ್ಲ. ಇನ್ನು ಪ್ರೇಮಗಳಿಗೆ ಯಾರು ಸಮಾಧಾನ ಹೇಳಬೇಕು? ಬೆಳಗಾವಿಯಲ್ಲಿರುವ ಆಕೆಗೆ ನಾಳೆಯೋ, ನಾಡದೋ ಈ ಸುದ್ದಿ ತಿಳಿಯುತ್ತಿದೆ. ಆವಳ ಗೋಳಾಟವನ್ನು ಯಾವ ಕಣ್ಣಿನಿಂದ ನೋಡುವದು. ಇನ್ನು 'ಭಾರತೀಯರ ಬಂಧವಿಮೋಚನೆ.' 'ಭಾರತದ ಸ್ವಾತಂತ್ರ್ಯ' ಇವುಗಳಿಗಾಗಿ ಗೆಳೆಯರಿಬ್ಬರೂ ಹೋರಾಡಬೇಕು! ಗೆಳೆಯನ ಆತ್ಮಕ್ಕೆ ಶಾಂತಿಯನ್ನು ದೊರಕಿಸಿಕೊಡುವದಕ್ಕಾಗಿ ಹೆಣಗಲಿಕ್ಕೆ ಬೇಕು. ಆತ್ಮಾರ್ಪಿಸಲು ಸಿದ್ಧರಾಗಲೇ ಬೇಕಿತ್ತು! ರಾಷ್ಟ್ರಾಭಿಮಾನಕ್ಕೆ 'ಸೆರೆಮನೆ, ಶಿಕ್ಷೆ, ದಂಡ, ಲಾಠೀ ಏಟು, ಗುಂಡಿನ ಹೊಡೆತ!' ಇವೇ ಉಡುಗರೆ!! ರಾಷ್ಟ್ರಾಭಿಮಾನದ ಗಂಧವೂ ಇಲ್ಲದ ಗೆಳೆಯನು ರಾಷ್ಟ್ರಾಭಿಮಾನದಿಂದಲೇ ಪುಲಕಿತನಾಗಿ, ರಾಷ್ಟ್ರಕ್ಕಾಗಿ ಜೀವತೆತ್ತ! ರಾಷ್ಟ್ರಾಭಿಮಾನಿಯೆಂದು ಹೆಮ್ಮೆಪಟ್ಟುಕೊಳ್ಳುವ ವೀರು ಯಾವ ಸೇವೆ ಸಲ್ಲಿಸಿದ್ದಾನೆ? ಧರಿಸುವದು ಪೂರ್ತಿ ಖಾದಿ; ಅದೂ ಅ. ಭಾ. ಚ. ಸ ದಿಂದ ಪ್ರಶಸ್ತಿ ಪಡೆಯಬೇಕಂತೆ. ಅದೆಲ್ಲವೂ ದೇಶಾಭಿಮಾನಿಯೆಂದು ತೋರಿಸಿಕೊಡುವ ವೇಷಮಾತ್ರ! ಬಾಯಿಮಾತಿನಲ್ಲಿಯೇ ಕಾಲಹರಣವಾಗು

ತ್ತಿತ್ತು; ಬರಿಯ ಮಾತಿನಲ್ಲಿಯೇ ಸ್ವಾತಂತ್ರ್ಯವಿದ್ದುದಾದರೆ ಅದು ಎಂದೋ ಸಿಕ್ಕುಬಿಡಬಹುದಾಗಿತ್ತು! ಒಂದೂ ಮಾತೆತ್ತದ ಶ್ಯಾಮು ಮುಂಬಯಿ ಚೌಪಾಟಿಯಲ್ಲಿ ಪ್ರಸಿದ್ಧ ದೇಶಭಕ್ತರೊಬ್ಬರನ್ನು ಬಂಧಿಸಿದ್ದನ್ನು ನಿಷೇಧಿಸುವದಕ್ಕೆಂದು ಸೇರಿದ ಚಿಕ್ಕ ಚಿಕ್ಕ ಬಾಲಿಕೆಯರ ಮೇಲೆ ಅಮಾನುಷ ರೀತಿಯಲ್ಲಿ ಪೋಲೀಸರು ಗುಂಡು ಹಾರಿಸಿದ್ದನ್ನೂ ಅದರ ಪರಿಣಾಮವಾಗಿ ಅನೇಕರು ಸತ್ತು, ಅನೇಕರು ಗಾಯಗೊಂಡು ನರಳಿದ ಕರುಳು ಕೊರೆಯುವ ಕತೆಯನ್ನು 'ನಡುಮಧ್ಯಾಹ್ನದಲ್ಲಿ ಒಂದು ಇಂಗ್ಲೀಷ ಸಂಚಿಕೆಯಲ್ಲಿ ಓದಿದನು, ತಡೆಯುವದಾಗಲಿಲ್ಲ ತಳಮಳಿಸಿದನು. ಆ ಬಾಲಿಕೆಯರಲ್ಲಿ ಕೆಲವರು ಇನ್ನೂ ಎಂಟು ಹತ್ತು ವರುಷದ ಹಸುಳೆಗಳು; ಮತ್ತೆ ಕೆಲವರು ಅದೇ ತಾರುಣ್ಯದಲ್ಲಿ ಕಾಲಿಟ್ಟವರು!' ಆ ವೀರ ವನಿತೆಯರ ಬಸುರಿನಲ್ಲಿ ಅದೆಷ್ಟು ಕ್ರಾಂತಿವೀರರು ಮಾತೆಯ ಬಿಡುಗಡೆಗೆ ಚಂಗನೆನೆಗೆದು ಬರುತ್ತಿದ್ದರೋ ಯಾರು ಬಲ್ಲರು? ಹಸುಗೂಸುಗಳನ್ನು ಹೆತ್ತ ಮಾತೆಯದೆಷ್ಟು ಮಿಡುಕಿರಬೇಕು? ಶ್ಯಾಮನಿಗೆ ತಡೆಯುವದಾಗಲಿಲ್ಲ. ಅಂದು ಕಾಲೇಜಿಗೆ ಹೋಗಿದ್ದನು. ಅಧ್ಯಾಪಕರಲ್ಲಿ ಒಬ್ಬರು ಅವನನ್ನು ಕಂಡು "ಏನು! ಶ್ಯಾಮು, ನಾಡಿಗೇ ಸ್ವಾತಂತ್ರ್ಯ ದಿವಸ! ಒಂದಿನ ತಪ್ಪಿಸಿದ್ದರೆ ನಿನ್ನ ಅಭ್ಯಾಸ ಕೊಚ್ಚಿಹೋಗುವದೆ? ಏನಪ್ಪಾ! ನಾಚಿಕೆ ಬರಬೇಕು!" ಎಂದು ಸೌಮ್ಯವಾಗಿಯಾದರೂ ಚುಚ್ಚುಮಾತಿನಲ್ಲಿ ಹೇಳಿದ್ದರು. ಆದನ್ನು ಅವನು ಮನಸ್ಸಿಗೆ ಹಚ್ಚಿಕೊಂಡಿರಲಿಲ್ಲ. "ನಾವು ಇಲ್ಲಿಗೆ ಬಂದುದು ಸ್ವಾತಂತ್ರ್ಯ ದೊರಕಿಸುವ ಸೈನಿಕರಾಗಿ ಅಲ್ಲ; ತಂದೆತಾಯಿಗಳ ದುಡ್ಡನ್ನು ವೆಚ್ಚಮಾಡಿ ವಿದ್ಯಾರ್ಜನೆಗೆ ಬಂದಿದ್ದೇವೆ" ಎಂದು ಪ್ರತಿಯಾಗಿ ನುಡಿದು ಬಿಡಬೇಕೆಂದು ಮಾಡಿದನು. ಆದರೆ ನಾಲಿಗೆಯೇ ಏಳಲಿಲ್ಲ. ಏನೇನೋ ಪರಿಪರಿಯಾಗಿ ಅಧ್ಯಾಪಕರನ್ನು ನಿಂದಿಸುತ್ತ ಕೋಣೆಗೆ ಹೋಗಿ ಅಭ್ಯಾಸದಲ್ಲಿ ಮಗ್ನನಾಗಿಬಿಟ್ಟಿದ್ದನು. ಉಳಿದ ಅವನ ಗೆಳೆಯರೊಬ್ಬರು ಬೆಳಗಿನಲ್ಲಿ ಧ್ವಜವಂದನೆ, ಪ್ರಭಾತಫೇರಿಗಳಿಗೆ ಕರೆದರೂ ಹೋಗಿರಲಿಲ್ಲ. ಆದರೆ ಮಧ್ಯಾಹ್ನದಲ್ಲಿ ಓದಿದ ಸುದ್ದಿಯು ಅವನ ಮನಸ್ಸನ್ನು ಕುಲುಕಿತು. ಕೋಣೆಯಲ್ಲಿ ಅಂದು ಕೂಡ್ರುವವನು ಹೇಡಿ! ಹೆಂಗಸಿಗಿಂತಲೂ ಅಬಲನೆಂದು ಯಾರೋ ಒತ್ತಿ ಹೇಳಿದಂತಾಯಿತು. ಸಂಧ್ಯಾಫೇರಿಯೊಂದು 'ಡೆಕ್ಕನ ಜಮಖಾನೆ'ಯಿಂದ ಹೊರಡುತ್ತದೆಂದು ಕೇಳಿದ್ದನು. ಇನ್ನು ನಿತ್ಯವೂ ತಾನೂ ಫೇರಿಗಳಿಗೆ

ಹೋಗಬೇಕು; ಜನರನ್ನು ಜಾಗ್ರತಗೊಳಿಸಬೇಕು—ತನ್ನ ಕೈಯಿಂದಾದ ಸಹಾಯ ಮಾಡಬೇಕೆಂದು ನೆನೆದು ಅವಸರದಿಂದ ನಡೆದು ' ಡೆಕ್ಕನ ಜಮ ಖಾನೆ'ಯನ್ನು ಮುಟ್ಟಿದಾಗ ಆಗಲೇ ಒಂದು ಮೆರವಣಿಗೆ ಸಜ್ಜಾಗಿ ನಿಂತಿತ್ತು! ಹುಡುಗರಿಗಿಂತ ಹುಡಿಗೆಯರೇ ಬಹಳ ಜನರು! ಎಲ್ಲರ ಕೈಯಲ್ಲಿಯೂ ಒಂದೊಂದು ಮೂರು ಬಣ್ಣದ ಚರಕಾಸಮೇತವಾದ ನಾಡಗುಡಿ! ಮೆರವಣಿ ಗೆಯ ಮುಂಭಾಗದಲ್ಲಿ ನಾಲ್ಕೇ ನಾಲ್ಕು ಕೆಚ್ಚೆದೆಯ ವೀರರು! ಆಗಿನ ದಿನ ಗಳಲ್ಲಿ ಯಾರೂ ಮೆರವಣಿಗೆಗಳ ಮುಂಭಾಗದಲ್ಲಿ ನಿಲ್ಲುವ ಮನಸ್ಸು ಮಾಡು ತ್ತಿರಲಿಲ್ಲ. ಹುಡಿಗೆಯರ ಹಿಂದೆ ಮೆರವಣಿಗೆಯಲ್ಲಿ ಕಳ್ಳನಂತೆ ತಪ್ಪಿಸಿಕೊಂಡು ಹೋಗುವದು ಅವನಿಗೆ ಹಿಡಿಸಲಿಲ್ಲ. ಮುಂದೆ ಬಂದನು! ಒಬ್ಬ ಹುಡಿಗೆಯ ಕೈಯಲ್ಲಿಯ ಧ್ವಜವನ್ನು ಕಿತ್ತುಕೊಂಡು ತಾನೂ ಮುಂಭಾಗದ ನಾಲ್ವರು ಬಂಟರನ್ನು ಸೇರಿದನು. ಮೆರವಣಿಗೆಯು ' ಲಕಡಿ ' ಪೂಲವನ್ನು ದಾಟಿ, ಗೋಖಲೆ ಹಾಲಿನ ಎದುರಿನಲ್ಲಿ ಹಾಯ್ದು ' ಲಕ್ಷ್ಮೀ '' ರಸ್ತೆಗೆ ಬಂತು. ಜಯ ಘೋಷಗಳಿಂದ ಗಗನವೇ ತುಂಬಿಹೋಗಿತ್ತು! ಎತ್ತಲಿಂದಲೋ ಪೋಲೀಸ ಪಡೆಯೊಂದು ಬಂದು ಮೆರವಣಿಗೆಯನ್ನು ತಡೆಯಿತು. ಚಿಮ್ಮುವ ರಕ್ತದ ತೊರೆಗೆ ಕಟ್ಟುಹಾಕಲು ಪೋಲೀಸಪಡೆಗೆ ನೀಗದೆ ಹೋಯಿತು. ಕಿರುಕಳ ಪ್ರಾರಂಭವಾಗಿ ಪೋಲಿಸರು ಗುಂಡೆಸೆದರು. ಮೊದಲನೆಯ ಗುಂಡೇ, ಯಾವ ಮುಖದಿಂದ ಹೇಳುವದು?........ .. ಶ್ಯಾಮನ ಪಕ್ಕದಲ್ಲಿ ಸೇರಿ, ತೊಡೆಯಲ್ಲಿ ದಾಟಿತ್ತು! ತತ್‌ಕ್ಷಣ ಅವನ ಪ್ರಾ........ಣ........' ಇನ್ನೂ ಏನೇನೋ ನೆನೆಪಾಗುತ್ತಲಿತ್ತು! ಆಗಲೇ ಕುಡಿದು ಮತ್ತರಾದ ಸೈನಿಕರು ಕೆಳಗಡೆ ಭೀಕರ ಸ್ವರದಿಂದ ಕೂಗಿಕೊಳ್ಳುವದು ಕೇಳಬಂತು. ಎದ್ದು ದೂರದ ಚಿತೆಯನ್ನು ದಿಟ್ಟಿಸಿದನು. ಅದು ಶ್ಯಾಮನ ಚಿತೆಯೋ ಮತ್ತಾರದೋ ತಿಳಿಯದು. ಅವನಿಗಂತೂ ಶ್ಯಾಮನದೆಂದೇ ಭಾವನೆ! ಚಿತೆಯನ್ನೇ ಸಾಕ್ಷಿಯಾಗಿರಿಸಿ " ನಿನ್ನ ಆತ್ಮಸಂತೋಷಕ್ಕೆ ನನ್ನ ಜೀವ ಮೀಸಲು " ಎಂದು ವೀರು ಪ್ರತಿಜ್ಞೆ ಮಾಡಿದನು. ನಾಲ್ಕೇ ದಿನಗಳಲ್ಲಿ ಅವನ ಕೈದೂ ಆಯಿತು; ಒಂಭತ್ತು ತಿಂಗಳು ಸಶ್ರಮ ಶಿಕ್ಷೆಯೂ ಉಡುಗರೆಯಾಗಿ ದೊರೆಯಿತು.

೩

ಮತ್ತೆ ಇಪ್ಪತ್ತಾರು ಬಂತು!

ಜನವರಿ ತಿಂಗಳು ಇಪತ್ತಾರಲ್ಲ! ಎಪ್ರಿಲು ತಿಂಗಳು ಇಪ್ಪತ್ತಾರು!! ಸಾವಿರದ ಒಂಬತ್ತುನೂರಾ ನಾಲ್ವತ್ತುಮೂರನೆಯ ವರುಷ ಕಳೆದು ನಾಲ್ವತ್ತಾರನೆಯ ವರುಷ ಬಂದಿತು! ಮುಖಂಡರೆಲ್ಲರ ಬಿಡುಗಡೆಯಾಗಿತ್ತು; ಅಲ್ಲಲ್ಲಿ ಒಪ್ಪಂದದ ಮಾತುಕತೆಗಳೂ ನಡೆದಿದ್ದವು. ವೀರು ತನ್ನ ಶಿಕ್ಷೆಯನ್ನು ಮುಗಿಸಿಕೊಂಡು ಬಂದವನು ಮತ್ತೆ ಕಾಲೇಜನ್ನು ಸೇರಿದ್ದನು—ಒಂದು ವರುಷ ಸೆರೆಮನೆ ಸೇರುವ ಮೊದಲು ಹೋಗಿತ್ತು; ಮತ್ತೊಂದು ವರ್ಷ ಸೆರೆಮನೆಯಲ್ಲಿ ಕಳೆದಿತ್ತು. ಒಂದು ಆರು ತಿಂಗಳು ಇನ್ನು ಕಾಲೇಜು ಸೇರಲಿಕ್ಕಿಲ್ಲವೆಂಬ ಧೃಡ ನಿರ್ಧಾರದಲ್ಲಿಯೇ ಸಾಗಿದವು. ಆದರೂ ಮನೆಯವರ ಒತ್ತಾಯಕ್ಕೆ ನಾಲ್ವತ್ತು ನಾಲ್ಕರ ಮೇ ಹದಿನೈದಕ್ಕೆ ಮತ್ತೆ ಕಾಲೇಜಿಗೆ ಸೇರಿದ್ದನು. ಆ ವರುಷ ಅವನಿಗೆ ಹತ್ತಿದ ಚಳಿಜ್ವರ ಬಿಡಲಿಲ್ಲ. ಪರೀಕ್ಷೆಗೆ ಕೂಡ್ರಲು ಅಪ್ಪಣೆ ಸಿಕ್ಕಲಿಲ್ಲ. ಮತ್ತೆ ಮರುವರುಷ ಅದನ್ನೇ ಓದಿದನು. ಗಾಣದ ಎತ್ತಿನಂತೆ ಬೇಸರ ಮಾಡಿಕೊಳ್ಳದೆ ಓದಿದ್ದನ್ನೇ ಓದಿದನು—ಎಲ್ಲವನ್ನೂ ಬದಿಗಿರಿಸಿದನು. ಹಗಲೂರಾತ್ರಿ ಒಂದಾಗಿ ಓದಿದನು. ಪರೀಕ್ಷೆಯೂ ಬಂತು! ವೀರು ಆಗಲೇ ಸೊರಗಿ ಎಲಬು, ಚರ್ಮವಾಗಿದ್ದನು. ಪರೀಕ್ಷೆಯೂ ಮುಗಿಯಿತು. ಪಾಸಾಗಬಹುದೆಂಬ ಆಶೆಯೇನೋ ಬಂದಂತಾಯಿತು. ಉತ್ಸಾಹದಿಂದ ಊರಿಗೆ ನಡೆದನು. ಮನೆಯಲ್ಲಿ ತಾಯಿ ಮೈದಡವಿ ಕೇಳಿದಾಗ 'ಈ ವರ್ಷ ಪಾಸಾಗುತ್ತ'ದೆಂದು ಹೇಳಿದನು ಅಪ್ಪ ನಿರುತ್ಸಾಹದ ಮಾತಿನಲ್ಲಿ ಕೇಳಿದಾಗ "ರ್‍ಯಾಂಕು, ಕ್ಲಾಸು ಬರಲಿಕ್ಕಿಲ್ಲ-ಪಾಸಾಗುವದು ಹದಿನಾರಾಣೆ ಖಂಡಿತ!" ಎಂದು ಹೇಳಿದನು. ಆದರೂ ಮನಸ್ಸಿನಲ್ಲಿ ಎದೆಗುದಿ. ಈಗ ಮೂರು ವರುಷಗಳಿಂದ ಅವನ ಪಾಲಿಗೆ 'ಪಾಸೋ' ದೂರವಾಗಿಬಿಟ್ಟಿತ್ತು. ಅದು 'ತನಗೆಂದಿಗಾದರೂ ಸಿಕ್ಕುವ ವಸ್ತುವೇ' ಎಂದೆನಿಸಿ ಬಿಟ್ಟಿತ್ತು. ಮೇಲಾಗಿ ಬರಹ, ಪ್ರಯೋಗಗಳೆರಡರಲ್ಲಿಯೂ ಬೇರೆ ಬೇರೆಯಾಗಿ ಆರು ವಿಷಯಗಳಲ್ಲಿ ತೇರ್ಗಡೆಯಾಗಬೇಕು. ಒಟ್ಟು ಗುಣಗಳು ನೂರಕ್ಕೆ ನಲ್ವತ್ತರಷ್ಟಾಗಬೇಕು. ಅಂತೂ ಎದೆಗುದಿ ಅವನನ್ನು ಬಿಡಲಿಲ್ಲ.

* * * *

ಮರುದಿನ ಇಪ್ಪತ್ತಾರು! ಎಲ್ಲದಕ್ಕೂ, ಎಲ್ಲರಿಗೂ ನೆಪ ಒಡ್ಡಿದ ಇಪ್ಪತ್ತಾರು ಮರುದಿನ ಬರುತ್ತದೆ. ಮೈಮೇಲಿನ ಬಟ್ಟೆಗಳು ಮಲಿನವಾಗಿ

ದ್ದರೂ ಬದಲು ಮಾಡಿರಲಿಲ್ಲ. ಮುಖದ ಮೇಲೆ ಗಡ್ಡ ಮೀಸೆಗಳು ಒಂದೊಂದು ಇಂಚು ಬೆಳೆದು ನಿಂತುದರ ಪರಿವೇ ಇಲ್ಲ. ತಲೆಯು ಎಣ್ಣೆ ಕಾಣದೆ ಕೆದರಿ ಹೋಗಿತ್ತು. ಅವನ ಆಕಾರವನ್ನು ಕಂಡು ಮನೆಯವರಿಗೆ ಭ್ರಾಂತಿಯಾಗಿ ಬಿಟ್ಟಿತ್ತು. ರಾತ್ರಿ ಊಟ ಗಂಟಲಲ್ಲಿ ಇಳಿಸಲಿಲ್ಲ. ನಿದ್ರೆ ಹತ್ತಲಿಲ್ಲ ತಲೆ ತುಂಬ ವಿಚಾರಗಳು. ಯಾವ ಹೊತ್ತಿನಲ್ಲಿ ತಲೆಯು ಸಿಡಿದು ಬೀಳುವ ದೆಂಬುದು ನಿಶ್ಚಿತವಿರಲಿಲ್ಲ. ಅಂಗಳದಲ್ಲಿ ಮಂಚ ಹಾಕಿಕೊಂಡು ಮಲಗಿದ್ದನು. ಮಲಗುವ ಎಲ್ಲ ಪರಿಗಳೂ ಮುಗಿದವು; ಅಂಗಾತ ಮಲಗಿದ್ದಾಯಿತು; ಡಬ್ಬ ಮಲಗಿದ್ದಾಯಿತು; ಸೆಟೆದು ಎದೆಯ ಮೇಲೆ ಕೈಕಟ್ಟಿಕೊಂಡು ಮಲಗಿದ್ದೂ ಆಯಿತು; ಒಟ್ಟಾರೆ ನಿದ್ರಾದೇವಿಯು ಕೃಪೆಮಾಡಲಿಲ್ಲ. ಅವನಿಗೆ ಸರಿಯಾಗಿ ಗೊತ್ತಿದೆ—ಅವನ ಮನೆಯ ಗಡಿಯಾರವು ಘಂಟೆಗಳನ್ನು ಬಾರಿಸಿದ್ದು—ಹನ್ನೊಂದು, ಹನ್ನೆರಡು, ಒಂದು, ಎರಡು, ಮೂರು, ನಾಲ್ಕು, ಐದು, ಆರು........ಅದೆಂಥ ಇರುಳು ಅದು! ಅದೆಷ್ಟು ಕಹಿ ಅದರಲ್ಲಿ ತುಂಬಿತ್ತು!! ಎನಿತು ನೆನಹುಗಳು ಎದ್ದು ನಿಲ್ಲಬೇಕು! ಅವನ ಪರೀಕ್ಷೆಯ ಪರಿಣಾಮವನ್ನೇ ತಳಗಲ್ಲಾಗಿರಿಸಿಕೊಂಡ ಹಲವಾರು ಘಟನೆಗಳು ಅವನ ಎದುರಿನಲ್ಲಿ ತಾಂಡವ ವಾಡಿದವು. 'ಆ ವರುಷ ಪಾಸಾದರೇನೇ ಮುಂದೆ ಓದಲಿಕ್ಕೆ ಕಳಿಸುವದೆಂಬ ಅವರಣ್ಣನ ಸುಗ್ರೀವಾಜ್ಞೆ! ಈ ವರುಷವಾದರೂ ವೀರಣ್ಣ ಪಾಸಾಗಲೆಂದು ನಿತ್ಯವೂ ಪರಮಾತ್ಮನಲ್ಲಿ ಮೊರೆಯಿಡುತ್ತಿದ್ದ ದೀನ ತಂಗಿಯ ಕರುಣೆಯ ಮೂರುತಿ!! ಪರೀಕ್ಷೆಯ ಪರಿಣಾಮ ಹೊರಬೀಳಲಿ, ಹೇಗಾದರೂ ಮಾಡಿ ಅಪ್ಪಅಮ್ಮರನ್ನು ಒಪ್ಪಿಸಿ ನಿನ್ನ ಕೈಹಿಡಿಯುತ್ತೇನೆಂದು ಮಾತು ಕೊಟ್ಟ ಹುಡಿಗೆಯ ಊರ್ಧ್ವನೋಟ! ಆತನಿಗೆ ಮನಸ್ಸಿರದಿದ್ದರೂ, ಚಿಕ್ಕಂದಿನಲ್ಲಿ ತಬ್ಬಲಿಯಾಗಿ, ಅವನ ತಾಯಿಯ ಮೊಲೆ ಹಾಲನ್ನೇ ಉಂಡು ಆಗ ಬೆಳೆದು ನಿಂತ ಅವನ ಸಹೋದರ ಸೊಸೆಯನ್ನೇ ಮದುವೆ ಮಾಡಿ ತೀರುವೆ; ಪರೀಕ್ಷೆಯ ಪರಿಣಾಮವೊಂದು ಹೊರಬೀಳಲೆಂದು ನಿಶ್ಚಯಿಸಿ ನಿಂತ ಅಮ್ಮನ ಅಧಿಕಾರ ಮೂರ್ತಿ!! ಈ ವರುಷ ಪಾಸಾದರೇನೇ ಮುಖ ನೋಡುವದೆಂಬ ಅತಿ ವ್ಯಸನ ದಿಂದ ನುಡಿದ ಅವರಪ್ಪನ ವ್ಯಥೆ ತುಂಬಿದ ಮಾತು! 'ನೀನು ಪಾಸಾದರೇನೇ ನಿನ್ನನ್ನು ಆದರದಿಂದ ನೋಡುತ್ತೇವೆ' ಎಂದು ಮಾತಿನಲ್ಲಿ ಹೇಳದಿದ್ದರೂ ನೋಟ, ನಡತೆಗಳಲ್ಲಿ ತೋರಿಸುತ್ತಿದ್ದ ಬಳಗದವರ ಮತ್ತು ಗೆಳೆಯರ ತಂಡ!!

ಅದೇನೋ ಓದುವದೆಂದು ಮನೆಯಲ್ಲಿ ಮಂಕು ಊದಿ ಒಂದೊಂದು ವರ್ಗವನ್ನು ಮೂರು ವರ್ಷಗಳಾದರೂ ಮುಗಿಸದೆ 'ಡೌಲು' ಮಾಡುತ್ತ ಬಿಳಿಯ ಬಟ್ಟೆಯನ್ನು ತೊಟ್ಟು ಬೀದಿ ಬೀದಿ ಅಲೆದು ಮನೆಯನ್ನೆಲ್ಲ ಹಾಳುಮಾಡಿಬಿಟ್ಟನೆಂದು ಮೂಗು ಮುರಿಯುವ ಊರ ಜನರ ಬಗೆ! ಎಲ್ಲವೂ ಒಂದೊಂದಾಗಿ ಸುಳಿಸುಳಿದು ಸಾಗಿಹೋದವು ಮಲಗಿದಲ್ಲಿಯೇ ದುಃಖ ತುಂಬಿ ಬಂದು ಬಿಡುತ್ತಿತ್ತು. ಆದರೂ ಧ್ವನಿ ತೆಗೆದು ಅಳುತ್ತಿರಲಿಲ್ಲ. ಕಣ್ಣೀರು ಒಂದೇ ಸವನೆ ಸುರಿಯುತ್ತಿದ್ದವು. ನಸುಕಿನಲ್ಲಿ ಹುಂಜ ಕೂಗಿದಾಗ ಮನಸ್ಸಿಗೆ ಒಂದಿನಿತು ನೆಮ್ಮದಿ ಬಂದಿತ್ತು—ನಂದುವ ಮೊದಲು ಜ್ಯೋತಿಯು ಪ್ರಖರವಾಗುವಂತೆ!

* * * *

ಇಪ್ಪತ್ತಾರು! ವೀರು ಬಾಳಿನ ಭವಿತವ್ಯವನ್ನೇ ಬರೆಯಲಿರುವ ಎಪ್ರಿಲ ಇಪ್ಪತ್ತಾರು!! ಹೊರಗಿನಿಂದ ಬಂದಾಗ ಗಡಿಯಾರದಲ್ಲಿ ಗಾಡಿಬರುವದಕ್ಕೆ ಇನ್ನು ಐದೇ ನಿಮಿಷಗಳು ಉಳಿದಿದ್ದವು ತ್ವರೆಯಿಂದ ಕೋಟು ಹಾಕಿಕೊಂಡು ಹೊರಟನು. ಅವ್ವ ಇವನು ಕೋಟು ಹಾಕಿಕೊಳ್ಳುವದನ್ನು ಹಿತ್ತಲದಿಂದಲೇ ನೋಡಿದಳು; ಆಕೆಗೆ ಗೊತ್ತು—ವೀರು ಊರಲ್ಲಿ ಇರುವಾಗ್ಗೆ ಬಹುಶಃ ಕೋಟನ್ನೇ ಧರಿಸುವಂತಿಲ್ಲವೆಂಬುದು.ಯಾವದೇ ಊರಿಗೆ ಹೊರಟಿರಬೇಕೆಂದು ತಿಳಿದಿರಬೇಕಾಕೆ. ಅಲ್ಲಿಂದಲೇ ಕೂಗಿದಳು. "ಎಲ್ಲಿಗೆ ಹೊರಟೆ ತಮ್ಮಾ?" ವೀರು ಅದೇ ಆಗ ಮನೆಯ ಹೊಸ್ತಿಲು ದಾಟುತ್ತಿದ್ದನು ಎಡಗಾಲು ಇನ್ನೂ ಒಳಗೇ ಇತ್ತು; ಆಕೆಯ ಧ್ವನಿ ಅವನ ಕರ್ಣಪಟಲಗಳನ್ನು ಬಡಿಯಲು ಅವನಿಗೆ ಗುಂಡಿಕ್ಕಿದಂತಾಯಿತು. ಆಗಸವೇ ಕಳಚಿ ಬಿದ್ದಂತಾಯಿತು ತಲೆಯ ಮೇಲೆ!ಭ್ರರನೆ ಕುಗ್ಗಿ ಹೋದ!! ಮೈ ನಡುಗಿತು ಒಂದುಕ್ಷಣ ಚೌಕಟ್ಟಿಗೆ ಭುಜ ಆನಿಸಿ ಅಲ್ಲಿಯೇ ನಿಂತು ಚೇತರಿಸಿಕೊಂಡನು. ಅವನಿಗೆ ಭಾವಿಕರ ನಂಬುಗೆಗಳಲ್ಲಿ ನಂಬುಗೆ ಸಾಲದು. ಹಾಗೆ ನಂಬಿದವರನ್ನು ಅದೆಷ್ಟೋಸಲ ಗೇಲಿ ಮಾಡಿದ್ದನವನು! ಆದರೆ ಆಗ ಅವ್ವ ಆವರು ಹೊರಡುವಾಗ್ಗೆ ನುಡಿದುದು ಅಪಶಕುನವಾಗಿ ತೋರಿತು! ಅವನ ಮನಸ್ಸೆ ಅಷ್ಟು ದುರ್ಬಲ ಸ್ಥಿತಿಗೆ ಬಂದು ನಿಂತಿತ್ತು! ಒಂದು ಚಣ ಆಕೆಯ ಮೇಲೆ ಕೋಪಬಂತು. ಹಾಗೇಕೆ ಆಕೆ ಕೇಳಬೇಕೆಂದು; ಆದರೆ ಮರುಕ್ಷಣದಲ್ಲಿ ಅವನ ಕೋಪಕ್ಕೆ ಅವನೇ

ನಾಚಿಕೊಂಡ ! ಹೆತ್ತವ್ಮನ ಮೇಲೆ ಕೋಪವೇ! ತನ್ನ ನೆಚ್ಚಿನ ಕಂದನಿಗೆ ಆಕೆ ಎಂದಾದರೂ ಎರಡು ಬಗೆದಾಳೆಯೆ ? ಮಗುವಿಗೆ ಕೆಡಕಾಗಲೆಂದು ಅವಳಾವ ಜನ್ಮದಲ್ಲಿಯಾದರೂ ಇಚ್ಛಿಸಲು ಸಾಧ್ಯವೆ ? ಮಗನಿಗೆ ಅಪಶಕುನ ಮಾಡಲು ಯಾವ ತಾಯಿ ಮನಸ್ಸು ಮಾಡಬಹುದು ? ಮೌನನಾಗಿ ಮನೆಯಿಂದ ಹೊರಬಿದ್ದನು. ವರ್ತಮಾನ ಪತ್ರಗಳನ್ನು ಅವರೂರ ಪಶ್ಚಿಮ ಅಗಸೆಯಲ್ಲಿ ಹಾಯ್ದುಹೋಗುವ ಹಳ್ಳಿಯ ಬದಿಯಲ್ಲಿಯೇ ಪತ್ರ ಮಾರುವವನು ಚಲ್ಲುತ್ತಾನೆ. ಅವರೂರಿಗೆ ನಿಲ್ದಾಣ ಒಂದುವರೆ ಮೈಲು ದೂರ ! ಹಳ್ಳಿಯ ಪಕ್ಕದಲ್ಲಿ ನಿಂತು ಕಾಯ್ದನು ! ಒಂದು ಘಂಟೆಯಾಯಿತು; ಎರಡು ಘಂಟೆಯಾಯಿತು !! ಅವನು ಕಾಯಲು ನಿಂತ ಬಂಡಿ ಬರಲಿಲ್ಲ. ಅದಕ್ಕಿಂತಲೂ ಒಂದೂವರೆ ಘಂಟೆ ವಿಲಂಬವಾಗಿ ಹೋಗುವ ಬೆಂಗಳೂರ ಪುಣೆ ಮೇಲುಬಂಡಿ ಭರದಿಂದ ಸಾಗಿಹೋಯಿತು ! ಇನ್ನೂ ತನಕ ಬಂಡೆ ಬರದಿದ್ದುದು ಅವನಿಗೊಂದು ಸಮಸ್ಯೆ ! ಮನಸ್ಸಿನಲ್ಲಿ ಅನೇಕಾನೇಕ ಬಗೆಯ ಕೋಲಾಹಲ ! ವಿಪರೀತ ಸಂಕಟ !! 'ಅಶಭವಾರ್ತೆಗಳನ್ನು ಬೇಗ ಏಕೆ ತಿಳುಹಿಸಬೇಕೆ'ಂದು ಅಂದು ಬಂಡಿ ತಡಮಾಡಿದೆಯೆಂದು ಬೇರೆ ಅನಿಸಬೇಕೆ ? ತಲೆಯನ್ನು ಎರಡೂ ಮೊಳಕಾಲುಗಳ ಸಂದಿನಲ್ಲಿ ಸಿಕ್ಕಿಸಿಕೊಂಡು ಕುಳಿತನು, ಹಳಿಯನ್ನು ಸರಿ ಮಾಡುವವನು ಅತ್ತಲಿಂದ ಬಂದ! ವೀರುವನ್ನು ಮಾತನಾಡಿಸಿ, ಹುಬ್ಬಳ್ಳಿಯ ಕಡೆಯ ಬಂಡಿ ಬರುವದು ಮೂರು ಘಂಟೆ 'ಲೇಟ' ಎಂದುಬಿಟ್ಟನು. ಮನೆಯ ಕಡೆಗಾದರೂ ಹೋಗಿ ಬಂದರಾಯಿತೆಂದು ವೀರು ತಿರುಗುವದರಲ್ಲಿದ್ದನು. ದೂರದಲ್ಲಿ ಹೊಗೆ ಕಾಣಿಸಿತು ! ಆ ಹೊಗೆಯಲ್ಲಿ ಅವನ ಭವಿತವ್ಯವನ್ನೇ ಬರೆದಿದ್ದಂತೆ ಅವನಿಗೆ ಅನಿಸಿತು; ದೇಹವೆಲ್ಲ ಕಣ್ಣಾಯಿತು; ಅವನ್ನೇ ದಿಟ್ಟಿಸಿದನು. ದೂರದಲ್ಲಿ ಬರುವ ಗಾಡಿ ಕೇಕೆ—ಹಾಕಿತು ! ದೇಹವೆಲ್ಲ ಕಿವಿಯಾಯಿತು; ಬಂಡಿಬರುವ ಸದ್ದನ್ನೇ ಆಲಿಸುತ್ತ ನಿಂತನು. ಅವನ ವಿಜಯವನ್ನೇ ಉಗ್ಗಡಿಸುತ್ತ ಬಂದಂತೆನಿಸಿತು. ಆದರೆ ಅದರಿಂದ ಸಮಾಧಾನವೇ ಆಗಲಿಲ್ಲ. ಅವನ 'ಫಜೀತಿ'ಯನ್ನು ಕಂಡು ಕರ್ಕಶ ಧ್ವನಿಯಿಂದ ಕೂಗಿ ಅಣಕಿಸಿದ ಬಿದಿಯ ಗಹಗಹಿಸಿ ನಕ್ಕ ದನಿಯಾದಂತೆನಿಸಿತು ! ಹಾವೇರಿ ನಿಲ್ದಾಣವನ್ನು ಉಳಿದು ಬರುವ ಗಾಡಿಯು ದೂರದಲ್ಲಿ ಕಾಣಿಸಿತು. ಅವನ ಮೃತ್ಯುವೇ ಮೂರ್ತಿಮತ್ತಾಗಿ ಬರುವಂತೆನಿಸಿತು. ಇನ್ನೂ ಸನಿಯಕ್ಕೆ ಬಂತು !

ಸಪ್ಪಳವೂ ಕೇಳಿಸಿತು. ಹೃದಯದ ಬಡಿತವೂ ಅದಕ್ಕೆ ತಾಳಹಾಕಿತು. ಎದೆ ಹಾರುವ ಸಪ್ಪಳದಲ್ಲಿ ಉಗಿಬಂಡಿಯು ಹಿರಿಸದ್ದೂ ಕಿರಿಯದಾಗಿತ್ತು. ಎವೆಯಿಕ್ಕದೆ ಬರುವ ಬಂಡಿಯನ್ನೇ ದಿಟ್ಟಿಸುತ್ತ ನಿಂತಿದ್ದನು. ಬಂಡಿಗುಂಟ ದೃಷ್ಟಿ ಚಲಿಸಿತು. ಭರದಿಂದ ಬಂಡಿ ಅವನೆದುರಿನಲ್ಲಿ ಸಾಗಿಹೋದುದರ ಅರಿವೇ ಅವನಿಗಿರಲಿಲ್ಲ. ಅವನ ಎದುರಿನಲ್ಲಿ ವರ್ತಮಾನಪತ್ರದ ಕಟ್ಟು ಬಿತ್ತು ! ಅದನ್ನು ಕೈಯಿಂದ ಮುಟ್ಟುವ ಸಾಹಸವು ಅವನಿಗಾಗಲಿಲ್ಲ. ದಿಟ್ಟಿಸುತ್ತಲೇ ನಿಂತನು. ಎದುರಿದಲ್ಲಿ ಬಿದ್ದುದು ಪತ್ರದ ಕಟ್ಟಾಗಿರದೆ ಹೆಡೆಯೆತ್ತಿ ನಿಂತ ಕಾಳಸರ್ಪವೆನಿಸಿತು. ಮುಟ್ಟಿದರೆ ಎಲ್ಲಿ ಕಚ್ಚುವದೋ ಎಂಬ ಅಂಜಿಕೆ! ಬಾಗಿ ಒಮ್ಮೆ ಕಟ್ಟೊಡೆದು ಪತ್ರ ಬಿಚ್ಚಿದನು........ಆಗಬಾರದು ಆಗಿಬಿಟ್ಟಿತ್ತು ! ತಲೆಯು ಗರ್ರನೆ ಚಕ್ರದಂತೆ ತಿರುಗಿತು. ದೊಪ್ಪನೆ ಬಿದ್ದನು........ಹೊಲಕ್ಕೆ ಹೊರಟ ಆಳುಮಗನೊಬ್ಬನು ಅವನನ್ನು ಎತ್ತಿ ಮನೆಗೆ ಮುಟ್ಟಿಸಿದನು. ಮೈಮೇಲೆ ಎಚ್ಚರ ಬಂದಾಗ ಅವನು ನಡುಮನೆಯಲ್ಲಿ ಮಲಗಿದ್ದುದು ಕಂಡುಬಂತು. ಪಕ್ಕದಲ್ಲಿ ಅವ್ವ ಕುಳಿತಿದ್ದಾಳೆ: ಕಾಲಬಳಿಯಲ್ಲಿ ಅವನ ಸೊಸೆ ಗೌರಿ ಮುಖವನ್ನೆ ದಿಟ್ಟಿಸುತ್ತ ಕುಳಿತಿದ್ದಾಳೆ; ತಲೆಯ ಬಳಿಯಲ್ಲಿ ತಂಗಿ ಪಾರ್ವತಿ ನಿಂತಿದ್ದಾಳೆ! ದೂರದಲ್ಲಿ ಅಪ್ಪ ಮತ್ತು ಇನ್ನೂ ಇತರ ಅನೇಕರು ಕುಳಿತಿದ್ದರು! ಅವನ ಮೈಮೇಲೆ ಎಚ್ಚರ ಬಂದಿದ್ದರೂ ಅವನಿಗೆ ಆಗಸವೇ ಮೈಮೇಲೆ ಕಳಚಿ ಬಿದ್ದಂತೆನಿಸಿತ್ತು. ಅಲುಗಾಡಲೂ ಬರುತ್ತಿರಲಿಲ್ಲವೆನಿಸುತ್ತಿತ್ತು.... ...ಆತ್ಮಹತ್ಯೆಯ ಹಲವಾರು ಹಂಚಿಕೆಗಳು ಹಣಿಕಿಹಾಕಿದವು ಎಲ್ಲಿಗಾದರೂ ನಿರ್ಜನ ಸ್ಥಳಕ್ಕೆ ಹೋಗಿ 'ಸಾಯುನಾಯಿಡ' ಸುಂಗುರದು........ಇತ್ಯಾದಿ ಇತ್ಯಾದಿ. ಇಪ್ಪತ್ತುನಾಲ್ಕು ಘಂಟೆಗಳ ಬಿತ್ತರವಾದ ಆ ದಿನವು ಆತ್ಮಹತ್ಯೆಯ ಸಾಧನವನ್ನು ಆಯ್ದುಕೊಳ್ಳುವದರಲ್ಲಿಯೇ ಕಳೆಯಿತು. ಮರುದಿನ ಬೆಳಗಿನಲ್ಲಿ ಎಚ್ಚತ್ತಾಗ ಇನ್ನೂ ನಸುಕಿತ್ತು ! ಹಾಸಿಗೆಯಲ್ಲಿ ಮಲಗಿದ್ದನು ಪಕ್ಕದಲ್ಲಿ ಅವ್ವ ಮಲಗಿದ್ದಳು ನಿದ್ರೆ ಆಕೆಯ ಬಲವನ್ನು ಆವರಿಸಿತ್ತು ! ಕಂಗಳಲ್ಲಿ ನೀರು ಇಳಿದುದರ ಸ್ಪಷ್ಟ ಕಲ್ಪನೆ ಮೂಡಿತ್ತು ! ಮುಖವೆಲ್ಲ ಕಳವಳದಿಂದ ಕಂಗೆಟ್ಟಿತ್ತು. ಅವನಿಗಾಗಿ ಅವಳು ಇಡೀಯ ದಿನ ಕೊರಗಿದಳು. ರೇಲ್ವೆ ಹಳಿಯಿಂದ ಮನೆಗೆ ಹೇಗೆ ಬಂದೆನೆಂಬುದು ಅವನಿಗೆ ಬಹಳಮಾಡಿ ತಿಳಿಯದು. ಮೇಲಾಗಿ ಒಂದು ರಾತ್ರಿಯನ್ನು ಕಳೆದರೂ ಅವನಿಗೆ ಸರಿಯಾಗಿ ತಿಳಿಯಲಿಲ್ಲ.

ಹೊಟ್ಟೆಯಲ್ಲಿ ಒಂದು ಬಗೆಯ ಕಳವಳವಾಗುತ್ತಿತ್ತು—ಅದಕ್ಕೆ ಮಾನಸಿಕ ದೈಹಿಕಗಳೆರಡೂ ಕಾರಣಗಳಿರಬೇಕು—ಹೊಟ್ಟೆಗೆ ಹಿಂದಿನ ದಿನ ಏನೂ ತಿನ್ನದ್ದರಿಂದ ಹಸಿವೆಯೆನಿಸಿದಂತಾಗುತ್ತಿತ್ತು. ಆದರೂ ತಿನ್ನಬೇಕೆಂಬ ಮನಸ್ಸಾಗುತ್ತಿರಲಿಲ್ಲ. ಇರುಳಿನಲ್ಲಿ ಅದೇನು ಕಂಡನೋ ಹೇಳಲು ಸಾಧ್ಯವಿಲ್ಲ! ಎದ್ದು ಹಾಸಿಗೆಯ ಮೇಲೆ ಕುಳಿತು ವಿಚಾರಿಸಿದನು. ಹಿಂದಿನ ದಿನ ಯಾವ ದೊಂದು ನಿರ್ಣಯಕ್ಕೆ ಬಾರದ ಆತ್ಮವಂಚನೆಯ ಕಾರ್ಯದಲ್ಲಿ ಮನಸ್ಸು ಮುಳುಗಿತ್ತು; ಒಂದು ಯೋಚನೆ ಮಿಂಚಿದಂತಾಯಿತು. ಸಾವಕಾಶವಾಗಿ ಎದ್ದನು ತಾಯಿಗೆ ಭಾರವಾದ ಮನಸ್ಸಿನಿಂದ, ಪಾದಮುಟ್ಟಿ ನಮಿಸಿ ಭಾರ ವಾದ ದೇಹವನ್ನು ಹೊತ್ತು ತಪ್ಪು ಹೆಜ್ಜೆ ಇಡುತ್ತ ಮನೆಯ ಹಿತ್ತಿಲು ಬಾಗಿಲಿನಿಂದ ಹೊರಬಿದ್ದನು.

೪

ಮೈತಿಳಿದಾಗ ವೀರು ಇದ್ದುದು ಪುಣೆಯ 'ಸಸೂನ' ಆಸ್ಪತ್ರೆಯಲ್ಲಿ ಎಂದು ತಿಳಿಯಿತು; ಮುಂಬಯಿಂದ ಪುಣೆಗೆ ಬಂದ ಒಂದು ಗಾಡಿಯಿಂದ ಪೋಲೀಸರು ಹಿಂದಿನ ದಿವಸ ತಂದು ಹಾಕಿದ್ದರೆಂದು ಒಬ್ಬ 'ನರ್ಸು' ಹೇಳಿದಳು. ಮೈಮೇಲೆ ಕೆಂಡದಂತ ಜ್ವರ! ಸಸಾರವಾಗಿ ಮಾತನಾಡುವ ಆಂಗ್ಲ ನುಡಿ, ಕಣ್ಣಲ್ಲಿ ತೋರುವ ಅಪೂರ್ವ ಕಾಂತಿಗಳ ಮೇಲಿಂದ ಡಾಕ್ಟರರು ಅವನೊಬ್ಬ ಸುಶಿಕ್ಷಿತನೆಂದು ಗುರುತಿಸದೆ ಇರಲಿಲ್ಲ—ಅವನ ಬಗೆಗಾಗಿ ಕೇಳಿ ದರೂ ಅವನು ತುಟಿ ಬಿಚ್ಚಲಿಲ್ಲ ನಾಲ್ಕಾರು ದಿನಗಳಲ್ಲಿ ದೇವರ ದಯೆಯಿಂದ ಜ್ವರ ಇಳಿದವು.... ...ಮುಂದೆ ಒಂದೆರಡು ದಿನಗಳಲ್ಲಿ ಆಸ್ಪತ್ರೆಯಿಂದ ಹೊರಗೆ ಹೋಗಲು ಆಣತಿಯೂ ಸಿಕ್ಕಿತು; ಆಗ ಅಗ್ರಿಕಲ್ಚರ ಕಾಲೇಜು ಅಷ್ಟರಲ್ಲಿ ಪ್ರಾರಂಭವಾಗಿತ್ತು! ಹೋಗಿ ಗೆಳೆಯರನ್ನು ಕಾಣಬೇಕೆಂದೆನಿಸಿತು. ಆದರೆ ಯಾವ ಮುಖದಿಂದ ಕಾಣುವದು? ಆದರೂ ಅದಾವುದೋ ಶಕ್ತಿಯು ಅವ ನನ್ನು ಕಾಲೇಜಿಗೆ ಕರೆದೊಯ್ದಿತು. ಆಗ ಕತ್ತಲಾಗಿತ್ತು! ಯಾರೂ ಅವ ನನ್ನು ಗುರುತಿಸಲಿಲ್ಲ; ನೇರವಾಗಿ ತನ್ನ 'ಹಾಸ್ಟೇಲಿ'ನ ಸುಪರಿಂಟೆಂಡೆಂಟರ ಬಳಿಗೆ ಹೋಗಿ 'ಹಾಸ್ಟೇಲಿನ ಡಿಪಾಜಿಟ' ಎಂದು ಇಟ್ಟ ಇಪ್ಪತ್ತು ರೂಪಾಯಿ ಗಳನ್ನು ತಕ್ಕೊಂಡನು. ಅವರು ಮೊದಮೊದಲು ಕೊಡಲು ಸಿದ್ಧರಿರಲಿಲ್ಲ.

ಮಾರನೆಯ ದಿನ ಕಾಲೇಜಿನ ಕಚೇರಿಯಲ್ಲಿ ತಕ್ಕೊಳ್ಳಲು ತಿಳಿಸಿದರು. ತನ್ನ ಸ್ಥಿತಿಯನ್ನು ಒಂದೆರಡು ಮಾತಿನಲ್ಲಿ ಬಣ್ಣಿಸಿದಾಗ ಅವನ ಕಣ್ಣೀರು ಅವರನ್ನು ಒಪ್ಪಿಸಿತು. ಅವನಿಂದ ಹಕ್ಕಿನ ಚೀಟಿಯೊಂದನ್ನು ಬರೆಯಿಸಿಕೊಂಡು ತಮ್ಮ ಸ್ವಂತ ಹಣವನ್ನು ಕೈಯಲ್ಲಿಟ್ಟು ಅಷ್ಟು ಇಳಿದುಹೋದುದಕ್ಕೆ ಕಾರಣ ಕೇಳಿ ಮತ್ತೆ ಪುನಃ ಕಾಲೇಜು ಸೇರಲು ಆಜ್ಞಾಪಿಸಿದರು. ಹಾಗೆಯೇ ಲಗುಬಗೆಯಿಂದ ನಿಲ್ದಾಣಕ್ಕೆ ಬಂದಾಗ ಪುಣೆ—ಬೆಂಗಳೂರ ಮೇಲುಗಾಡಿ ಸಿದ್ಧವಾಗಿ ನಿಂತಿತ್ತು.

*　　　*　　　*　　　*

ಮರಳಿ ಮನೆಗೆ ಬಂದ ವೀರುನನ್ನು ಯಾರೂ ಸ್ವಾಗತಿಸಲಿಲ್ಲ ಒಳಗೆ ನಡೆದನು. ಒಬ್ಬರೂ ಮಾತನಾಡಿಸಲಿಲ್ಲ. ತಂದೆ ನೋಡಿ ದೂರಸರಿದು ಹೋದರು. ಅಣ್ಣ ಮುಖಮುರಿಮಾಡಿಕೊಂಡರು. ಅತ್ತಿಗೆ ಅವನನ್ನು ಕಂಡು ಒಳಗೆಹೋಗಿಬಿಟ್ಟಳು. ಸೊಸೆ ಗೌರಿ ಸರ್ವಸ್ವವನ್ನೇ ಕಳೆದುಕೊಂಡವಳಂತೆ ಒಂದು ಕಂಬಕ್ಕೆ ಆತು ನಿಂತಿದ್ದಳು—ತಂಗಿ ಪಾರ್ವತಿ ಮಾತ್ರ 'ಭೋರೆಂ' ದು ಅತ್ತು ನೆಲಕ್ಕೆ ಬಿದ್ದಳು. ಅವನಿಗೆಲ್ಲ ಇದು ವಿಚಿತ್ರವೆನಿಸಿತು; ಅವ್ವನನ್ನು ಕಾಣಬೇಕೆಂಬುದೊಂದೇ ಆಗ ಅವನಿಗಿದ್ದ ಇಚ್ಛೆ! ಇವರಾರ ಕಡೆಗೂ ಅವನಿಗೆ ಲಕ್ಷವಿದ್ದಿಲ್ಲ. 'ಅವ್ವ ಎಲ್ಲಿರುವಳೆ'ಂದು ಯಾರನ್ನಾದರೂ ಕೇಳಬೇಕೆಂದಿದ್ದನು ಆದರೆ ಯಾರೂ ಆಗ ಅವನ ಮಾತಿಗೆ ಉತ್ತರಕೊಡಲು ಸಿದ್ಧರಿದ್ದಂತೆ ತೋರಲಿಲ್ಲ. ಮನೆಯನ್ನೆಲ್ಲ ಸುತ್ತಿದನು—ಮನದಲ್ಲಿ ಮೊದಲಿಲ್ಲದ ವೇದನೆಯಾಯಿತು. ಸಂಕಟ ತಡೆಯದಾಯಿತು. ಏನೋ ಕಳೆದುಕೊಂಡವನಂತೆ ಸುತ್ತಲೂ ಅರಸಿದನು. ಕಣ್ಣಲ್ಲಿಂದ ನೀರು ಬೀಳುತ್ತಿತ್ತು! ಅಡಿಗೆಮನೆಯಲ್ಲಿ ಬಾಗಿದನು; ಅತ್ತಿಗೆ ಒಲೆಯ ಎದುರಿನಲ್ಲಿ ಕುಳಿತಿದ್ದಳು. ನಡುಮನೆಗೆ ಬಂದನು; ಪಾರ್ವತಿ, ಗೌರಿ ಒಬ್ಬರನ್ನೊಬ್ಬರು ತೆಕ್ಕೆಹಾಕಿಕೊಂಡು ಅಳುತ್ತಿದ್ದಾರೆ; ದೇವರ ಮನೆಯನ್ನು ಹೊಕ್ಕನು! ದೇವಸನ್ನಿಧಾನದಲ್ಲಿಯೂ ಆ ಕೋಣೆ 'ಭಣ, ಭಣ' ಗುಡುತ್ತಿತ್ತು! ಸರಕಿನ ಕೋಣೆಯ ಬಾಗಿಲು ತೆರೆದನು—ತಾನಲ್ಲದೆ ಮತ್ತಾರೂ ಅಲ್ಲಿಲ್ಲವೆಂದು ದಟ್ಟ ಕತ್ತಲು, ಮುಗ್ಗುವಾಸನೆ ಹೇಳಿದವು; ಹಕ್ಕಿಯ ಕಡೆಗೆ ಕಣ್ಣರಳಿಸಿದನು—ದನಗಳು ಎಂದಿನಂತೆ ನಿಂತಿವೆ; ಬಚ್ಚಲುಮನೆಯಲ್ಲಿ ಬರಿದಾದ ನೀರುಪಾತ್ರೆ, ನಿಂತಿತ್ತು! 'ಹಿತ್ತಲದಲ್ಲಿ ಅಡ್ಡಾಡಿದನು; 'ಚಾರುತಿಪ್ಪೆ'

ಯಲ್ಲಿ ಹಣಿಕಿಹಾಕಿದನು; ಅಲ್ಲಿಯೂ ಅವ್ವನಿರಲಿಲ್ಲ! ಮತ್ತೆ ಒಳಗೆ ಬಂದು 'ಅವ್ವಾ! ಅವ್ವಾ!!' ಎಂದು ಒಂದೆರಡು ಸಲ ಕೂಗಿದನು. ಯಾರೂ ಉತ್ತರಕೊಡಲಿಲ್ಲ.

*　　*　　*　　*　　*

ಮೂರು ದಿನಗಳಾಗಿತ್ತು ಆಗಲೇ ಅವನ ಅವ್ವನು ಅಗಲಿ ಹೋಗಿ! ಮಸಣಗಟ್ಟೆಯಲ್ಲಿ ಹೊಸಮಣ್ಣಿನ ರಾಶಿ ಒಟ್ಟಿತ್ತು. ಸಮಾಧಿಯನ್ನು ಬಗೆದು ಅಮ್ಮನನ್ನು ನೋಡಿಯೇ ತೀರುವೆನೆಂದು ಕೈಯಿಂದ ಕೆದರಿ ಅದರ ಮೇಲೆ ಬಿದ್ದು ಹೊರಳಾಡಿದನು. ಅವರ ಅಪ್ಪ ಮಧ್ಯಾಹ್ನ ಹಿಡಿದು ಮನೆಗೆ ತಂದರು. ಮಿಂಚಿ ಮಾಯವಾದ ಆತ್ಮಹತ್ಯೆಯ ವಿಚಾರ ತಲೆಯಲ್ಲಿ ಸುಳಿಯಿತು—"ಹೃದಯವು ಹೆತ್ತಮ್ಮನನ್ನು ಕೊಂದ ಅಪರಾಧಿ!!" ಎಂದು ಸಪ್ಪಳಮಾಡು ತ್ತಿತ್ತು— ಸಾಯಲೇಬೇಕೆಂದು ನಿಶ್ಚಯಿಸಿದನು. ಬದುಕುವದಾದರೂ ಏತಕ್ಕಾಗಿ? ಹೆತ್ತಮ್ಮನನ್ನು ಕೊಂದ ಅಪರಾಧಕ್ಕೆ ಸಾವೇ ಸರಿಯಾದ ಶಿಕ್ಷೆ! ವೀರು ಮನೆಯಿಂದ ಹೊರಟಮೇಲೆ ತಾಯಿಯ ಮೈಯಲ್ಲಿ ಜ್ವರವು ಮಿತಿಮೀರಿ ಏರಿತು. ಮಗುವಿಗಾಗಿ ಕೂಗಾಡಿದರು—ಮನೆಯವರು ಹುಡುಕಿ ತರುವೆವೆಂದು ಆಶ್ವಾಸನವಿತ್ತರೂ ಆಕೆ ಸಮಾಧಾನ ತಂದುಕೊಳ್ಳಲಿಲ್ಲ—ಪುಣೆಗೆ, ಧಾರವಾಡಕ್ಕೆ, ಹಾವೇರಿಗೆ ಬರೆದ ಪತ್ರಗಳು ಬರಿಗೈಯಿಂದ ಮರುಳಿದವು; ಮಗುವನ್ನು ಕಾಣದ ವಿನಃ ನೀರು ಕುಡಿಯಲಿಕ್ಕಿಲ್ಲೆಂದು ನಿಶ್ಚಯಿಸಿದಳು ಆ ಮಹಾತಾಯಿ! ಔಷಧವನ್ನು ಮುಟ್ಟಲಿಲ್ಲ ಆ ನಿಶ್ಚಯದಲ್ಲಿಯೇ ಆಕೆಗೆ ಕೊನೆಯಾಯಿತು. ಹಲವು ಸಲ ವೀರು ವಿಚಾರಿಸಿ ವಿಚಾರಿಸಿ ಬದುಕಬೇಕೆಂಬ ಹಟವನ್ನು ಹಿಡಿದನು! ಏತಕ್ಕಾಗಿ ಬದುಕುವದು?

"ಗೆಳೆಯ ಶ್ಯಾಮನಿಗಿತ್ತ ವಚನ ಪೂರ್ತಿಗಾಗಿ!" ಬದುಕಲೇಬೇಕೆಂಬ ನಿರ್ಧಾರಕ್ಕೆ ಬಂದಾಗ ಸರಿಯಾಗಿ ಅರ್ಧರಾತ್ರಿಯಾಗಿತ್ತು. ಕಿಡಕಿಯ ಪಕ್ಕದಲ್ಲಿಯೇ ಮಲಗಿದ್ದನವನು. ಚಂದ್ರಮನು ನಡು ಆಗಸದಲ್ಲಿ ತೇಲಿದ್ದನು. ಸನಿಯದರಲ್ಲಿ ತಾರೆಯೊಂದು ನಲಿಯುತ್ತಿತ್ತು. ಅದನ್ನೇ ಕೆಲಹೊತ್ತು ದಿಟ್ಟಿಸಿದನು—ಆ ತಾರೆಯಲ್ಲಿ ತನ್ನ ತಾಯಿ ಬೆಳಗಿದಂತೆನಿಸಿತು—ಎದ್ದು ಕೂತು ಕರಜೋಡಿಸಿ ಬಾಗಿದನು. ಅಶ್ರುಧಾರೆ ಇಳಿಯಿತು.

“ ನಗುತ್ತೀಯಲ್ಲವ್ವ ?....ನಾನು ಅಪರಾಧಿ, ಪ್ರಾಯಶ್ಚಿತ್ತ ಅತ್ಯವಶ್ಯವಿತ್ತು ! ಆದರೂ ಅದಕ್ಕೆ ನಾನು ಸಿದ್ಧನಿಲ್ಲ ! ಮಾಡಬೇಕಾದ ಕಾರ್ಯ ಬಹಳವಿದೆ; ಪ್ರಾಯಶ್ಚಿತ್ತ ತಕ್ಕೊಳ್ಳಲಿಕ್ಕೆ ಸಮಯವಿಲ್ಲ. ಅದಕ್ಕಾಗಿ ನನ್ನನ್ನು ಕ್ಷಮಿಸು !........ಅವ್ವಾ ! ನಾನು ನಿನ್ನ ಮಗನಲ್ಲವೆ ? ನಿನ್ನ ನಚ್ಚಿನ ಕಂದನಲ್ಲವೆ ? ಅದರಿಂದಾಗಿಯಾದರೂ ನನ್ನನ್ನು ಕ್ಷಮಿಸಲಾರೆಯಾ ?....” ಇನ್ನೂ ಏನೋ ಬಗೆಬಗೆಯಾಗಿ ಬೇಡುತ್ತಲಿದ್ದನು.

‘‘ ಇಲ್ಲವೆಂದು ಹೇಳಿದರಾರು ಮಗು ? ನಿನ್ನ ಕಾರ್ಯದಲ್ಲಿ ನಿನಗೆ ಗೆಲವು ದೊರೆಯಲಿ ಮಗು ! ”

ಅವ್ವನ ಅಮೃತವಾಣಿ ತೇಲಿ ಬಂತು !

ಒಮ್ಮೆಲೇ ಅವನ ಮುಖವರಳಿತು. ಅಮ್ಮನ ಆಶೀರ್ವಾದ ಒಂದಿದ್ದರೆ ಸಾಕು ! ವಿಶ್ವದ ಸಾಮ್ರಾಟನಾಗಬಲ್ಲ ! ಮತ್ತೆ ಮಗುವಾದನು—ದೀನನಾದನು —ಅಂಗಲಾಚಿದನು.

‘‘ ಅಮ್ಮಾ! ಒಂದು ಮಾತು, ನಡೆಯಿಸಿಕೊಡಲೇ ಬೇಕು; ಮತ್ತೇನೂ ಅಲ್ಲ; ಮುಂದಿನ ಜನ್ಮದಲ್ಲಿ ನಾ—ನು ನಿನ್ನ ಗರ್ಭದಲ್ಲಿಯೇ ಉದಯಿಸಿ ಬರ-ಬೇಕು ”

ಅತಿ ಆನಂದದಿಂದ ಆಕೆ ನುಡಿದಳು.

“ ನನ್ನ ಕರುಣೆಯ ಕಂದಾ !........” ಆನಂದ ಸಂಭ್ರಮದಲ್ಲಿ ಆಕೆಗೆ ಮಾತೆ ಬಾರಲಿಲ್ಲ. ಕಿರುಮೋಡದಲ್ಲಿ ತಾರೆ ಮರೆಯಾಯಿತು. ಆಗಿನ್ನೂ ಅವನ ಕಣ್ಣುಗಳು ಆಗಸದಲ್ಲಿ ನಟ್ಟಿದ್ದವು. ಪಾರ್ವತಿ ಎದ್ದು ಬಂದು ಕೇಳಿದಳು.

“ ಮಲಗಣ್ಣಾ ! ಹೀಗೇಕೆ ನಟ್ಟಿರುಳಿನಲ್ಲಿ ಎದ್ದು ಕುಳಿತಿರುವೆ ? ” ಮಾತಿನಲ್ಲಿ ಮೇರೆಮೀರಿದ ವ್ಯಥೆ ತುಂಬಿತ್ತು.

ಆಕೆಗೆ ಅವನು ಏನೋ ಹೇಳಬೇಕೆಂದಿದ್ದನು—ಆದರೆ ಹೇಳುವದಾಗಲಿಲ್ಲ - ‘‘ ಹೂಂ ” ಎಂದು ತುಂಬ ಹೊದೆದು ಮಲಗಿಬಿಟ್ಟನು !

---

# ಭೂಮಿಗಿಳಿದ ತಾರೆ !

" ಖಟ್, ಖಟ್ ! ಖಟ್, ಖಟ್ !! ಖಟ್ಟ, ಖಟ್, ಖಟ್ " ಆಕೆಯ ಹೃದಯಮಂದಿರದಲ್ಲಿ ಪ್ರತಿಧ್ವನಿಸುತ್ತಿತ್ತು.

ಅಂದು ಹುಣ್ಣಿಮೆಯ ದಿನವು ಬೇರೆ; ನಟ್ಟಿರುಳು; ತಿಂಗಳು ನಡು ಆಗಸದಲ್ಲಿ, ಅತ್ಯುನ್ನತನಾಗಿ, ತಾನೇ ತಾನಾಗಿ ಸಾಗಿದ್ದನು. ಬಾನಿನಲ್ಲಿ ಚುಕ್ಕೆಗಳು ಚಮಕಿಸುತ್ತಿದ್ದವು. ಚಳಿಗಾಲದ ದಿನವು ಬೇರೆ ! ಆಗಸದಲ್ಲಿ ಮುಗಿಲುಗಳ ಸುಳಿವೇ ಇರಲಿಲ್ಲ. ಮಲಗಿ ನಿದ್ರೆಹೋದ ಮಗುವಿನ ಮೇಲೆ ಹೊದಿಸಿದ ಬಿಳಿಯ ಬಟ್ಟೆಯಂತೆ, ತಿಂಗಳಿನ ಬೆಳಕು ಎಲ್ಲೆಡೆಯಲ್ಲಿಯೂ ಬಿದ್ದಿತ್ತು. ದೂರದ ಗಿರಿಸಾಲುಗಳು ಪ್ರಕೃತಿದೇವಿಯ ತಕ್ಕೆಯಲ್ಲಿ ದಣಿದು ವಕ್ಷಸ್ಥಳದಲ್ಲಿ ತಲೆಯಿಟ್ಟು ಮಲಗಿದ ನಲ್ಲನಂತೆ ನಿಂತಿದ್ದವು. ಅವುಗಳ ಮೇಲಿನ ಮಂಜು ಮತ್ತು ಬರ್ಫದ ತುಂಡುಗಳು ಪೂಬೆಣ್ಣೆಯಂತೆ ತುಂತುರು ತುಂತುರಾಗಿ, ಚಂದ್ರಕಾಂತಿಯಿಂದ " ಝಗ, ಝಗಿಸಿ " ಕಣ್ಣು ಕುಕ್ಕಿಸುತ್ತಿದ್ದವು. ನಿಸರ್ಗವೆಲ್ಲ ಕರಿ-ಬಿಳಿ ಬಣ್ಣಗಳಿಂದ ಬರೆದ ಕಲಾವಿದನೊಬ್ಬನ ಕೃತಿಯಾಗಿತ್ತು !

ಸಮಯ ಸಂದಿ ಹೋಗಿತ್ತಾದುದರಿಂದ ಎಲ್ಲರೂ ಮಲಗಿ ನಿದ್ರೆಹೋಗಿದ್ದರು. ಕಾವಲಿನವರ ಕಾಲಸಪ್ಪಳ. ಕೂಗುಗಳನ್ನು ಉಳಿದರೆ ಮತ್ತಾವ ಸದ್ದೂ ಇರಲಿಲ್ಲ. ಗಾಳಿಯೂ ನೆಲೆನಿಂತುಬಿಟ್ಟಿತ್ತು. ಅರಮನೆಯ ಪುಷ್ಪೋದ್ಯಾನದ ಗಿಡಮರಗಳೆಲ್ಲವೂ ನಿರ್ಜೀವಿಗಳಂತೆ ಒಂದಿನಿತೂ ಅಲುಗಾಡದೆ, ನಿಂತುಬಿಟ್ಟಿದ್ದವು. ಅಂತಃಪುರವು ಆಲಂಗೀರ ಔರಂಗಜೇಬ ಬಾದಶಹನ ಜನಾನಖಾನೆಯು ಏಳು ಸೌದೆಗಳಿಂದ ಸಿಂಗರಗೊಂಡು, ಸುತ್ತಲೂ ಪಕ್ಕದಲ್ಲಿ ನಿಂತ ಇನ್ನುಳಿದ ಅರಮನೆಯ ಭಾಗವನ್ನು ಮೀರಿಸಿತ್ತು. ಹೆಚ್ಚೇನು ? ಇರಾಣದೇಶದ ರಮಣಿಯೊಬ್ಬಳು, ತನ್ನ ನೀರಿಗೆದುಂಬಿದ ಲುಂಗಿಯನ್ನು

ಹರಡಿ, ಬೆಳ್ಳಿ ಚಂದ್ರಮನನ್ನು ದಿಟ್ಟಿಸುತ್ತ ಕುಳಿತಂತೆ ತೋರುತ್ತಿತ್ತು. ಆಕೆಯ ಕಂಗಳೇ ಜನಾನಖಾನೆಯ ಐದನೆಯ ಸೌದೆ! ಹೊರಗೆ ಅಂಗಳಕ್ಕೆ ಹೊದಿಸಿದ ಬಿಳಿಯ ಸಂಗಮವರಿ ಕಲ್ಲುಗಳ ಮೇಲೆ ಇನ್ನೊಬ್ಬ ತರುಣಿ ಕುಳಿತಿದ್ದಳು; ಯಾರೂ ಸಮೀಪದಲ್ಲಿ ಇದ್ದಂತೆ ತೋರಲಿಲ್ಲ. ಆಗಾಗ ಚಟಕ್ಕನೆ ಎದ್ದು ಎದುರಿನ ಬೀದಿಯಕಡೆಗೆ ಬಾಗಿ, ಕಣ್ಣರಳಿಸಿ ದಿಟ್ಟಿಸುತ್ತಾಳೆ; ಮರುಕ್ಷಣದಲ್ಲಿ ನಿರಾಶಳಾಗಿ ಮುಗಿಲುಗಳಲ್ಲಿ ತೇಲಿ ಹೋಗುತ್ತಿರುವ ಚಂದ್ರಮ ನನ್ನು ಎವೆಯಿಕ್ಕದೆ ನೋಡಿ, ಮುಖವರಳಿಸಿ ಮುಗುಳುನಗುನಗುತ್ತಾಳೆ! ಚಂದ್ರಮನಿಗೆ ಏನನ್ನೋ ಕೇಳುತ್ತಾಳೆ!!

“ ಏಕೆ ನಿನ್ನಾಕೆಯನ್ನು ಕಾಯ್ದಿರುವೆಯಾ? ಮಾರ್ಗದಲ್ಲಿ ವಿಲಂಬ ವಾಯಿತೇ? ಹಾಗಾದರೆ ಸಾಗು; ತ್ವರೆಯಿಂದ ನಡೆ! ನಿನ್ನ ಗತಿ ಇಮ್ಮಡಿಸಲಿ; ವಿರಹವೆಂಥದೆಂಬುದು ನಿನಗೇನು ಗೊತ್ತು! ನನ್ನ ಮಾತನ್ನು ಆಲಿಸಲು ನಿನಗೆ ಸಮಯವಿಲ್ಲ. ಹೋಗು, ನಿನ್ನಾಕೆ, ನನ್ನಂತೆಯೇ ಅಲಂಕಾರಗಳನ್ನು ಧೂಳದಲ್ಲಿ ಚಲ್ಲಿಕೊಟ್ಟು, ನೆಲದಮೇಲೆ ಬಿದ್ದುಬಿಟ್ಟಿದ್ದಾಳು! ಆಕೆಯ ಕಂಗಳು ನಿನ್ನ ಮಾರ್ಗದಲ್ಲಿ ನಟ್ಟುಹೋಗಿರಬೇಕು! ಬಿಚ್ಚಿಹೋದ ಕೇಶರಾಸಿಯನ್ನು ಆಕೆ ಸರಿಮಾಡಿಕೊಂಡಿರಲಿಕ್ಕಿಲ್ಲ. ನಾಕ ದಿಂದಿಳಿದ ಭಾಗೀರಥಿಯಂತೆ ಕಂಗಳಿಂದ ನೀರು ಧಾರೆಧಾರೆಯಾಗಿ ಇಳಿದು, ತೊಟ್ಟ ಕುಪ್ಪಸ ತೊಯ್ದು, ಉಟ್ಟ ಸೀರೆಯನ್ನು ಒದ್ದೆಮಾಡಿದ ಪರಿವೆ ಆಕೆ ಗಿರಲಿಕ್ಕಿಲ್ಲ! ಬಿಚ್ಚಿಹೋದ ಕುಪ್ಪಸ, ಕಟ್ಟಿಕೊಂಬುವ ಲಕ್ಷ ಆಕೆಗೆ ಉಳಿದಿಲ್ಲ. ಸೀರೆಯ ಸೆರಗು ಗಾಳಿಗೆ ಸರಿದು ನೆಲದಮೇಲೆ ಬಿದ್ದುದರ ಪರಿವೆ ಆಕೆಗಿರಲಿಕ್ಕಿಲ್ಲ! ಹೋಗು ತ್ವರೆಯಿಂದ ಸಾಗು! ಒಂದು ಸಂಗತಿ; ಮಾರ್ಗದಲ್ಲಿ ತೊಂದರೆ ಕೊಡುತ್ತಲಿದ್ದೇನೆ.... ನಿನ್ನಂತವನೇ ಮಾರ್ಗದಲ್ಲಿ ನಿನ್ನಷ್ಟೇ ತ್ವರೆಯಿಂದ ಸಾಗಿದ್ದರೆ, ಅವನಿಗೂ ಈ ಮಾತುಗಳನ್ನು ಹೇಳಲು ಮರೆಯಬೇಡ. ಕಂಡೆಯಾ!”

ಚಂದ್ರಮನಿಗೂ ಆಕೆಯ ಮಾತಿನಲ್ಲಿಯೇ ಸತತ ಮನಸ್ಸನ್ನು ಚುಚ್ಚಿರ ಬೇಕು; ಬಿಳಿಯ ಮುಗಿಲುಗಳಲ್ಲಿ ಮರೆಯಾದನು.

“ ಖಟ್! ಖಟ್!! ಖಟ್!!!

ಆಕೆಯ ಮೈಯೆಲ್ಲವೂ ಕಿವಿಯಾಯಿತು; ಕಿವಿಗೊಟ್ಟು ಸದ್ದು ಬರುವ ಕಡೆಗೇ ಆಲಿಸಿದಳು. ಎಷ್ಟು ಸಮಯ ಹರಣ ಮಾಡುತ್ತಿರುವನಲ್ಲಾ! ಅನಿಸಿತಾಕೆಗೆ, ದೂರದಲ್ಲಿ, ಸ್ವರ್ಗಲೋಕದಿಂದ ಇಳಿದು ಬರುವಂತೆ, ಅರಬ್ಬೀ ದೇಶದ ಬಿಳಿಯ ತುರಗವೊಂದು ನಾಗಾಲೋಕದಿಂದ ನೆಗೆದು ಬರುವದು ಕಾಣಿಸುತ್ತಿತ್ತು. ಸದ್ದು ಒಮ್ಮೆಲೇ ನಿಂತಿತು. ಒಮ್ಮೆಲೇ ಆಕೆಯ ಎದೆ ಹೊಡೆತವೇ ನಿಂತಂತಾಯಿತು. ಏನೋ ಸಪ್ಪಳ ಕೇಳಿಸಿತು; ಬಾಗಿಲು ತೆರೆಯುವ " ಕಿರಿ, ಕಿರಿ " ಸದ್ದಾಯಿತು; ಮತ್ತೆ " ಖಟ್! ಖಟ್!! " ಸಪ್ಪಳ! ಮತ್ತೆ ಆಕೆಯ ಎದೆಬಡಿಯಲನುವಾಯಿತು. ಎದೆಬಡಿತ, ಕುದುರೆಯ ಖುರಸಪ್ಪಳ ಒಂದರನ್ನೊಳಗೊಂಡು ಸೇರಿ ಪೂರಕವಾಗಿದ್ದವು. ಉದ್ಯಾನದ ಮೂಲೆಯೊಂದರಲ್ಲಿ ಕುದುರೆ ಬಂದು ನಿಂತಿತು. ಆಕೆ ದಿಟ್ಟಿಸಿದಳು. ಕಂಗಳನ್ನರಳಿಸಿ ನೋಡಿದಳು. ನಸುನಕ್ಕು 'ಹೌದು' ಎಂದವಳೇ ಒಮ್ಮೆಲೇ ಎದ್ದು ಒಳಗೆ ಓಡಿದಳು. ಆಕೆಯ ಮೇಲ್ಮುಸುಕು, ಹತ್ತಿರದಲ್ಲಿ ನಿಂತ ಗುಲಾಬಿ ಕಂಟಿಯೊಂದಿಗೆ ಆಟವಾಡುತ್ತಿತ್ತು. ಆಕೆ ಹೊರಟದ್ದು ತಿಳಿಯಲಿಲ್ಲ ಇನ್ನೂ ಅಲ್ಲೇ ಚಂದದಿಂದ, ಅಂದವಾಗಿ ಬೆಳೆದು ಬಾಗಿನಿಂತ ಮೊಗ್ಗಿಯೊಂದಿಗೆ ಲಲ್ಲೆಯಾಡುತ್ತಲೇ ಇತ್ತು. ಆಕೆ ಎರಡೆಜ್ಜೆ ಮುಂದೆ ಸಾಗಿದಳು! ತಲೆಯಮೇಲಿನ ಮುಸುಕು ಹಿಂದೆ ಸರಿಯಿತು. ಯಾರೋ ಹಿಡಿದು ಜಗ್ಗಿದಂತಾಯಿತು; ಒಮ್ಮೆಲೇ ಬೆಚ್ಚಿದಳು; ತಿರುಗಿದಳು; " ಏ! ತುಂಟಾ " ಎಂದು ಕಂಟಿಯಲ್ಲಿ ಸಿಕ್ಕಿದ ವಸ್ತ್ರವನ್ನು ಬಿಡಿಸಿಕೊಳ್ಳುವ ಮುನ್ನವೇ, ಹರಿದುಕೊಂಡು, ಪಾವಟಣಿಗೆಗಳನ್ನಿಳಿದು, ಕೆಳಗೆ ಬಂದಳು. ಉದ್ಯಾವನದಲ್ಲಿ ಓಡಿದಳು. ಇಷ್ಟು ಸಮಯದ ತನಕ ನಿಂತುಹೋದ ಮಂದ ಮಾರುತನು ಚಂದದಿಂದ ಬೀಸಿದನು. ಮಾರುತನ ಬರುವಿನಿಂದ ಸೌಗಂಧಕ್ಕೆ ರೆಕ್ಕೆ ಹಚ್ಚಿದಂತಾಯಿತು; ಸುತ್ತೆಲ್ಲ ಸುಳಿಯಿತು. ಮಲಗಿ ನಿದ್ರೆಹೋದ ಗಿಡ, ಮರಗಳೆಲ್ಲವೂ ಕಣ್ದೆರೆದು, ಎದ್ದು ಆಕಳಿಸಿ, ಸದ್ದು ಮಾಡಿದವು. ಎಲೆ ಉದುರುವ 'ಪಟಪಟ' ಸದ್ದು ಕೇಳಿಸಿತು. ಇಬ್ಬರೂ ಸರಿದು ಹೋದರು! ಚಂದ್ರಮನೂ ಒಂದಿನಿತು ನಿಂತು ನೋಡಿದನು. ಮರು ಚಣದಲ್ಲಿ ಏನೋ ನೆನಪಾದವನಂತೆ ತ್ವರೆಯಿಂದ ಓಡಿದನು— ಆಕೆ ಆತನ ತೆಕ್ಕೆಯಲ್ಲಿ....!

* * * *

ಆಲಂಗೀರ ಔರಂಗಜೇಬ ಬಾದಶಹನ ಮುದ್ದಿನ ಮಗಳು ಜಬುನ್ನೀಸ. ಬಾದಶಹನು ಮಗಳಿಗೆ ಪಂಡಿತರನ್ನಿಡಿಸಿ ಪಾರ್ಶಿ ಭಾಷೆ, ಅರಬ್ಬೀ ಭಾಷೆಗಳನ್ನು ಕಲಿಸಿದನು. ಜಬುನ್ನೀಸ ತನ್ನ ತಂದೆಯಂತೆ ನಿತ್ಯ ಕುರಾಣ ಪಠಿಸುತ್ತಿದ್ದಳು. ಆಕೆ ಕುಶಲಮತಿ! ತಾನೂ ಸ್ವತಃ ಫಾರಸೀ ಭಾಷೆಯಲ್ಲಿ ಪಂಡಿತೆಯಾಗಿದ್ದಳು. ಸ್ವತಃ ಹಲವಾರು ಕವಿತೆಗಳನ್ನು ರಚಿಸಿದಳು. ಆಕೆಯ ರಸಿಕತೆಗೆ ಸಾಮ್ರಾಜ್ಯವೇ ಮಾರುಹೋಯಿತು. ಆಕೆ ನೀತಿಶಾಸ್ತ್ರ, ಸಮಾಜ ಶಾಸ್ತ್ರ, ಪೌರನೀತಿ, ಅರ್ಥಶಾಸ್ತ್ರ ರಾಜತಂತ್ರಗಳಲ್ಲಿ ಆಸಕ್ತಿಯನ್ನು ತೋರಿಸಿ, ಬಾದಶಹನಿಗೆ ಆಡಳಿತೆಯಲ್ಲಿ ಬಲಗೈಯಾದಳು. ಆಕೆ ತಾರುಣ್ಯದಲ್ಲಿ ಕಾಲಿಟ್ಟು ಎಷ್ಟೋ ದಿವಸವಾಗಿತ್ತು. ಎಷ್ಟೋ ಸಾಮ್ರಾಟರ ಪುತ್ರರು ಅರಬಸ್ಥಾನ, ತುರ್ಕಸ್ಥಾನ, ಇರಾಣಗಳಿಂದ ಆಕೆಯ ಖ್ಯಾತಿಯನ್ನು ಕೇಳಿ ಆಕೆಯನ್ನು ಮದುವೆಯಾಗಲು ತವಕಿಸಿದರು. ಬಾದಶಹನೂ ಸ್ವತಃ ಮಗಳಿಗೆ ವರನನ್ನು ನಿಶ್ಚಯಿಸುವವರಲ್ಲಿ ಹೆಣಗಿ ಕಡೆಗೆ ತಾನೇ ಸುಮ್ಮನಿದ್ದನು. ಜಬುನ್ನಿಸಳಿಗೆ ಒಬ್ಬ ವರನೂ ಮನಸ್ಸಿಗೆ ಬರಲಿಲ್ಲ. ಯಾರೊಬ್ಬರೂ ನಿರಾಶರಾಗಿಯೇ ಮರಳಿದರು. ಮುಂದೆ ಬಾದಶಹನೂ ಒತ್ತಾಯ ಮಾಡಲಿಲ್ಲ. ಅವರಿವರು ಹಿಂದುಮುಂದೆ ಆಡಿಕೊಂಡರು. ಆಕೆ ಲಕ್ಷಗೊಡಲಿಲ್ಲ ಅವರ ಮಾತಿಗೆ!

* * * *

ಲಾಹೋರದ ಸುಭೇದಾರಿಕೆ ಬಂದ ಮೇಲೆ ಆಖಲಿಕ್‌ಖಾನನು ಒಂದಿನಿತೂ ವ್ಯರ್ಥವಾಗಿ ಕಾಲಹರಣ ಮಾಡಲಿಲ್ಲ. ಬಾದಶಹನ ಸೇವೆಯನ್ನು ಯಾವ ರೀತಿಯಲ್ಲಿ ಮನಮುಟ್ಟಿ ಮಾಡಬಹುದೆಂಬುದೇ ಅವನ ಮನದ ಮುಂದಾರವಾಗಿತ್ತು. ತನ್ನ ಕೈಯೊಳಗಿನ ಸರದಾರರನ್ನು ಒಂದಿನವೂ ಕೆಟ್ಟರೀತಿಯಲ್ಲಿ ನಡೆಯಿಸಿಕೊಳ್ಳಲಿಲ್ಲ; ಪ್ರಜೆಗಳನ್ನು ಮಕ್ಕಳಂತೆ ಪೋಸಿಸುತ್ತಿದ್ದನೆಂದರೆ, ಹಿಂದಿನದನ್ನೇ ಮತ್ತೆ ಹೇಳಿದಂತಾಗುತ್ತದೆ. ಆಖಲಿಕ್‌ಖಾನನು ರಾಜಕಾರಣ ದುರಂಧರನಾದರೂ, ಬಾದಶಹನಂತೆ ಯಾವುದಕ್ಕೂ ಕೊರತೆ ಮಾಡಿಕೊಳ್ಳಲಿಲ್ಲ. ತಾನೂ ಸ್ವತಃ ಅರಬ್ಬೀ, ಫಾರಸಿ ನುಡಿಗಳೆರಡರಲ್ಲಿ ಪ್ರಾವೀಣ್ಯತೆಯನ್ನು ಪಡೆದಿದ್ದನು. ಹಲವಾರು ಗ್ರಂಥ ರಚಿಸಿದ್ದನು. ಇವನ ರಸಿಕತೆಯನ್ನು ಮೆಚ್ಚಿ ನೂರಾರು ಪಕ್ಕಿಗಳು ಇವನತ್ತ ಸೆಳೆದವು. ಇವನ ಗುಣವರ್ಣನೆಯನ್ನು ಇವನ ಸೌಂದರ್ಯಕ್ಕೆ ಮಾರುಹೋದ ಹಲವಾರು

ಕೋಗಿಲೆಗಳು ತಮ್ಮ ಕಳಕಂಠದಿಂದ ಹಾಡಿದ್ದವು. ಅದೇಕೋ ತಿಳಿಯದು; ಎಂಥೆಂಥ ಕನ್ಯಾರತ್ನಗಳು ಬಾಗಿಲಿಗೆ ಬಂದರೂ ಇವನು ಹೃದಯ ತೆರೆಯಲಿಲ್ಲ; ಕಾಶ್ಮೀರದ ನಂದನವನದಲ್ಲಿ ನರ್ತಿಸಿದ ನರ್ತಕಿಯರೂ, ಇವನನ್ನು ಮೆಚ್ಚಿಸಲಾರದೇ ಮರಳಿದರು. ಅರಬೀ ದೇಶದ ಸ್ವರ್ಗೀಯ ಸೌಂದರ್ಯದ ರಂಭೆಯರು ಇವನ ಮನವನ್ನು ಸೆಳೆಯದೇ ನಿರಾಶರಾಗಿ ತೆರಳಿದರು. ಇರಾಣ ದೇಶದ ದೂತೆಯರು ಇವನ ಮುಂದೆ ಕೈಕಟ್ಟಿಕೊಂಡು ಪ್ರಾರ್ಥಿಸಿದರೂ ಇವನು ಅವರಿಗೆ ಮಣಿದು ಅವನ ಮನಸ್ಸನ್ನು ತಣಿಸಲಿಲ್ಲ.

*　　*　　*　　*

ಆಲಂಗೀರ ಔರಂಗಜೇಬನಿಗೂ ಆನಂದ! ಕಡೆಗೊಮ್ಮೆ ಮಗಳು ತನ್ನ ಹೃದಯಕ್ಕೊಪ್ಪುವ ಒಬ್ಬನನ್ನು ಆರಿಸಿಕೊಂಡು ಮನವನ್ನೊಪ್ಪಿಸಿದ್ದಾಳೆ ಎಂದು ಕೇಳಿ; ಮಗುವಿನ ಮುಖ ಕಣ್ಣಾರೆ ಕಂಡು ಮನದಲ್ಲಿ ಮುಗುಳು ನಕ್ಕನು! ಮೈಮೇಲಿನ ಅರ್ಧಭಾರವಿಳಿದಂತಾಯಿತು. ಈ ಸುದ್ದಿಯನ್ನು ಕೇಳಿ, ಓಲಗದಲ್ಲಿಯ ರಾಜಜ್ಯೋತಿಷಿಗಳನ್ನು ಕರೆದು, ಒಂದು ಸುಮುಹೂರ್ತವನ್ನು ನಿರ್ಣಯಿಸಿದನು. ಎಲ್ಲವೂ ಗುಟ್ಟಾಗಿಯೇ ನಡೆಯಿತು. ಅದರ 'ಗುಲ್ಲು' ಯಾರಿಗೂ ಕೇಳಿಸಲಿಲ್ಲ. ಕಾರಣಾಂತರದಿಂದ ರಾಜಧಾನಿಯೂ ಸಿಂಗರಿಸಲ್ಪಟ್ಟಿತು. ಬಾದಶಹನು ಸವಾರನೊಬ್ಬನನ್ನು ಕರೆದು, ಮೋಹರುಮಾಡಿದ ಲಕ್ಕೋಟೆಯೊಂದನ್ನು ಕೊಟ್ಟು ಕಳುಹಿದನು. ಸವಾರನು ತುರಗವನ್ನು ತ್ವರೆಯಿಂದ ಓಡಿಸುತ್ತ ಬಾಹೋರವನ್ನು ಬಂದು ಮುಟ್ಟಿದಾಗ ಕತ್ತಲು ಕವಿದು ಬಿಟ್ಟಿತ್ತು; ಎರಡು ಘಂಟೆ ರಾತ್ರಿಯಾಗಿತ್ತು. ಖಾನನು ಆಗಲೇ ದರಬಾರವನ್ನು ಪೂರೈಸಿ, ಊಟ ಇತ್ಯಾದಿ ತೀರಿಸಿಕೊಂಡು ಶಯನಮಂದಿರದಲ್ಲಿ, ಹುಕ್ಕಾ ಕೈಯಲ್ಲಿ ಹಿಡಿದು, ರಾಣಿಗೆ ಏನೆಂದು ಉತ್ತರ ಬರೆಯಲೆಂಬ ಹವ್ಯಾಸದಲ್ಲಿ ಹೆಣಗುತ್ತಿದ್ದನು— ಬಾದಶಹನ ಓಲೆಯನ್ನು ಒಂದು ಚಣ ಬದಿಗಿರಿಸಿ, ತಾನು ಬರೆಯಬೇಕಾದುದನ್ನು ಬರೆದು ಮುಗಿಸಿದನು – ಬರೆದದ್ದನ್ನೇ ಮತ್ತೆ ಮತ್ತೆ ಓದಿದನು!

ದಿಲ್ ಕಿ ಬುಲ್ ಬುಲ್!

ಅಲಂಗೀರ ಔರಂಗಜೇಬ ಬಾದಶಹನ ಪಾದಧೂಳು ನಾನು! ಈ ವಿಷಯದಲ್ಲಿ ಅವರು ನನ್ನನ್ನು ಖಂಡಿತ ಕ್ಷಮಿಸುವದಿಲ್ಲ. ನೀನು ಬಾದಶಹನ

ಮಮತೆಯ ಮಗಳು. ಸಾಮ್ರಾಟನ ಸುತೆ! ನಾನೊಬ್ಬ ಯಃಕಶ್ಚಿತ ಸುಭೇದಾರನು, ಯಾವ ಮೊಗದಿಂದ ಬಾದಶಹನಲ್ಲಿ ಲಗ್ನದ ಪ್ರಸ್ತಾಪವನ್ನೆತ್ತಲಿ? ಎತ್ತಿದ ನಾಲಿಗೆಯನ್ನು ಬಾದಶಹರು ಕಿತ್ತದೆ ಬಿಡುವರೆ? ಸದ್ಯಕ್ಕೆ ಈ ವಿಚಾರ ಬದಿಗಿರಲಿ! ಮತ್ತೆ ನೋಡೋಣ! ಕೋಯಿಲೆ! ಹಗಲೆಲ್ಲ ಚಿಂತಿಸುವದು ನಿನಗಾಗಿ; ಇರುಳಿನಲ್ಲಿ ಕಾಣುವದು ನಿನ್ನ ಕನಸುಗಳನ್ನು! ನನ್ನ ಅರಮನೆಯಲ್ಲಿ ತಂದಿರಿಸುವೆನೋ ಎಂಬ ಚಿಂತೆಯೊಂದಲ್ಲದೆ ಇನ್ನೊಂದು ಚಿಂತೆ ನನಗಿಲ್ಲ

ಇನ್ನು ಏನನ್ನೋ ಬರೆಯಬಹುದಾಗಿತ್ತು. ಬಾದಶಹನಿಂದಲೂ ಒಂದು ಓಲೆ ಬಂದಿದೆ. ಮತ್ತಾವ ಶತ್ರು ಎದ್ದು ಕುಳಿತಿರುವನೋ—

ಮತ್ತೆ ಬರೆಯುವೆ. ಸಾಸಿರ ಮುತ್ತುಗಳು

ನಿನ್ನ,
ಆ ಖಾನ.

ಪತ್ರವನ್ನು ಮೋಹರುಮಾಡಿ ತನ್ನ ಅಂಗರಕ್ಷಕರಲ್ಲೊಬ್ಬನನ್ನು ಕರೆದು ಅವನ ಕಿವಿಯಲ್ಲಿ ಏನೇನೋ ಹೇಳಿ, ಕೊಟ್ಟು ಕಳುಹಿದನು.

ಮತ್ತೇನು ಬಾದಶಹನು ಬರೆದಿರುವನೋ ಎಂದು, ಲಕ್ಕೋಟೆಯನ್ನು ಬಿಚ್ಚಿ ನೋಡಿದನು. ಎರಡೇ ಎರಡು ಸಾಲುಗಳು—

ಸುಭೇದಾರ, ಅಖಲಿಕ್‌ಖಾನ್!

ಒಂದು ಮಹತ್ವದ ಕೆಲಸವದೆ; ನಾಳಿನ ದಿನವೇ ಎಲ್ಲವನ್ನು ಬದಿಗಿರಿಸಿ ಬಂದುಬಿಡಬೇಕು. ಜಬು, ನಿನ್ನ ದಾರಿಯನ್ನೇ ಕಾಯುತ್ತಿದ್ದಾಳೆ!

—ಆಲಂಗೀರ ಔರಂಗಜೇಬ.

ಓದಿ ಒಮ್ಮೆ ನಕ್ಕನು. ಮರುಕ್ಷಣದಲ್ಲಿಯೇ ಆ ನಗೆ ಮಾಯವಾಯಿತು. ಬಾದಶಹನನ್ನು ನೆನೆದನು. 'ಜುಬು ನಿನ್ನ ದಾರಿಯನ್ನೇ ಕಾಯುತ್ತಿದ್ದಾಳೆ'ಂದು ಬಾದಶಹನೇಕೆ ಬರೆದಿದ್ದಾನೆ. ರಾಜಕಾರಣದಲ್ಲಿ ಮನೆತನದ ಸಲುಗೆಯ ಮಾತುಗಳೇಕೆ? ಹಿಂದೆಂದೂ ಬಾದಶಹನು ಈ ರೀತಿ ಬರೆದಿಲ್ಲ. ನನ್ನ ಮತ್ತು ಆಕೆಯ ಪ್ರಣಯ ಬಯಲಿಗೆ ಬಂದಿದ್ದೀತು. ಅದು

ಹೇಗೆ ಬಂದಿರಬಹುದು. ಆಕೆಯೇ ಸ್ವತಃ ಹೇಳಿದಳೇ ? ಹಾಗಿದ್ದರೆ, ನಾನೇಕೆ ಪ್ರಸ್ತಾಪಿಸಬೇಕೆಂದು ಬರೆದಳು ? ಇಲ್ಲ ! ಆಕೆ ಹೇಳಿರಲಾರಳು. ಮತ್ತೇನು ಯಾರಾದರೂ ಚಾಡೀ ಚುಚ್ಚಿದರೆ... ಒಂದೂ ತಿಳಿಯಲಿಲ್ಲ. ಬಾದಶಹನ ಹಟ ಮಾರಿತನವೂ, ಕ್ರೋಧಗಳೂ ಅವನೆದುರಿನಲ್ಲಿ ತಾಂಡವವಾಡಿದವು. ತನ್ನ ಮೃತ್ಯುವೇ ಬಂದು ಎದುರಿನಲ್ಲಿ ನರ್ತಿಸಿದಂತೆ ತೋರಿತು; ಒಮ್ಮೆಲೇ ಚೀರಿದನು. ಅಂಗರಕ್ಷಕರಲ್ಲಿ ಒಬ್ಬಾತ ಓಡಿ ಬಂದು ' ಏನಾಗಬೇಕಿತ್ತೆಂ 'ದು ಆಲಿಸಿದನು.

" ಬಾದಶಹನಿಂದ ಒಂದು ಮಹತ್ವದ ಕೆಲಸಕ್ಕಾಗಿ ಕರೆ ಬಂದಿದೆ. ಈಗಿಂದೀಗಲೇ ಹೊರಡಬೇಕು; ತುರಗವನ್ನು ಸಿದ್ಧಪಡಿಸು ' ಅಪ್ಪಣೆಯನ್ನು ಆಗಲೇ ವಿಧಿಸಿದನು.

ತುರಗಗಳು ಸಿದ್ಧವಾದವು. ಅವನಿಗೊಂದು; ಇನ್ನೆರಡು ಅಂಗರಕ್ಷಕರಿಗೆ; ಮೂವರು ಹೊರಟವರು. ಕೋಟೆಯ ಬಾಗಿಲನ್ನು ದಾಟಿ ರಾಜಮಾರ್ಗಕ್ಕೆ ಕೂಡಿದರು. ಮಾರ್ಗದಲ್ಲಿ ದಟ್ಟವಾದ ಕತ್ತಲು ! ಕಾರ್ಗತ್ತಲಿಗೆ ಅಂಜಿ ಕುದುರೆಗಳು ಮುಂದೆ ಹೋಗಲೊಲ್ಲವು. ಖಾನನು ನಡುಗಿದನು. ಮುಂದೆಯೇ ಅನರ್ಥವಿದೆಯೆಂದು ಮನಮಿಡಿಕಿತು. ಬಾದಶಹನು ತನ್ನನ್ನು ಖಂಡಿತವಾಗಿಯೂ ದಂಡಿಸುವನೆಂದು ಬಗೆದನು. ಅವನಿಗೆ ತಿಳಿದಿದ್ದ ಹಲವಾರು ದಂಡನೆಗಳು ಕಣ್ಣಮುಂದೆ ಬಂದುಹೋದವು. ಕಣ್ಣುಕೀಳಿಸಿ, ಆನೆಯ ಕಾಲಿಗೆ ಹಾಕಿ ಶೂಲಕ್ಕೇರಿಸುವದು—ಇತ್ಯಾದಿ, ಇತ್ಯಾದಿ. ಇನ್ನು ಪುನಃ ಲಾಹೋರಿಗೆ ಮರಳಿ ಬಾರೆನೆಂದು ಮತ್ತೆ ಮತ್ತೆ ಹೊರಳಿ ನೋಡಿದನು. ಅರಮನೆ, ಕೋಟೆ, ಕೊತ್ತಳಗಳು ಕತ್ತಲೆಯಲ್ಲಿ ಸದ್ದುಮಾಡದೇ ನಿಂತಿದ್ದವು. ಇವೆಲ್ಲವೂ ಅಪಶಕುನವೆಂದೇ ಅವನಿಗೆ ಅನಿಸಿತು. ಹತ್ತಿರದ ಮರದಿಂದ ಹಕ್ಕಿಯೊಂದು ರೆಕ್ಕೆ ಬಿಚ್ಚಿಕೊಂಡು ಎಡದಿಂದ ಬಲಕ್ಕೆ ಹಾರಿ ಹೋಗಿ ' ಗೂಕ್! ಗೂಕ್! ' ಅಂತಾ ಕಿರುಚಿತು. ಎದೆ ಭರ್ಪದ ಗಡ್ಡೆಯಾಯಿತು ! ' ಏನೇ ಆಗಲಿ ! ದಿಲ್ಲಿಗೆ ಹೋಗಬಾರದೆಂದು ಕೆಲಹೊತ್ತು ಯೋಚಿಸಿ, ಹಿಂದಿರುಗಿದನು.

" ಈಗ ಇಂಥ ಕತ್ತಲೆಯಲ್ಲಿ ದಿಲ್ಲಿಗೆ ಹೋಗುವದು ಬೇಡ; ಬೆಳಗೆ ಹೋದರಾಯಿತು. " ಎಂದು ಅಂಗರಕ್ಷಕರಿಗೆ ಕುದುರೆಗಳನ್ನು ತಿರುಗಿಸಲು ಹೇಳಿದನು.

ಅರಮನೆಯನ್ನು ಮುಟ್ಟಿದಾಗ ಸರಿಯಾಗಿ ನಡುರಾತ್ರಿಯಾಗಿತ್ತು. ಮಲಗಿದರೂ ನಿದ್ರೆ ಬರಲಿಲ್ಲ. ತಲೆಯಲ್ಲಿ ಏನೇನೋ ವಿಚಾರಗಳು! ಇಂದೇನೋ ತಲೆ ತಪ್ಪಿಸಿಕೊಂಡೆ; ಹೀಗೆಯೇ ಎಷ್ಟು ದಿವಸ ಇರಲಿಕ್ಕಾದೀತು. ಬಾದಶಹನ ದಂಡನೀತಿ, ಚದುರತನಗಳ ಎದುರಿನಲ್ಲಿ, ತನ್ನ ಆಟ ಹೇಗೆ ನಡೆಯಬಲ್ಲದು? ಎಲ್ಲಿಯಾದರೂ ಲಾಹೋರವನ್ನೇ ಬಿಟ್ಟು ಹೋಗಬೇಕೆಂದು ಹಾಸಿಗೆಯಿಂದ ಸದ್ದು ಮಾಡದೆ ಎದ್ದು ಯಾರಿಗೂ ತಿಳಿಯದಂತೆ ಕತ್ತಲದಲ್ಲಿ ಮಾಯವಾಗಿ ಬಿಟ್ಟನು.

* * * *

ನಾಲ್ಕು ದಿನಗಳಾದರೂ ಖಾನನು ದಿಲ್ಲಿಗೆ ಬರಲಿಲ್ಲ. ಬಾದಶಹನು ಕೋಪೋದ್ದೀಪಿತನಾದನು. ತಾನು "ತ್ವರೆಯಿಂದ ಹೊರಟುಬರಬೇಕೆಂ"ದು ಬರೆದ ಕಾಗದಕ್ಕೆ ಅಲಕ್ಷವೇ? ಮತ್ತೆ ಸವಾರನು ಸಿದ್ಧನಾದನು. ಮರಳಿ ಬಂದನು. ಖಾನನು ಇಲ್ಲವೆಂಬ ಉತ್ತರ ಹೊತ್ತು ತಂದನು. ಬಾದಶಹನು ಅವನಿಗಾಗಿ ಅರಸಿದನು. ಆದರೆ ಅವನು ಬೇರೆ ಸಿಕ್ಕಲಿಲ್ಲ. ಎಲ್ಲಿಗೆ ಹೋದನೆಂಬುದು ಯಾರೊಬ್ಬರಿಗೂ ತಿಳಿಯಲಿಲ್ಲ. ಬಾದಶಹನು ಲಾಹೋರಕ್ಕೆ ಮತ್ತೊಬ್ಬ ಸುಬೇದಾರನನ್ನು ನಿಯಮಿಸಿದನು.

* * * *

ಜಬೂನ್ನೀಸಾ ಕಂಗೆಟ್ಟಳು. ಹಿಂದಿನಂತೆ ತಂದೆಯ ಪಕ್ಕದಲ್ಲಿ ಕುಳಿತು ಓಲಗದಲ್ಲಿ ಆಸಕ್ತಿ ತೋರಿಸಲಿಲ್ಲ. ಆಗಾಗ ಹಿಂದಿನಂತೆ ಸಲಹೆಗಳನ್ನು ಕೇಳಲಿಕ್ಕೆಂದು ಬಂದ ಅನೇಕ ಅತಿಥಿಗಳನ್ನು ಬರಿಗೈಯಿಂದ ಕಳುಹಿದಳು; ಎಂದಿನಂತೆ ಚರ್ಚೆಗೆ ಬಂದ ಪಂಡಿತರು ಮೊಗ ಒಣಗಿಸಿಕೊಂಡು ಮರಳಿದರು; ಎಂದಿನಂತೆ ಜನಾನಖಾನೆ ಮಸಣವಟ್ಟಿಯಾಯಿತು; ದಾಸಿಯರು ಎರಡೇ ದಿನಗಳಲ್ಲಿ ಸೊರಗಿ ಕಡ್ಡಿಯಾದರು. ಮಮತೆಯ ಮಗಳ ಸ್ಥಿತಿಯನ್ನು ನೋಡಿ ಬಾದಶಹನು ಇಳಿದೇ ಹೋದನು. ಜುಬುನ್ನೀಸಳ ಜನಾನಖಾನೆಯಿಂದ ಸಂಗೀತ ಕೇಳಬಂದುದನ್ನು ಯಾರು ಕೇಳಲಿಲ್ಲ. ಸಂಗೀತವನ್ನು ಸೇರದ ಆಲಂಗೀರನೂ. ಸಂಗೀತದ ಸುಳಿಯನ್ನು ಉಳಿದವನಾಗಿ ಏನನ್ನೋ ಕಳೆದುಕೊಂಡವನಂತೆ ಕಳವಳಪಟ್ಟನು! ಸುಭೇದಾರ ಅಖಲಿಕ್‌ಖಾನನ್ನು ಅರಸುವದಕ್ಕಾಗಿ ಹತ್ತೂಕಡೆಗೆ ಚಾರರನ್ನು ಅಟ್ಟಿದನು. ಕೈಕೆಳಗಿನ ಸಮಸ್ತ

ಮಾಂಡಲೀಕರಿಗೆ ಆಜ್ಞಾಪತ್ರಗಳನ್ನು ಕಳುಹಿದನು; ಗೆಳೆಯರಾದ ಪರದೇಶದ ರಾಜರುಗಳಿಗೆ, ಅರಿಕೆಯ ಓಲೆಗಳನ್ನು ಕಳಿಸಿದನು.

* * * * *

ಜುಬುನ್ನಿಸಾ ತೀರ ಸೋತುಹೋದಳು ! ತುಂಬು ಗಲ್ಲುಗಳು ಇಳಿದು ಬಿಟ್ಟವು; ಅರಳುಮುಖ ಬಾಡಿತು; ಕೆದರಿದ ಕುಂತಲ ಅಸಹ್ಯವಾಗಿ ತೋರಿದವು. ವಿಶಾಲವಾದ ಚಂಚಲ ಕಣ್ಣುಗಳು ಒಳಸೇರಿ, ಗೂಳಿಗಣ್ಣಾದವು. ಗುಲಾಬಿ ಪಕಳೆಗಳನ್ನು ಮೀರಿಸಿದ ಮೈಬಣ್ಣ ಕಪ್ಪಿಟ್ಟಿತು. ತೊಟ್ಟಬಟ್ಟೆಗಳು ಮಲಿನವಾದರೂ ಆಕೆ ಅವುಗಳನ್ನು ಬದಲಿಸಲಿಲ್ಲ. ಕುಳಿತಲ್ಲಿಂದ ಏಳಲಿಲ್ಲ; ತೆರೆದ ಕಣ್ಣು ಮುಚ್ಚಲಿಲ್ಲ. ಕಂಗಳೊಳಗಿನ ತೋರೆ ಹರಿಗಡಿಯಲಿಲ್ಲ. ಬಾದಶಹನು ಕೆಲದಿನ ಓಲಗವನ್ನುಳಿದು ಮಗಳ ಪಕ್ಕದಲ್ಲಿಯೇ ಕುಳಿತನು. ಅರಸಲು ಹೋದ ಚಾರರು, ಒಬ್ಬೊಬ್ಬರಾಗಿ ಮುಖ ಒಣಗಿಸಿಕೊಂಡು ಬಂದರು. ತಮ್ಮ ಜೀವದಾಸೆ ಬಿಟ್ಟು ಬಾದಶಹನ ತಲೆಬಾಗಿ ನಿಂತರು. ಸಮಸ್ತ ಮಾಂಡಲಿಕರಿಂದ ನೈರಾಶ್ಯದ ಓಲೆಗಳು ಬಂದುಬಿಟ್ಟವು; ಮಿತ್ರರಾದ ಪರರಾಜರು ಕ್ಷಮೆಯನ್ನು ಕೋರಿ ಕಾಗದ ಬರೆದರು.

* * * * *

ಬಾದಶಹನು ಕಿಡಿಕಿಡಿಯಾದನು. ಮಮತೆಯ ಮಗಳನ್ನು ಮೃತ್ಯುವಿನ ಮುಖಕ್ಕೆ ಹಾಕಿದ ಸುಭೇದಾರನ ಮೇಲೆ ಹರಿಹಾಯ್ದನು. ಈಗ ಕೆಲವು ದಿನಗಳ ಕೆಳಗೆ ಯಾವನು ಬಾದಶಹನ ಕಣ್ಣಾಗಿದ್ದನೋ ಅವನು ಇಂದು ಕಡುವೈರಿಯಾದನು. ಆಲಂಗೀರ ಔರಂಗಜೇಬನ ಕೋಪವೆಂದರೆ ಕೇಳಬೇಕೆ? ಅಖಂಡ ಹಿಂದುಸ್ತಾನದ ಸಾಮ್ರಾಟನ ಕೋಪ ! ಮತ್ತೆ ಚಾರರನ್ನು ಕರೆದು, ಜೀವಂತ ಸಿಕ್ಕದಿದ್ದರೆ, ಗುಂಡಿಕ್ಕಿ ಕೊಂದಾದರೂ ತರಬೇಕೆಂದು ಸುಗ್ರೀವಾಜ್ಞೆಯನ್ನೇ ಹೊರಡಿಸಿದನು. 'ಬರಿಗೈಯಿಂದ ಮರಳಿದರೆ, ಖಂಡಿತವಾಗಿಯೂ ನಿಮ್ಮನ್ನುಳಿಸುವದಿಲ್ಲ' ವೆಂದು ಚಾರರಿಗೆ ಕಣ್ಣುಕೆಂಪಗೆ ಮಾಡಿ ಸ್ವಂತಾಗಿ ಆಣತಿ ವಿಧಿಸಿದನು. ಚಾರರು ಗಢ್ಗದ ನಡುಗಿದರು ಇನ್ನೊಂದು ಚಣ ಎದುರಿನಲ್ಲಿ ನಿಂತರೆ, ಆಗಲೇ ರುಂಡಗಳು ಹಾರಬಹುದೆಂದು, ಅಪ್ಪಣೆಪಡೆದು ತುರಗಗಳನ್ನೇರಿ ಸಾರಿದರು.

* * * * *

ಕುದುರೆಯ ಸವಾರನೊಬ್ಬನನ್ನು ನಗರರಕ್ಷಕರು ಎಳೆದು ತಂದು ಬಾದಶಹನ ಮುಂದೆ ನಿಲ್ಲಿಸಿದರು; ಅವನಲ್ಲಿ ಸಿಕ್ಕ ಲಕ್ಕೋಟೆಯೊಂದನ್ನು ಬಾದಶಹನ ಮುಂದಿಟ್ಟು ಕೈಜೋಡಿಸಿಕೊಂಡು ನಿಂತರು. ಅದಕ್ಕೆ ಲೇಪಿಸಿವ ಅತ್ತರು ಇತ್ಯಾದಿ ಸುಗಂಧದ ವಾಸನೆಯು ಲಕ್ಕೋಟೆಯನ್ನು ಒಡೆದೊಡನೆಯೇ ದರಬಾರಶಾಹಿಯನ್ನೇ ಪಸರಿಸಿತು: ಅದರ ಸೌಗಂಧವನ್ನು ಸಹಿಸದೆ, ಬಾದಶಹನೂ ಎಡಗೈಯಿಂದ ಇರಿಸಿ, ಆ ಚಾರನನ್ನು ಏಕಾಂತದಲ್ಲಿ ಕರೆದು, ಏನನ್ನೋ ಹೇಳಿ ಜಬುನ್ನೀಸಳ ಕಡೆಗೆ ಕಳುಹಿದನು. ನಾಳೆ "ಅಖಲಿಕ್ ಬರುತ್ತಾನೆ. ಅವನನ್ನು ದಂಡಿಸುವದೋ. ಬಹುಮಾನಿಸಿ, ಸನ್ಮಾನಿಸುವದೋ, ದಂಡಿಸುವದಾದರೆ ಹೇಗೆ? ದಂಡಿಸಿದ್ದಾದರೆ ಜಬು ಏನು ತಿಳಿದುಕೊಳ್ಳಬಹುದು?........" ಇನ್ನೂ ಎಷ್ಟೋ ಪರಿಯಾಗಿ ವಿಚಾರಿಸುತ್ತ ಮಲಗಿ ನಿದ್ರೆಹೋದನು.

*　　*　　*　　*

ಜಬುಳನ್ನು ಈ ದಿವಸ ಕಂಡವರು ತಬ್ಬಿಬ್ಬಾದರು. ನಸುಕಿನಲ್ಲಿ ಎದ್ದವಳೇ, ಇಷ್ಟುದಿನಗಳು ಮಾತನಾಡಿಸದೆ ಬಿಟ್ಟ, ತನ್ನ ಪ್ರೀತಿಯ ಗಿಳಿ, ನವಿಲು. ಪಾರಿವಾಳ ಇತ್ಯಾದಿ ಪಕ್ಷಿಗಳನ್ನು ಒಂದೊಂದಾಗಿ ಮಾತನಾಡಿಸಿ, ಅವುಗಳ ಕ್ಷೇಮಸಮಾಚಾರ ವಿಚಾರಿಸಿದಳು. ಜನಾನಖಾನೆಯಲ್ಲಿ ಎಲ್ಲರೊಡನೆ ಉಲ್ಲೆಯಿಂದ ಮಾತನಾಡಿದಳು. ದಾಸಿಯರೊಂದಿಗೆ, ಗೆಳೆಯರಂತೆ ಮಾತನಾಡಿದಳು. ಬಾದಶಹನಿಗೆ ಇಂದು ತಾನು ಮತ್ತೆ ದರ್ಬಾರಿಗೆ ಬರುವೆನೆಂದು ಹೇಳಿ ಕಳುಹಿದಳು; ಜನಾನಖಾನೆಯನ್ನು, ಅದರಲ್ಲಿಯೂ ತನ್ನ ಶಯನಮಂದಿರವನ್ನು ಪರಿಪರಿಯಾಗಿ ಸಿಂಗರಿಸಲು ದಾಸಿಯರಿಗೆ ಅಣತಿ ವಿಧಿಸಿದಳು. ಅವರು ಸಿಂಗರಿಸಿದುದು ಆಕೆಗೆ ಹಿಡಿಸಲಿಲ್ಲ; ಅವರು ಸಿಂಗರಿಸಿದ್ದನ್ನು ಕೆಡಿಸಿ, ಮತ್ತೆ ತಾನೇ ಸಿಂಗರಿಸಿದಳು. ಎಲ್ಲ ಸಾಮಾನುಗಳನ್ನು ತನ್ನ ಕೈಮುಟ್ಟಿ ಮತ್ತೆ ಎತ್ತಿ ಎತ್ತಿ ಇಟ್ಟಳು; ಬೈಗಿನಲ್ಲಿ ಮತ್ತೆ ಪಂಡಿತರುಗಳೊಡನೆ ಚರ್ಚೆ ನಡಿಸಿದಳು.

ಬಾದಶಹನು ಇನ್ನೂ ಹಾಸಿಗೆಯಲ್ಲಿಯೇ ಮಲಗಿದ್ದನು. ಚಾರನು ಆತುರನಾಗಿ ಮಾರ್ಗ ನಿರೀಕ್ಷಿಸುತ್ತಿದ್ದನು. ಬಾದಶಹನು ಆಕಳಿಸಿ, ಹಾಸಿಗೆಯಲ್ಲಿ ಎದ್ದು ಕುಳಿತನು. ಚಾರನು ಬಿನ್ನವಿಸಿಕೊಂಡನು.

“ ಬಾದಶಹರೇ ನಿನ್ನೆ ಸರಿಯಾಗಿ ನಡು ಇರುಳಿನಲ್ಲಿ ಆಖಲಿಕ್ ಖಾನನು ಬಂದನು. ಈಗಿನ್ನೂ ರಾಣಿಯವರ ಜನಾನಖಾನೆಯಲ್ಲಿಯೇ ಇರುವನು. ”

ಆಲಂಗೀರನು ಕಿವಿಗೊಟ್ಟು ಕೇಳಿದನು. ಪ್ರಾತರ್ವಿಧಿಗಳನ್ನೆಲ್ಲ ತೀರಿಸಿ ‘ ಖುದಾನಿ ’ಗೆ ‘ ಸಲಾಂ ’ ಸಲ್ಲಿಸಿ ಜನಾನಖಾನೆಯ ಕಡೆಗೆ ನಡೆದನು.

ಜಬು ಆಗ ತನ್ನ ಇನಿಯನೊಂದಿಗೆ ಸರಸವಾಡುತ್ತಿದ್ದಳು. ಬಾದಶಹನ ಬರುವನ್ನು ತಿಳಿದ ಆಕೆ ಭರದಿಂದ ಕುಗ್ಗಿಹೋದಳು. ತನ್ನ ಇನಿಯನನ್ನೇನು ಮಾಡಬೇಕೆಂಬುದು ತಿಳಿಯಲಿಲ್ಲ. ಬಾದಶಹನು ಅವನನ್ನು ಕಂಡರೆ ಏನು ಮಾಡುವನೋ ಎಂದು ಅಳುಕಿದಳು. ಮುಂದಾಗುವ ಅನರ್ಥವನ್ನು ತಿಳಿದು ನಡುಗಿದಳು. ವಿಚಾರಕ್ಕೆ ಎಡೆಯಲ್ಲಿ ? ಎದುರಿನಲ್ಲಿ ನಿಂತ ಖಾನನು ತತ್ತರಿಸಿ ಹೋದನು. ಮೈಯೆಲ್ಲ ಬೆವರಿಟ್ಟಿತು. ಬಾದಶಹನ ಕಾಲಸಪ್ಪಳವು ಇನ್ನೂ ಹೆಚ್ಚಾಗಿ ಕೇಳಬಂಬಿತು. ಜಬು ಇನಿಯನನ್ನು ಬಚ್ಚಿಡಲು ಸುತ್ತಲೂ ನೋಡಿದಳು. ಏನು ಕಾಣಲಿಲ್ಲ. ನುಗ್ಗಿಲದ ಸ್ನಾನಮಂದಿರಲ್ಲಿಯ ಒಲೆಯ ಮೇಲಿನ ನೀರು ಕಾಯುವ ದೊಡ್ಡ ಕಡಾವಿಗೆಯು ಅಲ್ಲಿಂದ ಕಂಡಿತು. ಅದರಲ್ಲಿ ಅಡಗಲಿಕ್ಕೆ ಖಾನನಿಗೆ ಸನ್ನೆಮಾಡಿದಳು. ಬಾದಶಹನು ದೂರದಿಂದ ಇದೆಲ್ಲವನ್ನು ನೋಡಿದನು. ಆದರೂ ಏನೂ ಅರಿಯದವನಂತೆ ಮೆಲ್ಲಡಿಯಿಡುತ್ತ ಒಳಗೆ ಬಂದನು; ಮಗಳೂ ಬರಮಾಡಿಕೊಂಡಳು. ಮಗಳೊಂದಿಗೆ ಔಪಚಾರಿಕವಾಗಿ ಏನೇನೋ ಮಾತುಗಳನ್ನು ಆಡಿದನು. ಆಕೆಯೂ ಯಾಂತ್ರಿಕವೆಂಬಂತೆ ಉತ್ತರವಿತ್ತಳು ! ಮಾತಿಗೆ ಮಾತು ಬಂದು ಸ್ನಾನದ ವಿಷಯವೂ ಹೊರಟಿತು; ಆಲಂಗೀರ ಅಂದನು.

“ ಜಬೂ ! ಇನ್ನೂ ಸ್ನಾನವಾಗಿಲ್ಲವೇ ? ”

“ ಇಲ್ಲ ಬಾಬಾ ! ”

“ ಏಕೆ ? ತಡವಾಯಿತು.... ”

“ ಉಳಿಗದವರು ಇನ್ನು ಕಡಾವಿಗೆಗೆ ನೀರನ್ನೇ ತುಂಬಿಲ್ಲ ”

“ ಏಕೆ ? ಸೇವಕರೇಕೆ ತಮ್ಮ ಕೆಲಸದಲ್ಲಿ ವಿಲಂಬ ಮಾಡಿದರು ? ಬಾದಶಹನ ಮಗಳ ಸೇವೆಯಲ್ಲಿ ಕೊರತೆಯೇ ? ” ಎಂದು ಕಣ್ಣು ಕೆಂಪಗೆ ಮಾಡಿ ಸುತ್ತಲೂ ನೋಡಿದನು. ಸೇವಕರು ತತ್ತರಿಸಿದರು; ಜಬು

ಅವರಿಗೆ ನೀರು ತುಂಬಲು ಅಪ್ಪಣೆಯಿತ್ತಳು. ಒಂದೆರಡು ಕ್ಷಣದಲ್ಲಿ ನೀರು ತುಂಬಿಸಿದ್ದಾಯಿತು.

"ಹೂ. ಕಾಯ್ಸುವದಿಲ್ಲವೇ ?" ಅಲಂಗೀರ ಏನೂ ಅರಿಯದವನಂತೆ ನಟಿಸಿ ಕೇಳಿದನು.

"ಹೂಂ! ಬಾಬಾ!" ಎಂದು ಆಕೆ ತನ್ನ ಆಪ್ತಕಾರ್ಯದರ್ಶಿನಿಗೆ ಒಲೆಯಲ್ಲಿ ಬೆಂಕಿ ಹಾಕಲು ಹೇಳಿದಳು. ತಾನೂ ಏನನ್ನೋ ನೆಪ ಒಡ್ಡಿ, ಕಡಾವಿಗೆಯ ಸಮೀಪಕ್ಕೆ ಹೋಗಿ ಅದರಲ್ಲಿ ಇಣಿಕಿಹಾಕಿ ಮೇಲುಮಾತಿನಲ್ಲಿ ನೀರಿನಲ್ಲಿ ಅಡ್ಡಗಿದ್ದ ಇನಿಯನಿಗೆ ಹೇಳಿದಳು.

"ಅಖಲಿಕ್! ಖುದಾ ಕೃಪೆ ಮಾಡಲಿಲ್ಲ. ನಾವು ಈ ಜನ್ಮದಲ್ಲಿ ಕೂಡಿರುವದು ಅವನ ಮನಸ್ಸಿನಲ್ಲಿಲ್ಲ. ನಿಜವಾಗಿಯೂ ನೀನು ನನ್ನನ್ನು ಪ್ರೇಮಿಸುವಿಯಾದರೆ, ಯಾವ ಸದ್ದನ್ನು ಮಾಡದೆ, ಸ್ವರ್ಗವನ್ನು ಸೇರು" ಆಕೆಯ ಕಣ್ಣುಗಳೊಳಗಿಂದ ನೀರ ಹನಿಗಳು ಜಾರಿ, ಆ ಕಡಾವಿಯಲ್ಲಿ ಬಿದ್ದವು.

ಖಾನನೂ ಮೇಲುಮಾತಿನಲ್ಲಿ ಮಾರುತ್ತರವಿತ್ತನು.

"ಅದಾವನೋ ಕವಿ ಹೇಳಿದ್ದು ಜ್ಞಾಪಕಕ್ಕೆ ಬರುತ್ತದೆ. ಅಂದು ಆ ಮಾತಿನ ಸತ್ಯತೆ ನನಗೆ ಹೊಳೆದಿರಲಿಲ್ಲ. ಇಂದು ಮನದಟ್ಟಾಯಿತು. 'ಕವಿಗಳೂ ಪ್ರಣಯಿಗಳೂ ಹುಚ್ಚರು!' ವರನೆಂದೂ ನಂಬಿ, ನಂಬಿಗೆಯನ್ನಿಡಬಾರದು !!"

ಬಾದಶಹನು ನೀರು ಕುದಿಯುವ ಸಪ್ಪಳವನ್ನು ಆಲಿಸಿ, ಅಲ್ಲಿಂದ ಎದ್ದನು. ತಾನು ಮಾಡತಕ್ಕ ಶಾಸನವನ್ನು 'ಖುದಾ' ಆಕೆಯ ಕೈಯಿಂದಲೇ ಮಾಡಿಸಿದನೆಂದು 'ಮತ್ತೊಂದು ಕೃತಜ್ಞತೆಯ ಸಲಾಂ' 'ಖುದಾ'ನಿಗೆ ಮನಸ್ಸಿನಲ್ಲಿಯೇ ಸಲ್ಲಿಸಿದನು.

* * * *

ಮತ್ತೆ ಹಲವಾರು ರಾಜಪುತ್ರರು ಸಾಮ್ರಾಟರು ಜಬುನ್ನೀಸಳ ಸೌಂದರ್ಯಕ್ಕೆ ಮರುಳಾಗಿ ಆಕೆಯತ್ತ ಸೆಳೆದರು. ಅಲಂಗೀರನೂ ಒತ್ತಾಯ ಪಡಿಸಿದನು. ಅದೆಲ್ಲಕ್ಕೂ ಆಕೆಯದು ಒಂದೇ ಉತ್ತರ.

"ಇಲ್ಲ ! ಈ ಜನ್ಮದಲ್ಲಿ ಲಗ್ನವಾಗುವ ಆಶೆ ನನಗುಳಿದಿಲ್ಲ".

ಬಾದಶಹನೂ ಆಕೆಯ ಹೃದಯವನ್ನು ಅರ್ಥಮಾಡಿಕೊಂಡಿದ್ದನು; ತನ್ನ ನಡತೆಗಾಗಿ ತಾನೇ ವ್ಯಥೆಪಟ್ಟಿದ್ದನು. ಮುಂದೆ ಆಕೆಯನ್ನು ಯಾರೂ ಒತ್ತಾಯಪಡಿಸಲಿಲ್ಲ. ಆತ್ಮವನ್ನು ತನಗಾಗಿ ಅರ್ಪಿಸಿದ ನಲ್ಲನಿಗಾಗಿ, ಆಕೆ ಆ ಜನ್ಮಬ್ರಹ್ಮಚಾರಿಣಿಯಾಗಿಯೇ ಉಳಿದಳು.

ಆಕೆ ಬ್ರಹ್ಮಚಾರಿಣಿ !

# ಕತೆಗಳ-ಕತೆ

ಈ ‘ ಭೂಮಿಗಿಳಿದ ತಾರೆ ’ ಕಥಾಸಂಕಲನದಲ್ಲಿ ಎಂಟು ಕತೆಗಳಿವೆ; ಕೊನೆಯ ಕತೆಯ ಹೆಸರನ್ನೇ ಸಂಕಲನಕ್ಕೆ ಇಟ್ಟಿದ್ದೇನೆ. ಯಾವ ಕತೆಯಲ್ಲಿಯೂ ನಾನು ಬರೀಯ ಆದರ್ಶವನ್ನು ಬೆನ್ನತ್ತಿ ನಡೆದಿಲ್ಲ; ಎಲ್ಲ ಕತೆಗಳಲ್ಲಿಯೂ ಒಂದೊಂದು ತೆರನಾದ ವಿಶಿಷ್ಟ ದೃಷ್ಟಿಯನ್ನಿಟ್ಟುಕೊಂಡು ಕತೆ ಬರೆದಿದ್ದೇನೆ. ಪ್ರತಿಕತೆಯಲ್ಲಿಯೂ ಕೆಲವೊಂದು ಸಂಗತಿಗಳನ್ನು ಓದುಗರ ಚಿಂತನೆಗೆಂದು ಬಿಟ್ಟಿದ್ದೇನೆ. ಪಾಠ ಕಲಿಸುವದಾಗಲೀ ಬಾಳನ್ನು ತಿದ್ದಿಕೊಳ್ಳುವಂತೆ ಯತ್ನಿಸುವದಾಗಲೀ ನನ್ನ ಕತೆಗಳ ಮುಖ್ಯ ಉದ್ದೇಶವಲ್ಲ; ಮುಕ್ಕಾಲುಪಾಲು ನಾನು ಮನೋರಂಜನೆಗೆ ಕತೆ ಬರೆಯುತ್ತಿರುವಂತೆ ಓದುಗರೂ ಕತೆ ಓದಿ ಮನೋರಂಜನೆ ಪಡೆದರೆ ನಾನು ಸಾಧಿಸಬೇಕಾದುದನ್ನು ಸಾಧಿಸಿದಂತಾಯಿತು; ಮನೋರಂಜನೆಯೊಂದಿಗೆ ಮೇಲಿನವುಗಳು ನಿರಾಯಾಸವಾಗಿ ಒದಗಿ ಬರುತ್ತಿದ್ದರೆ ತೆರೆದ ಬಾಹುಗಳಿಂದ ಅವುಗಳಿಗೆ ಸ್ವಾಗತವೀಯೋಣ !

**ಹೊಸಹುಟ್ಟು**:— ಇದೊಂದು ಮೊದಲಿನಿಂದ ತುದಿಯವರೆಗೆ ಕಾಲ್ಪನಿಕ ಕತೆಯು; ಎಲ್ಲಿಯೋ ಮಧ್ಯದಲ್ಲಿ ಒಂದಿನಿತು ನನ್ನ ಗೆಳೆಯರೊಬ್ಬರ ಜೀವನದಲ್ಲಿ ನಡೆದ ಘಟನೆಯು ಮುಂಗಾರಿಯ ಮಿಂಚಿನಂತೆ ಮೂಡಿ ಮಾಯವಾಗಿಬಿಡುತ್ತದೆ. ಪುಣೆಯಲ್ಲಿ ಸೂಳಿಗೇರಿಯೆಂದು ಕುಖ್ಯಾತಿ ಪಡೆದ ‘ ಶುಕ್ರವಾರ ’ದಲ್ಲಿ ನಾಲ್ಕಾರುಸಲ ಅನಿವಾರ್ಯವಾಗಿ ಮುಖ ಕೆಳಗೆ ಹಾಕಿಕೊಂಡು ತಿರುಗಿದಾಗ ಮನಸ್ಸಿನಲ್ಲಿ ಮೂಡಿದ ಭಾವನೆಗಳಿಗೇನೇ ಬಣ್ಣಬಳೆದು ವೇಶ್ಯೆಯರ ಓಣಿ ಚಿತ್ರಿಸಿದ್ದೇನೆ; ಅದನ್ನು ಓದಿದ ಕೆಲವರು ನನ್ನ ಬಗೆಗೆ ತಪ್ಪಾಗಿ ತಿಳಿದುದೂ ಉಂಟು; ಈ ಪ್ರಸಂಗದಲ್ಲಿ ಒಂದು ಸಂಗತಿ ಜ್ಞಾಪಕಕ್ಕೆ ಬರುತ್ತದೆ; ಪುಣೆಯಲ್ಲಿ ಕೋಣೆ ಸಿಕ್ಕುವದು ದುರ್ಲಭ ! ನನ್ನ ಗೆಳೆಯರ ಗೆಳೆಯರೊಬ್ಬರು ಎಲ್ಲಿಯೂ ಕೋಣೆ ಸಿಕ್ಕದ್ದಕ್ಕಾಗಿ ಸೂಳಿಗೇರಿಯಲ್ಲಿಯೇ ಒಂದು ಕೋಣೆ ಹಿಡಿದು ವಾಸವಾಗಿದ್ದರು. ಗೆಳೆಯರೊಂದಿಗೆ ಅವರ ಕೋಣೆಗೆ ಹೋಗುವ ಸಂದರ್ಭ ಒಂದು ಒದಗಿತ್ತು; ಅವರ ಕೋಣೆಯ ಎಡಕ್ಕೂ

ಬಲಕ್ಕೂ ಬೆಲೆವೆಣ್ಣುಗಳ ವಸತಿಗಳು; ಹಾಯ್ದು ಹೋಗುವಾಗ ಬಾಗಿಲು, ಕಿಡಕಿಗಳನ್ನು ತೆರೆದಿಟ್ಟರೆ ಕಾಣಿಸುತ್ತಿತ್ತು; ಇದು ಈ ಕತೆಯಲ್ಲಿಯ ವೇಶ್ಯೆಯ ಮನೆಯನ್ನು ಚಿತ್ರಿಸುವದರಲ್ಲಿ ಸಹಕಾರಿಯಾಗಿದೆ— ನಾನು ಕತೆಯನ್ನು ಬರೆದು ಪ್ರಕಟಿಸಿದ ಮೇಲೆ ಇಂಥದೇ ಒಂದು ದೃಶ್ಯವನ್ನು ಪ್ರಭಾತ ಚಿತ್ರ ಮಂದಿರದವರು ತಯಾರಿಸಿದ ‘ ಆಗೇ ಬಡೊ ’ ಚಿತ್ರದಲ್ಲಿ ಕಂಡು ಆಶ್ಚರಿಬಟ್ಟೆ! ನಾನು ಶಬ್ದಗಳಲ್ಲಿ ಆ ದೃಶ್ಯ ಬಣ್ಣಿಸಿದ್ದೇನೆ; ಅವರು ಛಾಯಾಚಿತ್ರದಲ್ಲಿ ಅದನ್ನು ಮೂಡಿಸಿದ್ದಾರೆ; ಅಂತೂ ನನ್ನ ಕಲ್ಪನೆ ವಾಸ್ತವತೆಯ ಸನಿಯಕ್ಕೆ ನಡೆದಿದ್ದನ್ನು ನೋಡಿ ಸಂತಸವೆನಿಸಿತು; ಧಾರವಾಡದ ‘ ಜಯಂತಿ ’ ಮಾಸ ಪತ್ರಿಕೆಯವರು ಸಣ್ಣ ಕತೆಗಳ ಮೇಲಾಟ ಒಂದನ್ನು ಏರ್ಪಡಿಸಿದ್ದರು; ನನಗೂ ಒಂದು ಕತೆ ಮೇಲಾಟಕ್ಕೆ ಬರೆಯಬೇಕೆನಿಸಿತು; ತಲೆಯಲ್ಲಿ ಹೊಸಹುಟ್ಟಿನ ಘಟನೆ ಸುತ್ತುತ್ತಿತ್ತು; ಪ್ರಿಲಿಮಿನರಿ ಪರೀಕ್ಷೆಯು ಆಗ ನಡೆದಿತ್ತು; ಆದರೂ ಉತ್ಸಾಹ ಕುಗ್ಗಲಿಲ್ಲ; ಬರೆಯಬೇಕೆಂಬುದರಲ್ಲಿಯೇ ಎರಡುದಿನ ಕಳೆದವು; ಮೂರನೆಯ ದಿನ ಗೆಳೆಯರೊಬ್ಬರು ಊರಿಂದ ಬಂದರು. ಅವರಿಗೆ ಕತೆ ಬರೆಯಬೇಕೆಂದಿರುವ ವಿಚಾರ ತಿಳುಹಿಸಿದೆ; ನಾಲ್ಕು ಮಾತುಗಳಲ್ಲಿ ಕತೆ ಹೇಳಿದೆ; ಅವಶ್ಯವಾಗಿ ಬರೆಯಲು ಹುರುಪುಕೊಟ್ಟರು; ಅಂದೇ ರಾತ್ರಿ ಊಟ ಮಾಡಿ ಕುಳಿತವನು ಬೆಳಗುಹರಿಯುವ ತನಕ ಕತೆ ಬರೆದೆ; ಗಡಿಯಾರದಲ್ಲಿ ಆರು ಹೊಡೆದಾಗ ಕತೆ ಮುಗಿದಿತ್ತು ! ಸಂಗಡಿಗರು ನಾನು ಬೆಳಗಿನಲ್ಲಿ ಎದ್ದಿರ ಬೇಕೆಂದು ತಿಳಿದಿರಬೇಕು; ಪೋಸ್ಟ ಮಾಡಿಯೇ ಮಲಗಿಕೊಂಡೆ; ಅಂದಿನ ಮುಂಜಾವಿನ ಚಹ, ಬೆಳಗಿನ ಪಾಠಗಳು ವಿಶ್ರಾಂತಿ ಪಡೆದವು— ಪರಿಣಾಮ ಹೊರಬಿತ್ತು; ಪಾರಿತೋಷಕವೇನೂ ಬರಲಿಲ್ಲ; ಒಳ್ಳೆಯ ಕತೆಗಳೆಂದು ಆಯ್ದುಕೊಂಡ ಹನ್ನೆರಡು ಕತೆಗಳಲ್ಲಿ ಎರಡನೆಯ ಸ್ಥಾನ ಸಿಕ್ಕಿತ್ತು; ಎಪ್ರಿಲ ತಿಂಗಳ ಕಥಾಸಂಚಿಕೆಯಲ್ಲಿಯೇ ಅಚ್ಚು ಆಗಿತ್ತು.

**ಪ್ರವಾಹ ಪತಿತೆ:**— ಇದೊಂದು ಲೈಂಗಿಕ ಜೀವನದಲ್ಲಿ ಅತೃಪ್ತಳಾದ ಆದರ್ಶ ಗೃಹಿಣಿಯೊಬ್ಬಳ ಬಾಳಿನ ಒಂದು ಚಿತ್ರ— ಮನೋವಿಶ್ಲೇಷಣದ ಕತೆಯೊಂದು; ವಿಶ್ವದಲ್ಲಿ ಅಸಾಧಾರಣ ಲೈಂಗಿಕವಿಜ್ಞಾನಿಯೆಂದು ಖ್ಯಾತಿವೆತ್ತ ಹ್ಯಾವಲಾಕ್ ಎಲಿಜರು ಬರೆದ ಒಂದು ಪ್ರಬಂಧವನ್ನೆ ಅನುಸರಿಸಿ ‘ ಮದು ವೆಯ ಗುರಿ ’ಯನ್ನು ನಾನು ಬರೆದಾಗ ಅದರಲ್ಲಿ ಬರುವ ಒಂದು ಘಟನೆ

ಯನ್ನೇ ಆಧಾರವಾಗಿರಿಸಿಕೊಂಡು ಈ ಕತೆಯನ್ನು ಬರೆದಿದ್ದೇನೆ; ಆದರೂ ಇದು ಒಂದು ಸ್ವತಂತ್ರ ಕತೆ; ನಾಲ್ಕು ಪತ್ರಗಳ ರೂಪದಲ್ಲಿ ಕತೆಯನ್ನು ಹೆಣೆದಿದ್ದೇನೆ ಈ ಕತೆಗೆ ಧಾರವಾಡದ ಕರ್ನಾಟಕ ಕಾಲೇಜಿನ ಕರ್ನಾಟಕ ಸಂಘದ ವಾರ್ಷಿಕೋತ್ಸವ (೧೯೪೫)ದಲ್ಲಿ ಸಣ್ಣ ಕತೆಗಳ ಮೇಲಾಟದಲ್ಲಿ ಎರಡನೆಯ ಬಹುಮಾನವು ಬಂದಿತ್ತು; ಬೆಂಗಳೂರಿನ 'ಉಷಾ' ಮಾಸ ಪತ್ರಿಕೆಯಲ್ಲಿ ಬೆಳಕು ಪಡೆದಿದೆ.

**ಸ್ನೇಹಸಂಧಿ:**— ಸಹೋದರಿಯೊಬ್ಬಳ ಬಾಳಿನಲ್ಲಿ ಕೆಲಕಾಲ ನಡೆದ ಸಂಗತಿಯನ್ನು ಆಧಾರವಾಗಿಟ್ಟುಕೊಂಡು ಅವಕ್ಕೆ ಅಲ್ಲಲ್ಲಿ ಕಾಲ್ಪನಿಕತೆಯ ಮಣ್ಣು ಮೆತ್ತಿ ಒಂದು ಮೂರ್ತಿ ಮಾಡಿದ್ದಾಗಿದೆ; ಹಿಂದೆಲ್ಲಿಯೂ ಪ್ರಕಟವಾದಂತಿಲ್ಲ; ಅಚ್ಚಾಗುತ್ತಿದ್ದುದು ಇದೇ ಮೊದಲುಸಲ;

**ಎದೆಯೊಲವು:**— ಸಹೋದರನೊಬ್ಬನ ಬಾಳಿನಲ್ಲಿಯ ಒಂದು ಘಟನೆಯನ್ನು ಅನುಸರಿಸಿ ಈ ಕತೆ ಬರೆದಿದ್ದೇನೆ; ಮೊದಲು ಬರೆದ ಕತೆ ತೀರ ಉದ್ದವಾಗಿತ್ತು; ಗೆಳೆಯರೊಬ್ಬರು ಅಲ್ಲಲ್ಲಿ ಕಟ್ಟುಮಾಡಿ ಈ ರೂಪಕ್ಕೆ ತಂದಿದ್ದಾರೆ; ಇದೊಂದು ರೋಮಾಂಚನವೆಬ್ಬಿಸುವ ಪ್ರಣಯಕತೆ; ಅಪಕ್ವ, ಅನನುಭವಿಕ ಪ್ರಣಯವು ಇಲ್ಲಿ ಇಣುಕಿ ಹಾಕುವದರಿಂದ ಕತೆಯು ಅಸ್ವಾಭಾವಿಕವೆಂದೆನ್ನು-ವಂತೆ ಎಷ್ಟೋ ಸಲ ಭಾಸವಾಗುತ್ತದೆ; ಆದರೂ ಗೆಳೆಯರನೇಕರು ನನ್ನ ಎಲ್ಲ ಕತೆಗಳಿಗಿಂತ ಇದರಿಂದಲೇ ಹೆಚ್ಚು ಮನೋರಂಜನೆಯಾಗುವದೆಂದು ಬೆನ್ನು ತಟ್ಟಿದ ನಂತರ ಪ್ರಕಟಿಸುವ ಸಾಹಸ ಮಾಡಿದೆ— ಬೆಂಗಳೂರಿನ 'ಉಷಾ' ಮಾಸಿಕದಲ್ಲಿ ಅಚ್ಚಾಗಿದೆ.

**ಕೈದಿ:**— ಇದು ನಾನು ಬರೆದ ಮೊದಲಿನ ಕತೆಗಳಲ್ಲಿ ಒಂದು; ಇದು ಮೊದಲು ಪ್ರಯತ್ನವೆಂದು ಹೇಳಬೇಕು; ನಾಲ್ಕು ವರುಷಗಳ ಕೆಳಗೆ ಬರೆಸಿರಬೇಕು; ಜೇಲಿನಲ್ಲಿ ಶಿಕ್ಷಕರಾದ ಒಬ್ಬರು ನನಗೆ ಈ ಕತೆಯನ್ನು ಹೇಳಿದ್ದರು — ಅದನ್ನೇ ಅಲ್ಲಲ್ಲಿ ಮಾರ್ಪಡಿಸಿ ಬರೆದಿದ್ದೇನೆ; ಇದೊಂದು ಹದಿನಾರಾಣೆ ಸತ್ಯ ವಾಸ್ತವಕತೆ! ಈ ಕತೆ ಕೇಳಿದಾಗ ನಾನಿನ್ನೂ ಸಣ್ಣವನಿದ್ದೆ; ಕತೆ ಬರೆಯುವದಂತೂ ಬರುತ್ತಿರಲೇ ಇಲ್ಲ; ಎಷ್ಟೋ ದಿನಗಳ ನಂತರ ಹಿಂದಿನ ಸಂಗತಿಯನ್ನು ಜ್ಞಾಪಿಸಿಕೊಂಡು ಬರೆಯಬೇಕಾಯಿತು; ಅದೇನೋ ಆಗಿ ಎರಡು

ಪತ್ರಿಕೆಗಳಲ್ಲಿ ಅಚ್ಚಾಗಿದೆ; ಗದುಗಿನ 'ಕರ್ನಾಟಕ ಬಂಧು' ವಾರಪತ್ರಿಕೆಯಲ್ಲಿ ಮತ್ತು ಬೆಂಗಳೂರಿನ 'ಕೀರ್ತಿಕಿರಣ' ಮಾಸಪತ್ರಿಕೆಯಲ್ಲಿ.

**ಅಪರಾಧಿನಿಯ ಅಂತರಾಳ:** — ಇದೊಂದು ರೂಪಕ ಕತೆ! ಗೆಳೆಯರೊಬ್ಬರು ಮಾಡಿದ ಮೋಸದಿಂದ ಮನನೊಂದು ಖಿನ್ನನಾದಾಗ ಆ ಬಗೆಗೆ ಒಂದು ಕತೆ ಬರೆಯಬೇಕೆನ್ನಿಸಿತು; ಬರೆದೆ; ಕತೆಯನ್ನು ಕಣ್ಣೀರು ಸುರಿಸುತ್ತಲೇ ಬರೆದು ಮುಗಿಸಿದ್ದೇನೆ; ಪ್ರತಿ ಶಬ್ದ ಬರೆಯುವಾಗ ಮನಸ್ಸು ಅಳುಕುತ್ತಿತ್ತು; ಬರೆದು ಮುಗಿಸಿದ ಮೇಲೆ ಹರಿದುಹಾಕಿ ಬಿಡಬೇಕೆನ್ನಿಸಿತ್ತು; ಏಕೋ ಹಾಗೆ ಮಾಡಲಿಲ್ಲ; ಅದೇ ಕಾರಣದಿಂದಾಗಿ ಹಲವು ದಿನ ಪ್ರಕಟನೆಗೆ ಎಲ್ಲಿಯೂ ಕೊಡಲಿಲ್ಲ; ಇಂದು ಧೈರ್ಯದಿಂದ ಹೊರಗೆ ಹಾಕುತ್ತಿದ್ದೇನೆ; ನನಗಾದ ಮೋಸದಂತಹ ಸಾಸಿರ ಮೋಸಗಳು ನಿತ್ಯ ನಡೆಯುತ್ತವೆಂಬುದು ಸಾಮಾನ್ಯ ಮಾತಾದರೂ ನಾನೇಕೆ ಅಷ್ಟು ನೊಂದುಕೊಳ್ಳಬೇಕಿತ್ತೋ ಇಂದಿಗೂ ನನಗೆ ತಿಳಿಯದಾಗಿದೆ. ಇದನ್ನು ಓದಿದ ಆ ನನ್ನ ಗೆಳೆಯರು ಮತ್ತೆ ಮೊದಲಿನಂತೆ ನನ್ನ ಆತ್ಮೀಯ ಗೆಳೆಯರಾದರೆ ನನ್ನ ಕತೆ ಗುರಿ ಮುಟ್ಟಿದಂತಾಗುತ್ತದೆ.

**ಇಪ್ಪತ್ತಾರು:**— ಈ ಸುದೀರ್ಘವಾದ ಕತೆ ಒಡಮೂಡಿದುದು ಎರಡು ಸಲ ಇಂಟರ ಪರೀಕ್ಷೆಯಲ್ಲಿ ನಾನು ಲಾಗಹಾಕಿದಾಗ; ಮೂರನೆಯ ವರುಷ ಪರೀಕ್ಷೆಯ ಪರಿಣಾಮ ಹೊರಬೀಳುವ ಹಿಂದಿನ ರಾತ್ರಿ ಪಟ್ಟ ಸಂಕಟನ್ನೋ— ಸರಿಸಿ, ಅಂದೇ ರಾತ್ರಿ ಈ ಕತೆ ಬರೆದೆ; ತೇರ್ಗಡೆಯಾಗುವದು ಖಂಡಿತವಾಗಿದ್ದರೂ, ಒಂದು ಸಮಯ ನಾಪಾಸಾದರೇನೆಂಬುದೇ ಮನಸ್ಸಿನಲ್ಲಿ ಕೊರೆಯುತ್ತಿತ್ತು! ಹಾಗೆಯೇ ಕತೆ ಹೆಣೆದುಬಿಟ್ಟೆ; ಕತೆ ಬರೆದು ಮುಗಿಸಿದಾಗ ನನ್ನ ಪರೀಕ್ಷೆಯ ಪರಿಣಾಮವನ್ನು ಹೊತ್ತುತಂದ ವರ್ತಮಾನಪತ್ರಿಕೆ ಎದುರಿನಲ್ಲಿ ಬಂದು ಬಿದ್ದಿತ್ತು; ಮೊದಲೇ ಚಿಂತಿಸಿದಂತೆ ಪಾಸೂ ಆಗಿತ್ತು; ಆಗ ಕತೆಯನ್ನೇ ಬದಲುಮಾಡಿ ಬಿಡಬೇಕೆನ್ನಿಸಿತು; ಅದರೂ ಬದಲಿಸಲಿಲ್ಲ— ಗೆಳೆಯ ಶ್ಯಾಮ ಮತ್ತು ಹೆತ್ತಮ್ಮ ಬದುಕಿದ್ದರೂ ಕತೆಯಲ್ಲಿ ಕೊಂದಿದ್ದೇನೆ; ಅದಕ್ಕಾಗಿ ಅವರು ನನ್ನನ್ನು ಕ್ಷಮಿಸಬೇಕು; ರಬಕವಿಯ 'ಪ್ರಗತಿ' ಮಾಸಪತ್ರಿಕೆಯವರು ವಾರ್ಷಿಕ ಸಂಚಿಕೆಯಲ್ಲಿ ಹಾಕುವದಾಗಿ ತಕ್ಕೊಂಡು ಹೋಗಿದ್ದರು; ವಾರ್ಷಿಕ ಸಂಚಿಕೆ ಹೊರಡುವ ಮೊದಲೇ ಪತ್ರಿಕೆಯೇ ನಿಂತು

ಹೋಯಿತು— ಕತೆ ಪ್ರಕಟವಾಗಲಿಲ್ಲ— ಪ್ರಕಟವಾಗುತ್ತಿರುವದು ಇದೇ ಹೊಸತಾಗಿ !

**ಭೂಮಿಗಿಳಿದ ತಾರೆ:**— ಪ್ರೇಮದ ದುರಂತವನ್ನು ಚಿತ್ರಿಸುವ ಐತಿಹಾಸಿಕ ಕತೆಯಿದು; ಇಂಗ್ಲೀಷ ಪತ್ರಿಕೆಯೊಂದರಿಂದ ಕಥಾವಸ್ತುವನ್ನು ಆಯ್ದುಕೊಂಡಿದ್ದೇನೆ; ಕತೆಯು ಭಾಷಾಂತರವೂ ಅಲ್ಲ; ಅನುವಾದವೂ ಅಲ್ಲ— ಕತೆ ಕಟ್ಟಿದ ರೀತಿ ನೀತಿಗಳು ಮೂಲವನ್ನೆಷ್ಟೂ ಹೋಲುವದಿಲ್ಲ. ಕತೆಯ ನಿರೂಪಣೆ, ಪಾತ್ರರಚನೆ, ಸನ್ನಿವೇಶಗಳಿಗೆ ನೇರವಾಗಿ ನಾನೇ ಹೊಣೆಗಾರನಾಗಿರುವೆ; ಕತೆ ಪ್ರಕಟವಾದಾಗ ಆ ತಿಂಗಳ ಅತ್ಯುತ್ತಮ ಕತೆಯೆಂದು ಒಬ್ಬರು ಹೇಳಿದ್ದೂ ಉಂಟು— ಇದು ರಬಕವಿಯಿಂದ ಹೊರಡುತ್ತಿದ್ದ 'ಪ್ರಗತಿ' ಮಾಸಪತ್ರಿಕೆಯಲ್ಲಿ ಪ್ರಕಟವಾಗಿದೆ.

ಈಗ ಸಂಕಲನವೊಂದು ಕತೆಯ ಮಿಶ್ರಣವೆಂದು ಹೇಳಬಹುದು. ಕಾಲೇಜಿನ ಜೀವನ, ಪಟ್ಟಣದ ವಾಸ, ಒಲುವಿನ ನಲ್ಲನಲ್ಲೆಯ ಒಡನಾಟ, ಪ್ರಣಯ, ನಿತ್ಯಜೀವನದಲ್ಲಿಯ ಚಿಕ್ಕಪುಟ್ಟ ಜಗಳ, ವೈಮನಸ್ಸು, ಸಿನಿಮಾ ಪ್ರಪಂಚ, ಜೇಲುಜೀವನ, ಮೋಸಗಾರಿಕೆ, ಸ್ವಾತಂತ್ರ್ಯದಾಹ, ಪರೀಕ್ಷೆ, ಸೋಲು-ಗೆಲವು, ಇವೇ ಮೊದಲಾದ ಸಾಸಿರ ಸಂಗತಿಗಳು ಬಂದು ಹೋಗುತ್ತವೆ.

## —: ವೀ. ಚ. ಹಿತ್ತಲಮನಿ ಅವರ ಪುಸ್ತಕಗಳು :—

**ಅಚ್ಚಾದವು**

೧. ಮದುವೆಯ ಗುರಿ (ಲೈಂಗಿಕ ವಿಜ್ಞಾನ ಪ್ರಬಂಧ)

೨. ದಿವ್ಯಪ್ರೇಮ (ಕಥಾಸಂಗ್ರಹ)

೩. ಅನ್ನದಾತ (ನೀಳ್ಗತೆ)

೪. ಭೂಮಿಗಿಳಿದ ತಾರೆ (ಕಥಾಸಂಕಲನ)

೫. ಗೊಬ್ಬರ (ಒಕ್ಕಲುತನದ ವಿಜ್ಞಾನ ಪ್ರಬಂಧ)

**ಅಚ್ಚಾಗಲಿವೆ**

೬. ಚಂದುಟಿಯ ಮುತ್ತು ! (ಕಥಾಸಂಕಲನ)

೭. ರಸ-ವಿರಸ ( ,, )

೮. ನನ್ನ ಸ್ವಾಮಿ ( ,, )

೯. ಹಾಲು (ವಿಜ್ಞಾನಪ್ರಬಂಧ)